ಮಂಗಳವಾರ, ಜೂನ್ 4, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 155 | ಪುಟ 16

● www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕ್ಷೇಮ ಕುಶಲ
ಕೋಪಕ್ಕೆ ಸಹಾನುಭೂತಿಯಿಂದ ಸ್ಪಂದಿಸುವುದೇ ಪ್ರೀತಿಯ ಸಹಜ ಅಭಿವ್ಯಕ್ತಿ

ಆಳ-ಅಗಲ
ಜನರ ಮೇಲೆ ಹೆಚ್ಚುತ್ತಿದೆ ಹೆದ್ದಾರಿ ಟೋಲ್ ಹೊರೆ

ಅಸಲಿ ವಿಡಿಯೊ: ಮಾಹಿತಿ ನೀಡದ ಪ್ರಜ್ವಲ್ 7

11 ಮಂದಿ ಅವಿರೋಧ ಆಯ್ಕೆ ಖಚಿತ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
76,468	23,263	₹73,760 (ಬೆಂಗಳೂರು)	₹92,100 (ಬೆಂಗಳೂರು)	83.14

ನೆಹರೂ ದಾಖಲೆ ಸರಿಗಟ್ಟಲು ಮೋದಿ ತವಕ ● ತಡೆಯೊಡ್ಡಲು ಇಂಡಿಯಾ ಒಕ್ಕೂಟ ಯತ್ನ

ಹ್ಯಾಟ್ರಿಕ್ ಗೆಲುವೊ, ಅಚ್ಚರಿ ಫಲಿತವೊ?

64.2 ಕೋಟಿ ಒಟ್ಟು ಮತದಾನ ಮಾಡಿದವರು | **31.2 ಕೋಟಿ** ಮತದಾನ ಮಾಡಿದ ಮಹಿಳೆಯರು | **8,360** ಅಭ್ಯರ್ಥಿಗಳ ಭವಿಷ್ಯ ನಿರ್ಧಾರ ಇಂದು

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಲೋಕಸಭಾ ಚುನಾವಣೆಯ ಮತ ಎಣಿಕೆ ಮಂಗಳವಾರ ನಡೆಯಲಿದ್ದು ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ 'ಹ್ಯಾಟ್ರಿಕ್' ಗೆಲುವಿನ ವಿಶ್ವಾಸದಲ್ಲಿದ್ದರೆ, ವಿರೋಧ ಪಕ್ಷಗಳ 'ಇಂಡಿಯಾ' ಮೈತ್ರಿಕೂಟವು ಅಚ್ಚರಿಯ ಫಲಿತಾಂಶದ ನಿರೀಕ್ಷೆಯಲ್ಲಿದೆ.

ಬಿಜೆಪಿಯು ಅಧಿಕಾರವನ್ನು ಉಳಿಸಿಕೊಂಡರೆ ಮೋದಿ ಅವರು ದೇಶದ ಮೊದಲ ಪ್ರಧಾನಿ ಜವಾಹರಲಾಲ್ ನೆಹರೂ ಅವರ ದಾಖಲೆ ಸರಿಗಟ್ಟಲಿದ್ದಾರೆ. ನೆಹರೂ ತಮ್ಮ ಪಕ್ಷವನ್ನು ಮೂರು ಸಾರ್ವತ್ರಿಕ ಚುನಾವಣೆಗಳಲ್ಲಿ ಗೆಲುವಿನತ್ತ ಮುನ್ನಡೆಸಿದ್ದರು.

ಮುಂದಿನ ಐದು ವರ್ಷ ದೇಶದ ಆಡಳಿತದ ಚುಕ್ಕಾಣಿ ಹಿಡಿಯುವವರು ಯಾರು ಎಂಬ ಸ್ಪಷ್ಟ ಚಿತ್ರಣ ಮಂಗಳವಾರ ಸಂಜೆಯ ವೇಳೆ ಲಭ್ಯವಾಗುವ ಸಾಧ್ಯತೆಯಿದೆ. 542 ಕ್ಷೇತ್ರಗಳಲ್ಲಿ ಕಣಕ್ಕಿಳಿದಿದ್ದ 8,360 ಅಭ್ಯರ್ಥಿಗಳ ಭವಿಷ್ಯ ನಿರ್ಧಾರವಾಗಲಿದೆ. ಒಂದು ಕ್ಷೇತ್ರದಲ್ಲಿ (ಗುಜರಾತ್‌ನ ಸೂರತ್) ಬಿಜೆಪಿ ಅಭ್ಯರ್ಥಿ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಎನ್‌ಡಿಎ ಕೂಟವು 400ರ ಗಡಿ ದಾಟಲಿದೆಯೇ, ಕಾಂಗ್ರೆಸ್ ಕಳೆದ ದಶಕದ ನಿರಾಸೆಯ ಬಳಿಕ ಪುಟಿದೆದ್ದು ನಿಲ್ಲಲಿದೆಯೇ ಎಂಬುದರತ್ತ ಎಲ್ಲರ ಗಮನ ನೆಟ್ಟಿದೆ. 2014 ಮತ್ತು 2019ರ ಚುನಾವಣೆಗಳಲ್ಲಿ ಕಾಂಗ್ರೆಸ್ ಶೇ 10ರಷ್ಟು ಸ್ಥಾನ ಗೆಲ್ಲಲೂ ವಿಫಲವಾಗಿತ್ತು.

10ನೇ ಪುಟ ನೋಡಿ

ಬಿಜೆಪಿ ಮುಖಂಡರ ಸಭೆ

ಮತ ಎಣಿಕೆ ಮುನ್ನಾದಿನವಾದ ಸೋಮವಾರ ಕೇಂದ್ರ ಸಚಿವ ಅಮಿತ್ ಶಾ ಒಳಗೊಂಡಂತೆ ಬಿಜೆಪಿಯ ಹಿರಿಯ ಮುಖಂಡರು ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ನೇತೃತ್ವದಲ್ಲಿ ಸಭೆ ಸೇರಿ, ರಾಜಕೀಯ ಸ್ಥಿತಿ ಕುರಿತು ಚರ್ಚಿಸಿದರು. ಪಕ್ಷದ ಕೇಂದ್ರ ಕಚೇರಿಯಲ್ಲಿ ಸಂಭ್ರಮಾಚರಣೆಗೆ ಬೇಕಾದ ಅಗತ್ಯ ಸಿದ್ಧತೆಗಳು ನಡೆದಿವೆ.

ಪ್ರಧಾನಿ ಮೋದಿ ಅವರು ಮಂಗಳವಾರ ಬೆಳಿಗ್ಗೆ ತಮ್ಮ ಕ್ಷೇತ್ರ, ವಾರಾಣಸಿಗೆ ಪ್ರಯಾಣಿಸುವ ಸಾಧ್ಯತೆಯಿದೆ. ಸಂಜೆಯ ವೇಳೆಗೆ ಅವರು ಪಕ್ಷದ ಕೇಂದ್ರ ಕಚೇರಿಗೆ ಬರಲಿದ್ದು, ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ನಡ್ಡಾ ಅವರ ನಿವಾಸದಲ್ಲಿ ನಡೆದ ಸಭೆಯಲ್ಲಿ ಶಾ ಮತ್ತು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಲ್ಲದೆ ಕೇಂದ್ರ ಸಚಿವರಾದ ಪೀಯೂಷ್ ಗೋಯಲ್, ಅಶ್ವಿನಿ ವೈಷ್ಣವ್, ಮನ್ಸುಖ್ ಮಾಂಡವೀಯ, ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್.ಸಂತೋಷ್, ಪ್ರಧಾನ ಕಾರ್ಯದರ್ಶಿಗಳಾದ ವಿನೋದ್ ತಾವ್ಡೆ ಮತ್ತು ತರುಣ್ ಚುಘ್ ಪಾಲ್ಗೊಂಡರು.

ಪಕ್ಷ ಎಷ್ಟು ಸ್ಥಾನಗಳನ್ನು ಗೆಲ್ಲಬಹುದು ಎಂಬ ಬಗ್ಗೆ ನಡೆದಿರುವ ಆಂತರಿಕ ಮೌಲ್ಯಮಾಪನದ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು ಮತ್ತು ಫಲಿತಾಂಶದ ದಿನ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ನಿಭಾಯಿಸಬೇಕಾದ ಜವಾಬ್ದಾರಿಗಳ ವಿವರವಾದ ಯೋಜನೆ ರೂಪಿಸಲಾಯಿತು. ಎಲ್ಲ ಏಳು ಹಂತಗಳ ಮತದಾನದ ಬಗ್ಗೆ ಪರಾಮರ್ಶೆ ಕೂಡಾ ನಡೆಯಿತು ಎಂದು ಪಕ್ಷದ ಮೂಲಗಳು ತಿಳಿಸಿವೆ.

28 ಕ್ಷೇತ್ರಗಳ ಕುತೂಹಲಕ್ಕೆ ಇಂದು ತೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಮತದಾರರು 'ಗ್ಯಾರಂಟಿ' ಯೋಜನೆಗಳ ಅನುಷ್ಠಾನಕ್ಕಾಗಿ ಆಡಳಿತಾರೂಢ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಿದ್ದಾರೊ ಅಥವಾ ಪ್ರಧಾನಿ ನರೇಂದ್ರ ಮೋದಿಯವರ ಜನಪ್ರಿಯತೆಯ ಬೆನ್ನಿಗೆ ನಿಂತಿದ್ದಾರೊ ಎಂಬ ಕುತೂಹಲಕ್ಕೆ ಮಂಗಳವಾರ ತೆರೆ ಬೀಳಲಿದೆ.

ಎಲ್ಲ 28 ಲೋಕಸಭಾ ಕ್ಷೇತ್ರಗಳ ಮತ ಎಣಿಕೆ ಮಂಗಳವಾರ ಬೆಳಿಗ್ಗೆ 8 ಗಂಟೆಗೆ ಏಕಕಾಲಕ್ಕೆ ಆರಂಭವಾಗಲಿದೆ. ಮಧ್ಯಾಹ್ನ 1 ಗಂಟೆಯ ವೇಳೆಗೆ ಚುನಾವಣಾ ಫಲಿತಾಂಶದ ಸ್ಪಷ್ಟ ಚಿತ್ರಣ ದೊರಕಲಿದ್ದು, ಸಂಜೆಯೊಳಗೆ ಎಲ್ಲ ಕ್ಷೇತ್ರಗಳಲ್ಲೂ ಫಲಿತಾಂಶ ಪ್ರಕಟವಾಗುವ ಸಾಧ್ಯತೆ ಇದೆ.

ಏಪ್ರಿಲ್ 26 ಮತ್ತು ಮೇ 7ರಂದು ರಾಜ್ಯದ ತಲಾ 14 ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ನಡೆದಿತ್ತು. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ತವರು ರಾಜ್ಯವಾಗಿರುವುದು ಹಾಗೂ ಕಾಂಗ್ರೆಸ್ ಅಧಿಕಾರದಲ್ಲಿರುವ ದೊಡ್ಡ ರಾಜ್ಯವಾಗಿರುವ ಕಾರಣದಿಂದ ಕರ್ನಾಟಕದ ಫಲಿತಾಂಶದ ಕುರಿತು ತೀವ್ರ ಕುತೂಹಲ ಗರಿಗೆದರಿದೆ. ಚುನಾವಣೆ ಘೋಷಣೆಯಾದ ದಿನದಿಂದಲೂ ಇಲ್ಲಿನ ಫಲಿತಾಂಶದ ಕುರಿತು ಬಿರುಸಿನ ಚರ್ಚೆ ನಡೆಯುತ್ತಲೇ ಇದೆ.

ಸಿದ್ಧತೆ ಏನು?

- ರಾಜ್ಯದ 28 ಕೇಂದ್ರಗಳಲ್ಲಿ ಮತ ಎಣಿಕೆಗೆ ಸಿದ್ಧತೆ
- ಪ್ರತಿ ಟೇಬಲ್‌ಗೆ ಮೂವರಂತೆ ಒಟ್ಟು 13,173 ಸಿಬ್ಬಂದಿ
- ಕನಿಷ್ಠ 19 ಸುತ್ತು, ಗರಿಷ್ಠ 34 ಸುತ್ತುಗಳ ಮತ ಎಣಿಕೆ
- ಸುರಪುರ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಯ ಮತ ಎಣಿಕೆಯೂ ನಡೆಯಲಿದೆ

10ನೇ ಪುಟ ನೋಡಿ

ಫಲಿತಾಂಶ ಯಾರಿಗೆಲ್ಲ ನಿರ್ಣಾಯಕ?

ಕೇಂದ್ರ ಸಚಿವರಾದ ಪ್ರಲ್ಹಾದ ಜೋಶಿ, ಶೋಭಾ ಕರಂದ್ಲಾಜೆ, ಭಗವಂತ ಖೂಬಾ, ಮಾಜಿ ಮುಖ್ಯಮಂತ್ರಿಗಳಾದ ಜಗದೀಶ ಶೆಟ್ಟರ್, ಬಸವರಾಜ ಬೊಮ್ಮಾಯಿ, ಬಿಜೆಪಿ ಯುವ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ತೇಜಸ್ವಿ ಸೂರ್ಯ ಬಿಜೆಪಿ ಅಭ್ಯರ್ಥಿಗಳಾಗಿದ್ದು, ಅವರಿಗೆಲ್ಲ ಗೆಲುವು ಪ್ರತಿಷ್ಠೆಯಾಗಿದೆ. ಬಿಜೆಪಿ ಹಿಂದಿಗಿಂತ ಹೆಚ್ಚು ಸ್ಥಾನ ಗಳಿಸುವುದು ಅಥವಾ ಹಿಂದೆ ಗೆದ್ದ ಕ್ಷೇತ್ರಗಳು ಕೈತಪ್ಪದಂತೆ ನೋಡಿಕೊಳ್ಳುವ ಹೊಣೆಗಾರಿಕೆ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಮತ್ತು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಮೇಲಿದೆ.

10ನೇ ಪುಟ ನೋಡಿ

ಬೆಂಗಳೂರಿನಲ್ಲಿ ಭಾನುವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಯ ಪರಿಣಾಮ ಬಸವೇಶ್ವರನಗರದ ಶಾರದಾ ಕಾಲೊನಿಯ ರಸ್ತೆಯೊಂದರಲ್ಲಿ ಬೃಹತ್ ಮರವೊಂದು ಉರುಳಿ ಬಿತ್ತು – ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ

133 ವರ್ಷಗಳ ದಾಖಲೆ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಮವಾರ ಬೆಳಿಗ್ಗೆ 8.30ಕ್ಕೆ ಕೊನೆಗೊಂಡಂತೆ 24 ಗಂಟೆಯಲ್ಲಿ ಬೆಂಗಳೂರು ನಗರದಲ್ಲಿ 11.1 ಸೆಂ.ಮೀ ಮಳೆಯಾಗಿದೆ. ಇದು 133 ವರ್ಷಗಳ ಬಳಿಕ ಒಂದು ದಿನದಲ್ಲಿ (ಜೂನ್ ತಿಂಗಳಲ್ಲಿ) ಸುರಿದ ದಾಖಲೆ ಪ್ರಮಾಣದ ಮಳೆ ಎಂದು ಭಾರತೀಯ ಹವಾಮಾನ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಮಂಡ್ಯದ ಹೊನಕೆರೆಯಲ್ಲಿ 8, ಕೊಪ್ಪಳದ ಗಂಗಾವತಿಯಲ್ಲಿ 6, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿಯಲ್ಲಿ 5, ತುಮಕೂರಿನ ಮಿಡಿಗೇಶಿ 5, ಚಾಮರಾಜನಗರ 4, ಉಡುಪಿ ಹಾಗೂ ಮೈಸೂರು ಜಿಲ್ಲೆಯ ಎಚ್.ಡಿ.ಕೋಟೆ, ಚಿಕ್ಕಬಳ್ಳಾಪುರ, ಹೊಸಕೋಟೆ, ಮಂಡ್ಯ ನಗರ, ಮಂಡ್ಯದ ಮದ್ದೂರು 3 ಹಾಗೂ ಚಿಕ್ಕಮಗಳೂರು ನಗರದಲ್ಲಿ 2 ಸೆಂ.ಮೀ ಮಳೆಯಾಗಿದೆ.

ರಾಜ್ಯದ ದಕ್ಷಿಣ ಒಳನಾಡು ಭಾಗದ ಜಿಲ್ಲೆಗಳನ್ನು ಮುಂಗಾರು ಆವರಿಸಿದ್ದು, ಜೂನ್ 4ರಿಂದ ಏಳು ದಿನಗಳು ಹಲವು ಜಿಲ್ಲೆಗಳಲ್ಲಿ ಬಿರುಗಾಳಿ ಸಹಿತ ಧಾರಾಕಾರ ಮಳೆ ಆಗಲಿದೆ. ಗುಡುಗು-ಮಿಂಚಿನ ಆರ್ಭಟದೊಂದಿಗೆ ಮಳೆಯಾಗುವ ಸಾಧ್ಯತೆಯಿದೆ ಎಂದೂ ಇಲಾಖೆ ಮುನ್ಸೂಚನೆ ನೀಡಿದೆ.

ಬೆಳಗಾವಿ, ಉತ್ತರ ಕನ್ನಡ, ಧಾರವಾಡ, ಶಿವಮೊಗ್ಗ, ಉಡುಪಿ, ಚಿಕ್ಕಮಗಳೂರು, ಹಾಸನ, ಮಂಡ್ಯ, ಮೈಸೂರು, ತುಮಕೂರು, ಚಿಕ್ಕ-ಬಳ್ಳಾಪುರ, ಕೋಲಾರ ಜಿಲ್ಲೆಗಳಿಗೆ ಮಂಗಳವಾರ ಹಾಗೂ ಬುಧವಾರ 'ಯೆಲ್ಲೊ ಅಲರ್ಟ್' ಸೂಚನೆ ನೀಡಲಾಗಿದ್ದು ಈ ಜಿಲ್ಲೆಗಳಲ್ಲಿ ಜೋರು ಮಳೆಯಾಗಲಿದೆ. ಬೆಂಗಳೂರು ನಗರ ಹಾಗೂ ಗ್ರಾಮಾಂತರ ಜಿಲ್ಲೆಗಳಲ್ಲೂ ಮೋಡ ಕವಿದ ವಾತಾವರಣ ಇರಲಿದ್ದು, ಸಂಜೆ ಅಥವಾ ರಾತ್ರಿ ವೇಳೆ ಗುಡುಗು ಸಹಿತ ಮಳೆಯಾಗಲಿದೆ ಎಂದು ಹೇಳಿದೆ.

'ಪ್ರಭಾವಿ' ಮಾತು ಕೇಳಿ ಹಣ ವರ್ಗ

ಬೆಂಗಳೂರು: 'ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದಿದೆ' ಎನ್ನಲಾದ ಹಗರಣದಲ್ಲಿ 'ಪ್ರಭಾವಿ'ಯೊಬ್ಬರು ಭಾಗಿಯಾಗಿರುವ ಬಗ್ಗೆ ಮಾಹಿತಿ ಕಲೆ ಹಾಕಿರುವ ಎಸ್‌ಐಟಿ (ವಿಶೇಷ ತನಿಖಾ ತಂಡ), ಪ್ರಭಾವಿಯ ಆಪ್ತ ಸೇರಿ ಹಲವರಿಗೆ ನೋಟಿಸ್ ನೀಡಲು ತಯಾರಿ ನಡೆಸಿದೆ. 10

ಒಳಪುಟಗಳಲ್ಲಿ

ಅಸ್ಸಾಂ: ಮುಂದುವರಿದ ಪ್ರವಾಹ, 3 ಸಾವು 11

ತಯಾರಿಕಾ ವಲಯ: ಪ್ರಗತಿ ನಿಧಾನ 12

ಚುನಾವಣಾ ಫಲಿತಾಂಶದ ಕ್ಷಣ ಕ್ಷಣದ ತಾಜಾ ಮಾಹಿತಿಗಾಗಿ
prajavani.net

ಚಿನಕುರುಳಿ

ಪ್ರಕಾಶ್ ಶೆಟ್ಟಿ

ರೇವ್ ಪಾರ್ಟಿ: ಹೇಮಾ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಗೋಡಿ ಬಳಿಯ ಹುಸ್ಕೂರು ಸಮೀಪದಲ್ಲಿರುವ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿಯಲ್ಲಿ ಪಾಲ್ಗೊಂಡು ಡ್ರಗ್ಸ್ ತೆಗೆದುಕೊಂಡಿದ್ದ ಆರೋಪದಡಿ ತೆಲುಗು ನಟಿ ಹೇಮಾ ಅಲಿಯಾಸ್ ಕೃಷ್ಣವೇಣಿ (57) ಅವರನ್ನು ಸಿಸಿಬಿ ಪೊಲೀಸರು ಸೋಮವಾರ ಬಂಧಿಸಿದ್ದಾರೆ.

'ಸನ್‌ಸೆಟ್ ಟು ಸನ್‌ರೈಸ್ ವಿಕ್ಟರಿ' ಹೆಸರಿನಲ್ಲಿ ಮೇ 19ರಂದು ಆಯೋಜಿಸಿದ್ದ ರೇವ್ ಪಾರ್ಟಿ ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿ, ಸಂಘಟಕರು ಸೇರಿದಂತೆ ಐವರನ್ನು ಬಂಧಿಸಿದ್ದರು. ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಹೇಮಾ ಹಾಗೂ ಇತರರಿಗೆ ವಿಚಾರಣೆಗೆ ಬರುವಂತೆ ಇತ್ತೀಚೆಗೆ ನೋಟಿಸ್ ಸಹ ನೀಡಿದ್ದರು.

ಮೊದಲ ಹಾಗೂ ಎರಡನೇ ನೋಟಿಸ್ ಪಡೆದಿದ್ದ ಹೇಮಾ, ವಿಚಾರಣೆಗೆ ಕಾಲಾವಕಾಶ ಕೋರಿದ್ದರು. ಮೂರನೇ ನೋಟಿಸ್ ನೀಡಿದ್ದರಿಂದ, ವಿಚಾರಣೆಗೆಂದು ಸಿಸಿಬಿ ಕಚೇರಿಗೆ ಸೋಮವಾರ ಹಾಜರಾದರು. ವಿಚಾರಣೆಗೆ ಒಳಪಡಿಸಿದ ತನಿಖಾಧಿಕಾರಿ, 'ನಮ್ಮ ಬಳಿ ಪುರಾವೆಗಳು ಇವೆ' ಎಂಬುದಾಗಿ ಮಾಹಿತಿ ನೀಡಿ ಅವರನ್ನು ಬಂಧಿಸಿದ್ದಾರೆ.

ದಿಕ್ಕು ತಪ್ಪಿಸಿದ್ದ ನಟಿ: 'ರೇವ್ ಪಾರ್ಟಿಯಲ್ಲಿ ಪಾಲ್ಗೊಳ್ಳುವುದಕ್ಕಾಗಿಯೇ ನಟಿ ಹೇಮಾ ಬೆಂಗಳೂರಿಗೆ ಬಂದಿದ್ದರು. ಇವರ ಜೊತೆ 100ಕ್ಕೂ ಹೆಚ್ಚು ಮಂದಿ ಪಾರ್ಟಿಯಲ್ಲಿ ಪಾಲ್ಗೊಂಡಿದ್ದರು. ಸಿಸಿಬಿ ದಾಳಿ ಸಂದರ್ಭದಲ್ಲೂ ನಟಿ ಹೇಮಾ ಸ್ಥಳದಲ್ಲಿದ್ದರು' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ದಾಳಿಯ ಮರುದಿನ ವಿಡಿಯೊ ಹರಿಬಿಟ್ಟಿದ್ದ ಹೇಮಾ, 'ನಾನು ಹೈದರಾಬಾದ್‌ನಲ್ಲಿದ್ದೇನೆ. ಪಾರ್ಟಿಯಲ್ಲಿ ಪಾಲ್ಗೊಂಡಿರುವುದಾಗಿ ಸುಳ್ಳು ಸುದ್ದಿ ಹರಿದಾಡುತ್ತಿದೆ. ಇದನ್ನು ಅಭಿಮಾನಿಗಳು ನಂಬಬಾರದು' ಎಂದಿದ್ದರು. ವಿಡಿಯೊ ಪರಿಶೀಲನೆ ನಡೆಸಿದಾಗ, ಜಿ.ಆರ್. ಫಾರ್ಮ್ ಹೌಸ್ ಆವರಣದಲ್ಲಿಯೇ ವಿಡಿಯೊ ಚಿತ್ರೀಕರಿಸಿದ್ದರೆಂಬ ಮಾಹಿತಿ ಲಭ್ಯವಾಗಿತ್ತು' ಎಂದು ತಿಳಿಸಿದರು.

'ಪಾರ್ಟಿಯಲ್ಲಿ ಪಾಲ್ಗೊಂಡಿದ್ದ ಹೇಮಾ ಸೇರಿ ಹಲವರು, ಡ್ರಗ್ಸ್ ತೆಗೆದುಕೊಂಡಿದ್ದರು. ಎಲ್ಲರನ್ನೂ ವಶಕ್ಕೆ ಪಡೆದು, ವೈದ್ಯಕೀಯ ಪರೀಕ್ಷೆಗೆ ಒಳಪಡಿಸಲಾಗಿತ್ತು. ಹೇಮಾ ಅವರು ಡ್ರಗ್ಸ್ ತೆಗೆದುಕೊಂಡಿದ್ದು ದೃಢಪಟ್ಟಿತ್ತು. ಹೀಗಾಗಿ, ಹೇಮಾ ಅವರನ್ನೂ ಪ್ರಕರಣದಲ್ಲಿ ಆರೋಪಿ ಎಂದು ಪರಿಗಣಿಸಿ ಬಂಧಿಸಲಾಗಿದೆ' ಎಂದು ಹೇಳಿದರು.

'ಹೇಮಾ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಹೆಚ್ಚಿನ ವಿಚಾರಣೆಗಾಗಿ ಕಸ್ಟಡಿಗೆ ನೀಡುವಂತೆ ಕೋರಲಾಗುವುದು' ಎಂದು ತಿಳಿಸಿದರು.

'ಪೆಡ್ಲರ್ ಬಂಧನ'

'ರೇವ್ ಪಾರ್ಟಿಗೆ ಡ್ರಗ್ಸ್ ಪೂರೈಕೆ ಮಾಡಿದ್ದ ಆರೋಪಿ ಶರೀಫ್ ಎಂಬಾತನನ್ನು ಬಂಧಿಸಲಾಗಿದೆ. ಈತನಿಂದ 40 ಎಂಡಿಎಂಎ ಮಾತ್ರೆಗಳನ್ನು ಜಪ್ತಿ ಮಾಡಲಾಗಿದೆ' ಎಂದು ಸಿಸಿಬಿ ಮೂಲಗಳು ಹೇಳಿವೆ.

'ದೇವರಜೀವನಹಳ್ಳಿಯ (ಡಿ.ಜೆ.ಹಳ್ಳಿ) ಶರೀಫ್, ವಿದೇಶಿ ಪ್ರಜೆಗಳು ಹಾಗೂ ಇತರರಿಂದ ಡ್ರಗ್ಸ್ ಖರೀದಿಸಿ ತಂದು ಪಾರ್ಟಿಗಳಿಗೆ ಸರಬರಾಜು ಮಾಡುತ್ತಿದ್ದ. ಹೆಬ್ಬಗೋಡಿ ಬಳಿಯ ಹುಸ್ಕೂರು ಸಮೀಪದಲ್ಲಿರುವ ಜಿ.ಆರ್. ಫಾರ್ಮ್ ಹೌಸ್‌ನಲ್ಲಿ ನಡೆದಿದ್ದ ರೇವ್ ಪಾರ್ಟಿಗೂ ಈತನೇ ಡ್ರಗ್ಸ್ ಕೊಟ್ಟಿದ್ದನೆಂಬ ಮಾಹಿತಿ ಇದ್ದು, ಪರಿಶೀಲಿಸಲಾಗುತ್ತಿದೆ' ಎಂದು ಮೂಲಗಳು ತಿಳಿಸಿವೆ.

ಷೇರುಪೇಟೆ: ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಸೂಚ್ಯಂಕಗಳು

'ಗೂಳಿ'ಯ ನಾಗಾಲೋಟ

ಮುಂಬೈ/ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸತತ ಮೂರನೇ ಅವಧಿಯಲ್ಲೂ ಗೆಲುವು ಸಾಧಿಸಲಿದೆ ಎಂಬ ಮತಗಟ್ಟೆಗಳ ಸಮೀಕ್ಷೆ ಹಿನ್ನೆಲೆಯಲ್ಲಿ ಸೋಮವಾರ ಷೇರು ಸೂಚ್ಯಂಕಗಳು ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಏರಿವೆ.

ಷೇರು ಸೂಚ್ಯಂಕಗಳು ಶೇ 3ಕ್ಕಿಂತ ಹೆಚ್ಚು ಏರಿಕೆಯಾಗಿವೆ. ಇದು ಮೂರು ವರ್ಷಗಳಲ್ಲಿ ಅತಿದೊಡ್ಡ ಏಕದಿನ ಗಳಿಕೆಯಾಗಿದೆ.

ಷೇರಿನ ಮೌಲ್ಯ ಏರಿಕೆಯಿಂದ ಹೂಡಿಕೆದಾರರ ಸಂಪತ್ತು ಒಂದೇ ದಿನ ₹13.78 ಲಕ್ಷ ಕೋಟಿ ವೃದ್ಧಿಯಾಗಿದೆ. ಬಿಎಸ್‌ಇ ಕಂಪನಿಗಳ ಒಟ್ಟು ಮಾರುಕಟ್ಟೆ ಮೌಲ್ಯ (ಎಂ-ಕ್ಯಾಪ್) ₹425 ಲಕ್ಷ ಕೋಟಿಗೆ (5.13 ಟ್ರಿಲಿಯನ್ ಡಾಲರ್) ಮುಟ್ಟಿದೆ. ಎನ್‌ಎಸ್‌ಇ ಕಂಪನಿಗಳ ಎಂ-ಕ್ಯಾಪ್ ₹422 ಲಕ್ಷ ಕೋಟಿ (5.09 ಟ್ರಿಲಿಯನ್ ಡಾಲರ್) ಆಗಿದೆ. ಮುಂಬೈ ಷೇರುಪೇಟೆ ಸೂಚ್ಯಂಕ (ಬಿಎಸ್‌ಇ) ಸೆನ್ಸೆಕ್ಸ್ 2,507 ಅಂಶ (ಶೇ 3.39) ಏರಿಕೆಯಾಗಿ 76,468ಕ್ಕೆ ಅಂತ್ಯಗೊಂಡಿತು.

₹13.78 ಲಕ್ಷ ಕೋಟಿ ಹೂಡಿಕೆದಾರರ ಸಂಪತ್ತು ವೃದ್ಧಿ

12ನೇ ಪುಟ ನೋಡಿ



ದಲಿತನ ಮುಖಕ್ಕೆ ಮೂತ್ರ ವಿಸರ್ಜನೆ

ಪ್ರಜಾವಾಣಿ ವಾರ್ತೆ

ಲಖನೌ: ಕಲ್ಲುಗಣಿಯಲ್ಲಿ ಮಲಗಿ ವಿರಮಿಸುತ್ತಿದ್ದ ದಲಿತ ದಿನಗೂಲಿ ಕಾರ್ಮಿಕರೊಬ್ಬರನ್ನು ಎಚ್ಚರಗೊಳಿಸಲು, ಅವರ ಮುಖದ ಮೇಲೆ ಮಾಲೀಕನು ಮೂತ್ರ ವಿಸರ್ಜನೆ ಮಾಡಿರುವ ಕೃತ್ಯ ಇಲ್ಲಿ ನಡೆದಿದೆ.

ಲಖನೌದ ಚಂದೋಯಿಯ ಖೇಡಾ ಗ್ರಾಮದಲ್ಲಿ ಇರುವ ಕಲ್ಲುಗಣಿಯಲ್ಲಿ ಭಾನುವಾರ ಕೃತ್ಯ ನಡೆದಿದೆ. ಮಧ್ಯಾಹ್ನ ಊಟದ ಬಳಿಕ ದಿನಗೂಲಿ ಕಾರ್ಮಿಕ ಮಲಗಿದ್ದರು. ರಾಜಕುಮಾರ್ ರಾವತ್ ಸಂತ್ರಸ್ತ ಕಾರ್ಮಿಕನಾಗಿದ್ದು, ಇವರು ಕುಟುಂಬದ ಜೊತೆಗೆ ಕಲ್ಲುಗಣಿಯ ಸಮೀಪವೇ ವಾಸವಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಲ್ಲುಗಣಿಯ ಮಾಲೀಕ ಸಂಜಯ್ ಮೌರ್ಯ ಕೃತ್ಯ ಎಸಗಿದ ಆರೋಪಿ. ಕೃತ್ಯವನ್ನು ಸ್ವತಃ ಚಿತ್ರೀಕರಿಸಿ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಾನೆ. ಅದು, ವ್ಯಾಪಕವಾಗಿ ಹಂಚಿಕೆಯಾಗಿದೆ.

ಕೃತ್ಯದ ಕುರಿತು ಸಂತ್ರಸ್ತನ ಪತ್ನಿಯು ಪೊಲೀಸರಿಗೆ ದೂರು ನೀಡಿದ್ದಾರೆ. ಈ ದೂರನ್ನು ಆಧರಿಸಿ ಆರೋಪಿ ರಾವತ್‌ನನ್ನು ಪೊಲೀಸರು ಬಂಧಿಸಿದ್ದಾರೆ.

ಇರುವೆ ಇರುವೆ ನೀಲಿ ಇರುವೆ!

ಸಿಯಾಂಗ್ ಕಣಿವೆಯಲ್ಲಿ ಬೆಂಗಳೂರು ತಂಡದ ಅನ್ವೇಷಣೆ

● ನಟರಾಜ ನಾಗಸಂದ್ರ

ದೊಡ್ಡಬಳ್ಳಾಪುರ: ಅರುಣಾಚಲ ಪ್ರದೇಶದ ಸಿಯಾಂಗ್ ಕಣಿವೆಯ ಯಿಂಗ್‌ಕು ಗ್ರಾಮದ ಅರಣ್ಯ ಪ್ರದೇಶದಲ್ಲಿ 'ಪರಾಪರಾಟ್ರೆಚೀನಾನೀಲಾ' ಎಂಬ ಅಪರೂಪದ ನೀಲಿ ಬಣ್ಣದ ಇರುವೆಯನ್ನು ಬೆಂಗಳೂರಿನ ಕೀಟಶಾಸ್ತ್ರಜ್ಞರನ್ನು ಒಳಗೊಂಡ ಅನ್ವೇಷಕರ ತಂಡ ಪತ್ತೆ ಹಚ್ಚಿದೆ.

ಶತಮಾನದ ಹಿಂದೆ ಅರುಣಾಚಲ ಪ್ರದೇಶದ ಜೀವ ವೈವಿಧ್ಯ ಅನ್ವೇಷಣೆಗೆ 'ಅಭೋರ್ ಅನ್ವೇಷಣಾ ಯಾತ್ರೆ' ಕೈಗೊಳ್ಳಲಾಗಿತ್ತು. ಅದಾದ ನೂರು ವರ್ಷಗಳ ನಂತರ ಸಿಯಾಂಗ್ ಕಣಿವೆಯ ಜೀವ ವೈವಿಧ್ಯ ಮರು ಪರಿಶೀಲಿಸಲು ನಡೆಸಿದ ಅನ್ವೇಷಣೆ ಯಾತ್ರೆಯ ವೇಳೆ ಈ ಇರುವೆ ಪತ್ತೆಯಾಗಿದೆ.

'ಯಿಂಗ್‌ಕು ಗ್ರಾಮದ ಅರಣ್ಯ ಪ್ರದೇಶದ ಮರವೊಂದರಲ್ಲಿ ನೀಲಿ ಬಣ್ಣದ ಎರಡು ಇರುವೆ ಕಣ್ಣಿಗೆ ಬಿದ್ದವು. ಇವು ಹೊಸ ಬಗೆಯ ಇರುವೆ ಎಂದು ಸಂಶೋಧನೆಯಲ್ಲಿ ಕಂಡುಕೊಳ್ಳಲಾಯಿತು. ಲೋಹದ ನೀಲಿ ಬಣ್ಣದ ದೇಹ ಹೊಂದಿರುವ ಇವು ಸಣ್ಣ ಇರುವೆಗಳಾಗಿದ್ದು, ಇವುಗಳ ಉದ್ದ ಎರಡು ಮಿ.ಮೀ ಗಿಂತ ಕಡಿಮೆ ಇದೆ' ಎಂದು ದೊಡ್ಡಬಳ್ಳಾಪುರದ ಕೀಟಶಾಸ್ತ್ರಜ್ಞೆ ಆರ್. ಸಹನಶ್ರೀ 'ಪ್ರಜಾವಾಣಿ'ಗೆ ಮಾಹಿತಿ ನೀಡಿದ್ದಾರೆ.

ಬೆಂಗಳೂರಿನ ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಇಕಾಲಜಿ ಅಂಡ್ ಎನ್ವಿರಾನ್‌ಮೆಂಟ್ (ಏಟ್ರಿ) ಸಂಸ್ಥೆಯ ಕೀಟಶಾಸ್ತ್ರಜ್ಞರಾದ ಡಾ.ಪ್ರಿಯದರ್ಶನನ್ ಧರ್ಮರಾಜನ್ ಮತ್ತು ಆರ್.ಸಹನಶ್ರೀ, ಫ್ಲಾರಿಡಾ ವಿಶ್ವವಿದ್ಯಾಲಯದ ಅಶ್ವಜ್ ಪುನ್ನತ್ ಜೊತೆಗೂಡಿ ಈ ಇರುವೆಗಳ ಕುರಿತ ವೈಜ್ಞಾನಿಕ ವಿವರಣೆಯನ್ನು 'ಝೂಕೀಸ್' ಅಂತರರಾಷ್ಟ್ರೀಯ ವಿಜ್ಞಾನ ಜರ್ನಲ್‌ನಲ್ಲಿ ಪ್ರಕಟಿಸಿದ್ದಾರೆ.

ಪ್ರಾಣಿ ಸಂಕುಲದಲ್ಲಿ ನೀಲಿ ಬಣ್ಣ ಅಪರೂಪ. ಆದರೆ, ಕೆಲವು ಮೀನು, ಕಪ್ಪೆ, ಪಕ್ಷಿ, ಜೇಡ, ನೊಣ ಮತ್ತು ಕಣಜಗಳು ನೀಲಿ ಬಣ್ಣದ ಜೊತೆ ವೈವಿಧ್ಯಮಯ ಬಣ್ಣಗಳನ್ನು ಹೊಂದಿವೆ.

6ನೇ ಪುಟ ನೋಡಿ

ಸರ್ಕಾರಕ್ಕೆ ₹ 7.76 ಲಕ್ಷ ಪಾವತಿಸಲು ಯತೀಂದ್ರ ಬಾಕಿ

ಗೋವಿಂದರಾಜ್ ₹ 316 ಕೋಟಿ ತೆರಿಗೆ ಬಾಕಿ

ಪ್ರಜಾವಾಣಿ ವಾರ್ತೆ



ಗೋವಿಂದರಾಜ್

ಡಾ.ಯತೀಂದ್ರ

ಬೆಂಗಳೂರು: ವಿಧಾನಸಭೆಯಿಂದ ವಿಧಾನ ಪರಿಷತ್‌ಗೆ ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವ, ಮುಖ್ಯಮಂತ್ರಿಯ ರಾಜಕೀಯ ಕಾರ್ಯದರ್ಶಿ ಕೆ. ಗೋವಿಂದರಾಜ್ ಅವರು ಆದಾಯ ತೆರಿಗೆ ಇಲಾಖೆಗೆ ₹ 316. 63 ಕೋಟಿ ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ.

ಈ ಸಂಬಂಧ ಮೂರು ಪ್ರಕರಣಗಳು ಆದಾಯ ತೆರಿಗೆ ಮೇಲ್ಮನವಿ ನ್ಯಾಯ ಮಂಡಳಿಯಲ್ಲಿದೆ (ಐಟಿಎಟಿ) ಎಂದು ನಾಮಪತ್ರದ ಜೊತೆಗೆ ಸಲ್ಲಿಸಿದ ಪ್ರಮಾಣಪತ್ರದಲ್ಲಿ ಅವರು ಘೋಷಿಸಿಕೊಂಡಿದ್ದಾರೆ.

ಆ ಪೈಕಿ, ಆದಾಯ ತೆರಿಗೆ ಪಾವತಿ ಮೊತ್ತ 2013-14ನೇ ಸಾಲಿನ ₹ 73.08 ಲಕ್ಷ, 2014-15ರ ಸಾಲಿನ ₹ 144.39 ಕೋಟಿ, 2016-17ನೇ ಸಾಲಿನ ₹ 171.51 ಕೋಟಿ ಐಟಿಎಟಿಯಲ್ಲಿ ಬಾಕಿ ಇದೆ ಎಂದು ಅವರು ತಿಳಿಸಿದ್ದಾರೆ.

ಗೋವಿಂದರಾಜ್ ಅವರು ₹ 3.90 ಕೋಟಿ ಮೊತ್ತದ ಮತ್ತು ತಮ್ಮ ಪತ್ನಿ ಹೆಸರಿನಲ್ಲಿ ₹ 6.54 ಕೋಟಿಯ ಚರಾಸ್ತಿ ಘೋಷಿಸಿಕೊಂಡಿದ್ದಾರೆ. ತಮ್ಮ ಹೆಸರಿನಲ್ಲಿ ₹18.58 ಲಕ್ಷ ಮೌಲ್ಯದ ಮತ್ತು ಪತ್ನಿ ಹೆಸರಿನಲ್ಲಿ ₹ 27.01 ಕೋಟಿ ಮೌಲ್ಯದ ಸ್ತಿರಾಸ್ತಿ ಘೋಷಿಸಿದ್ದಾರೆ.

ಸರ್ಕಾರಕ್ಕೆ ₹ 7.76 ಲಕ್ಷ ಪಾವತಿಸಲು ಯತೀಂದ್ರ ಬಾಕಿ: ವಿಧಾನ ಪರಿಷತ್‌ಗೆ ನಾಮಪತ್ರ ಸಲ್ಲಿಸಿರುವ ಮುಖ್ಯಮಂತ್ರಿ ಪುತ್ರ ಡಾ. ಯತೀಂದ್ರ ಸಿದ್ದರಾಮಯ್ಯ ಅವರು ₹ 9.23 ಕೋಟಿ ಮೌಲ್ಯ ಚರಾಸ್ತಿ, ₹ 22.65 ಕೋಟಿ ಮೌಲ್ಯದ ಸ್ಥಿರಾಸ್ತಿ ಘೋಷಿಸಿಕೊಂಡಿದ್ದಾರೆ.

ಯತೀಂದ್ರ ಅವರಿಗೆ ₹ 10.39 ಕೋಟಿ ಸಾಲವಿದೆ. ಅವರು ಜಿಎಸ್‌ಟಿ ಮತ್ತು ಆಸ್ತಿ ತೆರಿಗೆ ಸೇರಿ ಸರ್ಕಾರಕ್ಕೆ ಒಟ್ಟು ₹ 7.76 ಲಕ್ಷ ಪಾವತಿಸಲು ಬಾಕಿ ಉಳಿಸಿಕೊಂಡಿದ್ದಾರೆ. ಅಲ್ಲದೆ, ಬಿಎಂಡಬ್ಲ್ಯು ಕಾರು ಹೊಂದಿದ್ದಾರೆ.

ಸಿ.ಟಿ. ರವಿ ಆಸ್ತಿ ₹ 7.82 ಕೋಟಿ

ವಿಧಾನ ಪರಿಷತ್ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿರುವ ಮಾಜಿ ಸಚಿವ ಸಿ.ಟಿ. ರವಿ ಕುಟುಂಬದ ಬಳಿ ಒಟ್ಟು ₹ 7.82 ಕೋಟಿ ಮೌಲ್ಯದ ಆಸ್ತಿ ಇದೆ.

ರವಿ ಅವರು ₹ 2.09 ಕೋಟಿ ಮೌಲ್ಯದ ಚರಾಸ್ತಿ ಮತ್ತು ₹ 2.94 ಕೋಟಿ ಮೌಲ್ಯದ ಸ್ಥಿರಾಸ್ತಿಗಳನ್ನು ಹೊಂದಿದ್ದಾರೆ. ಅವರ ಪತ್ನಿ ಪಲ್ಲವಿ ರವಿ ಬಳಿ ₹ 1.75 ಕೋಟಿ ಮೌಲ್ಯದ ಚರಾಸ್ತಿ ಮತ್ತು ₹ 1.04 ಕೋಟಿ ಮೌಲ್ಯದ ಸ್ಥಿರಾಸ್ತಿಗಳಿವೆ ಎಂದು ನಾಮಪತ್ರದ ಜತೆಗಿನ ಪ್ರಮಾಣಪತ್ರದಲ್ಲಿ ಘೋಷಿಸಿಕೊಂಡಿದ್ದಾರೆ. ಪತಿ ಮತ್ತು ಪತ್ನಿ ಒಟ್ಟು ₹ 2.42 ಕೋಟಿ ಸಾಲ ಹೊಂದಿದ್ದಾರೆ. ರವಿ ವಿರುದ್ಧ ವಿವಿಧ ನ್ಯಾಯಾಲಯಗಳಲ್ಲಿ ನಾಲ್ಕು ಪ್ರಕರಣಗಳು ಬಾಕಿ ಇವೆ.

ಜವರಾಯಿಗೌಡ ಆಸ್ತಿ ₹ 248 ಕೋಟಿ

ವಿಧಾನ ಪರಿಷತ್ ಚುನಾವಣೆಗೆ ಜೆಡಿಎಸ್ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಟಿ.ಎನ್. ಜವರಾಯಿಗೌಡ ಕುಟುಂಬ ₹ 248.6 ಕೋಟಿ ಮೌಲ್ಯದ ಆಸ್ತಿಗಳನ್ನು ಹೊಂದಿದೆ.

ಜವರಾಯಿಗೌಡ ಬಳಿ ₹ 21.84 ಕೋಟಿ ಚರಾಸ್ತಿ ಮತ್ತು ₹ 64.40 ಕೋಟಿ ಸ್ಥಿರಾಸ್ತಿಗಳಿವೆ. ಅವರ ಪತ್ನಿ ಟಿ.ಎ. ಗಾಯತ್ರಿ ₹ 11.17 ಕೋಟಿ ಮೌಲ್ಯದ ಚರಾಸ್ತಿ ಮತ್ತು ₹ 106.72 ಕೋಟಿ ಸ್ಥಿರಾಸ್ತಿ ಹೊಂದಿದ್ದಾರೆ.

ಸುಧಾ ಓದಿರಿ

ಸೂಚನೆ

ಸುಶ್ರುತ ವಿಶ್ರಾಂತಿ ಧಾಮ ಲಿಮಿಟೆಡ್ ತನ್ನ ಸದಸ್ಯರ ವಿಶೇಷ ಸಭೆಯನ್ನು 23/06/2024 ರಂದು 10:30 AM IST ಕ್ಕೆ ವೀಡಿಯೊ ಕಾನ್ಫರೆನ್ಸಿಂಗ್ ಮೂಲಕ ನಡೆಸುತ್ತಿದೆ. ಈ ಸಭೆಯು ಕಂಪನಿಗಳ ಕಾಯಿದೆ, 2013 ರ ನಿಬಂಧನೆಗಳು ಮತ್ತು ಸಾಮಾನ್ಯ ಸುತ್ತೋಲೆ ಸಂಖ್ಯೆ. 14/2020, 17/2020, 20/2020 ಮತ್ತು MCA ಮತ್ತು ಭಾರತ ಸರ್ಕಾರದಿಂದ ಇತರ ಸಂಬಂಧಿತ ಸುತ್ತೋಲೆಗಳಿಗೆ ಅನುಗುಣವಾಗಿದೆ. ಸಭೆಯ ನಡಾವಳಿಗಳನ್ನು www.suvidha.co.in ನ'ಲ್ಲಿ ಪ್ರದರ್ಶಿಸಲಾಗುತ್ತದೆ. ಈ ಸಂಬಂಧ ಎಲೆಕ್ಟ್ರಾನಿಕ್ ವಿಧಾನಗಳ ಮೂಲಕ ಮತದಾನ ಹಾಗೂ ವಹಿವಾಟು ನಡೆಸಲಾಗುವುದು. ಸಂಸ್ಥೆಯ ಷೇರುಗಳನ್ನು ಹೊಂದಿರುವ ಮತ್ತು ಸಂಸ್ಥೆಯ ಸದಸ್ಯರು ಲಾಗಿನ್ ಐಡಿ ಮತ್ತು ಪಾಸ್‌ವರ್ಡ್ ಪಡೆಯಲು ಕಂಪನಿಯ ಕಾರ್ಯದರ್ಶಿಯನ್ನು cs@suvidha.co.in ಮೂಲಕ ಸಂಪರ್ಕಿಸಲು ಕೋರಲಾಗಿದೆ.

ಸದಸ್ಯರು ಇ-ವೋಟಿಂಗ್ ಮೂಲಕ ತಮ್ಮ ಮತ ಚಲಾಯಿಸಬಹುದು. ಇ-ವೋಟಿಂಗ್ 19/06/2024 0 09:00 AM IST ಪ್ರಾರಂಭವಾಗುತ್ತದೆ ಮತ್ತು 22/06/2024 ರಂದು 05:00 PM IST ಕ್ಕೆ ಕೊನೆಗೊಳ್ಳುತ್ತದೆ. ಮತ್ತು ಸದಸ್ಯರ ವಿಶೇಷ ಸಭೆ ಕೊನೆಗೊಳ್ಳುವವರೆಗು ಇ-ವೋಟಿಂಗ್ ಚಾಲ್ತಿಯಲ್ಲಿರುತ್ತದೆ. ಸಂಸ್ಥೆಯ ಷೇರುದಾರರು ಮಾತ್ರ ಮತದಾನದ ಹಕ್ಕುಗಳನ್ನು ಚಲಾಯಿಸಲು ಅರ್ಹರಾಗಿರುತ್ತಾರೆ.

ಮಂಡಳಿಯ ಸದಸ್ಯರ ಪರವಾಗಿ,
ಸಹಿ/–
ಡಾ.ನೀಲೀಮಾ
ನಿರ್ದೇಶಕರು,
ಸುಶ್ರುತ ವಿಶ್ರಾಂತಿ ಧಾಮ ಲಿಮಿಟೆಡ್
ಸ್ಥಳ: ಬೆಂಗಳೂರು DIN: 01553825

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಕುಂಬಾರ ಸಂಘದ ವತಿಯಿಂದ ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನಿಸಲಾಗಿದೆ.

2023–24ನೇ ಸಾಲಿನ ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಯಲ್ಲಿ ಶೇ 85ಕ್ಕಿಂತ ಹೆಚ್ಚು ಅಂಕಗಳಿಸಿದ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಯ ಕುಂಬಾರ ಜನಾಂಗದ ವಿದ್ಯಾರ್ಥಿಗಳು ಜೂ. 15ರೊಳಗೆ ಅರ್ಜಿ ಸಲ್ಲಿಸಬಹುದು.

ಜೂ. 26ರಂದು ಬೆಂಗಳೂರಿನ ಕಲಾಸಿಪಾಳ್ಯದಲ್ಲಿರುವ ಕುಂಬಾರ ಸಂಘದಲ್ಲಿ ನಡೆಯುವ ಕಾರ್ಯಕ್ರಮ-ದಲ್ಲಿ ಪ್ರತಿಭಾ ಪುರಸ್ಕಾರವನ್ನು ವಿತರಣೆ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗಾಗಿ 6362619669, 080-26705264ಗೆ ಸಂಪರ್ಕಿಸಿ ಎಂದು ಕೋರಿದೆ.

ನೈಋತ್ಯ ರೈಲ್ವೆ G20
ಟೆಂಡರ್ ಸೂಚನೆ ಸಂ.: 19/2024
ದಿನಾಂಕ: 28.05.2024
ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:
ಸಂಕ್ಷಿಪ್ತವಾಗಿ ವಿವರಣೆ: 10.0 Kg/cm2 ನಲ್ಲಿ ವಿಭಾಗ-I ನ ಷರತ್ತು 2 ರ ಪ್ರಕಾರ ನಿಯತಾಂಕಗಳಾಗಿ 450 ಸಿಎಫ್‌ಎಮ್ ನ ಡೀಸೆಲ್ ಎಂಜಿನ್ ಚಾಲಿತ, ರೋಟರಿ ಸ್ಕ್ರೂ, ಏರ್-ಕೂಲ್ಡ್ ಸ್ಟೇಷನರಿ ಏರ್ ಕಂಪ್ರೆಸರ್‌ನ ವಿನ್ಯಾಸ, ಪೂರೈಕೆ, ಸ್ಥಾಪನೆ, ಪರೀಕ್ಷೆ, ಕಾರ್ಯಾರಂಭ ಮತ್ತು ಪ್ರೂವನ್ ಔಟ್.
ಟೆಂಡರ್ ಸಂಖ್ಯೆ: L8245800 ಪ್ರಮಾಣ: 02 ಸೆಟ್‌ಗಳು
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21-06-2024, 10:30 ಗಂಟೆಯವರೆಗೆ
ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಹಿರಿಯ ವಿಭಾಗೀಯ ಸಾಮಗ್ರಿಗಳ ವ್ಯವಸ್ಥಾಪಕರು ಬೆಂಗಳೂರು
PUB/125/AAV/PRB/SWR/2024-25
South Western Railway-SWR SWRRLY SWRRLY

ಐಆರ್‌ಇಎಲ್ (ಇಂಡಿಯಾ) ಲಿಮಿಟೆಡ್
ಹಿಂದಿನ ಇಂಡಿಯನ್ ರೇರ್ ಅರ್ಥ್ಸ್ ಲಿಮಿಟೆಡ್
(ಭಾರತ ಸರ್ಕಾರದ ಅಧೀನ ಸಂಸ್ಥೆ)
ಸಿಐಎನ್: U15100MH1950GOI008187 ವೆಬ್‌ಸೈಟ್: www.irel.co.in
ಐಎಸ್‌ಒ 9001:2015, ಐಎಸ್‌ಒ 14001:2015 ಮತ್ತು ಐಎಸ್‌ಒ 45001:2018 ಕಂಪನಿ
Unleashing Values | आज़ादी का अमृत महोत्सव
ಉಲ್ಲೇಖ: ಜಾಹೀರಾತು ಸಂ. 24–25/04 ಟೆಂಡರ್ ಪ್ರಕಟಣೆ ದಿನಾಂಕ: 02.06.2024
ಐಆರ್‌ಇಎಲ್, ಒಎಸ್‌ಸಿಎಂ ಇವರು ಕೆಳಕಂಡ ಐಟಂಗಳು/ಜಾಬ್ ವಿವರಗಳಿಗಾಗಿ ಮನವಿ ಪ್ರಸ್ತಾವನೆ ಆಹ್ವಾನಿಸಿದ್ದಾರೆ

ಬಿಡ್ ನಂ.	ಜಾಬ್/ಐಟಂ ವಿವರ
ಜೆಇಎಂ/2024/ಬಿ/4901213	ಐಆರ್‌ಇಎಲ್ (ಒಎಸ್‌ಸಿಎಂ) ಇಲ್ಲಿಗೆ ಭದ್ರತಾ ಸೇವೆಗಳನ್ನು ಒದಗಿಸಲು ನೋಂದಾಯಿತ ಖಾಸಗಿ ಭದ್ರತಾ ಸಂಸ್ಥೆಗಳನ್ನು ತೊಡಗಿಸಿಕೊಳ್ಳುವುದು
ಜೆಇಎಂ/2024/ಬಿ/4992965	ರಿಪಿಟೇಟಿವ್ ಟ್ರಾನ್ಸ್‌ಕ್ರೇನಿಯಲ್ ಮ್ಯಾಗ್ನೆಟಿಕ್ ಸ್ಟಿಮುಲೇಶನ್ (ಆರ್‌ಟಿಎಂಎಸ್) ಯಂತ್ರ ಪೂರೈಕೆ, ಅಳವಡಿಕೆ ಮತ್ತು ಕಮಿಷನಿಂಗ್
ಜೆಇಎಂ/2024/ಬಿ/4978401	ಎಂಎಸ್‌ಪಿ ಇಲೆಕ್ಟ್ರಿಕಲ್ ಮೈಂಟೆನನ್ಸ್ ಕಾಮಗಾರಿಗಾಗಿ ಎಎಂಸಿ

ಬಿಡ್‌ದಾರರು http://irel.co.in, http://gem.gov.in ಅಥವಾ https://eprocure.gov.in/eprocure/app ವೆಬ್‌ಸೈಟ್‌ನಿಂದ ಟೆಂಡರ್ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಈ ಮೇಲಿನ ಟೆಂಡರ್‌ಗಳಿಗೆ ಸಂಬಂಧಿತ ಯಾವುದೇ ತಿದ್ದುಪಡಿ/ವಿಸ್ತರಣೆ ಕುರಿತ ವಿವರಗಳನ್ನು ಮೇಲ್ಕಂಡ ವೆಬ್‌ಸೈಟ್‌ಗಳಲ್ಲಿ ಮಾತ್ರ ಪ್ರಕಟಿಸಲಾಗುತ್ತದೆ.
CBC 48146/12/0004/2425 ಸಹಿ/– ಜಿಎಂ & ಮುಖ್ಯಸ್ಥರು, ಎಂಎಂಡಿ, ಒಎಸ್‌ಸಿಎಂ

400 ಕೇಬಲ್ ಬದಲಾವಣೆ ಮಾಡಿದ್ದರೂ ಭಾರಿ ವಾಹನ ಸಂಚಾರಕ್ಕೆ ಅನುಮತಿ ಇಲ್ಲ

ಪೀಣ್ಯ ಮೇಲ್ಸೇತುವೆ: ಸಿಗದ 'ಗ್ರೀನ್ ಸಿಗ್ನಲ್'

• ಆದಿತ್ಯ ಕೆ.ಎ.

ಪೀಣ್ಯ ಮೇಲ್ಸೇತುವೆ

ಬೆಂಗಳೂರು: ರಾಷ್ಟ್ರೀಯ ಹೆದ್ದಾರಿ-4ರ ತುಮಕೂರು ರಸ್ತೆಯಲ್ಲಿರುವ ಪೀಣ್ಯ ಮೇಲ್ಸೇತುವೆಯಲ್ಲಿ 400 ಕೇಬಲ್‌ಗಳ ಬದಲಾವಣೆ ಕಾಮಗಾರಿ ಮುಕ್ತಾಯವಾಗಿ ಐದು ತಿಂಗಳು ಕಳೆದಿದ್ದರೂ ಭಾರಿ ವಾಹನ ಸಂಚಾರಕ್ಕೆ ಇನ್ನೂ 'ಹಸಿರು ನಿಶಾನೆ' ದೊರೆತಿಲ್ಲ. ಇದರಿಂದ ಈ ಮಾರ್ಗದಲ್ಲಿ ವಾಹನ ದಟ್ಟಣೆ ಸಮಸ್ಯೆ ಇನ್ನಷ್ಟು ಬಿಗಡಾಯಿಸಿದೆ.

ಭಾರಿ ವಾಹನಗಳ ಸಂಚಾರಕ್ಕೆ ಅನುಮತಿ ಸಿಗುವುದು ವಿಳಂಬವಾಗಿದ್ದರಿಂದ ರಾಷ್ಟ್ರೀಯ ಹೆದ್ದಾರಿಯಲ್ಲಿ ನಿತ್ಯ ವಾಹನ ಚಾಲಕರು ನರಕಯಾತನೆ ಅನುಭವಿಸುತ್ತಿದ್ದಾರೆ. ದಟ್ಟಣೆಯಲ್ಲಿ ಆಂಬುಲೆನ್ಸ್‌ಗಳು ಸಿಲುಕಿ ರೋಗಿಗಳ ಜೀವಕ್ಕೆ ಆಪತ್ತು ಎದುರಾಗುತ್ತಿದೆ. ನಗರದಲ್ಲಿ 15 ದಿನಗಳಿಂದ ಧಾರಾಕಾರ ಮಳೆಯಾಗುತ್ತಿದ್ದು, ಈ ಮಾರ್ಗದ ಹಲವು ಜಂಕ್ಷನ್‌ಗಳಲ್ಲಿ ಎರಡರಿಂದ ಮೂರು ಅಡಿ ನೀರು ಸಂಗ್ರಹಗೊಂಡು ಅಲ್ಲಲ್ಲಿ ವಾಹನಗಳು ಕೆಟ್ಟು ನಿಲ್ಲುತ್ತಿವೆ ಎಂದು ಸಂಚಾರ ಪೊಲೀಸರು ಹೇಳುತ್ತಾರೆ.

ಹಾಸನ, ತುಮಕೂರು, ದಾವಣಗೆರೆ, ಮಂಗಳೂರು ಸೇರಿದಂತೆ ಹಲವು ಜಿಲ್ಲೆಗಳಿಂದ ಸಂಜೆ ವೇಳೆಯಲ್ಲಿ ಅಪಾರ ವಾಹನಗಳು ನಗರ ಪ್ರವೇಶಿಸುತ್ತವೆ. ಸಂಜೆ ಧಾರಾಕಾರ ಮಳೆ ಆಗುತ್ತಿರುವ ಪರಿಣಾಮ ಸವಾರರು ಸಮಸ್ಯೆಗೆ ಸಿಲುಕುತ್ತಿದ್ದಾರೆ. ಪರ್ಯಾಯ ಮಾರ್ಗವಿಲ್ಲದೇ ವಾಹನಗಳು ಮೇಲ್ಸೇತುವೆ ಕೆಳ ಮಾರ್ಗದಲ್ಲೇ ಸಂಚರಿಸುತ್ತಿರುವ ಪರಿಣಾಮ ರಸ್ತೆಯಲ್ಲೇ ಕಾಲ ಕಳೆಯುವ ಸ್ಥಿತಿ ನಿರ್ಮಾಣವಾಗಿದೆ. ವಾಹನಗಳು ಸರಾಗವಾಗಿ ಮುಂದಕ್ಕೆ ಸಾಗಲು ಸಾಧ್ಯವಾಗು-ತ್ತಿಲ್ಲ. ಕಳೆದ ಎರಡು ದಿನಗಳಿಂದ ವಾಹನ ಸವಾರರ ಸ್ಥಿತಿ ಹೇಳತೀರದಾಗಿದೆ.

ಕೆನ್ನಮೆಟಲ್ (ವಿಡಿಯಾ) ಬಳಿಯ ಟೋಲ್ ಬಳಿ ವಾಹನಗಳು 1ರಿಂದ 2 ಕಿ.ಮೀ ಸಾಲುಗಟ್ಟಿ ನಿಲ್ಲುತ್ತಿವೆ. ಶನಿವಾರ ಸಂಜೆ ಹಾಗೂ ಭಾನುವಾರ ಸಂಜೆ ನೆಲಮಂಗಲದಿಂದ ಯಶವಂತಪುರದವರೆಗೆ ತೆರಳಲು ವಾಹನ ಸವಾರರಿಗೆ ಸಾಧ್ಯವಾಗದ ಸ್ಥಿತಿ ನಿರ್ಮಾಣವಾಗಿತ್ತು ಎಂದು ಸವಾರರು ಅಳಲು ತೋಡಿಕೊಂಡರು.

> ಭಾರತೀಯ ವಿಜ್ಞಾನ ಸಂಸ್ಥೆಯ ತಜ್ಞರ ಜೊತೆಗೆ ಸಭೆ ನಡೆಸಿ ಭಾರಿ ವಾಹನ ಸಂಚಾರಕ್ಕೆ ಅನುಮತಿ ನೀಡುವ ಕುರಿತು ಅಂತಿಮ ತೀರ್ಮಾನ ತೆಗೆದುಕೊಳ್ಳುತ್ತೇವೆ
>
> **ಜಯಕುಮಾರ್,** ಎಂಜಿನಿಯರ್ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

'ಮೇಲ್ಸೇತುವೆಯ ದುರಸ್ತಿ ಕಾರ್ಯ ಮುಕ್ತಾಯವಾಗಿದೆ ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ. ಆದರೆ, ಯಾವ ಕಾರಣದಿಂದ ಅನುಮತಿ ನೀಡುತ್ತಿಲ್ಲ ಎಂಬುದು ಗೊತ್ತಾಗುತ್ತಿಲ್ಲ. ಅನುಮತಿ ನೀಡಿದರೆ ದೊಡ್ಡ ಸಮಸ್ಯೆ ತಪ್ಪಲಿದೆ' ಎಂದು ಕ್ಯಾಬ್ ಚಾಲಕ ಮೋಹನ್ ಹೇಳಿದರು.

ಮತ್ತಷ್ಟು ವಿಳಂಬ: 'ಮೇಲ್ಸೇತುವೆ 4 ಕಿ.ಮೀ ಇದ್ದು 1 ಕಿ.ಮೀನಲ್ಲಿ ಮಾತ್ರ 400 ಕೇಬಲ್ ಬದಲಾವಣೆ ಮಾಡಲಾಗಿದೆ. ಈ ಭಾಗದ ಸ್ಪ್ಯಾನ್‌ಗಳಲ್ಲಿ ಮಾತ್ರ ಸಾಮರ್ಥ್ಯ ಹೆಚ್ಚಾಗಿದೆ. ಉಳಿದ ಸ್ಪ್ಯಾನ್‌ಗಳಲ್ಲಿ 1,200 ಕೇಬಲ್ ಬದಲಾವಣೆ ಮಾಡಬೇಕು. ಕೇಬಲ್ ಬದಲಾವಣೆ ಆದ ಮೇಲೆ ಕಾಂಕ್ರೀಟ್ ಭರ್ತಿ ಮಾಡಬೇಕಿದ್ದು ಆಗ ಮೇಲ್ಸೇತುವೆಯಲ್ಲಿ ವಾಹನ ಸಂಚಾರ ಇರಬಾರದು. ಸಂಚಾರ ಪೊಲೀಸರ ಜತೆ ಚರ್ಚಿಸಿ ಉಳಿದ ಕೇಬಲ್‌ಗಳ ಬದಲಾವಣೆಗೆ ಕ್ರಮ ತೆಗೆದುಕೊಳ್ಳುತ್ತೇವೆ' ಎಂದು ಹೆದ್ದಾರಿ ಪ್ರಾಧಿಕಾರದ ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ದುರಸ್ತಿ ಕಾರ್ಯ ಏನು– ಎತ್ತ?

- ಮೇಲ್ಸೇತುವೆಯ 102, 103ನೇ ಪಿಲ್ಲರ್‌ನಲ್ಲಿ ಬಿರುಕು ಕಾಣಿಸಿಕೊಂಡಿದ್ದರಿಂದ 2021ರ ಡಿಸೆಂಬರ್‌ನಲ್ಲಿ ವಾಹನ ಸಂಚಾರ ನಿರ್ಬಂಧಿಸಲಾಗಿತ್ತು.
- 2022ರಲ್ಲಿ ತಜ್ಞರು ಪರಿಶೀಲಿಸಿ ಭಾರಿ ವಾಹನ ಸಂಚಾರ ನಿರ್ಬಂಧಿಸಿ ಲಘು ವಾಹನಗಳ ಸಂಚಾರಕ್ಕೆ ಮಾತ್ರ ಅವಕಾಶ ಕಲ್ಪಿಸಲಾಗಿತ್ತು.
- ತಜ್ಞರ ಸೂಚನೆಯಂತೆ 2023ರ ಜನವರಿಯಲ್ಲಿ ಕೇಬಲ್‌ಗಳ ಬದಲಾವಣೆ ಕಾಮಗಾರಿ ಆರಂಭಿಸಲಾಗಿತ್ತು. ಡಿಸೆಂಬರ್ ವೇಳೆಗೆ 400 ಕೇಬಲ್‌ಗಳ ಬದಲಾವಣೆ ಕೆಲಸ ಪೂರ್ಣಗೊಂಡಿತ್ತು.
- ಇದೇ ವರ್ಷದ ಜ. 16ರಿಂದ 3 ದಿನ ಮೇಲ್ಸೇತುವೆಯ ಪರಿಶೀಲನೆ ನಡೆಸಲಾಗಿತ್ತು. ಈ ವೇಳೆ ಮೇಲ್ಸೇತುವೆಯ ಸಾಮರ್ಥ್ಯ ಹೆಚ್ಚಿರುವುದು ಗೊತ್ತಾಗಿತ್ತು.
- ಜ. 29ರಂದು ಹೆದ್ದಾರಿ ಪ್ರಾಧಿಕಾರಕ್ಕೆ ಪರಿಶೀಲನಾ ವರದಿ ಸಲ್ಲಿಸಿದ್ದ ತಜ್ಞರು.

'ಹೆದ್ದಾರಿ ಪ್ರಾಧಿಕಾರದವರು ಸಂಪರ್ಕಿಸಿಲ್ಲ'

ಜನವರಿಯಲ್ಲಿ ಸಾಮರ್ಥ್ಯ ಪರೀಕ್ಷೆಗೆ ಅವಕಾಶ ಕಲ್ಪಿಸಿಕೊಟ್ಟು ವಾಹನಗಳಿಗೆ ಪರ್ಯಾಯ ಮಾರ್ಗ ಕಲ್ಪಿಸಿದ್ದೆವು. ಅದಾದ ಮೇಲೆ ಹೆದ್ದಾರಿ ಪ್ರಾಧಿಕಾರದವರು ನಮ್ಮನ್ನು ಸಂಪರ್ಕಿಸಿಲ್ಲ. ಹೆದ್ದಾರಿಯಲ್ಲಿ ನೀರು ಸಂಗ್ರಹಗೊಳ್ಳುತ್ತಿದೆ. ಮೇಲ್ಸೇತುವೆಯಲ್ಲಿ ಬಸ್, ಟ್ಯಾಂಕರ್‌ಗಳ ಸಂಚಾರಕ್ಕೆ ಅವಕಾಶ ಲಭಿಸಿದರೆ ತುಮಕೂರು ರಸ್ತೆಯಲ್ಲಿ ವಾಹನ ದಟ್ಟಣೆ ಸ್ವಲ್ಪಮಟ್ಟಿಗೆ ತಗ್ಗಲಿದೆ.

ಎಂ.ಎನ್.ಅನುಚೇತ್, ಜಂಟಿ ಪೊಲೀಸ್ ಕಮಿಷನರ್, ಸಂಚಾರ ವಿಭಾಗ

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Hospital & Medical Jobs

REQUIRED
A Gynecologist and Pediatrician
Karunalayam Hospital, Caramelram
Contact: 7204415846

Teachers/ Professors

St. Joseph's Institute of Management
SJIM
28/1, Primrose Road (Off M.G. Road), Bangalore 560 025
Invites Applications for the positions of
Assistant Professor/ Associate Professor in
Marketing, HR and Business Analytics.
Full time Ph D holders from reputed institutions and publications in ABDC, WoS, Scopus will be given preference.
Salary scale as per AICTE Norms
Interested candidates can email their CV to
director@sjim.edu.in
before 6th June 2024.
Web: www.sjim.edu.in

PERSONAL

Change of Name

I, SRINIVASA. K.L. Residing at Bengaluru have changed my name as SRINIVAS. K.L. vide affidavit dated 3/6/2024 before Notary K.S. Bammappanavar, Bengaluru

EDUCATION CORNER

R.E.S. POLYTECHNIC
Estd: 1986 - Recognised by Govt. of Karnataka & AICTE
10th Pass / What Next ???
JOIN DIPLOMA IN: ♦ Computer Science ♦ IS ♦ Civil ♦ Mechanical ♦ Automobile ♦ Electrical ♦ Electronics ♦ Fashion Tech ♦ Commerce (CP)
After Diploma can join JOB / 2nd year Engg OR Any Degree through LATERAL ENTRY QUOTA
PUC Pass Join 2 yrs Diploma Engineering
PUC Fail Join 3 yrs Diploma Engineering
EVENING / WEEKEND CLASSES
Available for working Professionals to EE
5, Sunkadakatte, Magadi Road, Hegganahalli Cross, B-91
Call: Secretary-99166 46466 / Principal-9916639466
RES-24502

CHANGE OF NAME
I, RAKSHA MAYI R KALE D/o S Raghu Ram Rao and W/o Santhosh Gowda T R, aged about 24 years, residing at # 30, 1st Main, 2nd Cross, Near Mahaveer Apartment, Ganesh Nagar, Hosahalli, Gollarapalya, Bangalore- 560091, have changed my name to RAKSHA R SANTHOSH GOWDA vide affidavit dated 01.06.2024, before notary R. Viswanath, Bangalore

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

CONNECT ಕ್ಲಾಸಿಫೈಡ್ಸ್

ಬೆಂಗಳೂರು ಉತ್ಸವ
Bengaluru Utsava
Grand Flea Market
Karnataka Chitrakala Parishath
Kumara Krupa Road, Bengaluru
Date: 31st May 2024 to 9th June 2024
Timing: 11:00 AM - 7:00 PM
(Art, Craft, Handlooms & Lifestyle Exhibition)
Entry Free!
Art & Craft | Handicraft | Clothing
Fashion Accessories | Home Decor & More
FOOD
(10 Days Exhibition) 100+ Stalls
Hulivesha Live Performance 8th June 2024 5.00 PM - 6.30 PM Entry Free
Yakshagana Live Performance 9th June 2024 5.00 PM - 6.30 PM Entry Free
Home Decors | Handmade Paintings | Ceramic Pots | Handlooms & Handicrafts | Curtains
Carpets | Mats | Bags | Khadi Kurtas | Silks Saree | Sarees | Designer Kurtis | Bandhani
Bedsheets | Designer Jewelry | Handmade Jewelry | Toys | Pots & Much more...
For Details Contact : 6364685716 / 9036658774 Entry Free..!
100+ Shopping Stalls | Live Performance | Much More!

ಸಂಚಾರಕ್ಕೆ ಮುಕ್ತಗೊಳ್ಳದ ಕಾಮರಾಜ್ ರಸ್ತೆ

ಪ್ರಜಾವಾಣಿ ವಾರ್ತೆ

ಸಂಚಾರಕ್ಕೆ ಮುಕ್ತಗೊಳ್ಳಲು ತಯಾರಾಗಿರುವ ಕಾಮರಾಜ್ ರಸ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ಗುಲಾಬಿ ಮಾರ್ಗದ ಕಾಮಗಾರಿ ಸಂಬಂಧ ಐದು ವರ್ಷಗಳ ಹಿಂದೆ ಮುಚ್ಚಲಾಗಿದ್ದ ಕಾಮರಾಜ್ ರಸ್ತೆ ಸಂಚಾರಕ್ಕೆ ತೆರೆಯಲು ಇನ್ನೂ ಕಾಲಕೂಡಿ ಬಂದಿಲ್ಲ. ಸಂಚಾರಕ್ಕೆ ಮುಕ್ತಗೊಳಿಸಲು ಪದೇ ಪದೇ ಗಡುವು ನಿಗದಿ ಮಾಡಿ, ನಂತರ ಮುಂದೂಡುವುದೇ ನಡೆಯುತ್ತಿದೆ.

ನಾಗವಾರ-ಕಾಳೇನ ಅಗ್ರಹಾರ ಮೆಟ್ರೊ ಮಾರ್ಗದಲ್ಲಿ ಕಾವೇರಿ ಎಂಪೋರಿಯಂ ಜಂಕ್ಷನ್‌ನಿಂದ ಕಬ್ಬನ್ ರಸ್ತೆ ಜಂಕ್ಷನ್‌ವರೆಗೆ ಅಂತರ್‌ಬದಲಾವಣೆಯ (ಇಂಟರ್‌ಚೇಂಜ್) ಎಂ.ಜಿ. ರಸ್ತೆ ಮೆಟ್ರೊ ಭೂಗತ ನಿಲ್ದಾಣ ನಿರ್ಮಿಸಲು ಕಾಮರಾಜ್ ರಸ್ತೆಯನ್ನು 2019ರಲ್ಲಿ ಬಿಎಂಆರ್‌ಸಿಎಲ್ ವತಿಯಿಂದ ಮುಚ್ಚಲಾಗಿತ್ತು.

ಭೂಮಿ ಹಸ್ತಾಂತರ, ಮರಗಳ ತೆರವು ಪ್ರಕ್ರಿಯೆ ವಿಳಂಬ, ಕೋವಿಡ್ ಬಿಕ್ಕಟ್ಟು ಸೇರಿ ವಿವಿಧ ಕಾರಣಗಳಿಂದ ಕಾಮಗಾರಿ ತುಂಬಾ ನಿಧಾನವಾಗಿ ಸಾಗಿತ್ತು. ಬ್ರಿಗೇಡ್ ರಸ್ತೆ, ಕಮರ್ಷಿಯಲ್ ಸ್ಟ್ರೀಟ್ ಮತ್ತು ಇತರ ಸ್ಥಳಗಳನ್ನು ತಲುಪಲು ವಾಹನ ಸವಾರರು ಸುತ್ತು ಹಾಕಿಕೊಂಡು ಬರುವಂತಾಗಿತ್ತು.

2024ರ ಆರಂಭದಲ್ಲಿ ಈ ರಸ್ತೆ ಸಂಚಾರಕ್ಕೆ ಮುಕ್ತವಾಗಲಿದೆ ಎಂದು ವರ್ಷದ ಹಿಂದೆ ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದರು. ಆದರೆ ಕಾಮಗಾರಿ ಮುಗಿಯದ ಕಾರಣ ಸಂಚಾರ ಆರಂಭಗೊಳ್ಳಲಿಲ್ಲ. 'ಈಗ ಕಾಮಗಾರಿ ಅಂತಿಮ ಹಂತಕ್ಕೆ ಬಂದಿದೆ. ಕಾಮರಾಜ್ ರಸ್ತೆಯ ಒಂದು ಬದಿಯಿಂದ ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲು ಯಾವುದೇ ಸಮಸ್ಯೆ ಇಲ್ಲ. ಏಪ್ರಿಲ್ ಅಂತ್ಯದ ಒಳಗೆ ರಸ್ತೆಯ ಒಂದು ಬದಿಯಿಂದ ವಾಹನ ಸಂಚಾರ ಆರಂಭವಾಗಲಿದೆ. ಯಂತ್ರೋಪಕರಣಗಳ ಸಾಗಾಟಕ್ಕಾಗಿ ಇನ್ನೊಂದು ಬದಿಯ ರಸ್ತೆ ಬಳಕೆಯಾಗಲಿದೆ' ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ಆನಂತರ ಮಾಹಿತಿ ನೀಡಿದ್ದರು. ಈಗ ಏಪ್ರಿಲ್ ಬದಲು ಮೇ ತಿಂಗಳಿಗೆ ಮುಂದೂಡಲಾಗಿತ್ತು. ಮೇ ತಿಂಗಳಲ್ಲೂ ರಸ್ತೆ ಸಂಚಾರಕ್ಕೆ ತೆರೆದುಕೊಂಡಿಲ್ಲ.

'ಕಾಮಗಾರಿ ಮುಕ್ತಾಯಗೊಂಡಿದ್ದು, ಒಂದು ಬದಿಯಲ್ಲಿ ವಾಹನ ಸಂಚಾರ ಮಾಡಲು ಎಲ್ಲ ತಯಾರಿಗಳಾಗಿವೆ. ಜೂನ್ ಅಂತ್ಯದ ಒಳಗೆ ರಸ್ತೆ ಸಂಚಾರ ಆರಂಭಗೊಳ್ಳಲಿದೆ' ಎಂದು ಬಿಎಂಆರ್‌ಸಿಎಲ್ ಸಾರ್ವಜನಿಕ ಸಂಪರ್ಕಾಧಿಕಾರಿ ತಿಳಿಸಿದ್ದಾರೆ.

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
: support@deccanherald.co.in

ಎಂ.ಪಿ. ಶ್ಯಾಮ್ ಹಾಗೂ ಹೊಂಬಾಳೆ ಫಿಲ್ಮ್ಸ್‌ನ ನಿರ್ದೇಶಕ ಚಲುವೇಗೌಡ ಅವರು ಒಡಂಬಡಿಕೆ ಪತ್ರಗಳನ್ನು ವಿನಿಮಯ ಮಾಡಿಕೊಂಡರು

ಶಿಕ್ಷಣ ಕ್ಷೇತ್ರ ಪ್ರವೇಶಿಸಿದ ಹೊಂಬಾಳೆ ಫಿಲ್ಮ್ಸ್

ಫಿಲ್ಮ್ ಸ್ಕೂಲ್ ಸ್ಥಾಪನೆಗೆ ಒಪ್ಪಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಆರ್.ವಿ. ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿ 'ಸ್ಕೂಲ್ ಆಫ್ ಫಿಲ್ಮ್, ಮೀಡಿಯಾ ಆ್ಯಂಡ್ ಕ್ರಿಯೇಟಿವ್ ಆರ್ಟ್ಸ್' (ಸಿನಿಮಾ, ಮಾಧ್ಯಮ ಮತ್ತು ಸೃಜನಶೀಲ ಕಲೆಗಳ ಕಾಲೇಜು–ಎಸ್‌ಒಎಫ್‌ಎಂಸಿಎ) ಸ್ಥಾಪಿಸುವ ಕುರಿತು ಆರ್.ವಿ. ವಿ.ವಿ ಹಾಗೂ ಹೊಂಬಾಳೆ ಫಿಲ್ಮ್ಸ್ ಸಂಸ್ಥೆಗಳು ಒಡಂಬಡಿಕೆಗೆ ಸಹಿ ಹಾಕಿವೆ.

ರಾಷ್ಟ್ರೀಯ ಶಿಕ್ಷಣ ಸಮಿತಿ ಟ್ರಸ್ಟ್‌ನ ಅಧ್ಯಕ್ಷ ಎಂ.ಪಿ. ಶ್ಯಾಮ್, 'ದೃಶ್ಯ ಮಾಧ್ಯಮಕ್ಕೆ ಸಂಬಂಧಿಸಿ ದಂತೆ ನಮ್ಮ ವಿದ್ಯಾರ್ಥಿಗಳಿಗೆ ಜಾಗತಿಕ ಗುಣಮಟ್ಟದ ತರಬೇತಿ ಲಭ್ಯವಾಗಲಿದೆ. ದೇಶದ ಅತಿದೊಡ್ಡ ಸ್ಟುಡಿಯೊದಲ್ಲಿ ಪ್ರಾಯೋಗಿಕ ಅನುಭವವೂ ಸಿಲಿಗದೆ ಎಂದು ತಿಳಿಸಿದರು.

'ಈ ಕಾಲೇಜಿನಲ್ಲಿ ಸಿನಿಮಾ, ಮಾಧ್ಯಮ, ಒಟಿಟಿ, ಸೃಜನಶೀಲ ಕಲೆಗಳಿಗೆ ಸಂಬಂಧಿಸಿದ ಪದವಿ ಹಾಗೂ ಸ್ನಾತಕೋತ್ತರ ಕೋರ್ಸ್‌ಗಳ ಇರಲಿವೆ. ಚಿತ್ರ ನಿರ್ಮಾಣ, ಆನಿಮೇಶನ್ ಮತ್ತು ದೃಶ್ಯಕಲೆ, ಚಿತ್ರ ನಿರ್ದೇಶನ, ಚಿತ್ರಕಥೆ ರಚನೆ, ಸಂಕಲನ, ಸಿನಿ ಛಾಯಾಗ್ರಹಣ, ಧ್ವನಿ ಸಂರಚನೆ ಕೋರ್ಸ್‌ಗಳು ನಡೆಯಲಿವೆ' ಎಂದರು.

ಹೊಂಬಾಳೆ ಫಿಲ್ಮ್ಸ್ ಸಂಸ್ಥಾಪಕ ವಿಜಯ್ ಕಿರಗಂದೂರು, 'ಮುಂಬರುವ ವರ್ಷಗಳಲ್ಲಿ ದೃಶ್ಯ ಮಾಧ್ಯಮ ಹಾಗೂ ದೃಶ್ಯ ಮನೋರಂಜನೆಯ ಕ್ಷೇತ್ರಕ್ಕೆ ಅಗತ್ಯವಿರುವ ವೃತ್ತಿಪರ ಪ್ರತಿಭಾವಂತರನ್ನು ರೂಪಿಸಲು ಈ ಕಾಲೇಜು ಸಹಾಯಕವಾಗಲಿದೆ. ಎರಡು ಸಂಸ್ಥೆಗಳು ಒಗ್ಗೂಡಿ ಗುಣಮಟ್ಟದ ಶಿಕ್ಷಣದ ಮೂಲಕ ಪ್ರತಿಭಾವಂತರಿಗೆ ವೇದಿಕೆ ಕಲ್ಪಿಸಲು ಮುಂದಾಗುತಿದ್ದೇವೆ' ಎಂದು ಹೇಳಿದರು.

'ಶಾಮನೂರು, ಬಿಎಸ್‌ವೈ ಹೊಂದಾಣಿಕೆ ರಾಜಕೀಯ'

ಪ್ರಜಾವಾಣಿ ವಾರ್ತೆ

ಬಿ.ಪಿ. ಹರೀಶ್

ಬೆಂಗಳೂರು: 'ಬಿಜೆಪಿಯ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯ ಬಿ.ಎಸ್. ಯಡಿಯೂರಪ್ಪ, ಕಾಂಗ್ರೆಸ್ ಶಾಸಕ ಶಾಮನೂರು ಶಿವಶಂಕರಪ್ಪ ಅವರ ಕುಟುಂಬ ರಾಜ್ಯದಲ್ಲಿ ಹೊಂದಾಣಿಕೆ ರಾಜಕೀಯ ಮಾಡುತ್ತಿದೆ' ಎಂದು ಹರಿಹರ ಕ್ಷೇತ್ರದ ಬಿಜೆಪಿ ಶಾಸಕ ಬಿ.ಪಿ.ಹರೀಶ್ ಆರೋಪಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರಿಗೆ ಸೇರಿದ ಕಲ್ಲೇಶ್ವರ ಮಿಲ್ ಹಿಂಭಾಗದ ಫಾರ್ಮ್ ಹೌಸ್‌ನಲ್ಲಿ 2023ರಲ್ಲಿ ಕೃಷ್ಣಮೃಗ, ಜಿಂಕೆ ಸೇರಿದಂತೆ ಒಟ್ಟು 30 ವನ್ಯಜೀವಿಗಳು ಪತ್ತೆ ಆಗಿದ್ದವು. ಆದರೆ, ಬಸವರಾಜ ಬೊಮ್ಮಾಯಿ ಅವರ ನೇತೃತ್ವದ ನಮ್ಮದೇ ಸರ್ಕಾರ ಇದ್ದರೂ ಅವರನ್ನು ಬಂಧಿಸಲಿಲ್ಲ. ಈ ಪ್ರಕರಣ-ದಲ್ಲಿ ಶಾಮನೂರು ಅವರ ಕುಟುಂಬಕ್ಕೆ ಯಡಿಯೂರಪ್ಪ ಅವರು ಸಹಾಯ ಮಾಡಿದ್ದರು' ಎಂದು ದೂರಿದರು.

'ಲೋಕಸಭಾ ಚುನಾವಣೆಗೆ ಮುಂಚಿತವಾಗಿ ದಾವಣಗೆರೆಯಲ್ಲಿ ನಡೆದ ಪಕ್ಷ ಸೇರ್ಪಡೆ ಕಾರ್ಯ-ಕ್ರಮದಲ್ಲಿ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಅವರು ದಾವಣಗೆರೆ ಕ್ಷೇತ್ರವೊಂದರಲ್ಲಿ ಸೋತರೆ ಏನೂ ಆಗುವುದಿಲ್ಲ ಎಂಬ ಹೇಳಿಕೆ ನೀಡಿದ್ದರು. ಶಾಸಕ ಶಾಮನೂರು ಶಿವಶಂಕರಪ್ಪ ಅವರು ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಬಿ.ವೈ. ರಾಘವೇಂದ್ರ ಅವರನ್ನು ಮತ್ತೊಮ್ಮೆ ಗೆಲ್ಲಿಸಬೇಕು ಎಂಬ ಹೇಳಿಕೆ ನೀಡಿದ್ದರು. ಇದನ್ನು ನಾವು ಹೊಂದಾಣಿಕೆ ರಾಜಕೀಯ ಅನ್ನದೇ ಏನನ್ನಬೇಕು. ಅಂದಿನಿಂದಲೇ ರಾಜ್ಯದಲ್ಲಿ ವೀರಶೈವ ನಾಯಕರ ಹೊಂದಾಣಿಕೆ ರಾಜಕೀಯ ಪ್ರಾರಂಭವಾಗಿದೆ' ಎಂದರು.

ರಾಜ್ಯದ ವಿಧಾನಸಭೆ ಚುನಾವಣೆ ನಡೆಯಲು ಇನ್ನೂ ನಾಲ್ಕು ವರ್ಷ ಇದೆ. ರಾಜ್ಯ ಬಿಜೆಪಿಯಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ನಾಯಕರ ಅಗತ್ಯವಿಲ್ಲ. ರಾಜ್ಯದಲ್ಲಿ ಬಿಜೆಪಿಗೆ ಇನ್ನೂ 10 ವರ್ಷ ಅಧಿಕಾರ ಸಿಗದಿದ್ದರೂ ಪರವಾಗಿಲ್ಲ. ಆದರೆ, ಪಕ್ಷಕ್ಕೆ ಭ್ರಷ್ಟ ನಾಯಕರು ಬೇಕಾಗಿಲ್ಲ. ಉತ್ತಮ ನಾಯಕತ್ವದಲ್ಲಿ ಪಕ್ಷವನ್ನು ತಳಹಂತದಿಂದ ಕಟ್ಟುವ ಕೆಲಸ ಆಗಬೇಕಿದೆ' ಎಂದು ಹೇಳಿದರು.

'ಗಣಿ ಮತ್ತು ಭೂವಿಜ್ಞಾನ ಇಲಾಖೆ ಸಚಿವ ಎಸ್.ಎಸ್.ಮಲ್ಲಿಕಾರ್ಜುನ್ ಅವರು ವಿಜಯನಗರ ಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿನ ನದಿ ಪಾತ್ರದ ಮರಳನ್ನು ಅಕ್ರಮವಾಗಿ ತೆಗೆದು, ಸಂಗ್ರಹಿಸಿ ಸಾವಿರಾರು ಲೋಡ್ ಮರಳನ್ನು ಬೇರೆ ಕಡೆ ಸಾಗಿಸುವ ಮೂಲಕ ದಂಧೆ ನಡೆಸುತ್ತಿದ್ದಾರೆ. ಈ ಬಗ್ಗೆ ಅಧಿಕಾರಿಗಳಿಗೆ ದೂರು ನೀಡಿದರೂ ಕ್ರಮ ಕೈಗೊಳ್ಳುತ್ತಿಲ್ಲ' ಎಂದು ಆರೋಪಿಸಿದರು.

ಯುವವಾಹಿನಿ ಬೆಂಗಳೂರು ಘಟಕದ ಪದಗ್ರಹಣ

'ಯುವಮನಸ್ಸುಗಳು ಜಾಗೃತಗೊಳ್ಳಲಿ'

ಪ್ರಜಾವಾಣಿ ವಾರ್ತೆ

ನಗರದಲ್ಲಿ ಭಾನುವಾರ ನಡೆದ 'ಯುವವಾಹಿನಿ' ಬೆಂಗಳೂರು ಘಟಕದ 202425ರ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಉಪನ್ಯಾಸಕ ಕೇಶವ ಬಂಗೇರ ಮಾತನಾಡಿದರು

ಬೆಂಗಳೂರು: 'ನಾರಾಯಣ ಗುರುಗಳ ಜೀವನ, ಸ್ವಾಮಿ ವಿವೇಕಾನಂದರ ಚಿಂತನಾಧಾರೆ ಮತ್ತು ಅಂಬೇಡ್ಕರ್ ಅವರ ಪ್ರಾಯೋಗಿಕ ಬದುಕಿನಿಂದ ಯುವವಾಹಿನಿ ಸಂಘಟನೆಯು ಪ್ರೇರಣೆ ಪಡೆದು, ಮುನ್ನಡೆದರೆ ಸಮಾಜದಲ್ಲಿ ಸುಧಾರಣೆ ಕಾಣಲು ಸಾಧ್ಯ' ಎಂದು ಮಂಗಳೂರು ಕುದ್ರೋಳಿ ನಾರಾಯಣ ಗುರು ಕಾಲೇಜಿನ ಉಪನ್ಯಾಸಕ ಕೇಶವ ಬಂಗೇರ ಹೇಳಿದರು.

ನಗರದಲ್ಲಿ ಭಾನುವಾರ 'ಯುವ ವಾಹಿನಿ' ಬೆಂಗಳೂರು ಘಟಕದ 2024-25ರ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಯುವ ಸಮುದಾಯ ಸಂಘಟಿತರಾದರೆ ಸಮಾಜದಲ್ಲಿ ಬದಲಾವಣೆ ತರಬಹುದು ಎಂಬುದಕ್ಕೆ ಕಳೆದ ಹಲವು ದಶಕಗಳಿಂದ ವಿದ್ಯೆ, ಉದ್ಯೋಗ ಮತ್ತು ಸಂಪರ್ಕದ ಉದ್ದೇಶದಿಂದ ಸೇವೆ ಸಲ್ಲಿಸುತ್ತಿ-ರುವ ಯುವವಾಹಿನಿ ಸಂಘಟನೆಯೇ ಉದಾಹರಣೆ. ಕರಾವಳಿ ಜಿಲ್ಲೆಗಳಲ್ಲಿ ಮಾತ್ರವಲ್ಲದೆ, ರಾಜಧಾನಿಯಲ್ಲೂ ಸಮಾಜದ ಯುವ ಮನಸ್ಸುಗಳನ್ನು ಜಾಗೃತಿಗೊಳಿಸಲಾಗುತ್ತಿದೆ' ಎಂದರು.

ರಂಗಭೂಮಿ ಕಲಾವಿದ ಅರವಿಂದ ಬೋಳಾರ್, ಕಿರುತೆರೆ ನಿರ್ದೇಶಕ ಸುಭಾಷ್ ಅರುವ ಮಾತನಾಡಿದರು.

ಯುವವಾಹಿನಿ ಕೇಂದ್ರ ಸಮಿತಿ ಅಧ್ಯಕ್ಷ ಹರೀಶ್ ಕೆ. ಪೂಜಾರಿ ಹೊಸ ಪದಾಧಿಕಾರಿಗಳಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಬೆಂಗಳೂರು ಘಟಕದ ಅಧ್ಯಕ್ಷ ಮಿತೇಶ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಘಟಕದ ಕಾರ್ಯದರ್ಶಿ ಪ್ರಸಾದ್ ಕುಮಾರ್ ಸಿ.ಪಿ, ಕೇಂದ್ರ ಸಮಿತಿಯ ಸಂಘಟನಾ ಕಾರ್ಯದರ್ಶಿ ಶ್ರೀಧರ್ ಡಿ. ಪೂಜಾರಿ, ಉಪಾಧ್ಯಕ್ಷ ಶಶಿಧರ್ ಕೋಟ್ಯಾನ್, ಸಕೇಶ್ ಬುನ್ನನ್, ನಿಯೋಜಿತ ಅಧ್ಯಕ್ಷ ಪ್ರಸಾದ್ ಕುಮಾರ್ ಕಲ್ಲಾಜೆ, ನಿಯೋಜಿತ ಕಾರ್ಯದರ್ಶಿ ಧನುಷ್ ಭಾಗವಹಿಸಿದ್ದರು.

'ಕೇಂದ್ರದಲ್ಲಿ ಈ ಬಾರಿಯೂ ಬಿಜೆಪಿ'

ಕೋಲಾರ: 'ಈ ಬಾರಿಯೂ ಕೇಂದ್ರದಲ್ಲಿ ಬಿಜೆಪಿ ಅಧಿಕಾರ ಹಿಡಿಯಲಿದೆ. ನಾನು ಕಾಂಗ್ರೆಸ್ ಶಾಸಕನಾದರೂ ನಿಜ ಮಾತನಾಡಬೇಕು' ಎಂದು ಕೋಲಾರ ಶಾಸಕ ಕೊತ್ತೂರು ಮಂಜುನಾಥ್ ಹೇಳಿದ್ದಾರೆ.

ನಗರದಲ್ಲಿ ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಎಲ್ಲ ಸಮೀಕ್ಷೆಗಳೂ ಬಿಜೆಪಿ ಅಧಿಕಾರಕ್ಕೆ ಬರುತ್ತಿವೆ ಎಂದು ಹೇಳುತ್ತಿವೆ. ಎಲ್ಲರ ರೀತಿ ನಾವೇ ಅಧಿಕಾರಕ್ಕೆ ಬರುತ್ತೇವೆ ಎಂದು ನಾನು ಸುಳ್ಳು ಹೇಳಲ್ಲ. ಬಿಜೆಪಿ ಅಧಿಕಾರ ಹಿಡಿಯುವ ಸಾಧ್ಯತೆ ಹೆಚ್ಚಿದೆ ಎಂಬುದು ಮೊದಲೇ ಗೊತ್ತಿದ್ದ ವಿಚಾರ. ಈ ಸಲ ಅವರೇ ಬರಲಿ. ನಮ್ಮ ಗುರಿ 2029ಕ್ಕೆ' ಎಂದು ಅವರು ಹೇಳಿದರು.

ಬಸವೇಶ್ವರನಗರದ ಕೆ.ಎಚ್‌ಬಿ. ಕಾಲೊನಿಯ 2ನೇ ಹಂತದ 3ನೇ ಮುಖ್ಯರಸ್ತೆಯಲ್ಲಿ ಬಿದ್ದಿದ್ದ ಮರಗಳ ನಡುವೆ ಸಂಚರಿಸಲು ದ್ವಿಚಕ್ರ ವಾಹನ ಸವಾರರು ಹರಸಾಹಸ ಪಟ್ಟರು

ಬಸವೇಶ್ವರನಗರದ ಯುನಾನಿ ಮೆಡಿಕಲ್ ಕಾಲೇಜಿನ ಬಳಿ ಆಟೊ ಮೇಲೆ ಮರವೊಂದು ಉರುಳಿಬಿದ್ದಿತ್ತು

ವಿಜಯನಗರದಲ್ಲಿ ಮರ ಬಿದ್ದು ಕಾರು ಜಖಂಗೊಂಡಿತು

ಹಲವು ಪ್ರದೇಶಗಳಲ್ಲಿ ಮನೆಗೆ ನುಗ್ಗಿದ ನೀರು; ಆಟೊ, ಕಾರುಗಳು ಜಖಂ • ಬಿಬಿಎಂಪಿ ಸಿಬ್ಬಂದಿಯಿಂದ ತೆರವು ಕಾರ್ಯಾಚರಣೆ

ದಾಖಲೆ ಮಳೆ: ಧರೆಗುರುಳಿದ ನೂರಾರು ಮರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನುವಾರ ರಾತ್ರಿ ಸುರಿದ ದಾಖಲೆ ಮಳೆಗೆ, 265 ಮರಗಳು ಧರೆಗುರುಳಿವೆ. ನೂರಾರು ವಿದ್ಯುತ್ ಕಂಬಗಳೂ ನೆಲಕ್ಕೆ ಬಿದ್ದಿದ್ದರಿಂದ ಹತ್ತಾರು ವಾಹನಗಳು ಜಖಂಗೊಂಡಿವೆ. ಸೋಮವಾರ ಮಧ್ಯಾಹ್ನದವರೆಗೂ ಹಲವು ಪ್ರದೇಶಗಳು, ರಸ್ತೆಗಳು ನೀರಿನಿಂದ ತುಂಬಿದ್ದವು.

ಬಿರುಗಾಳಿಯಿಂದ ಧಾರಾಕಾರವಾಗಿ ಸುರಿದ ಮಳೆ, ಮರಗಳನ್ನು ಧರೆಗುರುಳಿಸಿತು. ಪಶ್ಚಿಮ ಹಾಗೂ ದಕ್ಷಿಣ ಭಾಗದಲ್ಲಿ ಅತಿಹೆಚ್ಚು ಮರಗಳು ಬಿದ್ದಿವೆ. ವಿಜಯನಗರ, ಹಂಪಿನಗರ, ಜಯನಗರ, ಬನಶಂಕರಿ ಪ್ರದೇಶಗಳಲ್ಲಿ ಮರಗಳು ಮನೆ ಹಾಗೂ ವಾಹನಗಳ ಮೇಲೆ ಬಿದ್ದಿವೆ. ಇವುಗಳನ್ನು ತೆರವುಗೊಳಿಸಲು ಬಿಬಿಎಂಪಿ ಸಿಬ್ಬಂದಿ ಸೋಮವಾರ ಸಂಜೆಯವರೆಗೂ ಸಾಹಸಪಟ್ಟರು. ಆದರೂ, ರಸ್ತೆಗಳಲ್ಲಿ ಬಿದ್ದಿದ್ದ ಮರಗಳು, ಕೊಂಬೆಗಳು ಸಂಪೂರ್ಣ ತೆರವಾಗಲಿಲ್ಲ.

ಹಂಪಿನಗರದಲ್ಲಿ ಮರವೊಂದು ಮನೆಯ ಮೇಲೆ ಭಾನುವಾರ ರಾತ್ರಿ ಬಿದ್ದಿತ್ತು. ಸೋಮವಾರದ ಮಧ್ಯಾಹ್ನದವರೆಗೂ ಮರ ತೆರವುಗೊಳಿಸದ್ದರಿಂದ. ಆ ಕುಟುಂಬದವರ ಮನೆಯಿಂದ ಹೊರಬರಲಾರದೆ ಪರಿತಪಿಸಿದರು. ಪೈಪ್‌ಲೈನ್ ರಸ್ತೆಯಲ್ಲಿ ಮನೆ ಮೇಲೆ ಬಿದ್ದಿದ್ದ ಮರವನ್ನು ತೆರವು ಗೊಳಿಸುತ್ತಿರುವ ಸಂದರ್ಭದಲ್ಲಿ ಕೊಂಬೆಯೊಂದು ವ್ಯಕ್ತಿಯೊಬ್ಬರ ಮೇಲೆ ಬಿತ್ತು. ತಲೆಯಿಂದ ರಕ್ತಸುರಿಯುತ್ತಿದ್ದುದರಿಂದ ಅವರನ್ನು ಬಿಬಿಎಂಪಿ ಸಿಬ್ಬಂದಿ ಆಸ್ಪತ್ರೆಗೆ ಕೊಂಡೊಯ್ದರು.

ರಾಜರಾಜೇಶ್ವರಿನಗರ, ಬಸವೇಶ್ವರನಗರ, ಯಲಹಂಕ, ದಾಸರಹಳ್ಳಿ, ಪೀಣ್ಯ, ಕೆಂಗೇರಿ ಸೇರಿದಂತೆ ಹಲವು ಪ್ರದೇಶಗಳಲ್ಲಿ ಗಿಡ–ಮರ ಹಾಗೂ ಕೊಂಬೆಗಳು ಬಿದ್ದವು. ನಗರದ ಹಲವು ಭಾಗಗಳಲ್ಲಿ ಕೆಲವು ಸ್ಕೂಟರ್, ಬೈಕ್, ಕಾರು, ಆಟೊಗಳ ಮೇಲೆ ಮರ ಬಿದ್ದು ಜಖಂಗೊಂಡವು. ಕೆಲ ಸವಾರರಿಗೆ ಸಣ್ಣಪುಟ್ಟ ಗಾಯಗಳಾದವು.

ಬಸವೇಶ್ವರನಗರದ ಶಾರದಾ ಕಾಲೊನಿಯ ಎಚ್‌.ಕ್ರಾಸ್‌ನಲ್ಲಿ ಬಿದ್ದ ಮರದ ನಡುವೆ ನಡೆದ ವೃದ್ಧರು – ಪ್ರಜಾವಾಣಿ ಚಿತ್ರಗಳು: ಪ್ರಶಾಂತ್ ಎಚ್‌.ಜಿ

ವಿಜಯನಗರದ ಪೈಪ್‌ಲೈನ್ ರಸ್ತೆಯಲ್ಲಿ ಮನೆಯ ಮುಂದೆ ಮುರಿದು ಬಿದ್ದಿದ್ದ ಮರ ತೆರವುಗೊಳಿಸುತ್ತಿದ್ದಾಗ ಅದರ ರೆಂಬೆ ಯುವಕನ ತಲೆ ಮೇಲೆ ಬಿದ್ದು ರಕ್ತ ಸುರಿಯಿತು

ಒಂದೇ ದಿನ 11.1 ಸೆಂ.ಮೀ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಜೂನ್ 2ರಂದು ಸಂಜೆ ನಿರಂತರವಾಗಿ ಸುರಿದ ಮಳೆಯು ಹಿಂದಿನ ದಾಖಲೆಯನ್ನು ಅಳಿಸಿ ಹಾಕಿತು. ಭಾನುವಾರ ಸಂಜೆ ಹಾಗೂ ರಾತ್ರಿ ಸರಾಸರಿ 11.1 ಸೆಂ.ಮೀ ಮಳೆಯಾಗಿದೆ.

ಬೆಂಗಳೂರಿನ ಜಿ.ಕೆ.ವಿ.ಕೆ ಸುತ್ತಮುತ್ತ 6, ಎಚ್‌ಎಎಲ್ ಸುತ್ತಮುತ್ತ 5 ಸೆಂ.ಮೀ, ಬೆಂಗಳೂರು ನಗರ ವೀಕ್ಷಣಾಲಯದ ಸುತ್ತಮುತ್ತ 3, ಹೆಸರಘಟ್ಟದ ಸುತ್ತಮುತ್ತ 2 ಸೆಂ.ಮೀ ಮಳೆಯಾದ ವರದಿಯಾಗಿದೆ.

ನಗರದಲ್ಲಿ ಸುರಿದ ನಿರಂತರ ಮಳೆಯಿಂದ ಮತ್ತಷ್ಟು ತಂಪಾದ ವಾತಾವರಣ ನಿರ್ಮಾಣವಾಗಿದೆ. ಮುಂದಿನ ಎರಡು ದಿನಗಳು ಸಂಜೆ ಅಥವಾ ರಾತ್ರಿ ವೇಳೆ ಧಾರಾಕಾರ ಮಳೆಯಾಗಲಿದೆ. ನಗರದಲ್ಲಿ ಗರಿಷ್ಠ ಉಷ್ಣಾಂಶ 30 ಡಿಗ್ರಿ ಸೆಲ್ಸಿಯಸ್, ಕನಿಷ್ಠ ಉಷ್ಣಾಂಶ 20 ಡಿಗ್ರಿ ಸೆಲ್ಸಿಯಸ್ ದಾಖಲಾಗುವ ಸಂಭವ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಿಬಿಎಂಪಿ ನಿಯಂತ್ರಣ ಕೊಠಡಿಗೆ ಬಂದ ದೂರುಗಳ ವಿವರ

ವಲಯ	ನೀರು ನಿಂತ ಪ್ರದೇಶ	ಬಿದ್ದಮರ	ಬಿದ್ದ ಕೊಂಬೆ	ಬಿದ್ದ ವಿದ್ಯುತ್ ಕಂಬ	ಇತರೆ–ಒಟ್ಟು ದೂರು
ದಕ್ಷಿಣ	7	98	15	137	267
ಪಶ್ಚಿಮ	4	81	134	21	248
ಆರ್‌.ಆರ್‌. ನಗರ	13	19	25	44	102
ಪೂರ್ವ	5	15	64	7	92
ದಾಸರಹಳ್ಳಿ	10	9	12	50	82
ಯಲಹಂಕ	13	15	12	2	66
ಮಹದೇವಪುರ	8	12	12	0	35
ಬೊಮ್ಮನಹಳ್ಳಿ	4	16	12	0	34

ಮಹದೇವಪುರ: ಮನೆ ಮೇಲೆ ಬಿದ್ದ ಮರ

ಪ್ರಜಾವಾಣಿ ವಾರ್ತೆ

ಕೆ.ಆರ್‌.ಪುರ: ಧಾರಾಕಾರ ಮಳೆ ಹಾಗೂ ಗಾಳಿಗೆ ಮಹದೇವಪುರ ಕ್ಷೇತ್ರದಲ್ಲಿ ಹೆಚ್ಚು ಮರಗಳು ಧರೆಗೆ ಉರುಳಿವೆ.

ಕೆಂಪಾಪುರದಲ್ಲಿ ಭಾರಿ ಗಾತ್ರದ ಮರವೊಂದು ಮನೆಯ ಮೇಲೆ ಉರುಳಿಬಿದ್ದಿದೆ. ಯಾವುದೇ ಪ್ರಾಣ ಅಪಾಯವಾಗಿಲ್ಲ. ಮನೆಯ ಚಾವಣಿ ಮತ್ತು ಗೋಡೆಯು ಕುಸಿದು ಬಿದ್ದಿದೆ. ಮನೆಯಲ್ಲಿದ್ದ ಆಹಾರ ಪದಾರ್ಥಗಳು ಮತ್ತು ವಸ್ತುಗಳು ಮಣ್ಣುಪಾಲಾಗಿವೆ.

ದೊಡ್ಡಕನ್ನಲ್ಲಿ ಸಮೀಪದ ದೇವರಬೀಸನಹಳ್ಳಿ ಹಾಗೂ ಕಾಡುಬೀಸನಹಳ್ಳಿಯಲ್ಲಿ ಬೃಹತ್ ಗಾತ್ರದ ಮರಗಳು ರಸ್ತೆಗೆ ಬಿದ್ದಿದ್ದು ಬಿಬಿಎಂಪಿ ಮತ್ತು ಅರಣ್ಯ ಇಲಾಖೆಯ ಸಿಬ್ಬಂದಿ ಮರಗಳನ್ನು ತೆರವುಗೊಳಿಸಲು ಜಂಟಿಯಾಗಿ ಕಾರ್ಯಾಚರಣೆ ನಡೆಸಿದರು. ಸಂಜೆ ವೇಳೆಗೆ ರಸ್ತೆ ಅಡ್ಡಲಾಗಿದ್ದ ಮರಗಳ ಕೊಂಬೆ ಕತ್ತರಿಸಿ ಸುಗಮ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟರು.

ಬೆಳ್ಳಂದೂರಿನ ಗ್ರೀನ್ ಎಲಿಗೆನ್ಸ್ ಅಪಾರ್ಟ್‌ಮೆಂಟ್‌ನ ಕೆಳಅಂತಸ್ತಿಗೆ ನೀರು ನುಗ್ಗಿತ್ತು

ಬೆಳ್ಳಂದೂರಿನ ಗ್ರೀನ್ ಎಲಿಗೆನ್ಸ್ ಅಪಾರ್ಟ್‌ಮೆಂಟ್ ತಳಪಾಯಕ್ಕೆ ನೀರು ನುಗ್ಗಿ ಕಾರು, ಬೈಕ್‌ಗಳು ಮುಳುಗಿದ್ದವು. ಬಿಬಿಎಂಪಿ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಬೆಳಿಗ್ಗೆಯಿಂದ ಕಾರ್ಯಾಚರಣೆ ಮಾಡಿ ನೀರನ್ನು ಹೊರಹಾಕಿದರು.

ಬಸವೇಶ್ವರನಗರದ ಶಾರದಾ ಕಾಲೊನಿ 3ನೇ ಹಂತದಲ್ಲಿ ಮನೆ ಮೇಲೆ ಉರುಳಿದ್ದ ಮರ

ಉರುಳಿದ ವಿದ್ಯುತ್ ಕಂಬಗಳು...

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಪೀಣ್ಯ-ದಾಸರಹಳ್ಳಿ ಭಾಗದಲ್ಲಿ ಮಳೆ ಹಾಗೂ ಬಿರುಗಾಳಿಗೆ ಹಲವು ಮರಗಳು ಧರೆಗುರುಳಿದ್ದವು. ವಿದ್ಯುತ್ ಕಂಬಗಳು ಬಿದ್ದು ವಿದ್ಯುತ್ ಮಾರ್ಗಕ್ಕೂ ಹಾನಿಯಾಗಿದೆ.

ಬಾಗಲಗುಂಟೆ ವಾರ್ಡ್ ಎನ್‌ಎಂಎಚ್ ಬಡಾವಣೆಯಲ್ಲಿ ಬೃಹತ್ ಗಾತ್ರದ ಮರವು ವಿದ್ಯುತ್ ಕಂಬದ ಮೇಲೆ ಬಿದ್ದು ವಿದ್ಯುತ್ ತಂತಿಗಳು ತುಂಡಾಗಿ ರಾತ್ರಿ ಇಡೀ ವಿದ್ಯುತ್ ಇಲ್ಲದೆ ಪರದಾಡುವ ಪರಿಸ್ಥಿತಿ ಉಂಟಾಗಿತ್ತು.

ಬಾಗಲಗುಂಟೆಯ ಕುವೆಂಪು ಶಾಲೆ ಹತ್ತಿರ ಮರವೊಂದು ಉರುಳಿ ನಾಲ್ಕು ಕಂಬಗಳು ತುಂಡಾಗಿ ಬಿದ್ದಿದ್ದವು.

'ಒಂದು ದಿನದ ಮಳೆಗೆ ನಗರ ಜಲಾವೃತ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಭಾನವಾರ ರಾತ್ರಿ ಸುರಿದ ಮಳೆಯಿಂದಾಗಿ ಎಲ್ಲೆಡೆ ಅವಾಂತರಗಳು ಸೃಷ್ಟಿಯಾಗಿವೆ. ಮೆಟ್ರೊ ಲೈನ್ ಮೇಲೆ ಮರ ಬಿದ್ದಿದ್ದು, ಅಂಡರ್‌ಪಾಸ್‌ಗಳು ಜಲಾವೃತಗೊಂಡು, ಸಂಚಾರ ದಟ್ಟಣೆ ಉಂಟಾಗಿದೆ. ನಗರದ ಜನ ಹೈರಾಣಾಗಿದ್ದಾರೆ. ಆದರೆ, ಸಂಬಂಧಪಟ್ಟ ಅಧಿಕಾರಿಗಳು ಮಾತ್ರ ಯಾವುದೇ ಕ್ರಮ ಕೈಗೊಳ್ಳುತ್ತಿಲ್ಲ ಎಂದು ಆಮ್ ಆದ್ಮಿ ಪಕ್ಷದ ನಗರ ಘಟಕದ ಅಧ್ಯಕ್ಷ ಸತೀಶ್ ಕುಮಾರ್ ದೂರಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬೆಂಗಳೂರು ನಗರದಲ್ಲಿ ಒಂದು ದಿನ ಸುರಿದ ಮಳೆಗೆ ಈ ಪ್ರಮಾಣದಲ್ಲಿ ತೊಂದರೆ ಆಗುತ್ತಿದ್ದರೆ, ಮುಂದಿನ ದಿನಗಳಲ್ಲಿ ಪರಿಸ್ಥಿತಿ ಏನಾಗಬಹುದು. ಬಿಬಿಎಂಪಿ ಕೆಲಸ ಮಾಡದಿರುವುದೇ ಸಮಸ್ಯೆ ಉಲ್ಬಣಕ್ಕೆ ಕಾರಣ. ಮಳೆಗಾಲದ ಆರಂಭಕ್ಕೂ ಮುನ್ನವೇ ನಗರದಲ್ಲಿ ಮರಗಳ ಗಣತಿ ನಡೆಸಬೇಕಿತ್ತು. ಅಪಾಯಕಾರಿ ಒಣಕೊಂಬೆಗಳನ್ನು ತೆರವುಗೊಳಿಸಲು ಬಿಬಿಎಂಪಿಗೆ ಮನವಿ ಸಲ್ಲಿಸಿದರೂ ಮುಂಜಾಗ್ರತ ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

'ವೈಟ್ ಟಾಪಿಂಗ್ ಹೆಸರಿನಲ್ಲಿ ಸಾವಿರಾರು ಕೋಟಿ ರೂಪಾಯಿ ಕಾಮಗಾರಿಯಲ್ಲಿ ಅಕ್ರಮ ನಡೆಯುತ್ತಿದೆ. ಇದು ನಗರಕ್ಕೆ ಮತ್ತಷ್ಟು ಸಂಕಷ್ಟ ಉಂಟುಮಾಡಿದೆ. ಮಳೆ ಸಂಬಂಧಿತ ಸಮಸ್ಯೆಗಳಿಗಾಗಿ ಸಹಾಯವಾಣಿ ಆರಂಭಿಸಿದ್ದರೂ, ಯಾವುದೇ ಪ್ರಯೋಜನವಾಗುತ್ತಿಲ್ಲ. ಕಳೆದ ರಾತ್ರಿ ಎರಡೂವರೆ ಸಾವಿರಕ್ಕೂ ಹೆಚ್ಚು ಕರೆಗಳು ಬಂದರೂ, ಸ್ಪಂದಿಸುವವರು ಯಾರೂ ಇಲ್ಲ' ಎಂದು ದೂರಿದರು.

ಹೊರವರ್ತುಲ ರಸ್ತೆಯಲ್ಲಿರುವ ವೀರಭದ್ರ ಸಿಗ್ನಲ್ ಬಳಿ ಸೋಮವಾರ ಮಧ್ಯಾಹ್ನವೂ ಒಳಚರಂಡಿಯ ಮ್ಯಾನ್‌ಹೋಲ್‌ನಿಂದ ನೀರು ರಸ್ತೆಯ ಮೇಲೆ ಉಕ್ಕಿ ಹರಿಯಿತು – ಪ್ರಜಾವಾಣಿ ಚಿತ್ರ/ ರಂಜು ಪಿ

ಮರ ತೆರವು: ಮೆಟ್ರೊ ಸಂಚಾರ ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ' ನೇರಳೆ ಮಾರ್ಗದಲ್ಲಿ ಭಾನುವಾರ ರಾತ್ರಿ 7.25ರ ಹೊತ್ತಿಗೆ ಹಳಿ ಮೇಲೆ ಮರ ಬಿದ್ದು ಎಂ.ಜಿ. ರಸ್ತೆ–ಇಂದಿರಾನಗರ ನಡುವೆ ಸ್ಥಗಿತಗೊಂಡಿದ್ದ ಮೆಟ್ರೊ ಸಂಚಾರ ಸೋಮವಾರ ಬೆಳಿಗ್ಗೆ ಆರಂಭಗೊಂಡಿತು.

ರಾಜ್ಯ ವಿಪತ್ತು ರಕ್ಷಣಾ ಪಡೆ, ಕರ್ನಾಟಕ ಅಗ್ನಿಶಾಮಕ ಇಲಾಖೆ, ಬಿಬಿಎಂಪಿ ಮತ್ತು ಪೊಲೀಸರು ಘಟನೆಯ ಸ್ಥಳದಲ್ಲಿ ಸುರಕ್ಷತೆ ಮತ್ತು ತೆರವು ಕಾರ್ಯಾಚರಣೆಗೊಳಿಸಲು, ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು.

ವಯಾಡಕ್ಟ್ ಮಾರ್ಗದಲ್ಲಿ ಅಡ್ಡವಾಗಿ ಬಿದ್ದ ಮರದ ಕೊಂಬೆಗಳನ್ನು ತೆರವುಗೊಳಿಸಲು ಮತ್ತು ರೈಲು ಕಾರ್ಯಾಚರಣೆಗೆ ಅನೂಕೂಲವಾಗುವಂತೆ ಪ್ರಕ್ರಿಯೆಯನ್ನು ವೇಗಗೊಳಿಸಲು ವಿಶೇಷ ಸಾಧನಗಳನ್ನು ಉಪಯೋಗಿಸಲಾಯಿತು. ಭಾರಿ ಮಳೆಯ ನಡುವೆಯೂ ನುರಿತ ಕಾರ್ಮಿಕರು ಮತ್ತು ಪಾಲುದಾರರ ತಂಡ ಬಿದ್ದ ಮರವನ್ನು ಕತ್ತರಿಸಿ ತೆಗೆಯಲು ಸುಮಾರು 4 ಗಂಟೆ ಶ್ರಮಿಸಿದರು.

ಹಳಿ ಭದ್ರತೆಯನ್ನು ಪರೀಕ್ಷಿಸಲಾಯಿತು. ವಿದ್ಯುತ್ ಸರಬರಾಜು ಸರಿ ಇದೆಯೇ ಎಂದು ನೋಡಲಾಯಿತು. ಸಿಗ್ನಲಿಂಗ್ ಹೊಂದಾಣಿಕೆ ಮಾಡಲಾಯಿತು. ವಿವಿಧ ವಿಭಾಗದ ತಜ್ಞರು ಭೇಟಿ ನೀಡಿ ಪರಿಶೀಲಿಸಿದರು. ನಿಗಮದ ಅಗ್ನಿಶಾಮಕ, ಭದ್ರತೆ, ಹೌಸ್‌ಕೀಪಿಂಗ್, ಟ್ರ್ಯಾಕ್, ಥರ್ಡ್ ರೈಲ್ ಟ್ರಾಕ್ಷನ್ ವ್ಯವಸ್ಥೆ, ಸಿಗ್ನಲಿಂಗ್ ವಿಭಾಗಗಳ ಹಿರಿಯ ಅಧಿಕಾರಿಗಳ ಮೇಲ್ವಿಚಾರಣೆ ಮತ್ತು ಮಾರ್ಗದರ್ಶನದಲ್ಲಿ ಸಮಗ್ರ ತಪಾಸಣೆ ನಡೆಸಲಾಯಿತು.

ವಿವಿಧ ಪರೀಕ್ಷೆಗಳು ಮುಗಿದ ಬಳಿಕ ಮುಂಜಾನೆ 4.30ರ ಹೊತ್ತಿಗೆ ಪ್ರಾಯೋಗಿಕ ಸಂಚಾರ ನಡೆಸಲಾಯಿತು. ಎಲ್ಲ ಪರೀಕ್ಷೆಗಳನ್ನು ರಾತ್ರಿಯೇ ನಡೆಸಿದ್ದರಿಂದ ಸೋಮವಾರ ಬೆಳಿಗ್ಗೆ ಮೆಟ್ರೊ ಕಾರ್ಯಾಚರಣೆ ಶುರು ಮಾಡಲು ಸಾಧ್ಯವಾಗಿದೆ ಎಂದು ಬಿಎಂಆರ್‌ಸಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

ಖಗೋಳ ವಿಸ್ಮಯಕ್ಕೆ ಅಡ್ಡಿಯಾದ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಖಗೋಳದ ಅಪರೂಪದ ವಿದ್ಯಮಾನ ಎನಿಸಿರುವ 'ತಾರೆಗಳ ಮೆರವಣಿಗೆ' (ಪ್ಲಾನಿಟರಿ ಪರೇಡ್) ವೀಕ್ಷಣೆಗೆ ಮಳೆ ಮತ್ತು ಮೋಡ ಅಡ್ಡಿಯಾಯಿತು.

ಇದರ ವೀಕ್ಷಣೆಗಾಗಿ ಬೆಂಗಳೂರಿನ ಜವಾಹರಲಾಲ್ ನೆಹರೂ ತಾರಾಲಯವು ಟೆಲಿಸ್ಕೋಪ್ ಮತ್ತು ಬೈನಾಕ್ಯುಲರ್‌ಗಳ ವ್ಯವಸ್ಥೆ ಮಾಡಿಕೊಂಡಿತ್ತು. ಆದರೆ, ಮುಂಜಾನೆ ಮೋಡ ಮತ್ತು ಮಳೆಯಿಂದಾಗಿ ಬಾಹ್ಯಾಕಾಶ ವೀಕ್ಷಣೆ ಸಾಧ್ಯವಾಗದೇ ಖಗೋಳ ವೀಕ್ಷಕರಿಗೆ ನಿರಾಸೆಯಾಯಿತು. ಮಳೆ ಕಾರಣ, ಕೆಲವೇ ಆಸಕ್ತರು ತಾರಾಲಯಕ್ಕೆ ಬಂದಿದ್ದರು.

'ನಮ್ಮ ಸೌರ ಮಂಡಲದಲ್ಲಿ ಆರು ಗ್ರಹಗಳು ಒಂದೇ ಸಾಲಿನಲ್ಲಿ ಸೇರುವ ವಿದ್ಯಮಾನ ಅತಿ ವಿರಳ. ನೆಪ್ಚೂನ್ ಮತ್ತು ಯುರೇನಸ್ ಬರಿಗಣ್ಣಿಗೆ ಕಾಣುವುದಿಲ್ಲ. ಇದನ್ನು ವೀಕ್ಷಿಸಲೆಂದು ಟೆಲಿಸ್ಕೋಪ್ ಮತ್ತು ಬೈನಾಕ್ಯುಲರ್‌ಗಳ ವ್ಯವಸ್ಥೆ ಮಾಡಲಾಗಿತ್ತು' ಎಂದು ತಾರಾಲಯ ನಿರ್ದೇಶಕ ಬಿ.ಆರ್.ಗುರುಪ್ರಸಾದ್ ತಿಳಿಸಿದರು.

ಒಂದು ವೇಳೆ ಮಳೆ ಇಲ್ಲದಿದ್ದರೂ ಬೆಂಗಳೂರಿನಲ್ಲಿ ಮಾಲಿನ್ಯ ಮತ್ತು ಅತಿಯಾದ ಬೆಳಕು ಇರುವ ಕಾರಣಕ್ಕೆ ಮುಂಜಾನೆಯ ವೇಳೆ ತಿಳಿ ಆಕಾಶದಲ್ಲಿನ ಕಾಯಗಳನ್ನು ನೋಡುವುದು ಕಷ್ಟ. ಆದರೂ ವ್ಯವಸ್ಥೆ ಮಾಡಿದ್ದೆವು. ಇವತ್ತು(ಜೂ 3) ಎಲ್ಲ ಗ್ರಹಗಳು ಒಂದೇ ಸಾಲಿನಲ್ಲಿ ಇದ್ದವು. ಕ್ರಮೇಣ ಅವು ಸರಿದು ಹೋಗುತ್ತವೆ ಎಂದು ಅವರು ವಿವರಿಸಿದರು.

'ಜವಾಬ್ದಾರಿಯಿಂದ ನುಣುಚಿಕೊಳ್ಳಬೇಡಿ'

ಮಳೆ ಹಾನಿ: ಅಧಿಕಾರಿಗಳಿಗೆ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚಾಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಗರಕ್ಕೆ ಸಂಬಂಧಿಸಿದ ಯಾವ ಇಲಾಖೆಯೂ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಿಲ್ಲ. ಒತ್ತುವರಿ ತೆರವಿಗೆ ನ್ಯಾಯಾಲಯದ ತಡೆಯಾಜ್ಞೆ ಇದೆ ಎಂದು ಮೈಗೆ ಎಣ್ಣೆ ಹಚ್ಚಿಕೊಂಡು ಅಧಿಕಾರಿಗಳು ಸಬೂಬು ಹೇಳುವಂತಿಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಹೇಳಿದರು.

ಮಳೆ ಹಾನಿ ತಡೆಯಲು ಮುನ್ನೆಚ್ಚರಿಕೆ ಕ್ರಮ ಕೈಗೊಳ್ಳುವ ಅಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಬೆಸ್ಕಾಂ, ಕೆಪಿಟಿಸಿಎಲ್, ಬಿಬಿಎಂಪಿ, ಜಲಮಂಡಳಿ, ಅರಣ್ಯ ಇಲಾಖೆ ಸೇರಿದಂತೆ ಬೆಂಗಳೂರಿಗೆ ಸಂಬಂಧಿಸಿದ ಯಾವ ಇಲಾಖೆಯೂ ಜವಾಬ್ದಾರಿಯಿಂದ ನುಣುಚಿಕೊಳ್ಳುವಂತಿಲ್ಲ. ರಾಜಕಾಲುವೆಗೆ ಸಂಬಂಧಿಸಿದಂತೆ ಒಂದಷ್ಟು ಜನ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿರುತ್ತಾರೆ. ಇದನ್ನೇ ನೆಪ ಮಾಡಿಕೊಂಡು ಬಿಬಿಎಂಪಿ ರಾಜಕಾಲುವೆ ವಿಭಾಗದ ಎಂಜಿನಿಯರ್‌ಗಳು ಕೆಲಸದಿಂದ ನುಣುಚಿಕೊಳ್ಳುವಂತಿಲ್ಲ. ಒತ್ತುವರಿಯಾಗಿರುವ ಜಾಗಗಳು ಸರ್ಕಾರದ ಆಸ್ತಿಗಳು. ನೀರು ಹರಿಯಲು ತೊಂದರೆಯಾಗುವಲ್ಲಿ ನಿರ್ದಾಕ್ಷಿಣ್ಯವಾಗಿ ಕೆಲಸ ಮಾಡಬೇಕು' ಎಂದರು.

ಅಪಾಯಕಾರಿ ಮರಗಳ ತೆರವಿಗೆ ಅರಣ್ಯ ಇಲಾಖೆ ಮತ್ತು ಬಿಬಿಎಂಪಿ ಜಂಟಿಯಾಗಿ ಸಮೀಕ್ಷೆ ನಡೆಸಿ ಕಾರ್ಯ ನಿರ್ವಹಿಸಬೇಕು. ತಗ್ಗಿನಲ್ಲಿರುವ ವಸತಿ ಪ್ರದೇಶಗಳಿಗೆ ನೀರು ನುಗ್ಗದಂತೆ ಉತ್ತಮ ಸಾಮರ್ಥ್ಯದ ಪಂಪ್‌ಸೆಟ್, ಜನರೇಟರ್‌ಗಳು ಹಾಗೂ ಹೆಚ್ಚು ನೀರು ಹರಿಯುವ ರಾಜಕಾಲುವೆ ಬಳಿ ಜೆಸಿಬಿ, ಟಿಪ್ಪರ್‌ಗಳನ್ನು ಮುನ್ನೆಚರಿಕೆ ಕ್ರಮವಾಗಿ ಸಿದ್ಧ ಮಾಡಿಕೊಂಡಿರಬೇಕು. ಎನ್‌ಡಿಆರ್‌ಎಫ್ ತಂಡದೊಟ್ಟಿಗೂ ಸಂಪರ್ಕದಲ್ಲಿರಬೇಕು ಸೂಚಿಸಲಾಗಿದೆ ಎಂದು ಹೇಳಿದರು.

'ಜೂನ್‌ನಲ್ಲಿ ಉತ್ತಮ ಮಳೆ ಬಿದ್ದಿರುವುದು ನನಗೆ ಸಾಕಷ್ಟು ಸಂತೋಷವಾಗಿದೆ. ಮೂರು ಜನರಿಗೆ ಗಾಯಗಳಾಗಿವೆ. ವಾಹನಗಳು ಜಖಂಗೊಂಡಿವೆ. 265 ಮರಗಳು ಬಿದ್ದಿವೆ. 96 ಮರಗಳನ್ನು ತೆರವುಗೊಳಿಸಲಾಗಿದೆ. 365 ಕೊಂಬೆಗಳು ಬಿದ್ದಿದ್ದವು, ಎಲ್ಲವನ್ನು ತೆರವುಗೊಳಿಸಲಾಗಿದೆ. 261 ವಿದ್ಯುತ್ ಕಂಬಗಳು ಬಿದ್ದಿದ್ದವು. ಇದನ್ನು ಸರಿಪಡಿಸಲಾಗುತ್ತಿದೆ' ಎಂದರು.

ನಗರದಲ್ಲಿ ಭಾರಿ ಮಳೆಯಾಗುವ ಸಂಭವವಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಎಲ್ಲಾ ಇಲಾಖೆಗಳು ಸರ್ವ ಸನ್ನದ್ಧವಾಗಿ ಕೆಲಸ ಮಾಡಬೇಕು. ಯಾವುದೇ ಜೀವ, ಆಸ್ತಿ ಹಾನಿಯಾಗದಂತೆ ನೋಡಿಕೊಳ್ಳಬೇಕು ಎಂದು ತಿಳಿಸಿದರು.

'ಕಾರ್ಪೊರೇಟರ್‌ಗಳು ಏನು ಮಾಡುತ್ತಾರೆ?'



'ಕಾರ್ಪೊರೇಟರ್‌ಗಳು ಏನು ಮಾಡುತ್ತಾರೆ. ಅಧಿಕಾರ ಇರಲಿ, ಇಲ್ಲದಿರಲಿ ಜನರ ಸೇವೆಗೆ ಯಾವಾಗಲೂ ಕೆಲಸ ಮಾಡಬೇಕು. ಪಂಚಾಯಿತಿಯಿಂದ ಪಾರ್ಲಿಮೆಂಟ್ ತನಕ ಜನಪ್ರತಿನಿಧಿಗಳು ಇರಬೇಕು. ಲೋಕಸಭೆ ಚುನಾವಣೆ ಮುಗಿದಿದೆ. ಈಗ, ಬಿಬಿಎಂಪಿ ಚುನಾವಣೆ ಬಗ್ಗೆ ಯೋಚಿಸಲಾಗುವುದು' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದರು.

ವಾರ್ಡ್‌ಗಳಲ್ಲಿ ಸಮಸ್ಯೆ ಹೆಚ್ಚಾಗುತ್ತಿದ್ದು, ಕಾರ್ಪೊರೇಟರ್‌ಗಳು ಇಲ್ಲದಿರುವುದರಿಂದ ಸಮಸ್ಯೆ ನಿವಾರಣೆಗೆ ತೊಡಕಾಗುತ್ತಿದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಅವರು ಉತ್ತರಿಸಿದರು.

'ಲೋಕಸಭೆ ಫಲಿತಾಂಶ ಬರಲಿ. ನಂತರ ಶುಭ ಮುಹೂರ್ತ ನೀಡೋಣ. ಆಮೇಲೆ ಬಿಬಿಎಂಪಿ ವಿಭಜನೆ ಬಗ್ಗೆ ಯೋಚಿಸೋಣ' ಎಂದರು.

ಸಿಟಿ ರೌಂಡ್ಸ್ ಏಕೆ ಮಾಡಲಿಲ್ಲ: ಎಚ್‌ಡಿಕೆ

'ಭಾನುವಾರ ರಾತ್ರಿ ಹೆಚ್ಚು ಮಳೆ ಸುರಿದರೂ ಡಿಸಿಎಂ ಸಾಹೇಬರು ಯಾಕೆ ಸಿಟಿ ರೌಂಡ್ಸ್ ಕೈಗೊಂಡಿಲ್ಲ' ಎಂದು ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಅವರು ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಪ್ರಶ್ನಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ದೊಡ್ಡ ಪ್ರಮಾಣದಲ್ಲಿ ಮಳೆ ಆಗಿದ್ದರೂ ಅವರು ಇನ್ನೂ ಯಾಕೋ ನಗರ ಪ್ರದಕ್ಷಿಣೆಗೆ ಹೋಗಿಲ್ಲಾ? ಶೋ ಕೊಡುವುದಕ್ಕೆ ಕಳೆದ ವಾರ ಹೋಗಿದ್ದರಲ್ಲ? ಆಗ ಏನು ಕ್ರಮ ಕೈಗೊಂಡಿದ್ದರು? ಕೆರೆಗಳನ್ನು ನುಂಗಿ ನೀರು ಕುಡಿದರಲ್ಲಾ... ಯಾವ ಪುರುಷಾರ್ಥಕ್ಕೆ ನಗರ ಪ್ರದಕ್ಷಿಣೆ ಮಾಡುತ್ತಾರೆ? ಹೋಲ್ ನೈಟ್ ಓಡಾಡ್ತೀನಿ ಅಂತಿದ್ರು, ಅದೇನು ನಿದ್ದೆ ಮಾಡ್ತಾ ಇದ್ರೊ ಗೊತ್ತಿಲ್ಲ' ಎಂದು ಟೀಕಿಸಿದರು.

ಯಲಹಂಕ ವಲಯ ವ್ಯಾಪ್ತಿಯ ಪ್ರದೇಶಗಳಿಗೆ ಭೇಟಿ

'ರಸ್ತೆ ಜಲಾವೃತ ತಪ್ಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ, ಬಿಡಿಎ, ಜಲಮಂಡಳಿ, ಎನ್‌ಎಚ್‌ಎಐ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಿ ನಗರದಲ್ಲಿ ಎಲ್ಲಿಯೂ ರಸ್ತೆಗಳು ಜಲಾವೃತವಾಗದಂತೆ ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದರು.

ಯಲಹಂಕ ವಲಯ ವ್ಯಾಪ್ತಿಯಲ್ಲಿ ಜಲಾವೃತವಾದ ಪ್ರದೇಶಗಳಿಗೆ ಸೋಮವಾರ ಭೇಟಿ ನೀಡಿದ ಅವರು ಪರಿಶೀಲನೆ ನಡೆಸಿದರು.

ಹೆಬ್ಬಾಳ ಜಂಕ್ಷನ್‌ನಲ್ಲಿ ರಸ್ತೆಯ ಮೇಲೆ ನೀರು ನಿಲ್ಲದಂತೆ ರಾಜಕಾಲುವೆಗೆ ಸರಾಗವಾಗಿ ಹರಿದು ಹೋಗಲು ಬಿಡಿಎ ವತಿಯಿಂದ 1,200 ಎಂ.ಎಂ ಪೈಪ್ ಅಳವಡಿಸಲಾಗಿತ್ತು. ಮೆಟ್ರೊ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಪೈಪ್‌ಗಳು ಮಣ್ಣಿನಿಂದ ತುಂಬಿಕೊಂಡಿವೆ. ಇದರಿಂದ ಮಳೆ ನೀರು ರಸ್ತೆಯ ಮೇಲೆ ಹೆಚ್ಚಾಗಿ ನಿಲ್ಲುತ್ತಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. 'ಮೆಟ್ರೊ ಅಧಿಕಾರಿಗಳ ಜೊತೆಗೆ ಸಮನ್ವಯ ಸಾಧಿಸಿ ಪೈಪ್‌ಗಳನ್ನು ಸರಿಪಡಿಸಿ, ನೀರು ಹರಿದುಹೋಗುವಂತೆ ಮಾಡಿ' ಎಂದು ತುಷಾರ್ ತಿಳಿಸಿದರು.

ಸಹಕಾರ ನಗರದ ಸಮೀಪ ಎನ್‌ಎಚ್‌ಎಐ ಸರ್ವೀಸ್ ರಸ್ತೆ ಜಲಾವೃತವಾಗಿದೆ. ಈ ಸ್ಥಳದಲ್ಲಿ ಒಳಚರಂಡಿ ನೀರೂ ಹೊರಗೆ ಹರಿಯುತ್ತಿದೆ. ಎನ್‌ಎಚ್‌ಎಐ ಮಾಡಿರುವ ಕಲ್ವರ್ಟ್ ಸಂಪರ್ಕ ಸರಿಯಾಗಿಲ್ಲದ್ದರಿಂದ ಸಮಸ್ಯೆ ಆಗಿರುವುದನ್ನು ಅರಿತ ತುಷಾರ್ ಗಿರಿನಾಥ್, ಜಲಮಂಡಳಿಯಿಂದ ರಸ್ತೆಯ ಎರಡೂ ಬದಿ 900 ಎಂ.ಎಂ ಪೈಪ್ ಅಳವಡಿಸಲು ಜಲಮಂಡಳಿ ಅಧ್ಯಕ್ಷರಿಗೆ ದೂರವಾಣಿ ಮೂಲಕ ಸೂಚಿಸಿದರು. ರಾಜಕಾಲುವೆ ನೀರು ಹರಿದು ಹೋಗಲು ಹೆಚ್ಚಿನ ಪೈಪ್ ಅಳವಡಿಸಲು ಎನ್‌ಎಚ್‌ಎಐ ಅಧಿಕಾರಿಗಳಿಗೆ ಹೇಳಿದರು.

ಸಹಕಾರ ನಗರ ಬಾಟಾ ಶೋರೂಂ ಬಳಿ ರಾಜಕಾಲುವೆಯಿಂದ ರಸ್ತೆಗೆ ನೀರು ಬರುತ್ತಿರುವುದನ್ನು ಪರಿಶೀಲಿಸಿದ ಮುಖ್ಯ ಆಯುಕ್ತರು, ಅದನ್ನು ತಪ್ಪಿಸುವ ನಿಟ್ಟಿನಲ್ಲಿ ರಾಜಕಾಲುವೆಯಲ್ಲಿ ತಿರುವು ವ್ಯವಸ್ಥೆ ಮಾಡಬೇಕು ಎಂದು ಬಿಬಿಎಂಪಿ ಎಂಜಿನಿಯರ್‌ಗಳಿಗೆ ಸೂಚಿಸಿದರು.

ಕಲ್ವರ್ಟ್ ಬ್ಲಾಕ್: ಯಲಹಂಕದಲ್ಲಿರುವ ಸ್ಪರ್ಶ್ ಆಸ್ಪತ್ರೆಯ ಬಳಿ ಎನ್‌ಎಚ್‌ಎಐ ಕಲ್ವರ್ಟ್ ಡ್ರೈನ್ ಮಾಡಿದ್ದು, ಮೆಟ್ರೊ ಪಿಲ್ಲರ್–573 ಬಳಿ ಕಾಮಗಾರಿಯಿಂದ ಕಲ್ವರ್ಟ್ ಬ್ಲಾಕ್ ಆಗಿದೆ. ಈ ಸಮಸ್ಯೆ ಬಗೆಹರಿಸಲು ಮೆಟ್ರೊ ವ್ಯವಸ್ಥಾಪಕ ನಿರ್ದೇಶಕರಿಗೆ ದೂರವಾಣಿ ಮೂಲಕ ತಿಳಿಸಿದರು.

ಕೋಗಿಲು ಸಿಗ್ನಲ್: ಕೋಗಿಲು ಸಿಗ್ನಲ್ ಬಳಿ ರಾಜಕಾಲುವೆ ಕಾಮಗಾರಿ ಪ್ರಗತಿಯಲ್ಲಿರುವುದರಿಂದ ಮಳೆ ನೀರು ನಿಂತು ಸಮಸ್ಯೆಯಾಗುತ್ತದೆ. ಈ ಪ್ರದೇಶದಲ್ಲಿ ಮಳೆ ನೀರು ನಿಲ್ಲದಂತೆ ಕ್ರಮ ಕೈಗೊಳ್ಳಬೇಕು, ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು.

ನಿಟ್ಟೆ ವಿದ್ಯಾ ಸಂಸ್ಥೆ: ನಿಟ್ಟೆ ವಿದ್ಯಾಸಂಸ್ಥೆಗೆ ಹೋಗುವ ಬಳಿ ಮೆಟ್ರೊ ಸ್ಟೇಷನ್ ಕಾಮಗಾರಿ ನಡೆಯುತ್ತಿದ್ದು, ಕಲ್ವರ್ಟ್ ಬ್ಲಾಕ್ ಆಗಿರುತ್ತದೆ. ಇದನ್ನು ಸರಿಪಡಿಸಲು ಎನ್‌ಎಚ್‌ಎಐ ಹಾಗೂ ಮೆಟ್ರೊ ಅಧಿಕಾರಿಗಳಿಗೆ ಹೇಳಿದರು.

ಟೆಲಿಕಾಂ ಲೇಔಟ್: ಭಾನುವಾರ ರಾತ್ರಿ ಸುರಿದ ಮಳೆಯಿಂದ ರಾಚೇನಹಳ್ಳಿ ಕೆರೆ ಬಳಿಯ ಟೆಲಿಕಾಂ ಲೇಔಟ್ ಜಲಾವೃತವಾಗಿದೆ. ಈ ಸಂಬಂಧ ಜವಾಹರಲಾಲ್ ನೆಹರೂ ಸೆಂಟರ್ ಫಾರ್ ಅಡ್ವಾನ್ಸ್ಡ್ ಸೈಂಟಿಫಿಕ್ ರಿಸರ್ಚ್ ಸೆಂಟರ್‌ನಲ್ಲಿ ನಡೆಯುತ್ತಿರುವ ರಾಜಕಾಲುವೆ ಕಾಮಗಾರಿ ಬಳಿ, ಕಾಲುವೆ ವಿಸ್ತರಿಸಲು ಮುಖ್ಯ ಆಯುಕ್ತರು ಸೂಚನೆ ನೀಡಿದರು.

ಯಲಹಂಕ ವಲಯ ಆಯುಕ್ತ ಕರೀಗೌಡ, ಜಂಟಿ ಆಯುಕ್ತ ಮೊಹ್ಮದ್ ನಯೀಮ್ ಮೊಮಿನ್, ಪ್ರಧಾನ ಎಂಜಿನಿಯರ್ ಪ್ರಹ್ಲಾದ್, ಕೆರೆಗಳ ವಿಭಾಗದ ಮುಖ್ಯ ಎಂಜಿನಿಯರ್ ವಿಜಯ್ ಕುಮಾರ್ ಹರಿದಾಸ್, ಬಿಡಿಎ ಅಧಿಕಾರಿಗಳು, ಎನ್‌ಎಚ್‌ಎಐ ಅಧಿಕಾರಿಗಳು ಉಪಸ್ಥಿತರಿದ್ದರು.



ತುಷಾರ್ ಗಿರಿನಾಥ್

ಕ್ಷೇಮ ಕುಶಲ

ಕೋಪ ಪ್ರೀತಿಗಳ ಸೆಳೆತ

ಪ್ರಾಣಿಯೊಂದಿಗೆ ಪಯಣ ಆಟದೊಂದಿಗೆ ಆಸನ

ಎಸ್. ಎನ್. ಓಂಕಾರ್

ಯೋಗ ಪ್ರತಿಯೊಬ್ಬರಿಗೂ ಉಪಯುಕ್ತ. ಮಕ್ಕಳಾದಿಯಾಗಿ ಪ್ರತಿಯೊಬ್ಬರೂ ಯೋಗ ಕಲಿಯುವುದು ವೈಯಕ್ತಿಕ, ಸಾಂಸಾರಿಕ ಹಾಗೂ ಸಾಮಾಜಿಕ ಆರೋಗ್ಯದ ದೃಷ್ಟಿಯಿಂದ ಬಹಳ ಅಗತ್ಯ. ವಿಶೇಷವಾಗಿ ಬಾಲ್ಯದಲ್ಲೇ ಯೋಗವನ್ನು ಪ್ರಾರಂಭಿಸುವುದು ಒಳಿತು. ಮಕ್ಕಳಿಗೆ ಯೋಗವನ್ನು ಆಟೋಪಾದಿಯಲ್ಲಿ ಹೇಳಿಕೊಡುವುದು ಅವಶ್ಯಕ. ಮಕ್ಕಳನ್ನು ಯೋಗದೆಡೆಗೆ ಸೆಳೆಯಲು ಯೋಗಾಸನಗಳು ಬಹು ಉಪಯುಕ್ತ ಮಾರ್ಗ. ಯೋಗಾಸನಗಳಲ್ಲಿರುವ ಬಾಗುವಿಕೆ, ಸಮತೋಲನ ಮಕ್ಕಳಲ್ಲಿ ಒಳ್ಳೆಯ ಉತ್ಸಾಹವನ್ನು ಉಂಟುಮಾಡುವುದರಲ್ಲಿ ಅನುಮಾನವೇ ಇಲ್ಲ. ಆಸನಗಳೊಂದಿಗೆ ಮಕ್ಕಳ ಉತ್ತಮ ಬೆಳವಣಿಗೆಗೆ ಪೂರಕವಾದಂತಹ ಕೆಲವು ನೈತಿಕ ಮೌಲ್ಯಗಳನ್ನು ಕಲಿಸುವುದು ಅವಶ್ಯಕ. ಈ ದಿಶೆಯಲ್ಲಿ ಪ್ರಾಣಿಪ್ರಪಂಚದ ಹೆಸರುಗಳನ್ನುಳ್ಳಂತಹ ಕೆಲವು ಆಸನಗಳೊಂದಿಗೆ, ಅವುಗಳಿಂದ ಕಲಿಯಬಹುದಾದಂತಹ ಕೆಲವು ನೀತಿಗಳನ್ನೂ ನೋಡೋಣ.

ಭುಜಂಗಾಸನ

1. ಎದೆಯ ಮೇಲೆ ಮಲಗಿ; ಕಾಲುಗಳನ್ನು ನೀಳವಾಗಿ ಚಾಚಿ.
2. ಎರಡೂ ಹಸ್ತಗಳನ್ನು ಎದೆಯಗೂಡಿನ ಪಕ್ಕದಲ್ಲಿ ಇರಿಸಿ.
3. ಹಸ್ತಗಳನ್ನು ಒತ್ತುತ್ತಾ ನಿಧಾನವಾಗಿ ದೇಹದ ಮೇಲ್ಭಾಗವನ್ನು ಹಿಂದಕ್ಕೆ ಬಾಗಿಸಿ; ಕೈಗಳನ್ನು ನೇರ ಮಾಡಿ; ಕತ್ತನ್ನೂ ಹಿಂದಕ್ಕೆ ಬಾಗಿಸಿ.
4. ಸುಮಾರು 20 ಸೆಕೆಂಡುಗಳಷ್ಟು ಕಾಲ ಈ ಸ್ಥಿತಿಯನ್ನು ಕಾಯ್ದುಕೊಂಡು ನಂತರ ವಿರಮಿಸಿ; ಮತ್ತೊಮ್ಮೆ ಮಾಡಿ.

ಭುಜಂಗಾಸನ ಬೆನ್ನುಗಂಬಕ್ಕೆ ಬಹಳ ಉಪಯುಕ್ತ. ಉದರ, ಎದೆಯ ಅಂಗಾಂಗಗಳಿಗೂ ಉತ್ತಮವಾದ ಚಾಚುವಿಕೆ ಲಭ್ಯವಾಗುತ್ತದೆ. 'ಭುಜಂಗ' ಎಂದರೆ ಹಾವು. ಹಾವು ದ್ವೇಷದ ಸಂಕೇತವೂ ಆಗಿರುತ್ತದೆ. ಮಕ್ಕಳು ದ್ವೇಷಬುದ್ಧಿಯನ್ನು ಬೆಳೆಸಿಕೊಳ್ಳದೇ ಇರುವಂತೆ ಈ ಆಸನ ಅಭ್ಯಾಸದ ಸಮಯದಲ್ಲಿ ವಿವರಿಸಬಹುದು.

ಉಷ್ಟ್ರಾಸನ

1. ಮಂಡಿಯ ಮೇಲೆ ನಿಂತು ನಿಧಾನವಾಗಿ ಹಿಂದಕ್ಕೆ ಬಾಗಿ.
2. ಎರಡೂ ಕೈಗಳಿಂದ ಪಾದದ ಕೀಲುಗಳನ್ನು ಹಿಡಿದುಕೊಂಡು, ಕತ್ತನ್ನೂ ಹಿಂದಕ್ಕೆ ಚಾಚುತ್ತಾ ಪೃಷ್ಠಗಳನ್ನು ಮುಂದಕ್ಕೆ ತಳ್ಳಬೇಕು.
3. ಸುಮಾರು 20 ಸೆಕೆಂಡುಗಳಷ್ಟು ಕಾಲ ಈ ಸ್ಥಿತಿಯನ್ನು ಕಾಯ್ದುಕೊಂಡು ನಂತರ ವಿರಮಿಸಿ; ಮತ್ತೊಮ್ಮೆ ಮಾಡಿ

'ಉಷ್ಟ್ರ' ಎಂದರೆ ಒಂಟೆ; ಇದು ಮರಳುಗಾಡಿನಲ್ಲಿ ವಾಸ ಮಾಡುವ ಪ್ರಾಣಿ. ಎಷ್ಟೇ ಬಿಸಿಲಿನ ತಾಪಮಾನದಲ್ಲೂ ಆರಾಮವಾಗಿ ಇರುತ್ತದೆ. ತನಗೆ ಅಗತ್ಯವಿರುವಷ್ಟು ನೀರನ್ನು



ಶೇಖರಿಸಿಟ್ಟುಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ. ಜೀವನದಲ್ಲಿ ಎಂತಹುದೇ ಸನ್ನಿವೇಶಕ್ಕೂ ಒಗ್ಗಿಕೊಳ್ಳುವ ಮನೋಭಾವವನ್ನು ನಾವೂ ಬೆಳೆಸಿಕೊಳ್ಳಬೇಕೆಂಬುದನ್ನು ಈ ಆಸನದ ಸಮಯದಲ್ಲಿ ತಿಳಿಯಹೇಳಬಹುದು.

ಕಪೋತಾಸನ

ಭುಜಂಗಾಸನ ಹಾಗೂ ಉಷ್ಟ್ರಾಸನದ ಮುಂದುವರಿದ ಭಾಗವೇ ಕಪೋತಾಸನ. ಉಷ್ಟ್ರಾಸನದಿಂದ ಮುಂದುವರಿದು, ಹಿಂದಕ್ಕೆ ಬಾಗಿ ತಲೆಯನ್ನು ಪಾದಕ್ಕೆ ತಾಗಿಸುವುದೇ ಕಪೋತಾಸನ. ಅಂತೆಯೇ ಭುಜಂಗಾಸನವನ್ನು ಮಾಡಿ ಕಾಲುಗಳನ್ನು ಮಡಿಚಿ, ತಲೆಯನ್ನು ಪಾದಗಳಿಗೆ ತಾಗಿಸುವುದೇ ರಾಜ ಕಪೋತಾಸನ. 'ಕಪೋತ' ಎಂದರೆ ಪಾರಿವಾಳ. ಪಾರಿವಾಳ ಶಾಂತಿಯ ಸಂಕೇತ. ಮಕ್ಕಳಲ್ಲಿ ಶಾಂತಸ್ವಭಾವವನ್ನು ಬೆಳೆಸಿಕೊಳ್ಳುವುದು ಎಷ್ಟು ಅವಶ್ಯಕ ಎಂಬುದನ್ನು ಈ ಆಸನದ ಸಮಯದಲ್ಲಿ ತಿಳಿಸಿಕೊಡಬಹುದು.

ಮಂಡೂಕಾಸನ

1. ಎರಡೂ ಕಾಲುಗಳನ್ನು ಪಕ್ಕಕ್ಕೆ ಮಡಿಚಿ ಕುಳಿತುಕೊಳ್ಳಿ. ಮಂಡಿಗಳನ್ನು ಸಾಕಷ್ಟು ವಿಸ್ತಾರವಾಗಿರಿಸಿಕೊಳ್ಳಿ.
2. ಬೆನ್ನುಗಂಬವನ್ನು ಚಾಚುತ್ತಾ, ನಿಧಾನವಾಗಿ ಮುಂದಕ್ಕೆ ಬಾಗಿ, ಹಣೆಯನ್ನು ವಿರಮಿಸಿ, ಕೈಗಳೆರಡನ್ನೂ ಮುಂದಕ್ಕೆ ಚಾಚಿ
3. ಸುಮಾರು 2 ನಿಮಿಷಗಳಷ್ಟು ಕಾಲ ಈ ಸ್ಥಿತಿಯಲ್ಲಿ ವಿರಮಿಸಬೇಕು.

ಇದು ಒಳ್ಳೆಯ ವಿಶ್ರಾಂತಿಯನ್ನುನೀಡುವ ಹಾಗೂ ಬೆನ್ನುಗಂಬಕ್ಕೆ, ಕಾಲುಗಳಿಗೆ, ಇಡಿಯ ದೇಹಕ್ಕೆ ಚೈತನ್ಯವನ್ನು ನೀಡುವ ಆಸನವಾಗಿದೆ. 'ಮಂಡೂಕ' ಎಂದರೆ ಕಪ್ಪೆ; ನೀರು ಹಾಗೂ ನೆಲ ಎರಡರ ಮೇಲೂ ವಾಸಿಸುವ ಪ್ರಾಣಿ. ಹೊಂದಾಣಿಕೆಯ ಮನೋಭಾವವನ್ನು ಸೂಚಿಸುತ್ತದೆ. ಮಕ್ಕಳೂ ಹೊಂದಾಣಿಕೆಯ ಭಾವನೆಯನ್ನು ಬೆಳೆಸಿಕೊಳ್ಳುವುದು ಅವಶ್ಯಕ ಎಂಬ ಅರಿವನ್ನು ಅವರಿಗೆ ಈ ಆಸನದ ಸಮಯದಲ್ಲಿ ಮುಟ್ಟಿಸಬಹುದು.

ಮತ್ಸ್ಯಾಸನ

1. ಕಾಲುಗಳನ್ನು ಎಳೆದುಕೊಂಡು ಒಂದರಮೇಲೊಂದು ನಿಧಾನವಾಗಿ ತೊಡೆಯ ಮೇಲೆ ಎಳೆದುಕೊಂಡು ಪಾದಗಳನ್ನು ಉದರದ ಹತ್ತಿರ ಬರುವಂತೆ ಪದ್ಮಾಸನದಲ್ಲಿ ಕುಳಿತುಕೊಳ್ಳಿ.
2. ನಿಧಾನವಾಗಿ ಹಿಂದಕ್ಕೆ ಬಾಗಿ ಬೆನ್ನಿನ ಮೇಲೆ ಮಲಗಿ.
3. ಎದೆಯನ್ನು ಮೇಲಕ್ಕೆತ್ತಿ, ನೆತ್ತಿಯ ಭಾಗವನ್ನು ನೆಲದ ಮೇಲೆ ವಿರಮಿಸಿ.
4. ಮೊಣಕೈಗಳನ್ನು ನೆಲದ ಮೇಲೆ ಒತ್ತುತ್ತಾ, ಎರಡೂ ಹಸ್ತಗಳಿಂದ ಪಾದವನ್ನು ಹಿಡಿದುಕೊಳ್ಳಿ.
5. ಸುಮಾರು 1 ನಿಮಿಷಗಳಷ್ಟು ಕಾಲ ಈ ಸ್ಥಿತಿಯಲ್ಲಿ ವಿರಮಿಸಿ.

ಇದು ಕುತ್ತಿಗೆ ಹಾಗೂ ಬೆನ್ನುಗಂಬಕ್ಕೆ ಉಪಯುಕ್ತ. ವಿಶೇಷವಾಗಿ ಗುರಾಣಿಕ, ಬದಿಗುರಾಣಿಕ ಗ್ರಂಥಿಗಳಿಗೆ ಚೈತನ್ಯವನ್ನು ನೀಡಿ ಉತ್ತಮ ಬೆಳವಣಿಗೆಗೆ ಸಹಕಾರಿಯಾಗುತ್ತದೆ. 'ಮತ್ಸ್ಯ' ಎಂದರೆ ಮೀನು. ಮೀನನ್ನು ಹಿಡಿಯಲು ಒಂದು ಸಣ್ಣ ಎರೆಹುಳುವನ್ನು ಕೊಕ್ಕೆಗೆ ಚುಚ್ಚಿ, ದಾರದಿಂದ ಬಿಗಿದು ಆಹಾರವಾಗಿ ನೀರಿನಲ್ಲಿ ಬಿಡುತ್ತಾರೆ. ಇದರ ರುಚಿಯ ಆಸೆಗೆ ಮನಸೋತ ಮೀನು ಕೊಕ್ಕೆಗೆ ಸಿಲುಕಿ ಬೀಳುತ್ತದೆ. ಮಕ್ಕಳು ಅನ್ಯ ಆಕರ್ಷಣೆಗೆ ಒಳಗಾದರೆ ಕೆಡಕುಂಟಾಗುತ್ತದೆ ಎಂಬ ಸಂದೇಶವನ್ನು ಈ ಆಸನಕಾಲದಲ್ಲಿ ನೀಡಬಹುದು.

ಸೂಚನೆ: ಮಕ್ಕಳು ಆಸನಗಳನ್ನು ತಜ್ಞರ ಮಾರ್ಗದರ್ಶನದಲ್ಲಿಯೇ ಮಾಡತಕ್ಕದ್ದು.

❖

ರಮ್ಯಾ ಶ್ರೀಹರಿ

ನಾವೆಲ್ಲರೂ ಪ್ರೀತಿಗೆ, ಬಾಂಧವ್ಯಕ್ಕೆ ಹಂಬಲಿಸುವವರೇ; ಪ್ರೀತಿಯಿಲ್ಲದೆ ಬದುಕಿನಲ್ಲೇನೂ ಸ್ವಾರಸ್ಯವೇ ಇಲ್ಲ. ನಮ್ಮೆಲ್ಲಾ ಕ್ರಿಯೆಗಳೂ ಪ್ರತ್ಯಕ್ಷವಾಗಿಯೋ ಪರೋಕ್ಷವಾಗಿಯೋ ಪ್ರೀತಿಯನ್ನು ಪಡೆಯುವುದು ಅಥವಾ ಪ್ರೀತಿಯನ್ನು ಕೊಡುವುದು ಎನ್ನುವುದರ ಸುತ್ತಲೇ ನಡೆಯುತ್ತಿರುತ್ತದೆ. ಪ್ರೀತಿಯೆನ್ನುವ ಮಿಂಚು, ಸೆಳೆತ, ಮಾಂತ್ರಿಕತೆ, ಸಾರ್ಥಕತೆ ನಮ್ಮ ಕಣ್ಮುಂದೆ ಸುಳಿಯದಿದ್ದರೆ ನಾವು ಜೀವಂತಶವದಂತೆ ಬದುಕನ್ನು ಸಾಗಿಸುತ್ತೇವೆ.

ಪ್ರೀತಿಯೆನ್ನುವುದು ಮನುಷ್ಯ ಬದುಕಿನ ಮೂಲ ಸಂಘರ್ಷ; ಪ್ರೀತಿಯಿಲ್ಲದ ಸ್ಥಿತಿಯನ್ನು ಗ್ರಹಿಸಿ ಅದನ್ನು ಒಪ್ಪಲಾರದೇ ಅದಕ್ಕೆ ಪ್ರತಿಕ್ರಿಯಾತ್ಮಕವಾಗಿ ತಿರುಗಿ ಬೀಳುವುದೇ ಕೋಪ ಎನಿಸಿಕೊಳ್ಳುತ್ತದೆ. ಪ್ರೀತಿಗೂ ಕೋಪಕ್ಕೂ ಒಂದು ಬಗೆಯ ವಿಲೋಮ ಸಂಬಂಧವಿದೆ (Inverse relationship). ಹಾಗಾಗಿ ಕೋಪಕ್ಕೆ ಪ್ರೀತಿಯೇ ಅತ್ಯುತ್ತಮ ಸಮಾಧಾನ ಎಂದರೆ ತಪ್ಪಾಗಲಾರದು. ಪ್ರೀತಿಗೆ ನಾನಾ ರೀತಿಗಳು, ಹತ್ತಾರು ಬಣ್ಣಗಳು, ನೂರಾರು ರೂಪಗಳು; ನಮ್ಮ ಭಾವನಾತ್ಮಕ ಅವಶ್ಯಕತೆಗಳೆಲ್ಲವೂ ಪ್ರೀತಿಯ ಹಲವಾರು ಮುಖಗಳೇ ಹೌದು. ಯಾವುವು ನಮ್ಮ ಭಾವನಾತ್ಮಕ ಅವಶ್ಯಕತೆಗಳು?

ಸಹಾನುಭೂತಿ, ಭದ್ರತೆಯ ಭಾವ, ಭಾವನೆಗಳನ್ನು ಹಂಚಿಕೊಳ್ಳುವುದಕ್ಕೆ ಇರುವ ಸುರಕ್ಷಿತ ನೆಲೆ, ಯಾವುದೇ ಶರತ್ತುಗಳಿರದೆ ನಮ್ಮನ್ನು ಸ್ವೀಕರಿಸುವ ಆತ್ಮೀಯರು, ನಮ್ಮತನವನ್ನು ಒಪ್ಪಿಕೊಳ್ಳುವುದಷ್ಟೇ ಅಲ್ಲ ಅದನ್ನು ಸಂಭ್ರಮಿಸುವ, ನಮ್ಮ ಕುಂದುಕೊರತೆಗಳನ್ನು ಕಂಡರೂ ನಮ್ಮಿಂದ ದೂರ ಸರಿಯದವರ ಸಾಂಗತ್ಯ - ಹೀಗೆ ಭಾವನಾತ್ಮಕ ಅವಶ್ಯಕತೆಗಳು ಹಲವಾರು.

ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಭಾವನೆಗಳು ಪ್ರಶ್ನಾತೀತ. 'ನಿನಗೇಕೆ ಭಯವಾಗಬೇಕು? ನಿನಗೇಕೆ ದುಃಖವಾಗಬೇಕು?' ನೀನು ಯಾಕೆ ಹಾಗಿರುವುದು, ಹೀಗಿರುವುದು? ಎಂದು ಟೀಕೆ ಮಾಡುವಂತೆ ಪ್ರಶ್ನಿಸುವುದು ನಮ್ಮ ಭಾವನಾತ್ಮಕ ಅಸ್ತಿತ್ವಕ್ಕೇ ಕೊಡಲಿಪೆಟ್ಟು ನೀಡಿದಂತಿರುತ್ತದೆ; ಅದನ್ನು ಯಾರೂ ಸಹಿಸರು. ಕ್ರಿಯೆಗಳನ್ನು ವಿಮರ್ಶಿಸಬಹುದು, ಅನುಭೂತಿಗಳನ್ನು, ಭಾವನೆಗಳನ್ನಲ್ಲ. ಹೀಗೆ ನಮ್ಮ ಭಾವನಾಪ್ರಪಂಚಕ್ಕೆ ಸದಾ ಕಡಿವಾಣ ಹಾಕುವವರ ನಡುವಿನಲ್ಲಿದ್ದಾಗ ಕೋಪ ನಮ್ಮಲ್ಲಿ ತುಂಬಿ ತುಳುಕುತ್ತಿರುತ್ತದೆ. ನಮ್ಮ ಭಾವನೆಗಳನ್ನು, ಅನುಭೂತಿಗಳನ್ನು ಯಾವ ಪ್ರಶ್ನೆಗಳೂ ಇಲ್ಲದೆ ಸ್ವೀಕರಿಸಿ ಅದಕ್ಕೆ ಸಹಾನುಭೂತಿಯಿಂದ ಸ್ಪಂದಿಸುವುದೇ ಪ್ರೀತಿಯ ಮುಖ್ಯ ಅಭಿವ್ಯಕ್ತಿ ಎಂದು ಹೇಳಬಹುದೇನೋ. ಪ್ರೀತಿಯ ಈ ಮುಖ ಕಾಣದೇ ಹೋದಾಗ ಸಿಟ್ಟು, ಹತಾಶೆ, ಆಕ್ರೋಶ ನಮ್ಮಲ್ಲಿ ಕುದಿಯುತ್ತಿರುತ್ತದೆ. 'ಪ್ರೀತಿ ಬೇಕು ಕೊಡು' ಎಂದು ನೇರವಾಗಿ ಕೇಳುವುದಕ್ಕೆ ಯಾರಿಗೂ ಸಾಧ್ಯವಿಲ್ಲ, ಹಾಗೆ ಅದು ಕೇಳಿ ಪಡೆಯುವಂಥದ್ದೂ ಅಲ್ಲ, ಪ್ರೀತಿ ಎನ್ನುವುದು 'ಕೊಡು-ತೆಗೆದುಕೋ' ಎನ್ನುವ ಮಾತಿಗೆ ಅಷ್ಟು ಸುಲಭಕ್ಕೆ ದಕ್ಕದು.

ಇಲ್ಲಿಯವರೆಗೂ ಪ್ರೀತಿಯಿಲ್ಲದ ಸ್ಥಿತಿ ಹೇಗೆ ಕೋಪವನ್ನು ಹುಟ್ಟಿಸುತ್ತದೆ ಎಂದು ನೋಡಿದೆವು. ಈಗ ಸದಾ ಎಲ್ಲದಕ್ಕೂ ಕೋಪಗೊಳ್ಳುವವರು ಹೇಗೆ ಪ್ರೀತಿಸುವವರನ್ನು ದೂರ ತಳ್ಳುತ್ತಾರೆ, ಹೇಗೆ ತಮ್ಮವರ ಭಾವನಾತ್ಮಕ ಅವಶ್ಯಕತೆಗಳನ್ನು ನಿರ್ಲಕ್ಷಿಸುತ್ತಾರೆ ಎನ್ನುವುದನ್ನು ನೋಡೋಣ. ಸದಾ ಕೋಪಗೊಳ್ಳುವವರು ತಮ್ಮ ಬುದ್ಧಿಯನ್ನು, ಆಲೋಚಿಸುವ ಶಕ್ತಿಯನ್ನು ತುಂಬಾ ಸೀಮಿತಗೊಳಿಸಿಕೊಂಡಿರುತ್ತಾರೆ. ಕೋಪವೆನ್ನುವುದನ್ನು ಒಂದು ಭೂಪ್ರದೇಶದಂತೆ ವರ್ಣಿಸುವುದಾದರೆ, ತೀರಾ ಇಕ್ಕಟ್ಟಿನ, ವಿಶಾಲವಾದ ಕಿಟಕಿ ಬಾಗಿಲುಗಳಿಲ್ಲದ ಒಂದು ಆವರಣದ ಸಣ್ಣ ಕಿಂಡಿಯಿಂದ ಹೊರಪ್ರಪಂಚವನ್ನು ನೋಡಿ ಕಂಡಿದ್ದನ್ನೇ ಅದಿರುವುದಕ್ಕಿಂತಾ ದೊಡ್ಡದು ಮಾಡಿ ಅಬ್ಬರಿಸುವುದು. ನಾವು ಭಯಗ್ರಸ್ತರು ಮತ್ತು ಅಭದ್ರತೆಯಿಂದ ನರಳುವವರೂ ಆಗಿರುತ್ತೇವೆ.

ಮನುಷ್ಯರಾದ ನಾವ್ಯಾರೂ ನಮ್ಮ ಕಷ್ಟಗಳನ್ನೆಲ್ಲಾ ಒಬ್ಬಂಟಿಯಾಗೇ ಸಹಿಸಲಾರೆವು; ಸಹಿಸಬೇಕಾದ್ದಿಲ್ಲ ಕೂಡ. ಆತ್ಮೀಯರ ನೆರವು ಸಮಾಧಾನ ನಮಗೆ ಸಹಜವಾಗೇ ಸಿಗಬೇಕಾದ್ದು; ಅದು ನಮ್ಮ ಹಕ್ಕು ಎಂದರೂ ಅತಿಶಯೋಕ್ತಿಯಲ್ಲ. ಎಲ್ಲದಕ್ಕೂ ಕೋಪದಿಂದಲೇ ಪ್ರತಿಕ್ರಿಯಿಸುವವರಿಂದ ನಮಗೆ ಇಂತಹ ಸಮಾಧಾನ ದೊರೆಯಲಾರದು. ಉದಾಹರಣೆಗೆ, ತಾನು ಪ್ರೀತಿಸಿದವನು ಎಲ್ಲಿ ತನ್ನಿಂದ ದೂರವಾಗುತ್ತಾನೋ ಎಂದು ಆತಂಕ ಪಡುವ ಅವಳು ತನ್ನ ಭಯವನ್ನು ತೋಡಿಕೊಂಡಾಗ 'ನಿನ್ನ ಭಯ ಸದಾ ಇದ್ದಿದ್ದೇ', 'ನಿನ್ನನ್ನು ಸಮಾಧಾನಿಸಲು ನನ್ನಿಂದ ಸಾಧ್ಯವಿಲ್ಲ', 'ನಿನಗೇಕೆ ಇಷ್ಟೊಂದು ಅನುಮಾನವೋ' - ಎಂದೆಲ್ಲಾ ಕೂಗಾಡಿ ದೂರ ಸರಿಯುವ ಅವನು - ಇಂಥ ಸಂದರ್ಭಗಳನ್ನು ನಾವೆಲ್ಲಾ ಕಂಡಿರುತ್ತೇವೆ ಅಥವಾ ಅನುಭವಿಸಿರುತ್ತೇವೆ.

ಕೋಪಗೊಂಡವರೊಡನೆ ಸಂವಹನ ಕಷ್ಟವೆನ್ನುವುದೇ ಕೋಪದ ಮುಖ್ಯ ಸಮಸ್ಯೆಯಲ್ಲ. ಕೋಪಿಷ್ಠರು ಜೊತೆಗಿರುವವರ ಅಂತರ್ಯವನ್ನು ಕಾಣಲಾರರು; ಕೋಪ ಅವರನ್ನು ಹಾಗೆ ಬಂಧಿಸಿಟ್ಟಿರುತ್ತದೆ. ಕೋಪಗೊಂಡಾಗ ನಾವು ಎಲ್ಲವನ್ನೂ 'ಅಪಾಯಕಾರಿ' / 'threat' ಎಂದೇ ಎಣಿಸುವೆವು; ಎಲ್ಲರನ್ನೂ ಅಪಾರ್ಥಮಾಡಿಕೊಳ್ಳುವೆವು. ಯಾವುದೋ ಯುದ್ಧದಲ್ಲಿ ಹೋರಾಡುವವರಂತೆ ಎಲ್ಲರ ಮೇಲೆರಗಲು ತೊಡಗುವೆವು. ಕಾಡುಪ್ರಾಣಿಯೊಂದು ಶತ್ರುವಿನೊಡನೆ ಸೆಣೆಸಾಡುವಂತೆ ಆಡುವ ನಾವು, ನಮ್ಮಿಂದ ಪ್ರೀತಿಯನ್ನು ಅಪೇಕ್ಷಿಸುವವರಿಗೆ ಏನು ತಾನೇ ಕೊಡಲು ಸಾಧ್ಯ?

ಕೋಪ ಮನುಷ್ಯನಿಗೆ ಮಾಡುವ ದೊಡ್ಡ ಸಹಾಯವೇ ಅದು; ಅಪಾಯವನ್ನು ಗ್ರಹಿಸಿ ಹೋರಾಡುವ ಕಿಚ್ಚು ತುಂಬಿಸುವುದು. ಆದರೆ ಅಪಾಯವಿಲ್ಲದ ಕಡೆಯೂ ಅಪಾಯವನ್ನು ಗ್ರಹಿಸಿದಾಗಲೇ ಸಮಸ್ಯೆ ಉದ್ಭವವಾಗುವುದು. ಕೋಪಿಸಿಕೊಳ್ಳುವವರು ಹೀಗೆ ಎಲ್ಲರನ್ನೂ ತಮ್ಮ ಶತ್ರುವೆಂಬಂತೆ ನೋಡುವುದೇ ಅವರಿಗೆ ಆತ್ಮೀಯರಾಗಲು ಬಯಸುವವರಿಗೆ ಇರುವ ದೊಡ್ಡ ತೊಡಕು.

ಆದರೆ ಕೋಪ ಯಾವಾಗಲೂ ಅನರ್ಥಕಾರಿಯಲ್ಲ. ಕೋಪಗೊಂಡು ಹೋರಾಡುವುದನ್ನೇ ಬದುಕಿನ ರೀತಿಯಾಗಿಸಿಕೊಂಡವರಿಗೆ ಕೋಪವನ್ನು ಸಮಯೋಚಿತವಾಗಿ ಬಳಸಲು ಬರುವುದಿಲ್ಲ. ಬೇರೆ ಎಲ್ಲಾ ಸಮಯದಲ್ಲೂ ಶಾಂತವಾಗಿರುವವರಿಗಷ್ಟೇ ಸರಿಯಾದ ಸಮಯದಲ್ಲಿ ಸರಿಯಾದ ರೀತಿಯಲ್ಲಿ ಕೋಪಗೊಳ್ಳುವುದು ಸಾಧ್ಯ. 'ಎಲ್ಲರೂ ನನ್ನ ಅಸ್ತಿತ್ವಕ್ಕೇ ಮಾರಕ' ಎಂಬಂತಾಡುವವರ ಕೋಪಕ್ಕೂ ಅನ್ಯಾಯವನ್ನೆದುರಿಸಲು ಕೋಪವನ್ನು ಇಂಧನವನ್ನಾಗಿಸುವವರ ಕೋಪಕ್ಕೂ ವ್ಯತ್ಯಾಸವಿದೆ. ಕೋಪದ ಕಣ್ಣುಗಳಿಂದಲೇ ಸದಾ ಬದುಕನ್ನು ನೋಡುವವರು ಆರ್ಭಟಿಸುವುದಕ್ಕೇ ತಮ್ಮ ಶಕ್ತಿಯನ್ನೆಲ್ಲಾ ವ್ಯಯಿಸುತ್ತಾರೆ. ಕೋಪವನ್ನು ರಚನಾತ್ಮಕವಾಗಿ ಬಳಸುವವರು ನಿಷ್ಕ್ರಿಯತೆಯನ್ನೋಡಿಸಿ ಕಾರ್ಯತತ್ಪರರಾಗಲು ಕೋಪವನ್ನು ದಾರಿದೀಪದಂತೆ ಬಳಸುತ್ತಾರೆ.

❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ -ಗಣಿತ

ಸಮಾಂತರ ಶ್ರೇಢಿ

ಅಭ್ಯಾಸ

3) ಇವುಗಳಲ್ಲಿ ಯಾವುವು ಸಮಾಂತರ ಶ್ರೇಢಿಗಳಾಗಿವೆ? ಸಮಾಂತರ ಶ್ರೇಢಿಗಳಾಗಿದ್ದಲ್ಲಿ, ಸಾಮಾನ್ಯ ವ್ಯತ್ಯಾಸ ಕಂಡುಹಿಡಿದು ಅದರ ಮುಂದಿನ ಮೂರು ಪದಗಳನ್ನು ಬರೆಯಿರಿ (.....ಹಿಂದಿನ ಸಂಚಿಕೆಯಿಂದ)

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = -4$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$-12+(-4)=-16$$
$$-16+(-4)=-20$$
$$-20+(-4)=-24$$

(viii) $-\frac{1}{2}, -\frac{1}{2}, -\frac{1}{2}, -\frac{1}{2}$ ....

ಪರಿಹಾರ:

$-\frac{1}{2}, -\frac{1}{2}, -\frac{1}{2}, -\frac{1}{2}$ ....

$$a_2 - a_1 = -\frac{1}{2} - \left(-\frac{1}{2}\right) = -\frac{1}{2} + \frac{1}{2} = 0$$
$$a_3 - a_2 = -\frac{1}{2} - \left(-\frac{1}{2}\right) = -\frac{1}{2} + \frac{1}{2} = 0$$
$$a_4 - a_3 = -\frac{1}{2} - \left(-\frac{1}{2}\right) = -\frac{1}{2} + \frac{1}{2} = 0$$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 0$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$-\frac{1}{2}+0=-\frac{1}{2}$$
$$-\frac{1}{2}+0=-\frac{1}{2}$$
$$-\frac{1}{2}+0=-\frac{1}{2}$$

(ix) 1, 3, 9, 27, . . .

ಪರಿಹಾರ: $a_2 - a_1 = 3 - 1 = 2$

$a_3 - a_2 = 9 - 3 = 6$

$a_4 - a_3 = 27 - 9 = 18$

ಇಲ್ಲಿ $a_2 - a_1 \neq a_3 - a_2$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(x) $a, 2a, 3a, 4a, \ldots$

ಪರಿಹಾರ:

$a_2 - a_1 = 2a - a = a$

$a_3 - a_2 = 3a - 2a = a$

$a_4 - a_3 = 4a - 3a = a$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = a$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$4a + a = 5a$$
$$5a + a = 6a$$
$$6a + a = 7a$$

(xi) $a, a^2, a^3, a^4, \ldots$

ಪರಿಹಾರ: $a_2 - a_1 = a^2 - a = a(a-1)$

$a_3 - a_2 = a^3 - a^2 = a^2(a-1)$

ಇಲ್ಲಿ $a_2 - a_1 \neq a_3 - a_2$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(xii) $\sqrt{2}, \sqrt{8}, \sqrt{18}, \sqrt{32}$ ....

ಪರಿಹಾರ:

$\sqrt{2}, \sqrt{8}, \sqrt{18}, \sqrt{32}$, ...

$$a_2 - a_1 = \sqrt{8} - \sqrt{2} = 2\sqrt{2} - \sqrt{2} = \sqrt{2}$$
$$a_3 - a_2 = \sqrt{18} - \sqrt{8} = 3\sqrt{2} - 2\sqrt{2} = \sqrt{2}$$
$$a_4 - a_3 = \sqrt{32} - \sqrt{18} = 4\sqrt{2} - 3\sqrt{2} = \sqrt{2}$$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = \sqrt{2}$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$\sqrt{32} + \sqrt{2} = 4\sqrt{2} + \sqrt{2} = 5\sqrt{2} = \sqrt{50}$$
$$5(\sqrt{2}) + \sqrt{2} = 6\sqrt{2} = \sqrt{72}$$
$$6(\sqrt{2}) + \sqrt{2} = 7\sqrt{2} = \sqrt{98}$$

(xiv) $1^2, 3^2, 5^2, 7^2$ ....

ಪರಿಹಾರ: $a_2 - a_1 = 3^2 - 1^2 = 9 - 1 = 8$

$a_3 - a_2 = 3^2 - 5^2 = 9 - 25 = 16$

ಇಲ್ಲಿ $a_2 - a_1 \neq a_3 - a_2$

ಆದ್ದರಿಂದ ಸಮಾಂತರ ಶ್ರೇಢಿಯನ್ನುಂಟು ಮಾಡಲಾರದು

(xv) $1^2, 5^2, 7^2, 7^3, \ldots$

ಪರಿಹಾರ: $a_2 - a_1 = 5^2 - 1^2 = 25 - 1 = 24$

$a_3 - a_2 = 7^2 - 5^2 = 49 - 25 = 24$

$a_4 - a_3 = 7^3 - 7^2 = 73 - 49 = 24$

ಪ್ರತಿಯೊಂದು ಹಂತದಲ್ಲಿಯೂ $a_{n+1} - a_n$ ಒಂದೇ ಆಗಿದೆ ಮೇಲೆ ತಿಳಿಸಿದ ಸಂಖ್ಯೆಗಳು ಸಾಮಾನ್ಯ ವ್ಯತ್ಯಾಸ $d = 24$ ಹೊಂದಿದ್ದು ಸಮಾಂತರ ಶ್ರೇಢಿಗೆ ಸೇರಿದೆ.

ಮುಂದಿನ ಮೂರು ಪದಗಳು

$$73 + 24 = 97$$
$$97 + 24 = 121$$
$$121 + 24 = 145$$

ನಿಮ್ಮ ಹೆಚ್ಚಿನ ಅಭ್ಯಾಸಕ್ಕಾಗಿ ಎಕ್ಸ್‌ಟ್ರಾ ಪ್ರಶ್ನೆಗಳು

1) ಒಂದು ತ್ರಿಭುಜದ ಕೋನಗಳು ಸಮಾಂತರ ಶ್ರೇಢಿಯಲ್ಲಿವೆ. ಅತ್ಯಂತ ಚಿಕ್ಕಕೋನ 50^0 ಇದ್ದರೆ, ಉಳಿದೆರಡು ಕೋನಗಳನ್ನು ಕಂಡುಹಿಡಿಯಿರಿ.

ಪರಿಹಾರ:- $a = 50^0$ ಕೋನಗಳು ಸಮಾಂತರ ಶ್ರೇಢಿಯಲ್ಲಿವೆ ಮತ್ತು ಮೂರು ಕೋನಗಳ ಮೊತ್ತ 180^0

$$\therefore a+(a+d)+(a+2d)=180$$
$$50+(50+d)+(50+2d)=180$$
$$50+50+d+50+2d=180$$
$$150+3d=180$$
$$3d=180-150$$
$$d=\frac{30}{3}=10$$

(ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC PHYSICS

Chapter – 2

ELECTROSTATIC POTENTIAL AND CAPACITANCE

23. Write a note on the Common Potential.

Ans:-

Total charge on both the capacitors after sharing

$$q' = C_1 V + C_2 V = (C_1 + C_2)V$$

Since no charge is lost or gained during sharing, electric charge is conserved.

That is, total charge before sharing = total charge after sharing

$$C_1 V_1 + C_2 V_2 = (C_1 + C_2)V$$
$$\text{(or)} \quad V = \frac{C_1V_1 + C_2V_2}{C_1 + C_2}$$

24. A capacitor of capacitance 1μF charged to a potential of 100V is connected in parallel to another capacitor of 2μF charged to a potential of 50V. Calculate the common potential.

Soln:- Given, $C_1 = 1\mu F = 1 \times 10^{-6}$ F, $V_1 = 100$ V

$C_2 = 2\mu F = 2 \times 10^{-6}$ F, $V_2 = 50$ V

Using $V = \frac{C_1V_1 + C_2V_2}{C_1 + C_2}$,

we get, $V = \frac{1\times10^{-6} \times 100 + 2\times10^{-6} \times 50}{1\times10^{-6} + 2\times10^{-6}}$

$= \frac{200\times10^{-6}}{3\times10^{-6}} = 66.67$ V

25. A 600 pF capacitor is charged by a 200 V supply. It is then disconnected from the supply and is connected to another uncharged 600 pF capacitor. How much electrostatic energy is lost in the process?

Soln:- Given, $V_1 = 200$ V

$C_1 = C_2 = 600$ pF $= 600 \times 10^{-12} = 6 \times 10^{-10}$ F,

Energy stored in the capacitor before sharing,

$$U_i = \frac{1}{2}C_1V_1^2$$
$$= \frac{1}{2} \times 6\times10^{-10} \times 4\times10^4 = 12\times10^{-6} \text{ J}$$

When both are connected, common potential,

$$V = \frac{C_1V_1 + C_2V_2}{C_1 + C_2}$$
$$= \frac{6\times10^{-10} \times 200 + 0}{12\times10^{-10}} = 100\text{V}$$

Energy stored after sharing charge between two capacitors,

$$U_f = \frac{1}{2}(C_1 + C_2)V^2$$
$$= \frac{1}{2} \times 12\times10^{-10} \times 10^4 = 6\times10^{-6} \text{ J}$$

Therefore, loss in electrostatic energy

$= U_i - U_f = 6 \times 10^{-6}$ J.

26. Write a note on dielectrics and dielectric material.

Ans:- The non-conducting materials in which equal and opposite induced charges are produced on their opposite faces on the application of electric field are called dielectrics.

A non-conducting material(insulators) can be called as a ***dielectric.*** ***Eg:-*** dry air and dry wood are dielectrics.



Insulating substances can be non-polar and polar depending upon the type of their atoms/molecules. Polar molecules immediately align themselves when electric field is applied but there is no additional dipole moment created because the molecules are already polar. An appreciable layers of positive charges and negative charges are created on the opposite faces of the substance. Such insulators when used as a medium in capacitors can increase the capacitance of the capacitor. Precisely such materials are called as **dielectrics. Eg:-** Air, H_2 gas, glass, mica, paraffin wax, transformer oil etc.

Purpose of the dielcetric: is to increase the capacitance of a capacitor while keeping the two conducting plates of the capacitor insulated from each other.

Note: Water has polar molecules and transformer oil has non-polar molecules so transformer oil is a better dielectric

27. Write a note on the Electric Polarization

Ans:- ***Electric Polarization -***

Polarization of a dielectric is the process of inducing equal and opposite charges on the two opposite faces of the dielectric on the application of electric field.



Consider two parallel conducting plates (equally and oppositely charged) separated by a certain distance and having vacuum/air between the plates.

Let $\vec{E_o}$ be the intensity of electric field between the plates. If +σ be the surface charge density of positive plate and -σ be the surface charge density of -ve plate, then magnitude of applied electric field between the plates is - *(Contd)*

ರೈಲು ಟಿಕೆಟ್ ಖರೀದಿಗೆ ನೆರವಾಗುವ ಯುಟಿಎಸ್ ಆ್ಯಪ್ ಬಳಕೆ ಏರಿಕೆ

ಒಂದೇ ತಿಂಗಳಲ್ಲಿ ಶೇ 25 ಹೆಚ್ಚಳ

● ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ರೈಲು ಪ್ರಯಾಣಿಕರು ಟಿಕೆಟ್ ಖರೀದಿಸಲು ಸರತಿ ಸಾಲಿನಲ್ಲಿ ನಿಲ್ಲುವುದನ್ನು ತಪ್ಪಿಸಲು ಮೊಬೈಲ್ ಆ್ಯಪ್‌ಗೆ ಆದ್ಯತೆ ನೀಡುತ್ತಿದ್ದಾರೆ. ಇದರಿಂದ ಮೇ ತಿಂಗಳೊಂದರಲ್ಲೇ ಯುಟಿಎಸ್ (ಅನ್‌ರಿಸರ್ವ್‌ಡ್ ಟಿಕೆಟ್ ಸಿಸ್ಟಂ) ಮೊಬೈಲ್ ಆ್ಯಪ್‌ನಲ್ಲಿ ಟಿಕೆಟ್ ಖರೀದಿಸಿದವರ ಪ್ರಮಾಣ ಶೇ 25ರಷ್ಟು ಹೆಚ್ಚಿದೆ.

ಯುಟಿಎಸ್ ಮೊಬೈಲ್ ಆ್ಯಪ್ ಬಳಕೆಯಿಂದ ಸಮಯ ಉಳಿತಾಯ, ಸರದಿಯಲ್ಲಿ ನಿಲ್ಲುವುದಕ್ಕೆ ಮುಕ್ತಿ, ರೈಲು ತಪ್ಪಿಸಿಕೊಳ್ಳುವ ಸಾಧ್ಯತೆಗಳು ಕಡಿಮೆ ಇರುವುದರಿಂದ ಆ್ಯಪ್ ಬಳಕೆ ಹೆಚ್ಚಾಗಿದೆ.

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದಲ್ಲಿ ಈ ವರ್ಷ ಆರಂಭದಲ್ಲಿ ತಿಂಗಳಿಗೆ ಸರಾಸರಿ 15 ಸಾವಿರ ಪ್ರಯಾಣಿಕರು ಯುಟಿಎಸ್ ಮೊಬೈಲ್ ಆ್ಯಪ್ ಬಳಸಿದ್ದರು. ಪ್ರತಿ ತಿಂಗಳು ಏರಿಕೆ ಕಂಡಿದ್ದು, ಮೇ ತಿಂಗಳಲ್ಲಿ ಅತಿ ಹೆಚ್ಚು ಅಂದರೆ 27 ಸಾವಿರ ಜನರು ಆ್ಯಪ್ ಬಳಸಿದ್ದಾರೆ.

‘ರೈಲು ನಿಲ್ದಾಣಕ್ಕೆ ಬಂದು ಟಿಕೆಟ್ ಖರೀದಿಗೆ ಸರದಿಯಲ್ಲಿ ನಿಲ್ಲಬೇಕಿತ್ತು. ಟಿಕೆಟ್ ಖರೀದಿಸುವಷ್ಟರಲ್ಲಿ ಕೆಲವು ಬಾರಿ ರೈಲು ಹೋಗಿರುತ್ತಿತ್ತು. ಮುಂದಿನ ರೈಲಿಗಾಗಿ ಕಾಯಬೇಕಿತ್ತು. ರಜಾದಿನಗಳಲ್ಲಿ, ಹಬ್ಬಗಳ ಸಮಯದಲ್ಲಿ ಪ್ರಯಾಣಿಕರ ಸಂಖ್ಯೆ ಭಾರಿ ಹೆಚ್ಚಿರುತ್ತದೆ. ಅಂಥ ಸಮಯದಲ್ಲಿ ಸರದಿಯಲ್ಲಿ ನಿಂತು ಟಿಕೆಟ್ ಖರೀದಿಸುವುದೇ ದುಸ್ಸಾಹಸವಾಗಿತ್ತು. ಈಗ ಮೊಬೈಲ್ ಆ್ಯಪ್‌ನಲ್ಲಿ ಟಿಕೆಟ್ ಖರೀದಿ ಮಾಡುತ್ತಿರುವುದರಿಂದ ಎಲ್ಲವೂ ತಪ್ಪಿದೆ’ ಎಂದು ರೈಲು ಪ್ರಯಾಣಿಕ ಎಂ. ಕರಿಬಸಪ್ಪ, ಅನುಭವ ಹಂಚಿಕೊಂಡರು.

ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಅಂಕಿ ಅಂಶ

ಯುಟಿಎಸ್ ಬಳಸಿದವರು

ಮಾರ್ಚ್	17,652
ಏಪ್ರಿಲ್	21,777
ಮೇ	27,135



ಸುಧಾರಣೆಗೆ ತಂತ್ರಜ್ಞಾನ ಬಳಕೆ

ರೈಲಿನಲ್ಲಿ ಪ್ರಯಾಣಿಕರ ಸುಖಕರ ಪ್ರಯಾಣಕ್ಕಾಗಿ ರೈಲ್ವೆಯು ಆಧುನಿಕ ತಂತ್ರಜ್ಞಾನಗಳನ್ನು ಬಳಸುತ್ತಿದೆ. ಅನೇಕ ಸುಧಾರಣೆಗಳಿಗೆ ಡಿಜಿಟಲ್ ವ್ಯವಸ್ಥೆ ಇದೆ. ಅದರಲ್ಲಿ ಯುಟಿಎಸ್ ಮೊಬೈಲ್ ಆ್ಯಪ್ ಕೂಡ ಒಂದು. ನಮ್ಮ ಅಧಿಕಾರಿಗಳು ಮತ್ತು ಸಿಬ್ಬಂದಿ ಈ ಬಗ್ಗೆ ನಿರಂತರ ಜಾಗೃತಿ ಮೂಡಿಸುತ್ತಿರುವುದರಿಂದ ಬಳಕೆದಾರರ ಸಂಖ್ಯೆ ಹೆಚ್ಚಿದೆ.

ತ್ರಿನೇತ್ರ, ಕೆ.ಆರ್., ಪಿಆರ್‌ಒ, ನೈರುತ್ಯ ರೈಲ್ವೆ, ಬೆಂಗಳೂರು ವಿಭಾಗ

ರೈಲು ನಿಲ್ದಾಣಗಳು, ಇಲಾಖೆಯ ವೆಬ್‌ಸೈಟ್ ಸೇರಿ ಹಲವೆಡೆ ಯುಟಿಎಸ್ ಮೊಬೈಲ್ ಆ್ಯಪ್ ಬಗ್ಗೆ ನಿರಂತರವಾಗಿ ಜಾಗೃತಿ ಮೂಡಿಸಲಾಗುತ್ತಿದೆ. ಜನರು ಈಗ ಸ್ಮಾರ್ಟ್‌ಫೋನ್ ಬಳಸುವುದು ಸಾಮಾನ್ಯವಾಗಿದೆ. ಈ ಅಪ್ಲಿಕೇಶನ್ ಡೌನ್‌ಲೋಡ್ ಮಾಡಿಕೊಂಡು ಬಳಸುವ ಪ್ರಯಾಣಿಕರ ಪ್ರಮಾಣ ದಿನೇ ದಿನೇ ಹೆಚ್ಚುತ್ತಿರುವುದು ಆಶಾದಾಯಕ ಬೆಳವಣಿಗೆ ಎಂದು ನೈರುತ್ಯ ರೈಲ್ವೆ ಬೆಂಗಳೂರು ವಿಭಾಗದ ಸಾರ್ವಜನಿಕ ಸಂಪರ್ಕ ಅಧಿಕಾರಿ ತ್ರಿನೇತ್ರ ಕೆ.ಆರ್. ತಿಳಿಸಿದರು.

ಹಿಂದೆ ನಿಗದಿತ ದೂರದವರೆಗೆ ಮಾತ್ರ ಆ್ಯಪ್‌ನಲ್ಲಿ ಟಿಕೆಟ್ ಖರೀದಿಸಬಹುದಿತ್ತು. ಈಗ ಈ ಮಿತಿಯನ್ನು ತೆಗೆದು ಹಾಕಿರುವುದರಿಂದ ಮೊಬೈಲ್ ಅಪ್ಲಿಕೇಶನ್ ಮೂಲಕ ಇ-ಟಿಕೆಟ್ ಖರೀದಿ ಇನ್ನು ಮುಂದೆ ಇನ್ನಷ್ಟು ಹೆಚ್ಚಳವಾಗಲಿದೆ. ಪ್ರಯಾಣಿಕರ ಅನುಕೂಲಕ್ಕೆ ಬೇಕಾದ ಎಲ್ಲ ಕ್ರಮಗಳನ್ನು ರೈಲ್ವೆ ತೆಗೆದುಕೊಳ್ಳುತ್ತಿದೆ ಎಂದು ಮಾಹಿತಿ ನೀಡಿದರು.

ರೈಲು ನಿಲ್ದಾಣಕ್ಕೆ ಬರುವ ಮೊದಲು ಇ–ಟಿಕೆಟ್ ಖರೀದಿಸಬೇಕು. ನಿಲ್ದಾಣಕ್ಕೆ ಬಂದ ಮೇಲೆ ಅಥವಾ ರೈಲು ಹತ್ತಿದ ಮೇಲೆ ಖರೀದಿ ಮಾಡಲು ಇದರಲ್ಲಿ ಅವಕಾಶವಿಲ್ಲ ಎಂದು ವಿವರಿಸಿದರು.

ಆಟೊಮೆಟಿಕ್ ಮಷಿನ್ ಬಳಕೆ ಸರಿಯಾಗಲಿ

ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣದಲ್ಲಿ ಸಾಮಾನ್ಯ ಬೋಗಿಯ ಪ್ರಯಾಣಿಕರು ಸರದಿಯಲ್ಲಿ ನಿಲ್ಲುವುದನ್ನು ತಪ್ಪಿಸಲು ಮೊಬೈಲ್ ಆಧಾರಿತ ಪಾವತಿ ಆ್ಯಪ್‌ಗಳಿಂದ ಹಣ ಪಾವತಿಸಿ ಆಟೊಮೆಟಿಕ್ ಮಷಿನ್ ಮೂಲಕ ಟಿಕೆಟ್ ಖರೀದಿಸುವ ವ್ಯವಸ್ಥೆ ಮಾಡಲಾಗಿದೆ.

ಆದರೆ, ಅದನ್ನು ಪ್ರಯಾಣಿಕರು ನೇರವಾಗಿ ಬಳಸದಂತೆ ಅಲ್ಲಿ ರೈಲ್ವೆಗೆ ಸಂಬಂಧಿಸಿದವರು ಕುಳಿತಿರುತ್ತಾರೆ. ಅವರಿಗೆ ₹ 5 ನೀಡಿ ಆ ಮಷಿನ್ ಮೂಲಕ ಟಿಕೆಟ್ ಖರೀದಿಸಬೇಕಿದೆ. ಈಗ ಮೊಬೈಲ್‌ನಲ್ಲಿಯೇ ಆ್ಯಪ್ ಬಳಸಬಹುದು.

ಆದರೆ ಸಾಮಾನ್ಯ ಜನರು ಮೊಬೈಲ್ ಆ್ಯಪ್‌ನಲ್ಲಿ ಟಿಕೆಟ್ ಖರೀದಿಸುವುದು ಕಷ್ಟ. ರೈಲು ನಿಲ್ದಾಣಗಳಲ್ಲಿರುವ ಆಟೊಮೆಟಿಕ್ ಟಿಕೆಟ್ ಮಷಿನ್ ಪ್ರಯಾಣಿಕರಿಗೆ ಉಪಯೋಗ ಆಗುವಂತೆ ಅಧಿಕಾರಿಗಳು ಮಾಡಬೇಕು ಎಂದು ರೈಲು ಪ್ರಯಾಣಿಕ ಯೋಗೀಶ್ ಒತ್ತಾಯಿಸಿದರು.

ಇಂಡಿಯನ್ ಗ್ರೀನ್ ಎನರ್ಜಿ ಎಕ್ಸ್‌ಪೊ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಬೆಂಗಳೂರು ಅಂತರರಾಷ್ಟ್ರೀಯ ವಸ್ತು ಪ್ರದರ್ಶನ ಕೇಂದ್ರ (ಬಿಐಇಸಿ)ದಲ್ಲಿ ಮೂರು ದಿನಗಳು ನಡೆಯುವ ಇಂಡಿಯನ್ ಗ್ರೀನ್ ಎನರ್ಜಿ ಎಕ್ಸ್‌ಪೊಗೆ ಸೋಮವಾರ ಅದ್ದೂರಿ ಚಾಲನೆ ದೊರೆಯಿತು.

ನವೀಕೃತ ಇಂಧನ ವಲಯದ ಉತ್ಪಾದಕರು, ಪರಿಕರಗಳ ಉತ್ಪಾದಕರ ಸಂಘ, ತಂತ್ರಜ್ಞಾನ ಪೂರೈಕೆದಾರರು ಮತ್ತು ಸಮಾಲೋಚಕರ ಸಹಯೋಗದಲ್ಲಿ ಈ ಎಕ್ಸ್‌ಪೊ ಆಯೋಜಿಸಲಾಗಿದೆ. ಬೆಸ್ಕಾಂ, ಕ್ರೆಡೆಲ್ ಒಳಗೊಂಡಂತೆ 100ಕ್ಕೂ ಅಧಿಕ ಸಂಸ್ಥೆಗಳು ಮೇಳಕ್ಕೆ ಬೆಂಬಲ ನೀಡಿವೆ.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಚಾಲನೆ ನೀಡಿ ಮಾತನಾಡಿ, ‘ಇಂಧನ ಇಲಾಖೆ ಹಸಿರು ಇಂಧನಕ್ಕೆ ಒತ್ತು ನೀಡಿದ್ದು, ‘ಕುಸುಮ್’ ಯೋಜನೆ ಅಡಿ 1,181 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಕ್ರಮ ಕೈಗೊಳ್ಳಲಾಗಿದೆ. ಈ ಪೈಕಿ 371 ಮೆಗಾವಾಟ್ ವಿದ್ಯುತ್ ಉತ್ಪಾದನೆಗೆ ಟೆಂಡರ್ ಅಂತಿಮಗೊಳಿಸಲಾಗಿದೆ. 379 ಮೆಗಾವಾಟ್‌ಗೆ ವಿದ್ಯುತ್ ಉತ್ಪಾದನೆಗೆ ಟೆಂಡರ್ ಕರೆಯಲಾಗುತ್ತಿದೆ. ಇದರಿಂದ ರೈತರಿಗೆ ಹಗಲು ಹೊತ್ತಿನಲ್ಲಿ 7 ತಾಸು ವಿದ್ಯುತ್ ನೀಡಲು ಸಹಕಾರಿಯಾಗಲಿದೆ’ ಎಂದರು.

ಬಿಐಇಸಿಯಲ್ಲಿ ಸೋಮವಾರದಿಂದ ಆರಂಭವಾದ ಮೂರು ದಿನಗಳ ಅಂತರರಾಷ್ಟ್ರೀಯ ಇಂಡಿಯಾ ಗ್ರೀನ್ ಎನರ್ಜಿ ಎಕ್ಸ್‌ಪೊಗೆ ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ ಬೀಳಗಿ ಚಾಲನೆ ನೀಡಿ, ಮೇಳದಲ್ಲಿ ಪ್ರದರ್ಶಿಸಿದ್ದ ಸೌರಶಕ್ತಿ ಮಾದರಿಗಳನ್ನು ವೀಕ್ಷಿಸಿದರು

‘ಮನೆಯ ಚಾವಣಿಯಲ್ಲಿ ಸೌರ ವಿದ್ಯುತ್ ಅಳವಡಿಸಿಕೊಳ್ಳುವ ಸಂಬಂಧ ಕೇಂದ್ರ ಸರ್ಕಾರದ ಸಬ್ಸಿಡಿ ಯೋಜನೆಯನ್ನು ಜಾರಿಗೊಳಿಸಿದ್ದು, ಬೆಸ್ಕಾಂ ವ್ಯಾಪ್ತಿಯಲ್ಲಿ 300 ಮೆಗಾವಾಟ್ ಸೌರ ವಿದ್ಯುತ್ ಉತ್ಪಾದಿಸುವ ಗುರಿ ಹೊಂದಿದೆ‘ ಎಂದರು.

ಹೈದರಾಬಾದ್‌ನ ಮೀಡಿಯಾ ಡೇ ಮಾರ್ಕೆಟಿಂಗ್ ನಿರ್ದೇಶಕ ಮೊಹಮದ್ ಮುದಸ್ಸಿರ್ ಮಾತನಾಡಿ, ನೂರಕ್ಕೂ ಅಧಿಕ ಜಾಗತಿಕ ಮತ್ತು ರಾಷ್ಟ್ರೀಯಮಟ್ಟದ ಕಂಪನಿಗಳು ಮೇಳದಲ್ಲಿ ಭಾಗವಹಿಸಿವೆ. ಇನ್ನಷ್ಟು ಪಾಲುದಾರರನ್ನು ಸೇರಿಸಿಕೊಂಡು ಮೇಳವನ್ನು ಯಶಸ್ವಿಗೊಳಿಸಲಾಗುತ್ತಿದೆ ಎಂದರು.

ಎಂಎಸ್‌ಐಎಲ್ ವ್ಯವಸ್ಥಾಪಕ ನಿರ್ದೇಶಕ ಮನೋಜ್ ಕುಮಾರ್, ಕ್ರೆಡೆಲ್ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ, ಆಲ್ ಇಂಡಿಯಾ ಸೋಲಾರ್ ಥರ್ಮಲ್ ಫೆಡರೇಷನ್ ಅಧ್ಯಕ್ಷ ಕೆ.ಆರ್.ಸುರೇಂದ್ರ ಕುಮಾರ್, ಫೆರ್ರಿ ಸಂಸ್ಥೆ ಅಧ್ಯಕ್ಷ ರಮೇಶ್ ಶಿವಣ್ಣ, ಪ್ರೈಡ್ ನವೀಕೃತ ಇಂಧನ ಸಂಸ್ಥೆಯ ನಿರ್ದೇಶಕ ಎ.ಸಿ.ಈಶ್ವರ್ ಮೀಡಿಯಾ ಡೇ ಮಾರ್ಕೆಟಿಂಗ್ ನಿರ್ದೇಶಕರಾದ ರಾಮ್ ಸೌಂದಲ್ಕರ್ ಉಪಸ್ಥಿತರಿದ್ದರು.

ಜಿಎಸ್‌ಟಿ ಟೆಂಡರ್ ರದ್ದತಿ ಸಿಎಂ ಭರವಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಎಸ್‌ಟಿ ಮೊತ್ತ ಸೇರಿಸಿ ಟೆಂಡರ್ ಕರೆಯುವುದನ್ನು ರದ್ದುಪಡಿಸಲು ಆರ್ಥಿಕ ಇಲಾಖೆಗೆ ನಿರ್ದೇಶಿಸುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಗುತ್ತಿಗೆದಾರರ ಸಂಘದ ಪದಾಧಿಕಾರಿಗಳು ರಾಜ್ಯ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ.ಕೆಂಪಣ್ಣ ಹಾಗೂ ಪ್ರಧಾನ ಕಾರ್ಯದರ್ಶಿ ಜಿ.ಎಂ. ರವೀಂದ್ರ ನೇತೃತ್ವದಲ್ಲಿ ಮುಖ್ಯಮಂತ್ರಿಯವರನ್ನು ಸೋಮವಾರ ಭೇಟಿಯಾದರು.

‘2017–18ರ ಹೆಚ್ಚುವರಿ ಜಿಎಸ್‌ಟಿಯನ್ನು ಸರ್ಕಾರದ ವತಿಯಿಂದ ಪಾವತಿಸುವ ಬಗ್ಗೆಯೂ ಆರ್ಥಿಕ ಇಲಾಖೆಯವರು ಪರಿಶೀಲಿಸಬೇಕೆಂದು ನಿರ್ದೇಶನ ನೀಡಿದರು ಎಂದು ಸಂಘದ ಅಧ್ಯಕ್ಷ ಜಿ.ಎಂ. ನಂದಕುಮಾರ್ ತಿಳಿಸಿದರು.

‘ಬಿಬಿಎಂಪಿ ಗುತ್ತಿಗೆದಾರರ 9 ಬೇಡಿಕೆಗಳನ್ನು ಈಡೇರಿಸಲು ಮನವಿ ಸಲ್ಲಿಸಲಾಯಿತು. ಈ ಬಗ್ಗೆ ಬಿಬಿಎಂಪಿ ಮುಖ್ಯ ಆಯುಕ್ತರನ್ನು ಕರೆದು ಮಾತನಾಡುವುದಾಗಿ ಭರವಸೆ ನೀಡಿದರು’ ಎಂದು ಅವರು ಹೇಳಿದರು.

ಪ್ರೆಗಾ ನ್ಯೂಸ್ ಶ್ರೇಣಿಯ ಉತ್ಪನ್ನ ಬಿಡುಗಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದ ಪ್ರಮುಖ ಮ್ಯಾನ್‌ಕೈಂಡ್ ಫಾರ್ಮಾ ಲಿಮಿಟೆಡ್‌ನ ಗರ್ಭಧಾರಣೆ ಪತ್ತೆ ಕಾರ್ಡ್ ‘ಪ್ರೆಗಾ ನ್ಯೂಸ್’ ಉತ್ಪನ್ನದ ನೂತನ ಬ್ರ್ಯಾಂಡ್ ರಾಯಭಾರಿ, ಬಹುಭಾಷಾ ನಟಿ ಕಾಜಲ್ ಅಗರ್‌ವಾಲ್ ಅವರು ‘ಎಕ್ಸ್‌ಪರ್ಟ್ಸ್ ಪ್ರೆಗ್ನೆನ್ಸಿ ಕೇರ್ ಸಲ್ಯೂಶನ್’ ಶ್ರೇಣಿಯ ಹೊಸ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದರು.

ಗರ್ಭ ಧರಿಸುವ ಫಲವತ್ತಾದ ದಿನ ಗುರುತಿಸುವ ‘ಓವಾ ನ್ಯೂಸ್ ಓವಲೇಶನ್ ಡಿಟೆಕ್ಷನ್ ಕಿಟ್’, ಗರ್ಭಧಾರಣೆಗೆ ಮುನ್ನ ದೇಹಕ್ಕೆ ಅಗತ್ಯ ಇರುವ ಕಬ್ಬಿಣ ಮತ್ತು ಫಾಲಿಕ್ ಆಮ್ಲ ಅಂಶ ಹೊಂದಿರುವ ‘ಪ್ರೆಗಾ ಹೋಪ್ ಪ್ರೀ ಕನ್ಸೆಪ್ಷನ್ ಟ್ಯಾಬ್ಲೆಟ್’, ಫಲವತ್ತತೆ ಹೆಚ್ಚಿಸಲು ದಂಪತಿಗೆ ನೆರವಾಗುವ ‘ಪ್ರೆಗಾ ಹೋಪ್ ಫರ್ಟಿಲಿಟಿ ಲೂಬ್ರಿಕೆಂಟ್’ ಉತ್ಪನ್ನಗಳನ್ನು ಕಾಜಲ್ ಅಗರ್‌ವಾಲ್ ಏಕಕಾಲದಲ್ಲಿ ಅನಾವರಣಗೊಳಿಸಿದರು.

‘ಪ್ರೆಗಾ ನ್ಯೂಸ್’ ಮತ್ತು ‘ಪ್ರೆಗಾ ನ್ಯೂಸ್ ಅಡ್ವಾನ್ಸ್’ ಗರ್ಭಧಾರಣೆ ಪರೀಕ್ಷೆ ಕಿಟ್ ಆಗಿದೆ. ‘ಪ್ರೆಗಾ ನ್ಯೂಸ್ ವ್ಯಾಲ್ಯೂ ಪ್ಯಾಕ್’ ಎರಡು ಮಾದರಿಯ ಗರ್ಭಧಾರಣೆ ಪರೀಕ್ಷಾ ಕಿಟ್ ಒಳಗೊಂಡಿದೆ. ‘ಪ್ರೆಗಾ ಹ್ಯಾಪಿ ಆ್ಯಂಟಿ ಸ್ಟ್ರೆಚ್ ಮಾರ್ಕ್ ಕ್ರೀಂ’ ಉತ್ಪನ್ನ ಪ್ರಸವಪೂರ್ವ,ಗರ್ಭಧಾರಣೆ ನಂತರದ ಹಂತದಲ್ಲಿ ಗುರುತು, ತುರಿಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ ಎಂದು ವಿವರಿಸಿದರು.

ಪ್ರೆಗಾ ನ್ಯೂಸ್ ಶ್ರೇಣಿಯ ನೂತನ ಉತ್ಪನ್ನಗಳನ್ನು ನಟಿ ಕಾಜಲ್ ಅಗರ್‌ವಾಲ್ ಮಾರುಕಟ್ಟೆಗೆ ಬಿಡುಗಡೆ ಮಾಡಿದರು

ಚೆನ್ನೈ, ಹೈದರಾಬಾದ್, ಬೆಂಗಳೂರು ಸೇರಿದಂತೆ ದಕ್ಷಿಣ ಭಾರತದ ವಿವಿಧ ಭಾಗಗಳಿಂದ ಬಂದಿದ್ದ 70ಕ್ಕೂ ಅಧಿಕ ತಾಯಂದಿರು ಕಾರ್ಯಕ್ರಮಕ್ಕೆ ಸಾಕ್ಷಿಯಾದರು. ನಟಿಯರಾದ ಮೇಘನಾರಾಜ್, ಸಂಜನಾ ಗಲ್ರಾನಿ, ಲಾಸ್ಯ ಮಂಜುನಾಥ್, ನಿಶಾ ಅಗರ್‌ವಾಲ್ ಭಾಗವಹಿಸಿದ್ದರು.

ಗರ್ಭಾವಸ್ಥೆಗೆ ಅಗತ್ಯವಿರುವ ಉತ್ಪನ್ನಗಳನ್ನು ಒದಗಿಸುವ ಕುರಿತು ಪ್ರೆಗಾ ನ್ಯೂಸ್ ಸಲಹೆ ನೀಡುತ್ತದೆ. ಈ ಬ್ರ್ಯಾಂಡ್ ಮೂರು ವರ್ಷಗಳಿಂದ ದಕ್ಷಿಣ ಮಾರುಕಟ್ಟೆಯ ಮೇಲೆ ಗಮನವನ್ನು ಕೇಂದ್ರೀಕರಿಸಿದೆ. ಇದರ ಪರಿಣಾಮವಾಗಿ ಕರ್ನಾಟಕದಂತಹ ಮಾರುಕಟ್ಟೆಗಳಲ್ಲಿ 2022ರಲ್ಲಿ ಶೇ 65 ಬೆಳವಣಿಗೆಯಾಗಿತ್ತು. 2024ರ ಮಾರ್ಚ್ ಅಂತ್ಯಕ್ಕೆ ಶೇ 85ಕ್ಕೆ ಏರಿಕೆಯಾಗಿದೆ.

ಪ್ರೆಗ್ ನ್ಯೂಸ್ ನಿಖರವಾದ ಫಲಿತಾಂಶಗಳನ್ನು ನೀಡಲು ಹೆಸರುವಾಸಿಯಾಗಿದೆ ಮತ್ತು ಉತ್ಪಾದನಾ ವಿಸ್ತರಣೆಯೊಂದಿಗೆ, ಸಮಗ್ರ ಸಂತಾನೋತ್ಪತ್ತಿ ಶ್ರೇಣಿಯನ್ನು ಒದಗಿಸುತ್ತದೆ. ಗರ್ಭಪೂರ್ವ, ಗರ್ಭಸಮಯ ಮತ್ತು ಗರ್ಭಾವಸ್ಥೆಯ ನಂತರದ ಹಂತಗಳಿಗೆ ಸಮಗ್ರ ಗರ್ಭಧಾರಣೆಯ ಆರೈಕೆಯ ಪರಿಹಾರವನ್ನು ನೀಡುತ್ತದೆ. ಇದು ವರ್ಷಗಳ ಸಂಶೋಧನೆಯ ನಂತರ ಅಭಿವೃದ್ಧಿಪಡಿಸಿದ ಆರು ಚಿಂತನಶೀಲ ಉತ್ಪನ್ನಗಳನ್ನು ಒಳಗೊಂಡಿದೆ ಎಂದು ಸಂಸ್ಥೆಯವರು ತಿಳಿಸಿದರು.

ಅತಿಥಿ ಶಿಕ್ಷಕರ ನೇಮಕಕ್ಕೆ ಅನುಮತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 2024–25ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇರುವ (ಪಿಎಸ್‌ಟಿ ಮತ್ತು ಜಿಪಿಟಿ) ಒಟ್ಟು 33,863 ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಲು ಶಾಲಾ ಶಿಕ್ಷಣ ಇಲಾಖೆ ಅನುಮತಿ ನೀಡಿದೆ.

ವಿಜಯಪುರ (1,336), ಕಲಬುರಗಿ (1,832), ಕೊಪ್ಪಳ (1,758), ರಾಯಚೂರು (3,205), ಯಾದಗಿರಿ (2,259), ಚಿಕ್ಕೋಡಿ (2,231), ಬಳ್ಳಾರಿ (1,470), ಬಾಗಲಕೋಟೆ (1,088), ಬೆಳಗಾವಿ (1,457), ಬೆಂಗಳೂರು ದಕ್ಷಿಣ (1,092), ದಕ್ಷಿಣ ಕನ್ನಡ (1,033) ಮತ್ತು ಮೈಸೂರು (1,001) ಶೈಕ್ಷಣಿಕ ಜಿಲ್ಲೆಯಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳು ಖಾಲಿ ಇವೆ.

ಕಾಯಂ ಶಿಕ್ಷಕರು ನೇಮಕ ಆಗುವವರೆಗೆ ಅಥವಾ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ಯಾವುದು ಮೊದಲೊ ಅಲ್ಲಿಯವರೆಗೆ ಶಿಕ್ಷಕರ ಕೊರತೆಯನ್ನು ನೀಗಿಸಲು ಜಿಲ್ಲಾವಾರು, ತಾಲ್ಲೂಕುವಾರು 35 ಸಾವಿರ ಅತಿಥಿ ಶಿಕ್ಷಕರನ್ನು ತಾತ್ಕಾಲಿಕವಾಗಿ ನೇಮಿಸಿಕೊಳ್ಳಲು ಇದೇ ಜೂನ್ 1ರಂದು ಅನುಮತಿ ನೀಡಿ ಇಲಾಖೆ ಆದೇಶ ಹೊರಡಿಸಿತ್ತು. ಮೊದಲ ಹಂತದಲ್ಲಿ 33,863 ಅತಿಥಿ ಶಿಕ್ಷಕರನ್ನು ನೇಮಕಕ್ಕೆ ಅನುಮತಿ ನೀಡಿದೆ.

ಮಂಜೂರಾದ ಖಾಲಿ ಇರುವ ಹುದ್ದೆಗಳಿಗೆ ಎದುರಾಗಿ ಮಾತ್ರ ಅತಿಥಿ ಶಿಕ್ಷಕರನ್ನು ನೇಮಿಸಿಕೊಳ್ಳಬೇಕು, ಪ್ರಾಥಮಿಕ ಶಾಲೆಗಳಿಗೆ ಸಂಬಂಧಿಸಿದಂತೆ ಅತಿಥಿ ಶಿಕ್ಷಕರ ಆಯ್ಕೆ ಹೊಣೆಯನ್ನು ಮುಖ್ಯ ಶಿಕ್ಷಕರಿಗೆ ನೀಡಲಾಗಿದೆ. ಗ್ರಾಮೀಣ ಪ್ರದೇಶಗಳ ಶಾಲೆಗಳಲ್ಲಿರುವ ಖಾಲಿಹುದ್ದೆಗಳಿಗೆ, ಶಿಕ್ಷಕರಹಿತಶಾಲೆಗಳಿಗೆ ಹಾಗೂ ಹೆಚ್ಚು ವಿದ್ಯಾರ್ಥಿಗಳಿರುವ ಶಾಲೆಗಳಿಗೆ ಆದ್ಯತೆಯಲ್ಲಿ ನೇಮಕ ಮಾಡಿಕೊಳ್ಳಬೇಕು ಎಂದೂ ಸೂಚಿಸಲಾಗಿದೆ.

ಕರ್ನಾಟಕ ಪಬ್ಲಿಕ್ ಶಾಲೆ, ಬೆಂಗಳೂರು ಪಬ್ಲಿಕ್ ಶಾಲೆ, ದ್ವಿ ಭಾಷಾ (ಆಂಗ್ಲ ಭಾಷಾ) ತರಗತಿಗಳಿರುವ ಶಾಲೆಗಳು ಮತ್ತು ಆದರ್ಶ ವಿದ್ಯಾಲಯಗಳಲ್ಲಿ ಶೇ 100ರಷ್ಟು ಅತಿಥಿ ಶಿಕ್ಷಕರನ್ನು ಆದ್ಯತೆಯಡಿ ತುಂಬಬೇಕು, ನಿಗದಿಪಡಿಸಿದ ಕನಿಷ್ಠ ವಿದ್ಯಾರ್ಹತೆಯನ್ನು ಪರಿಗಣಿಸಿ, ಮೆರಿಟ್ ಆಧಾರದಲ್ಲಿ ಆಯ್ಕೆ ಮಾಡಬೇಕು, ಅತಿಥಿ ಶಿಕ್ಷಕರ ಗೌರವ ಸಂಭಾವನೆ ತಿಂಗಳಿಗೆ ₹10 ಸಾವಿರ ಎಂದು ಇಲಾಖೆ ಆಯುಕ್ತರು ತಿಳಿಸಿದ್ದಾರೆ.

ನಗರದಲ್ಲಿ ಇಂದು

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ, ಎಂ. ವೆಂಕಟಸ್ವಾಮಿ 70 ಸಂಭ್ರಮೋತ್ಸವ, ಪರಿವರ್ತನಾ ಸಮಾವೇಶ: ಸಾನ್ನಿಧ್ಯ: ಭಿಕ್ಕುಣಿ ಬುದ್ಧಮ್ಮ, ಉದ್ಘಾಟನೆ: ಬಿ.ಟಿ. ಲಲಿತಾನಾಯಕ್, ಭಾಷಣ: ಹಂ.ಪ. ನಾಗರಾಜಯ್ಯ, ‘ನಾಲ್ವಡಿ ಕೃಷ್ಣರಾಜ ಒಡೆಯರ್ ಪ್ರಶಸ್ತಿ ಪುರಸ್ಕೃತರು: ಇಂದಿರಾ ಕೃಷ್ಣಪ್ಪ, ‘ಸಾಮಾಜಿಕ ನ್ಯಾಯ ಪರಿವರ್ತನೆಯ ಪ್ರವರ್ತಕ’ ಪುಸ್ತಕ ಬಿಡುಗಡೆ: ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಎಂ. ವೆಂಕಟಸ್ವಾಮಿ, ಆಯೋಜನೆ: ಸಮತಾ ಸೈನಿಕ ದಳ, ಸ್ಥಳ: ನಾಗಸೇನ ಬುದ್ಧ ವಿಹಾರದ ಮೈದಾನ, ಸದಾಶಿವನಗರ, ಬೆಳಿಗ್ಗೆ 11.30

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ: ‘ನಾಲ್ವಡಿಯವರ ಮಾದರಿ ಆಡಳಿತ’ ಕುರಿತು ಉಪನ್ಯಾಸ: ಎಂ. ನಾರಾಯಣಸ್ವಾಮಿ, ಆಯೋಜನೆ ಮತ್ತು ಸ್ಥಳ: ಪಶುವೈದ್ಯಕೀಯ ಮಹಾವಿದ್ಯಾಲಯ, ಹೆಬ್ಬಾಳ, ಮಧ್ಯಾಹ್ನ 2.30

ನಾಲ್ವಡಿ ಕೃಷ್ಣರಾಜ ಒಡೆಯರ್ ಜಯಂತಿ: ಉದ್ಘಾಟನೆ: ಟಿ.ಆರ್. ಅನಂತರಾಮು, ಅಧ್ಯಕ್ಷತೆ: ಮಹೇಶ ಜೋಶಿ, ‘ನಾಲ್ವಡಿ ಕೃಷ್ಣರಾಜ ಒಡೆಯರ್’ ಕುರಿತು ಉಪನ್ಯಾಸ: ಧರ್ಮೇಂದ್ರ ಕುಮಾರ್, ಆಯೋಜನೆ ಮತ್ತು ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಮಂದಿರ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 5

ರಾಜರ್ಷಿ ಕೃಷ್ಣರಾಜ ಒಡೆಯರ್ ಸ್ಮರಣೆ: ನುಡಿ ನಮನ: ವಿ. ಅನುರಾಧ, ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘ, ಕೆಂಪೇಗೌಡನಗರ, ಸಂಜೆ 6

‘ಶ್ರೀಮದ್ಭಾಗವತ’ ಪ್ರವಚನ: ರಾಮವಿಠಲಾಚಾರ್ಯ, ಆಯೋಜನೆ: ತಿರುಮಲ ತಿರುಪತಿ ದೇವಸ್ಥಾನಗಳು ಹಿಂದೂಧರ್ಮ ಪ್ರಚಾರ ಪರಿಷತ್, ಸ್ಥಳ: ಬಾಲಸುಬ್ರಹ್ಮಣ್ಯಸ್ವಾಮಿ ದೇವಸ್ಥಾನ, 10ನೇ ಮುಖ್ಯರಸ್ತೆ, ಡಿ ಬ್ಲಾಕ್, 2ನೇ ಹಂತ, ರಾಜಾಜಿನಗರ, ಸಂಜೆ 7

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ)ಕಳುಹಿಸಿ.
nagaradalli_indu@prajavani.co.in

ಕಾನೂನು ರಕ್ಷಣೆ: ಹೈಕೋರ್ಟ್‌ಗೆ ಅರ್ಚಕರ ಸಂಘದ ಮೊರೆ

‘ಆರ್‌ಟಿಐ’ ವ್ಯಾಪ್ತಿಯಿಂದ ಹೊರಗಿಡಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದೇವಾಲಯದಲ್ಲಿ ಸಿದ್ಧಪಡಿಸುವ ಪ್ರಸಾದಕ್ಕೆ ಎಷ್ಟು ಅಕ್ಕಿ, ಸಕ್ಕರೆ, ಉಪ್ಪು-ಖಾರ ಬಳಸಲಾಗುತ್ತದೆ? ನಿತ್ಯ ಎಷ್ಟು ಪೂಜೆ, ಅರ್ಚನೆ ನಡೆ-ಸಲಾಗುತ್ತದೆ? ಅದರಿಂದ ಸಂಗ್ರವಾಗುವ ಹಣವೆಷ್ಟು? ಈ ಹಣವನ್ನೆಲ್ಲಾ ಯಾವುದಕ್ಕೆ ಖರ್ಚು ಮಾಡುತ್ತೀರಿ...? ಎಂಬೆಲ್ಲಾ ಪ್ರಶ್ನೆಗಳನ್ನು ಮಾಹಿತಿ ಹಕ್ಕು ಕಾಯ್ದೆಯಡಿ (ಆರ್‌ಟಿಐ) ಕೇಳುವ ಮೂಲಕ ಕೆಲವರು ನಮಗೆ ಕಿರುಕುಳ ನೀಡಿ ಪ್ರಾಣ ಬೆದರಿಕೆ ಒಡ್ಡುತ್ತಿದ್ದು, ಕಾನೂನು ರಕ್ಷಣೆ ನೀಡಬೇಕು’ ಎಂದು ಕೋರಿ ಅರ್ಚಕರ ಸಂಘ ಹೈಕೋರ್ಟ್ ಮೆಟ್ಟಿಲೇರಿದೆ.

ಹೈಕೋರ್ಟ್ ಸುದ್ದಿ

ಈ ಕುರಿತಂತೆ ‘ಅಖಿಲ ಕರ್ನಾಟಕ ಹಿಂದೂ ದೇವಾಲಯಗಳ ಪೂಜಾರಿಗಳು, ಆಗಮಿಕರು ಮತ್ತು ಅರ್ಚಕರ ಸಂಘ’ದ ಕಾರ್ಯದರ್ಶಿ ಕೆ.ಎಸ್.ಎನ್.ದೀಕ್ಷಿತ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಾದವನ್ನು ಮುಖ್ಯ ನ್ಯಾಯ ಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾ ಗೀಯ ನ್ಯಾಯಪೀಠ ಸೋಮವಾರ ಆಲಿಸಿದ್ದು, ವಿಚಾರಣೆಯನ್ನು ಇದೇ 11ಕ್ಕೆ ಮುಂದೂಡಿದೆ.

‘ಕೆಲವರು ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ಇಲಾಖೆಯ ಆಯುಕ್ತರ ಕಚೇರಿಯ ಅಧಿಕಾರಿಗಳ ಮೂಲಕ ದೇವಸ್ಥಾನಗಳ ಅರ್ಚಕರು ಹಾಗೂ ಸಿಬ್ಬಂದಿಗಳ ಹೆಸರಲ್ಲಿ ಮಾಹಿತಿ ಹಕ್ಕು ಕಾಯ್ದೆಯಡಿ ಅರ್ಜಿ ಸಲ್ಲಿಸಿ, ಅನಗತ್ಯ ಪ್ರಶ್ನೆ ಕೇಳುತ್ತಾರೆ. ಮಾಹಿತಿ ಕೊಡದಿದ್ದರೆ ಹಲವು ರೀತಿಯ ಕಿರುಕುಳ ನೀಡಿ, ಪ್ರಾಣ ಬೆದರಿಕೆ ಹಾಕುತ್ತಾರೆ. ಇದರಿಂದ ಅರ್ಚಕರಿಗೆ ದೈನಂದಿನ ಧಾರ್ಮಿಕ ಕಾರ್ಯ ನಡೆಸಲು ಸಾಧ್ಯವಾಗುತ್ತಿಲ್ಲ’ ಎಂದು ಅರ್ಜಿದಾರರು ವಿವರಿಸಿದ್ದಾರೆ.

‘ಧಾರ್ಮಿಕ ದತ್ತಿ ಇಲಾಖೆಗೆ ಸಂಬಂಧಿಸಿದಂತೆ ಸಾರ್ವಜನಿಕ ಮಾಹಿತಿ ಅಧಿಕಾರಿ, ಸಹಾಯಕ ಸಾರ್ವಜನಿಕ ಮಾಹಿತಿ ಅಧಿಕಾರಿ ಮತ್ತು ಮೇಲ್ಮನವಿ ಪ್ರಾಧಿಕಾರಗಳನ್ನು ನೇಮಿಸಿ ರಾಜ್ಯ ಸರ್ಕಾರ 2007ರ ಜೂನ್ 16 ಮತ್ತು 2017ರ ಫೆಬ್ರುವರಿ 3ರಂದು ಹೊರಡಿಸಿರುವ ಅಧಿಸೂಚನೆಗಳನ್ನು ರದ್ದುಪಡಿಸಬೇ-ಕು. ದೇವಸ್ಥಾನಗಳು ಸಾರ್ವಜನಿಕ ಸಂಸ್ಥೆಗಳಲ್ಲ ಎಂದು ಘೋಷಿಸಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

ಸಂತಾನ ಭಾಗ್ಯಕ್ಕೆ ಪೆರೋಲ್

ಬೆಂಗಳೂರು: ಸಂತಾನ ಭಾಗ್ಯ ಪಡೆಯುವುದಕ್ಕಾಗಿ 31 ವರ್ಷದ ಮಹಿಳೆಯೊಬ್ಬರು ಸಲ್ಲಿಸಿದ್ದ ರಿಟ್ ಅರ್ಜಿ ಮಾನ್ಯ ಮಾಡಿರುವ ಹೈಕೋರ್ಟ್; ಕೊಲೆ ಪ್ರಕರಣವೊಂದರಲ್ಲಿ ಸಜಾಬಂದಿಯಾಗಿರುವ ಅವರ ಪತಿಯನ್ನು ಇದೇ 5ರಿಂದ 30 ದಿನ ಪೆರೋಲ್ ಮೇಲೆ ಬಿಡುಗಡೆ ಮಾಡುವಂತೆ ಜೈಲು ಅಧೀಕ್ಷಕರಿಗೆ ಆದೇಶಿಸಿದೆ.

ಈ ಕುರಿತಂತೆ ಪತ್ನಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಆರ್.ಕೃಷ್ಣಕುಮಾರ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ಅರ್ಜಿದಾರರ ಪತಿಯನ್ನು 30 ದಿನ ಜೈಲಿನಿಂದ ಬಿಡುಗಡೆ ಮಾಡುವಂತೆ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಅಧೀಕ್ಷಕರಿಗೆ ನಿರ್ದೇಶಿಸಿದೆ.

‘ಪೆರೋಲ್ ಅವಧಿಯಲ್ಲಿ ವಾರಕ್ಕೊಮ್ಮೆ ಸ್ಥಳೀಯ ಪೊಲೀಸ್ ಠಾಣೆಗೆ ಹಾಜರಾಗಿ ಸಹಿ ಮಾಡಬೇಕು. ಅವಧಿ ಮುಗಿದ ನಂತರ ಪುನಃ ಆನಂದ್ ಹಾಗೂ ಅರ್ಜಿದಾರರು ಪೆರೋಲ್ ವಿಸ್ತರಣೆಗೆ ಕೋರಬಹುದು’ ಎಂದು ನಿರ್ದೇಶಿಸಿದೆ. ಅರ್ಜಿದಾರರ ಪರ ಹೈಕೋರ್ಟ್ ವಕೀಲ ಡಿ.ಮೋಹನ್ ಕುಮಾರ್ ವಾದ ಮಂಡಿಸಿದರು.

ಪ್ರಕರಣವೇನು?: ಆನಂದ್‌ಗೆ ಜೀವಾವಧಿ ಶಿಕ್ಷೆ ವಿಧಿಸಿ ಕೋಲಾರದ ಎರಡನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯ 2019ರಲ್ಲಿ ಆದೇಶಿಸಿತ್ತು. ಈ ಶಿಕ್ಷೆಯನ್ನು ಹೈಕೋರ್ಟ್ 2023ರಲ್ಲಿ 10 ವರ್ಷಕ್ಕೆ ಇಳಿಸಿತ್ತು. ಜೈಲಿಗೆ ಹೋಗುವ ಮುನ್ನ ಆನಂದ್ ಮತ್ತು ಅರ್ಜಿದಾರಾಗಿರುವ ಪತ್ನಿ ಪರಸ್ಪರ ಪ್ರೀತಿಸುತ್ತಿದ್ದರು. ಜೈಲಿಗೆ ಹೋದ ಮೇಲೂ ಅವರ ಪ್ರೀತಿ ಮುಂದುವರಿದಿತ್ತು. ಇಬ್ಬರೂ ಮದುವೆಯಾಗಲು ನಿಶ್ಚಯಿಸಿದ್ದರು. ಈ ಸಂಬಂಧ ಆನಂದ್ ಪ್ರಿಯತಮೆ ಸಲ್ಲಿಸಿದ್ದ ಅರ್ಜಿಯನ್ನು ಪರಿಗಣಿಸಿದ್ದ ಹೈಕೋರ್ಟ್ 2023ರ ಮಾರ್ಚ್ ತಿಂಗಳಲ್ಲಿ, ಮದುವೆಯಾಗಲು ಆನಂದ್ ಅವರಿಗೆ 80 ದಿನಗಳ ಕಾಲ ಪೆರೋಲ್ ಮೇಲೆ ಬಿಡುಗಡೆ ಮಾಡಲು ಆದೇಶಿಸಿತ್ತು.

ಹೊಸ ಗುರುತಿನ ಚೀಟಿ ಪಡೆಯಲು ಕೋರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸದಸ್ಯರು, ಅಗತ್ಯ ದಾಖಲೆಗಳನ್ನು ಸಲ್ಲಿಸಿ ಹೊಸ ಗುರುತಿನ ಚೀಟಿ ಪಡೆಯವಂತೆ ಬೆಂಗಳೂರು ನಗರ ಜಿಲ್ಲಾಧಿಕಾರಿ ಕೋರಿದ್ದಾರೆ.

ನೋಂದಾಯಿತರಾದ ಸದಸ್ಯರು, ಗುರುತಿನ ಚೀಟಿ ಪಡೆಯದೇ ಇದ್ದಲ್ಲಿ ಅಂತಹ ಸದಸ್ಯರಿಗೆ ಸರ್ವಸದಸ್ಯರ ಸಭೆ ಹಾಗೂ ಚುನಾವಣೆಗಳಲ್ಲಿ ಭಾಗವಹಿಸುವುದಕ್ಕೆ ಅವಕಾಶ ಇರುವುದಿಲ್ಲ ಎಂದು ತಿಳಿಸಿದ್ದಾರೆ.

ರೆಡ್‌ಕ್ರಾಸ್‌ನ ಕರ್ನಾಟಕ ರಾಜ್ಯ ಶಾಖೆಯಲ್ಲಿ ಒಟ್ಟು 6 ಸಾವಿರ ಸದಸ್ಯರು ನೋಂದಾ-ಯಿಸಿಕೊಂಡಿದ್ದಾರೆ. ಬೆಂಗಳೂರು ನಗರ ಶಾಖೆ, ರಾಜ್ಯ ಶಾಖೆಯಿಂದ ವರ್ಗಾವಣೆಯಾದವರು ಅಗತ್ಯ ದಾಖಲೆಗಳು ಹಾಗೂ ಇತ್ತೀಚಿನ ಭಾವಚಿತ್ರ, ಆಧಾರ್ ಕಾರ್ಡ್ ಅನ್ನು ಕಾರ್ಯದರ್ಶಿ, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, 1ನೇ ಮಹಡಿ, ಕಂದಾಯ ಭವನ, ಕೆಜಿ ರಸ್ತೆ, ಬೆಂಗಳೂರು – ಇಲ್ಲಿಗೆ ಸಲ್ಲಿಸಿ ಹೊಸ ಗುರುತಿನ ಚೀಟಿ ಪಡೆಯಬಹುದು ಎಂದು ಕೋರಲಾಗಿದೆ.

ರಂಗಪ್ರವೇಶ ನಗರದ ‘ಎಡಿಎ ರಂಗಮಂದಿರ’ದಲ್ಲಿ ಭಾನುವಾರ 'ನಂದಿ ಭರತನಾಟ್ಯ ಕಲಾಶಾಲೆ' ಆಯೋಜಿಸಿದ್ದ ರಂಗಪ್ರವೇಶ ಕಾರ್ಯಕ್ರಮದಲ್ಲಿ ಲಿಖಿತ ಟಿ ಅವರು ಭರತನಾಟ್ಯ ಪ್ರದರ್ಶಿಸಿದರು
-ಪ್ರಜಾವಾಣಿ ಚಿತ್ರ/ ರಂಜು ಪಿ

ಮಧ್ಯಪ್ರದೇಶ: ಟ್ರ್ಯಾಕ್ಟರ್ ಟ್ರಾಲಿ ಉರುಳಿ 13 ಮಂದಿ ಸಾವು

ರಾಜಗಢ (ಪಿಟಿಐ): ಟ್ರಾಕ್ಟರ್ ಟ್ರಾಲಿಯೊಂದು ಮಗುಚಿಬಿದ್ದು 13 ಜನರು ಮೃತಪಟ್ಟು, ಸುಮಾರು 20 ಜನರು ಗಾಯಗೊಂಡಿರುವ ಘಟನೆ ಮಧ್ಯಪ್ರದೇಶದ ರಾಜಗಢ ಜಿಲ್ಲೆಯ ಪಿಪ್ಲೋಡಿಯಲ್ಲಿ ಭಾನುವಾರ ನಡೆದಿದೆ. ಚಾಲಕ ಮದ್ಯ ಸೇವಿಸಿದ್ದೇ ಈ ದುರ್ಘಟನೆಗೆ ಕಾರಣ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

‘ಮದುವೆ ಸಮಾರಂಭಕ್ಕೆ ಹೊರಟಿದ್ದ ಈ ಟ್ರ್ಯಾಕ್ಟರ್‌ನಲ್ಲಿ ಸುಮಾರು 35 ಜನರಿದ್ದರು. ಚಾಲಕನು ಸಂತ್ರಸ್ತರ ಸಂಬಂಧಿ. ರಾಜಸ್ಥಾನದಿಂದ ಟ್ರ್ಯಾಕ್ಟರ್ ಹೊರಡುವುಕ್ಕೂ ಮೊದಲು ಆತ ಮದ್ಯ ಸೇವಿಸಿದ್ದ ಎಂದು ಘಟನೆಯಲ್ಲಿ ಬದುಕಿಳಿದ ಮಹಿಳೆಯೊಬ್ಬರು ಹೇಳಿದ್ದಾರೆ. ಚಾಲಕನ ವಿರುದ್ಧ ದಂಡಾರ್ಹ ಕೊಲೆ ಪ್ರಕರಣ ದಾಖಲಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಮೃತರಲ್ಲಿ ಐವರು ಮಹಿಳೆಯರು ಮತ್ತು ಹಲವು ಮಕ್ಕಳಿದ್ದಾರೆ. ಗಾಯ-ಗೊಂಡಿರುವವರ ಪೈಕಿ 16 ಮಂದಿಯನ್ನು ಜಿಲ್ಲಾ ಆಸ್ಪತ್ರೆಗೆ ದಾಖಲಿಸಲಾಗಿದೆ. ನಾಲ್ವರಿಗೆ ಭೋಪಾಲ್‌ನ ಆಸ್ಪತ್ರೆಯಲ್ಲಿ ಚಿಕಿತ್ಸೆ ಕೊಡಿಸಲಾಗುತ್ತಿದೆ’ ಎಂದು ಪೊಲೀಸರು ತಿಳಿಸಿದರು.

ಪೋಶೆ ಕಾರು ಅಪಘಾತ ವರದಿ ಸಲ್ಲಿಸಿದ ಆರ್‌ಟಿಒ

ಪುಣೆ(ಪಿಟಿಐ): ನಗರದಲ್ಲಿ ನಡೆದಿರುವ ಪೋಶೆ ಕಾರು ಅಪಘಾತ ಪ್ರಕರಣಕ್ಕೆ ಸಂಬಂಧಿಸಿದ ವರದಿಯನ್ನು ಸ್ಥಳೀಯ ಪ್ರಾದೇಶಿಕ ಸಾರಿಗೆ ಕಚೇರಿಯು (ಆರ್‌ಟಿಒ) ಪೊಲೀಸರಿಗೆ ಸಲ್ಲಿಸಿದೆ ಎಂದು ಅಧಿಕಾರಿಯೊಬ್ಬರು ಸೋಮವಾರ ತಿಳಿಸಿದ್ದಾರೆ.

‘ಪೋಶೆ ಕಾರು ಅಪಘಾತಕ್ಕೆ ಸಂಬಂಧಿಸಿದ ವರದಿಯನ್ನು ತನಿಖಾಧಿಕಾರಿಗಳಿಗೆ ನೀಡಿದ್ದೇವೆ’ ಎಂದು ಪುಣೆ ಪ್ರಾದೇಶಿಕ ಸಾರಿಗೆ ಅಧಿಕಾರಿ ಸಂಜೀವ್ ಭೋರ್ ಹೇಳಿದ್ದಾರೆ.

ಬೆಂಗಳೂರು ಮೂಲದ ಡೀಲರ್‌ವೊಬ್ಬರು ಕಳೆದ ಮಾರ್ಚ್‌ನಲ್ಲಿ ಈ ಐಶಾರಾಮಿ ಪೋಶೆ ಟೈಕಾನ್ ಎಲೆಕ್ಟ್ರಿಕ್ ಕಾರನ್ನು ಆಮದು ಮಾಡಿಕೊಂಡಿದ್ದರು. ಬಳಿಕ ಮಹಾರಾಷ್ಟ್ರದಲ್ಲಿ ತಾತ್ಕಾಲಿಕ ನೋಂದಣಿ ಮಾಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಅಲ್ಲದೆ, ಪೋಶೆ ಕಂಪನಿಯ ಪ್ರತಿನಿಧಿಗಳು ಕಾರಿನ ತಪಾಸಣೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

‘ಮೇ 19ರ ನಸುಕಿನಲ್ಲಿ ಇಲ್ಲಿನ ಕಲ್ಯಾಣ ನಗರ ಪ್ರದೇಶದಲ್ಲಿ 17 ವರ್ಷದ ಬಾಲಕನೊಬ್ಬ ಪೋಶೆ ಕಾರನ್ನು ಅತಿವೇಗದಿಂದ ಚಲಾಯಿಸುತ್ತಿದ್ದಾಗ ನಡೆದ ಅಪಘಾತದಲ್ಲಿ ಇಬ್ಬರು ಐಟಿ ಉದ್ಯೋಗಿಗಳು ಮೃತಪಟ್ಟಿದ್ದರು. ಅಪಘಾತ ನಡೆದ ಸಂದರ್ಭದಲ್ಲಿ, ಬಾಲಕ ಮದ್ಯಪಾನ ಮಾಡಿದ್ದ’ ಎಂದು ಪೊಲೀಸರು ಹೇಳಿದ್ದಾರೆ.

ದೇವಾಲಯಕ್ಕೆ ನುಗ್ಗಿದ ರೋಡ್ ರೋಲರ್!

ದೊಡ್ಡಬಳ್ಳಾಪುರ: ನಗರದ ತೇರಿನ ಬೀದಿಯ ಶ್ರೀಕಂಠೇಶ್ವರ ದೇವಾಲಯ ಬಳಿ ಸೋಮವಾರ ಲಾರಿ ಹಿಂದಿನಿಂದ ಡಿಕ್ಕಿ ಹೊಡೆದ ಪರಿಣಾಮ ರೋಡ್ ರೋಲರ್‌ವೊಂದು ದೇವಾಲಯಕ್ಕೆ ನುಗ್ಗಿದೆ. ನಗರದ ಮುಖ್ಯರಸ್ತೆಯಲ್ಲಿ ರಸ್ತೆ ಡಾಂಬರೀಕರಣ ನಡೆಯುತ್ತಿದೆ. ಇದಕ್ಕಾಗಿ ರಾತ್ರಿಯೇ ರಸ್ತೆ ಬದಿ ರೋಡ್ ರೋಲರ್ ನಿಲ್ಲಿಸಲಾಗಿತ್ತು.

ಸಂಕ್ಷಿಪ್ತ ಸುದ್ದಿ

ಇ–ಸಿಗರೇಟ್ ಮಾರಾಟ: ವ್ಯವಸ್ಥಾಪಕ ಸೆರೆ

ಬೆಂಗಳೂರು: ಇ–ಸಿಗರೇಟ್ ಹಾಗೂ ವಿವಿಧ ದ್ರಾವಣಗಳನ್ನು ಅಕ್ರಮವಾಗಿ ಮಾರುತ್ತಿದ್ದ ಆರೋಪದಡಿ ಎಂ.ಎಚ್. ಉಡುಗೊರೆ ಮಳಿಗೆಯ ವ್ಯವಸ್ಥಾಪಕ ಮೊಹಮ್ಮದ್ ಸಾದಿಕ್ (32) ಸೇರಿ ಇಬ್ಬರನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

‘ಎಚ್‌ಎಎಲ್ 3ನೇ ಹಂತದ 80 ಅಡಿ ರಸ್ತೆಯಲ್ಲಿರುವ ಎಂ.ಎಚ್. ಉಡುಗೊರೆ ಮಳಿಗೆ ಮೇಲೆ ಮೇ 31ರಂದು ದಾಳಿ ಮಾಡಲಾಗಿತ್ತು. ಇ–ಸಿಗರೇಟ್ ಹಾಗೂ ವಿವಿಧ ದ್ರಾವಣಗಳ ಅಕ್ರಮ ಮಾರಾಟ ಪತ್ತೆಯಾಯಿತು’ ಎಂದು ಪೊಲೀಸರು ಹೇಳಿದರು.

‘ದಕ್ಷಿಣ ಕನ್ನಡ ಜಿಲ್ಲೆಯ ಸಾದಿಕ್, ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದ. ಉಡುಗೊರೆ ಮಳಿಗೆಯಲ್ಲಿ ಕೆಲಸ ಮಾಡುತ್ತಿದ್ದ. ಈತನನ್ನು ಬಂಧಿಸಲಾಗಿದೆ. ಮಳಿಗೆ ಮಾಲೀಕ ತಲೆಮರೆಸಿಕೊಂಡಿದ್ದಾನೆ’ ಎಂದು ತಿಳಿಸಿದರು. ಎಂದು ತಿಳಿಸಿದರು.

ಅಪಘಾತ: ಬಿ.ಇ ವಿದ್ಯಾರ್ಥಿ ಸಾವು

ಬೆಂಗಳೂರು: ಮತ್ತಿಕೆರೆ ಮುಖ್ಯರಸ್ತೆ-ಯಲ್ಲಿ ಭಾನುವಾರ ರಾತ್ರಿ ಅಪಘಾತ ಸಂಭವಿಸಿದ್ದು, ಬಿ.ಇ ವಿದ್ಯಾರ್ಥಿ ಕುವಲ್ ಕಿರಣ್ (22) ಎಂಬುವವರು ಮೃತಪಟ್ಟಿದ್ದಾರೆ.

‘ಮಹಾಲಕ್ಷ್ಮಿಪುರದ ಕುವಲ್, ನಗರದ ಕಾಲೇಜೊಂದರಲ್ಲಿ ವ್ಯಾಸಂಗ ಮಾಡುತ್ತಿದ್ದರು. ಅವರು ಬೈಕ್‌ನಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ಯಶವಂತಪುರ ಸಂಚಾರ ಪೊಲೀಸರು ಹೇಳಿದರು.

ಕುವಲ್ ಕಿರಣ್ ಅವರ ಬೈಕ್‌ಗೆ ಅಪರಿಚಿತ ವಾಹನವೊಂದು ಡಿಕ್ಕಿ ಹೊಡೆದಿದೆ. ಅಪಘಾತದ ಬಳಿಕ ವಾಹನ ಸಮೇತ ಚಾಲಕ ಪರಾರಿಯಾಗಿದ್ದಾನೆ. ಬೈಕ್ ಸಮೇತ ರಸ್ತೆಗೆ ಬಿದ್ದಿದ್ದ ಕುವಲ್ ತೀವ್ರ ಗಾಯಗೊಂಡು ಮೃತಪಟ್ಟಿದ್ದಾನೆ.

ವಾಹನ ಚಾಲಕನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಅಪಘಾತ ಸ್ಥಳ ಹಾಗೂ ಸುತ್ತಮು-ತ್ತಲಿನಲ್ಲಿರುವ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ. ಚಾಲಕರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ’

ಒಳ ಮೀಸಲಾತಿ: ಸಮಿತಿಗೆ ಒತ್ತಾಯ

ಮಡಿಕೇರಿ: ‘ಪರಿಶಿಷ್ಟ ಪಂಗಡಗಳಿಗೆ ಸರ್ಕಾರ ಒಳ ಮೀಸಲಾತಿ ನೀಡಲು ಸಮಿತಿಯೊಂದನ್ನು ತುರ್ತಾಗಿ ರಚಿಸ ಬೇಕು’ ಎಂದು ಚಲನಚಿತ್ರ ನಟ ಚೇತನ್ ಒತ್ತಾಯಿಸಿದರು.

‘ಕಾಂಗ್ರೆಸ್ ಪಕ್ಷಬಿಜೆಪಿಯನ್ನು ಮೀಸಲಾತಿ ವಿರೋಧಿ ಎಂದು ಟೀಕಿಸುತ್ತಲೇ ಅಧಿಕಾರಕ್ಕೆ ಬಂದಿತು’ ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಟೀಕಿಸಿದರು.

ಎತ್ತಿನಹೊಳೆ: ರೈಲು ಸಂಚಾರ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎತ್ತಿನಹೊಳೆ ನೀರಾವರಿ ಯೋಜನೆಗೆ ಸಂಬಂಧಿಸಿದಂತೆ ದೊಡ್ಡಬೆಲೆ ಮತ್ತು ಮುದ್ದಲಿಂಗನಹಳ್ಳಿ ನಿಲ್ದಾಣಗಳ ನಡುವೆ ತಾತ್ಕಾಲಿಕ ಗರ್ಡರ್ ಅಳವಡಿಕೆ ಕಾಮಗಾರಿ ನಡೆಸಲು ಈ ಮಾರ್ಗದಲ್ಲಿ ಸಂಚರಿಸುವ ಕೆಲವು ರೈಲುಗಳನ್ನು ಒಂದು ವಾರ ರದ್ದು ಮಾಡಲಾಗಿದೆ. ಕೆಲವು ರೈಲುಗಳು ಬೇರೆ ಮಾರ್ಗಗಳಲ್ಲಿ ಸಂಚರಿಸಲಿವೆ.

ತುಮಕೂರು–ಚಾಮರಾಜನಗರ ಪ್ರಯಾಣಿಕರ ರೈಲು, ಚಾಮರಾಜನಗರ–ಮೈಸೂರು ಪ್ರಯಾಣಿಕರ ರೈಲು, ಚಿಕ್ಕಮಗಳೂರು–ಯಶವಂತಪುರ ಎಕ್ಸ್‌ಪ್ರೆಸ್, ಯಶವಂತಪುರ–ಚಿಕ್ಕಮಗಳೂರು ಎಕ್ಸ್‌ಪ್ರೆಸ್ ರೈಲು, ತುಮಕೂರು-ಕೆಎಸ್‌ಆರ್ ಬೆಂಗಳೂರು ಮೆಮು, ಕೆಎಸ್‌ಆರ್ ಬೆಂಗಳೂರು-ತುಮಕೂರು ಮೆಮು ರೈಲುಗಳನ್ನು ಜೂನ್ 6ರಿಂದ 13ರವರೆಗೆ ರದ್ದು ಮಾಡಲಾಗಿದೆ.

ಜೂನ್ 6ರಿಂದ 13ರವರೆಗೆ ಕೆಎಸ್‌ಆರ್ ಬೆಂಗಳೂರು-ತುಮಕೂ-ರು ಮೆಮು ಮತ್ತು ತುಮಕೂರು-ಕೆಎ-ಸ್‌ಆರ್ ಬೆಂಗಳೂರು ಮೆಮು ರೈಲುಗಳು ಗೊಲ್ಲಹಳ್ಳಿ-ತುಮಕೂರು ಮಧ್ಯೆ ಭಾಗಶಃ ರದ್ದುಗೊಳಿಸಲಾಗಿದೆ. ತಾಳಗುಪ್ಪ-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ಮತ್ತು ಬೆಂಗಳೂರು-ಧಾರ-ವಾಡ ಎಕ್ಸ್‌ಪ್ರೆಸ್ ರೈಲು, ಧಾರವಾಡ-ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಸಂಚಾರ ಕೆಎಸ್‌ಆರ್ ಬೆಂಗ-ಳೂರು-ಅರಸಿಕೆರೆ ನಡುವೆ ಭಾಗಶಃ ರದ್ದು ಮಾಡಲಾಗಿದೆ. ಯಶವಂತ-ಪುರ-ಶಿವಮೊಗ್ಗ ಟೌನ್ ಎಕ್ಸ್‌ಪ್ರೆಸ್ ರೈಲು ಯಶವಂತಪುರ-ತುಮಕೂರು ಸಂಚಾರ ಇರುವುದಿಲ್ಲ. ಶಿವಮೊಗ್ಗ ಪಟ್ಟಣ-ತುಮ-ಕೂರು ಮೆಮು ರೈಲು ಗುಬ್ಬಿ-ತುಮಕೂ-ರು ನಡುವೆ ರದ್ದುಗೊಳಿಸಲಾಗಿದೆ.

ಜೂನ್ 4 ಮತ್ತು 11ರಂದು ಸಂಚರಿಸುವ ಬಿಕಾನೇರ್-ಯಶವಂತಪುರ್ ಎಕ್ಸ್‌ಪ್ರೆಸ್ ರೈಲು 1ಗಂಟೆ 55 ನಿಮಿಷ ತಡವಾಗಿ ಸಂಚರಿಸಲಿದೆ. ಜೂನ್ 6 ಮತ್ತು 13ರಂದು ಸಂಚರಿಸುವ ಯಶವಂತಪುರ–ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರೆಸ್ ರೈಲು 80 ನಿಮಿಷ ತಡವಾಗಲಿದೆ. ಕೆಎಸ್‌ಆರ್ ಬೆಂಗಳೂರು-ತಾಳಗುಪ್ಪ ಎಕ್ಸ್‌ಪ್ರೆಸ್ ರೈಲು 30 ನಿಮಿಷ, ಚಾಮರಾಜನಗರ-ತುಮ-ಕೂರು ಪ್ರಯಾಣಿಕರ ರೈಲು 2 ಗಂಟೆ ತಡವಾಗಲಿದೆ.

ಜೂನ್ 6 ಮತ್ತು 13ರಂದು ಸಂಚರಿಸುವ ಯಶವಂತಪುರ - ವಾಸ್ಕೋಡಗಾಮ ರಯಲು, ಜೂನ್ 12ರಂದು ಪ್ರಯಾಣಿಸುವ ತುಮ-ಕೂರು-ಬಾಣಸವಾಡಿ ರೈಲುಗಳು 60 ನಿಮಿಷ ತಡವಾಗಿ ಹೊರಡಲಿವೆ.

ಜೂನ್ 4 ಮತ್ತು 11ರಂದು ಸಂಚರಿಸುವ ಅಜ್ಮೀರ್-ಮೈಸೂರು ವಿಶೇಷ ರೈಲು ಅರಸೀಕೆರೆ, ಹಾಸನ, ನೆಲಮಂಗಲ, ಯಶವಂತಪುರ ಮೂಲಕ ಸಂಚರಿಸಲಿದ್ದು, ತುಮಕೂರು ನಿಲ್ದಾಣದ ನಿಲುಗಡೆಯನ್ನು ರದ್ದು ಮಾಡಲಾಗಿದೆ.

ಜೂನ್ 5 ಮತ್ತು 12ರಂದು ಸಂಚರಿಸುವ ವಾಸ್ಕೋ-ಡ-ಗಾಮಾ - ಯಶವಂತಪುರ ರೈಲು ಅರಸೀಕೆರೆ, ಹಾಸನ, ನೆಲಮಂಗಲ, ಯಶವಂತಪುರ ಮೂಲಕ ಸಂಚರಿಸಲಿದ್ದು, ತಿಪಟೂರು ಮತ್ತು ತುಮಕೂರು ರೈಲು ನಿಲ್ದಾಣಗಳಲ್ಲಿ ನಿಲುಗಡೆ ರದ್ದು ಮಾಡಲಾಗಿದೆ.

ಜೂನ್ 6 ಮತ್ತು 13ರಂದು ಸಂಚರಿಸುವ ಮೈಸೂರು-ವಾರಾಣಸಿ ರೈಲು, ಯಶವಂತಪುರ - ಜೈಪುರ ರೈಲು ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ ಮೂಲಕ ಸಂಚರಿಸಲಿದ್ದು, ತಿಪಟೂರು ನಿಲ್ದಾಣದಲ್ಲಿ ನಿಲುಗಡೆ ಇರುವುದಿಲ್ಲ.

ಮೈಸೂರು - ಉದಯಪುರ ನಗರ ರೈಲು ಕೆಎಸ್‌ಆರ್ ಬೆಂಗಳೂರು, ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ, ದಾವಣಗೆರೆ ಮೂಲಕ ಸಂಚರಿಸಲಿದೆ.

‘ಮೈಸೂರು - ಬೆಳಗಾವಿ ರೈಲು ಯಶವಂತಪುರ, ನೆಲಮಂಗಲ, ಹಾಸನ, ಅರಸೀಕೆರೆ ಮೂಲಕ ಸಂಚರಿಸಲಿದ್ದು, ತಿಪಟೂರು ಮತ್ತು ತುಮಕೂರು ನಿಲ್ದಾಣಗಳಲ್ಲಿ ನಿಲುಗಡೆ ಇರುವುದಿಲ್ಲ’ ಎಂದು ನೈರುತ್ಯ ರೈಲ್ವೆ ಮುಖ್ಯ ಸಾರ್ವಜನಿಕ ಸಂಪರ್ಕ ಅಧಿಕಾರಿ ಮಂಜುನಾಥ್ ಕನಮಡಿ ತಿಳಿಸಿದ್ದಾರೆ.

1. ವಿಜಯಪುರ ಜಿಲ್ಲೆಯ ತಾಳಿಕೋಟೆ ತಾಲ್ಲೂಕಿನ ಮೂಕಿಹಾಳ ಬಳಿಯ ಸೋಗಲಿ ಹಳ್ಳವು ಮಳೆಯಿಂದ ತುಂಬಿ ಸೇತುವೆ ಮೇಲೆ ಪ್ರವಾಹದ ನೀರು ಹರಿಯುತ್ತಿದ್ದು, ಸಂಪರ್ಕ ಕಡಿತಗೊಂಡಿದೆ 2. ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ಗೊಲ್ಲರಹಟ್ಟಿಯಲ್ಲಿ ಅಡಿಕೆ ತೋಟದ ತುಂಬೆಲ್ಲಾ ನೀರು 3. ಸೋಮವಾರ ಸುರಿದ ಮಳೆಯಿಂದಾಗಿ ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ಬಸ್ ನಿಲ್ದಾಣ ಜಲಾವೃತಗೊಂಡಿತು —ಪ್ರಜಾವಾಣಿ ಚಿತ್ರ

ತೋಟಗಳು ಜಲಾವೃತ ● ಬೀರಾವರದಲ್ಲಿ ಚೆಕ್‌ಡ್ಯಾಂ ಸಂಪೂರ್ಣ ಭರ್ತಿ ● ಉಕ್ಕಿದ ಡೋಣಿ ನದಿ

ಹಲವೆಡೆ ಅಬ್ಬರ, ಕೆಲವೆಡೆ ಜಿಟಿಜಿಟಿ ಮಳೆ

ಪ್ರಜಾವಾಣಿ ವಾರ್ತೆ

ಮೈಸೂರು/ಮಂಗಳೂರು: ಮೈಸೂರು, ಚಾಮರಾಜನಗರ ಹಾಗೂ ಹಾಸನ ಜಿಲ್ಲೆಯ ವಿವಿಧೆಡೆ ಸೋಮವಾರ ಮಳೆ ಸುರಿಯಿತು. ಕೊಡಗು ಮತ್ತು ಪುತ್ತೂರಿನಲ್ಲಿ ಭಾರಿ ಮಳೆಯಾಯಿತು. ಪುತ್ತೂರಿನ ದರ್ಬೆಯ ವಾಣಿಜ್ಯ ಮಳಿಗೆಗಳಿಗೆ ನೀರು ನುಗ್ಗಿತ್ತು.

ಮೈಸೂರು ಜಿಲ್ಲೆಯ ಬೆಟ್ಟದಪುರದಲ್ಲಿ ಗುಡುಗು ಸಹಿತ ಮಳೆಯಾಯಿತು. ಸಾಲಿಗ್ರಾಮ, ಜಯಪುರ, ಧರ್ಮಾಪುರ ಹೋಬಳಿ, ಪಿರಿಯಾಪಟ್ಟಣ, ಸರಗೂರು, ನಂಜನಗೂಡು, ತಲಕಾಡು, ಕೆ.ಆರ್. ನಗರ ಭಾಗದಲ್ಲಿ ಸಾಧಾರಣ ಮಳೆ ಸುರಿಯಿತು.

ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿ 45 ನಿಮಿಷಗಳಿಗೂ ಹೆಚ್ಚು ಕಾಲ ಭಾರಿ ವರ್ಷಧಾರೆಯಾಯಿತು. ನಂತರ ಜಿಟಿಜಿಟಿ ಮಳೆ ಬಿದ್ದಿತು. ಗೋಣಿಕೊಪ್ಪಲಿನಲ್ಲಿ ಜೋರು, ಸೋಮವಾರಪೇಟೆ ಹಾಗೂ ವಿರಾಜಪೇಟೆಯಲ್ಲಿ ಸಾಧಾರಣ ಮಳೆಯಾಯಿತು.

ಹಾಸನ ನಗರ, ಜಿಲ್ಲೆಯ ಶ್ರವಣಬೆಳಗೊಳ, ಹಳೇಬೀಡು, ಹಿರೀಸಾವೆ, ಆಲೂರು, ಅರಕಲಗೂಡಿನಲ್ಲಿ ಸಾಧಾರಣ ಮಳೆ ಬಿದ್ದಿತು.

ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಮಧ್ಯಾಹ್ನದ ಬಳಿಕ ಬಿರುಸಿನ ಮಳೆಯಾಗಿದ್ದರೆ, ಯಳಂದೂರು, ಕೊಳ್ಳೇಗಾಲ,ಹನೂರು ತಾಲ್ಲೂಕು ವ್ಯಾಪ್ತಿಯಲ್ಲಿ ಸಾಧಾರಣ ವರ್ಷಧಾರೆಯಾಗಿದೆ.

ಚಿಕ್ಕಮಗಳೂರು ವರದಿ: ಕಾಫಿನಾಡು ಚಿಕ್ಕಮಗಳೂರು ಜಿಲ್ಲೆಯಲ್ಲಿ ಮಳೆ ಆರಂಭವಾಗಿದ್ದು, ಭಾನುವಾರ ಮಧ್ಯಾಹ್ನದಿಂದ ಅಲ್ಲಲ್ಲಿ ಉತ್ತಮವಾಗಿ ಮಳೆ ಸುರಿಯಿತು.

ಮೂಡಿಗೆರೆ, ಕೊಪ್ಪ, ಆಲ್ದೂರು, ಎನ್.ಆರ್.ಪುರ, ಬಾಳೆಹೊನ್ನೂರು, ಚಿಕ್ಕಮಗಳೂರು ಸೇರಿ ಮಲೆನಾಡು ಭಾಗದಲ್ಲಿ ಮಳೆಯಾಗಿದೆ. ಕೆಲವೆಡೆ ಧಾರಾಕಾರವಾಗಿ ಸುರಿದಿದ್ದರೆ, ಇನ್ನೂ ಹಲವೆಡೆ ಜಡಿ ಮಳೆ ಸುರಿಯಿತು.

ದಕ್ಷಿಣ ಕನ್ನಡ ಜಿಲ್ಲೆಯ ವಿವಿಧೆಡೆ ಸಾಧಾರಣ ಮಳೆಯಾಯಿತು. ಬಂಟ್ವಾಳ ತಾಲ್ಲೂಕಿನ ಕೊಡಂಬೆಟ್ಟು ಗ್ರಾಮದ ಸುಬ್ಬೊಟ್ಟು ಮತ್ತು ರಾಮಯ್ಯ ಗುರಿ ಎಂಬಲ್ಲಿ ಸಿಡಿಲು ಬಡಿದು ಸುಬ್ಬೊಟ್ಟು ನಿವಾಸಿ ಅನಿತಾ ಗಿರೀಶ ಪೂಜಾರಿ ಮತ್ತು ರಾಮಯ್ಯ ಗುರಿ ನಿವಾಸಿ ಲೀಲಾವತಿ ಸಿಂಗ ಗಾಯಗೊಂಡಿದ್ದಾರೆ. ಅವರನ್ನು ಬಂಟ್ವಾಳ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಳ್ಳಾರಿ ಜಿಲ್ಲೆ ತೋರಣಗಲ್ ಹೋಬಳಿಯ ಯು.ರಾಜಾಪುರ ಮತ್ತು ಮೆಟ್ರಿಕಿ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆಯ ಸೇತುವೆ ಮಳೆಯಿಂದ ಕೊಚ್ಚಿ ಹೋಗಿದೆ

ಮುಖ್ಯಾಂಶಗಳು

- ಕೊಡಗು, ಪುತ್ತೂರಿನಲ್ಲಿ ಭಾರಿ ಮಳೆ
- ಕೆಲವೆಡೆ ಹೊಲಗಳು ಜಲಾವೃತ
- ಚುರುಕುಗೊಂಡ ಕೃಷಿ ಚಟುವಟಿಕೆ

ದೊಡ್ಡಕೆರೆಗೆ ನೀರು: ಚಿತ್ರದುರ್ಗ ಜಿಲ್ಲೆಯಲ್ಲಿ ದೊಡ್ಡಕೆರೆಗೆ ಅಲ್ಪ ಪ್ರಮಾಣದಲ್ಲಿ ನೀರು ಹರಿದಿದೆ. ಚಿತ್ರದುರ್ಗ ತಾಲ್ಲೂಕಿನ ಭರಮಸಾಗರ ವ್ಯಾಪ್ತಿಯಲ್ಲಿ ಚೆಕ್‌ಡ್ಯಾಮ್‌ಗಳು ಭರ್ತಿಯಾಗಿವೆ. ಚಿತ್ರದುರ್ಗ ತಾಲ್ಲೂಕಿನ ಬೀರಾವರದಲ್ಲಿ ಚೆಕ್‌ಡ್ಯಾಂ ಸಂಪೂರ್ಣ ಭರ್ತಿಯಾಗಿದೆ. ಹೊಲಗಳಲ್ಲಿ ನೀರು ನಿಂತಿದೆ. ಸಿರಿಗೆರೆ ಸುತ್ತಲಿನ ತೋಟಗಳು ಜಲಾವೃತಗೊಂಡಿವೆ. ಮೊಳಕಾಲ್ಮುರು ತಾಲ್ಲೂಕಿನ ರಾಂಪುರ ಸಮೀಪದ ಜೆ.ಬಿ. ಹಳ್ಳಿಯಲ್ಲಿ ಹತ್ತಿ, ಬಾಳೆ ಬೆಳೆಗೆ ಹಾನಿಯಾಗಿದೆ. ಹಿರಿಯೂರಿನಲ್ಲಿ 6 ಸೆಂ.ಮೀ. ಮಳೆ ದಾಖಲಾಗಿದೆ.

ಶಿವಮೊಗ್ಗ ವರದಿ: ಜಿಲ್ಲೆಯ ವಿವಿಧೆಡೆ ಸೋಮವಾರ ಮೋಡ ಕವಿದ ವಾತಾವರಣವಿದ್ದು, ಸಾಗರ ತಾಲ್ಲೂಕಿನಲ್ಲಿ ಮಳೆಯಾಗಿದೆ.

ದಾವಣಗೆರೆ ವರದಿ: ಜಿಲ್ಲೆಯ ಕೆಲವೆಡೆ ಭಾನುವಾರ ತಡರಾತ್ರಿ ಬಿರುಸಿನ ಮಳೆ ಸುರಿದಿದ್ದು ಮಾಯಕೊಂಡ, ಮಲೇಬೆನ್ನೂರು, ಹರಿಹರ ಭಾಗದಲ್ಲಿ ಬಿರುಸಿನ ಮಳೆಯಾಗಿದೆ.

ಕಲಬುರಗಿ ವರದಿ: ಕಲ್ಯಾಣ ಕರ್ನಾಟಕ ಭಾಗದ ಕಲಬುರಗಿ, ಕೊಪ್ಪಳ, ಬೀದರ್, ರಾಯಚೂರು ಹಾಗೂ ಯಾದಗಿರಿ ಜಿಲ್ಲೆಗಳಲ್ಲಿ ಉತ್ತಮವಾಗಿ ಮಳೆ ಸುರಿದಿದೆ. ಬೆಳಿಗ್ಗೆ ಜಿಟಿಜಿಟಿ ಮಳೆಯಾಗಿದ್ದರಿಂದ ವಾತಾವರಣ ತಂಪಾಗಿದೆ.

ಭಾನುವಾರ ರಾತ್ರಿಯಿಂದ ಸೋಮವಾರದ ಬೆಳಗಿನ ಜಾವದ ತನಕ ಕೊಪ್ಪಳ ಜಿಲ್ಲೆಯಾದ್ಯಂತ ಉತ್ತಮ ಮಳೆಯಾಗಿದ್ದು ಹಳ್ಳಕೊಳ್ಳಗಳು ತುಂಬಿ ಹರಿದಿವೆ. ಇದರಿಂದ ಕೃಷಿ ಚಟುವಟಿಕೆಗಳೂ ಚುರುಕು ಪಡೆದುಕೊಂಡಿವೆ.

ರಾಯಚೂರು ಜಿಲ್ಲೆಯಾದ್ಯಂತ ಭಾನುವಾರ ತಡ ರಾತ್ರಿಯಿಂದ ಸೋಮವಾರ ಬೆಳಿಗ್ಗೆ 8 ಗಂಟೆಯವರೆಗೂ ಜಿಟಿಜಿಟಿ ಮಳೆಯಾಗಿದೆ.

ನಗರದ ಹೊರ ವಲಯದಲ್ಲಿರುವ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆವರಣ ಹಾಗೂ ಲಿಂಗಸುಗೂರ ಪಟ್ಟಣದಲ್ಲಿ 34.4 ಮಿ.ಮೀ. ಮಳೆ ದಾಖಲಾಗಿದೆ. ಈಶಾನ್ಯ ಪದವೀಧರ ಮತಕ್ಷೇತ್ರದ ಮತಗಟ್ಟೆಗಳಲ್ಲಿ ಬೆಳಿಗ್ಗೆ ಮಳೆಯಿಂದಾಗಿ ಮತದಾರರ ಸಂಖ್ಯೆ ವಿರಳವಾಗಿತ್ತು. ಮಧ್ಯಾಹ್ನ ಮಳೆ ನಿಂತ ಮೇಲೆ ಬಿರುಸಿನ ಮತದಾನ ನಡೆಯಿತು.

ಸಿಂಧನೂರು, ಮಾನ್ವಿ, ದೇವದುರ್ಗ, ಕವಿತಾಳ, ಲಿಂಗಸುಗೂರು, ಮುದಗಲ್, ಜಾಲಹಳ್ಳಿ, ತುರ್ವಿಹಾಳದಲ್ಲಿ ಸಾಧಾರಣ ಮಳೆಯಾಗಿದೆ. ರಾತ್ರಿಯಿಡೀ ಜಿಟಿಜಿಟಿ ಮಳೆ ಸುರಿಯುತ್ತಿದ್ದರೂ ಧಗೆ ಕಡಿಮೆಯಾಗಿಲ್ಲ.

ಬೀದರ್ ನಗರ ಸೇರಿದಂತೆ ಜಿಲ್ಲೆಯ ಬಹುತೇಕ ಕಡೆಗಳಲ್ಲಿ ಭಾನುವಾರ ರಾತ್ರಿಯಿಂದ ಸೋಮವಾರ ಬೆಳಗಿನವರೆಗೆ ಧಾರಾಕಾರ ಮಳೆಯಾಗಿದೆ.

ವಿಜಯಪುರ ಜಿಲ್ಲೆ ಹರನಾಳದಲ್ಲಿ 12.2 ಸೆಂ.ಮೀ ಮಳೆ

ಹುಬ್ಬಳ್ಳಿ: ವಿಜಯಪುರ, ಬಾಗಲಕೋಟೆ, ಉತ್ತರ ಕನ್ನಡ, ಗದಗ, ಬಳ್ಳಾರಿ, ವಿಜಯನಗರ ಜಿಲ್ಲೆ ಸೇರಿ ವಿವಿಧೆಡೆ ಭಾನುವಾರ ರಾತ್ರಿಯಿಂದ ಸೋಮವಾರ ಬೆಳಿಗ್ಗೆಯವರೆಗೆ ಧಾರಾಕಾರ ಮಳೆಯಾಯಿತು.

ವಿಜಯಪುರ ಜಿಲ್ಲೆಯ ಹರನಾಳದಲ್ಲಿ 12.2 ಸೆಂ.ಮೀ ಭಾರಿ ಮಳೆಯಾಗಿದೆ. ವಿಜಯಪುರದಲ್ಲಿ ಡೋಣಿ ನದಿ ಸೇರಿ ಹಳ್ಳ, ಕೊಳ್ಳಗಳು ಉಕ್ಕಿ ಹರಿದಿವೆ. ಹದ ಮಳೆ ಆಗಿರುವುದರಿಂದ ಮುಂಗಾರು ಕೃಷಿ ಚಟುವಟಿಕೆಗಳಿಗೆ ಅನುಕೂಲವಾಗಿದೆ.

ವಿಜಯಪುರ, ಬಾಗಲಕೋಟೆ ಜಿಲ್ಲೆಯ ಹಲವೆಡೆ ರಸ್ತೆ, ಸೇತುವೆಗಳು ಕೊಚ್ಚಿ ಹೋದರೆ, ಕೆಲವೆಡೆ ಶಾಲಾ ಆವರಣ ಜಲಾವೃತವಾಯಿತು. ಹುನಗುಂದ–ಕರಡಿ ರಾಜ್ಯ ಹೆದ್ದಾರಿ ಸೇತುವೆ ಮೇಲೆ ನೀರು ಹರಿದು ಆರು ತಾಸು ವಾಹನ ಸಂಚಾರ ಬಂದ್ ಆಗಿತ್ತು. ತಾಳಿಕೋಟೆ ತಾಲ್ಲೂಕಿನ ಮೂಕಿಹಾಳ ಬಳಿಯ ಸೋಗಲಿ ಹಳ್ಳವು ಮಳೆಯಿಂದ ತುಂಬಿ ಸೇತುವೆ ಮೇಲೆ ಪ್ರವಾಹದ ನೀರು ಹರಿಯುತ್ತಿದ್ದು, ಸಂಪರ್ಕ ಕಡಿತವಾಗಿದೆ.

ತಾಳಿಕೋಟೆ ಹತ್ತಿರ ಹರಿಯುವ ಡೋಣಿ ನದಿಗೆ ಅಡ್ಡಲಾಗಿ ನಿರ್ಮಿಸಲಾದ ಸೇತುವೆ ಪ್ರವಾಹದಿಂದ ಮುಳುಗುವ ಹಂತ ತಲುಪಿತ್ತು. ಮುದ್ದೇಬಿಹಾಳ ತಾಲ್ಲೂಕಿನ ಅಡವಿ ಹುಲಗಬಾಳ ತಾಂಡಾದ ಸೇತುವೆ ಮಳೆಗೆ ಕೊಚ್ಚಿ ಹೋಗಿದೆ.

ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಸೇರಿದಂತೆ ವಿವಿಧೆಡೆ ಹಾಗೂ ಬೆಳಗಾವಿ ನಗರ ಸೇರಿದಂತೆ ಜಿಲ್ಲೆಯ ಹಲವೆಡೆ ಸೋಮವಾರ ಧಾರಾಕಾರ ಮಳೆಯಾಯಿತು.

ವಿಜಯನಗರ ಜಿಲ್ಲೆಯ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ಬ್ಯಾಲಹಾಳು, ಹನಸಿ ಮತ್ತು ಚಿಲಗೋಡು ಕೆರೆಗಳಿಗೆ ನೀರು ಹರಿದುಬಂದಿದೆ. ಬಳ್ಳಾರಿ ಜಿಲ್ಲೆಯ ತೋರಣಗಲ್ ಹೋಬಳಿಯ ಯು.ರಾಜಾಪುರ ಮತ್ತು ಮೆಟ್ರಿಕಿ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಪ್ರಮುಖ ರಸ್ತೆಯ ಸೇತುವೆ ಕೊಚ್ಚಿಹೋಗಿದ್ದು, ಸಂಚಾರ ಸಂಪೂರ್ಣ ಬಂದ್ ಆಗಿದೆ. ರಾಜಾಪುರ, ಉಬ್ಬಳಗಂಡಿ ಕೆರೆರಾಂಪುರ ಗ್ರಾಮಗಳಲ್ಲಿ ಕಲಾ ಒಂದರಂತೆ ಒಟ್ಟು ಮೂರು ಮನೆಗಳಿಗೆ ಹಾನಿಯಾಗಿದೆ.

ಬಡಿಲ ಹುಸೈನ್, ಮೈಮುನಾಗೆ ವರ್ಷದ ಬ್ಯಾರಿ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಮೈಮುನಾ

ಬಡಿಲ ಹುಸೈನ್

ಮಂಗಳೂರು: ರಾಜ್ಯದ ನವಸಾಕ್ಷರ ಆಂದೋಲನದಲ್ಲಿ ಸಕ್ರಿಯ ಪಾತ್ರ ವಹಿಸಿರುವ, ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತ ಬಡಿಲ ಹುಸೈನ್ ಅವರು 2024ನೇ ಸಾಲಿನ 'ವರ್ಷದ ಬ್ಯಾರಿ' ಹಾಗೂ 75ಕ್ಕೂ ಹೆಚ್ಚು ಹಸುಗಳನ್ನು ಸಾಕಿ ಯಶಸ್ವಿ ಹೈನೋದ್ಯಮಿಯಾಗಿರುವ ಹರೇಕಳದ ಮೈಮುನಾ-ಮರ್ಜೀನ ಅವರು 'ವರ್ಷದ ಬ್ಯಾರ್ದಿ' ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

ಪ್ರಶಸ್ತಿಯು ₹50 ಸಾವಿರ ನಗದು, ಪ್ರಶಸ್ತಿ ಫಲಕ, ಸನ್ಮಾನ ಪತ್ರವನ್ನು ಒಳಗೊಂಡಿದೆ. ಜೂನ್ 9ರಂದು ಬೆಂಗಳೂರಿನ ಎಚ್‌ಬಿಆರ್ ಲೇಔಟ್‌ನಲ್ಲಿರುವ ಬ್ಯಾರೀಸ್ ಸೌಹಾರ್ದ ಭವನದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ ಎಂದು ಬೆಂಗಳೂರಿನ ಬ್ಯಾರೀಸ್ ವೆಲ್ ಫೇರ್ ಅಸೋಸಿಯೇಶನ್ ಅಧ್ಯಕ್ಷರಾಗಿರುವ ವಿಧಾನ ಪರಿಷತ್ ಸದಸ್ಯ ಬಿ.ಎಂ.ಫಾರೂಕ್ ತಿಳಿಸಿದ್ದಾರೆ.

ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್, ಸಚಿವರಾದ ಕೆ.ಜೆ.ಜಾರ್ಜ್, ಡಾ.ಎಂ.ಸಿ.ಸುಧಾಕರ್, ಬಿಡಿಎ ಅಧ್ಯಕ್ಷ, ಶಾಸಕ ಎನ್.ಎ.ಹ್ಯಾರಿಸ್ ಪ್ರಶಸ್ತಿ ಪ್ರದಾನ ಮಾಡುವರು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಆಳ್ವಾಸ್ ಉದ್ಯೋಗ ಮೇಳ 20 ಸಾವಿರ ಹುದ್ದೆಗಳು ಲಭ್ಯ

ಪ್ರಜಾವಾಣಿ ವಾರ್ತೆ

ಮಂಗಳೂರು: ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆಯ ಆವರಣದಲ್ಲಿ-ಇದೇ 7 ಮತ್ತು 8ರಂದು ಆಳ್ವಾಸ್–ಪ್ರಗತಿ ಉದ್ಯೋಗ ಮೇಳ ನಡೆಯಲಿದೆ. ಈ ವರೆಗೆ 254 ಕಂಪನಿಗಳು ನೋಂದಣಿ ಮಾಡಿಕೊಂಡಿದ್ದು, 20,043 ಉದ್ಯೋಗಾವಕಾಶ ಲಭ್ಯ ಎಂದು ಆಳ್ವಾಸ್ ಶಿಕ್ಷಣ ಪ್ರತಿಷ್ಠಾನದ ಅಧ್ಯಕ್ಷ ಡಾ.ಮೋಹನ ಆಳ್ವ ತಿಳಿಸಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ದೇಶದ ಯಾವುದೇ ಭಾಗದ ಜನರು ಉದ್ಯೋಗ ಮೇಳದಲ್ಲಿ ಪಾಲ್ಗೊಳ್ಳಬಹುದಾಗಿದ್ದು, ಅಗತ್ಯ ಇರುವವರಿಗೆ 6ರಿಂದ ವಸತಿ ವ್ಯವಸ್ಥೆ ಮಾಡಲಾಗುವುದು ಎಂದರು.

ಈ ಬಾರಿ ಐ.ಟಿ ವಲಯದಲ್ಲಿ 207 ಸಾಫ್ಟ್‌ವೇರ್ ಎಂಜಿನಿಯರ್ ಸೇರಿದಂತೆ 20 ಕಂಪನಿಗಳಲ್ಲಿ 843 ಉದ್ಯೋಗಾವಕಾಶಗಳು ಇವೆ. ಫ್ಲಿಪ್ ಕಾರ್ಟ್ ಕಂಪನಿ ಎಂಬಿಎ ಹಾಗೂ ಬಿಇ ಪದವೀಧರರನ್ನು ನೇಮಕ ಮಾಡಿಕೊಳ್ಳಲಿದೆ. ಉತ್ಪಾದನಾ ವಲಯದಲ್ಲಿ 7000ಕ್ಕೂ ಹೆಚ್ಚು ಉದ್ಯೋಗಾವಕಾಶ ಇದೆ. ಬ್ಯಾಂಕಿಂಗ್, ಹಣಕಾಸು ಮತ್ತು ವಿಮೆ ವಲಯದಲ್ಲಿ 2300 ಹುದ್ದೆಗಳು ಇದ್ದು ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ 400ಕ್ಕೂ ಹೆಚ್ಚು ಉದ್ಯೋಗ ಲಭ್ಯವಿದೆ ಎಂದರು.

ಐಟಿಇಎಸ್ ವಲಯದಲ್ಲಿ 4 ಸಾವಿರಕ್ಕೂ ಹೆಚ್ಚು ಹುದ್ದೆಗಳ ಪೈಕಿ 1000ಕ್ಕೂ ಅಧಿಕ ಹುದ್ದೆ ಪಿಯುಸಿ ಅಭ್ಯರ್ಥಿಗಳಿಗೆಸಿಗಲಿವೆ.ಫಾರ್ಮಾಕಂಪನಿಗಳು 700ಕ್ಕೂ ಅಧಿಕ ಉದ್ಯೋಗ ನೀಡಲಿವೆ. ಆರೋಗ್ಯ ವಲಯದ 24 ಸಂಸ್ಥೆಗಳಲ್ಲಿ ಸಾವಿರಕ್ಕೂ ಅಧಿಕ ಉದ್ಯೋಗ, ಮಾರಾಟ ವಲಯದಲ್ಲಿ 3300ಕ್ಕೂ ಅಧಿಕ ಉದ್ಯೋಗ ಸಿಗಲಿದೆ ಎಂದರು.

ನೋಂದಣಿ ಮತ್ತು ಕಂಪನಿಗಳ ಮಾಹಿತಿಗೆ www.alvaspragati.comಗೆ ಭೇಟಿ ನೀಡುವಂತೆ ಅಥವಾ 9008907716/ 9663190590/ 7975223865/9741440490ಗೆ ಕರೆ ಮಾಡುವಂತೆ ತಿಳಿಸಿದ ಅವರು ನೋಂದಣಿಗಾಗಿ http://alvaspragati.com/candidatesregistrationPage ಬಳಸುವಂತೆ ಸೂಚಿಸಿದರು.

पंजाब नैशनल बैंक ...भरोसे का प्रतीक! punjab national bank ...the name you can BANK upon!

ಜೆಡ್‌ಒ: 6-1-73, 2ನೇ ಮಹಡಿ, ಸಯೀದ್ ಪ್ಲಾಜಾ, ಲಕಡಿ-ಕಾ-ಪೂಲ್, ಹೈದರಾಬಾದ್-04, ಫೋನ್: 040-24475118 ಇ-ಮೇಲ್ : zohydsec@pnb.co.in

ಅರ್ಜಿ ಆಹ್ವಾನ ಪ್ರಕಟಣೆ

ವಲಯ ಕಚೇರಿ ಹೈದರಾಬಾದ್ ಇವರು, ಕರ್ನಾಟಕ ರಾಜ್ಯದಲ್ಲಿನ ತಮ್ಮ ಶಾಖೆಗಳಿಗೆ/ಕಚೇರಿಗಳಿಗೆ ಎಎಂಸಿ ಮುಖಾಂತರ ಸಿಸಿಟಿವಿ ಸಿಸ್ಟಮ್ ಪೂರೈಕೆ, ಅಳವಡಿಕೆ, ಪರೀಕ್ಷೆ, ಸಿದ್ಧಪಡಿಸುವ (ಎಸ್‌ಐಟಿಸಿ) ಮತ್ತು ನಿರ್ವಹಣೆಗಾಗಿ ಎಸ್‌ಐಎಸ್ ನೇಮಕಾತಿಗಾಗಿ ಟೆಂಡರ್ ಆಹ್ವಾನಿಸಿದ್ದಾರೆ.

ಪಂಜಾಬ್ ನ್ಯಾಷನಲ್ ಬ್ಯಾಂಕ್ ಇವರು, ವಲಯ ಕಚೇರಿ ಹೈದರಾಬಾದ್ ಅಡಿಯಲ್ಲಿನ ಶಾಖೆಗಳು ಮತ್ತು ಕಚೇರಿಗಳಲ್ಲಿ ಎಸ್‌ಐಟಿಸಿ ಮತ್ತು ಈಗಾಗಲೇ ಅಸ್ತಿತ್ವದಲ್ಲಿರುವ ಸಿಸಿಟಿವಿ ಸಿಸ್ಟಮ್‌ಗಳ ನಿರ್ವಹಣೆ ಹಾಗೂ ನೂತನ ಸಿಸಿಟಿವಿ ಸಿಸ್ಟಮ್‌ಗಳ ಅಳವಡಿಕೆಗಾಗಿ ಎಸ್‌ಐಎಸ್ ನೇಮಕಾತಿಗೋಸ್ಕರ, ಅರ್ಹ ಎಸ್‌ಐಎಸ್‌'ಗಳಿಂದ ಮೊಹರಾದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ. ಓಇಎಂ ಮತ್ತು ಅವರ ಸಿಸಿಟಿವಿ ಉಪಕರಣಗಳನ್ನು ಈಗಾಗಲೇ ಬ್ಯಾಂಕ್‌ನಿಂದ ಎಂಪ್ಯಾನಲ್ ಮಾಡಿಕೊಳ್ಳಲಾಗಿದೆ (ಅನುಬಂಧ – 7 ಅಡಕಗೊಳಿಸಲಾಗಿದೆ).

ಅಧಿಕೃತರ ವರ್ತಕರಾದ (ಎಸ್‌ಐ) ಸಿಸ್ಟಮ್ ಇಂಟಿಗ್ರೇಟರ್ಸ್ (ಎಸ್‌ಐಎಸ್)/ಅಸಲಿ ಉಪಕರಣಗಳ ಉತ್ಪಾದಕರಾಗಿರುವ ಚಾನಲ್ ಪಾಲುದಾರ ಆಗಿರುವ (ಇಲ್ಲಿ ಇನ್ನುಮುಂದೆ ಓಇಎಂಎಸ್ ಎನ್ನಲಾಗುವ) ಮೆ. ಸಮೃದ್ಧಿ ಆಟೋಮೇಷನ್ ಪ್ರೈ. ಲಿ., (ಸ್ಪರ್ಶ್) ಮತ್ತು ಮೆ. ಆದ್ಯಾ ಇನ್ಫೋಟೆಕ್ ಲಿ., (ಸಿಪಿ ಪ್ಲಸ್) ಇವರನ್ನು, ಪಂಜಾಬ್ ನ್ಯಾಷನಲ್ ಬ್ಯಾಂಕ್‌ನ ಪ್ರಧಾನ ಕಚೇರಿಯಿಂದ ಈಗಾಗಲೇ ಎಂಪಾನೆಲ್ ಮಾಡಿಕೊಳ್ಳಲಾಗಿದೆ.

ಅರ್ಹತಾ ಮಾನದಂಡ (ಅನುಬಂಧ–1), ಷರತ್ತು ಮತ್ತು ನಿಬಂಧನೆಗಳು (ಅನುಬಂಧ–3), ಎಂಪಾನೆಲ್ಡ್ ಸಿಸಿಟಿವಿ ಉಪಕರಣ/ಸಲಕರಣೆ ಪ್ರದೇಶಗಳನ್ನು ಎಂಪಾನೆಲ್‌ಮೆಂಟ್ ದಾಖಲೆಯಲ್ಲಿ ಉಲ್ಲೇಖಿಸಲಾಗಿದೆ.

ಆಸಕ್ತಿಯುಳ್ಳ ಎಸ್‌ಐಎಸ್‌ಗಳು 18.06.2024 **ರಂದು** 16:00 **ಗಂಟೆಯೊಳಗೆ** ತಮ್ಮ ಅರ್ಜಿಯನ್ನು ನಿರ್ದಿಷ್ಟ ನಮೂನೆಯಲ್ಲಿ ಭರ್ತಿ ಮಾಡಿ ಅಗತ್ಯ ದಾಖಲಾತಿಗಳ ಸಮೇತ ಉಪ ವಲಯ ಮ್ಯಾನೇಜರ್, **ಪಂಜಾಬ್ ನ್ಯಾಷನಲ್ ಬ್ಯಾಂಕ್** ವಲಯ ಕಚೇರಿ, ಹೈದರಾಬಾದ್, 6–1–73, 2ನೇ ಮಹಡಿ, ಸಯೀದ್ ಪ್ಲಾಜಾ, ಲಕಡಿಕಾಪೂಲ್, ಹೈದರಾಬಾದ್ –500004 ವಿಳಾಸಕ್ಕೆ ಸಲ್ಲಿಸುವುದು.

ಟೆಂಡರ್ ಪತ್ರಗಳನ್ನು ನಮ್ಮ https://www.pnbindia.in ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ದಿನಾಂಕ: 04.06.2024 ಸ್ಥಳ: ಹೈದರಾಬಾದ್ ಉಪ ಪ್ರಧಾನ ವ್ಯವಸ್ಥಾಪಕರು



ವಿಧಾನ ಪರಿಷತ್ ಚುನಾವಣೆ: ಕಾಂಗ್ರೆಸ್‌ನ 7, ಬಿಜೆಪಿಯ 3, ಜೆಡಿಎಸ್‌ನ 1 ಅಭ್ಯರ್ಥಿಗಳ ನಾಮಪತ್ರ

11 ಮಂದಿ ಅವಿರೋಧ ಆಯ್ಕೆ ಖಚಿತ

ಪ್ರಜಾವಾಣಿ ವಾರ್ತೆ

ಕಾಂಗ್ರೆಸ್ ಅಭ್ಯರ್ಥಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್

ನಾಮಪತ್ರ ಸಲ್ಲಿಸಿದ ಬಳಿಕ ಬಿಜೆಪಿ ಅಭ್ಯರ್ಥಿಗಳಿಗೆ ಅಭಿನಂದಿಸಿದ ಬಿ.ವೈ.ವಿಜಯೇಂದ್ರ ಮತ್ತು ಆರ್.ಅಶೋಕ

ಬೆಂಗಳೂರು: ವಿಧಾನಸಭೆಯಿಂದ ವಿಧಾನಪರಿಷತ್ತಿನ 11 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳು ಸೋಮವಾರ ನಾಮಪತ್ರ ಸಲ್ಲಿಸಿದ್ದು, ಎಲ್ಲರೂ ಅವಿರೋಧವಾಗಿ ಆಯ್ಕೆಯಾಗುವುದು ಬಹುತೇಕ ಖಚಿತವಾಗಿದೆ.

ನಾಮಪತ್ರ ಸಲ್ಲಿಕೆ ಕಡೆಯ ದಿನವಾಗಿದ್ದ ಸೋಮವಾರ ಕಾಂಗ್ರೆಸ್‌ನ ಏಳು, ಬಿಜೆಪಿಯ ಮೂವರು ಮತ್ತು ಜೆಡಿಎಸ್‌ನ ಒಬ್ಬ ಅಭ್ಯರ್ಥಿ ನಾಮಪತ್ರ ಸಲ್ಲಿಸಿದರು. ಮಂಗಳವಾರ (ಜೂ.4) ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ನಾಮಪತ್ರ ಹಿಂಪಡೆಯಲು ಗುರುವಾರ (ಜೂ.6) ಕೊನೆ ದಿನ. ಯಾರೂ ನಾಮಪತ್ರ ಹಿಂದಕ್ಕೆ ಪಡೆಯದಿದ್ದರೆ, ಎಲ್ಲರನ್ನೂ ಅವಿರೋಧ ಆಯ್ಕೆ ಎಂದು ಘೋಷಿಸಲಾಗುವುದು.

ಕಾಂಗ್ರೆಸ್‌ನಿಂದ ಡಾ. ಯತೀಂದ್ರ, ಎನ್.ಎಸ್. ಬೋಸರಾಜು, ಕೆ. ಗೋವಿಂದರಾಜ್, ಬಿಲ್ಕಿಸ್ ಬಾನು, ಐವನ್ ಡಿಸೋಜ, ಎ. ವಸಂತ ಕುಮಾರ್, ಜಗದೇವ್ ಗುತ್ತೇದಾರ್, ಬಿಜೆಪಿಯಿಂದ ಸಿ.ಟಿ. ರವಿ, ಎನ್. ರವಿಕುಮಾರ್ ಮತ್ತು ಎಂ.ಜಿ. ಮುಳೆ ಹಾಗೂ ಜೆಡಿಎಸ್‌ನಿಂದ ಟಿ.ಎನ್. ಜವರಾಯಿಗೌಡ ಅವರು ನಾಮಪತ್ರ ಸಲ್ಲಿಸಿದರು.

'11 ಅಭ್ಯರ್ಥಿಗಳಿಂದ ಒಟ್ಟು 26 ನಾಮಪತ್ರಗಳು ಸಲ್ಲಿಕೆಯಾಗಿವೆ. ನಾಮಪತ್ರದ ಆರಂಭದ ದಿನದಿಂದ 12 ಅಭ್ಯರ್ಥಿಗಳಿಂದ 27 ನಾಮಪತ್ರಗಳು ಸಲ್ಲಿಕೆಯಾಗಿವೆ. ಮೇ 31ರಂದು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಆರ್.ಎಂ.ಆಸಿಫ್ ಪಾಷಾ ಅವರು ಒಂದು ನಾಮಪತ್ರ ಸಲ್ಲಿಸಿದ್ದರು' ಎಂದು ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ತಿಳಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವ ವೇಳೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಬಿಜೆಪಿ ಅಭ್ಯರ್ಥಿಗಳು ನಾಮಪತ್ರ ಸಲ್ಲಿಸುವಾಗ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ವಿಪಕ್ಷ ನಾಯಕ ಆರ್. ಅಶೋಕ, ಜೆಡಿಎಸ್ ಅಭ್ಯರ್ಥಿ ನಾಮಪತ್ರ ಸಲ್ಲಿಸುವಾಗ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಇದ್ದರು.

ಸಿ.ಎಂ, ಡಿ.ಸಿ.ಎಂ, ಎಚ್‌ಡಿಕೆ ಮುಖಾಮುಖಿ

ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ವಿಧಾನಸೌಧದ ಕಾರಿಡಾರ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಮುಖಾಮುಖಿಯಾದರು. ತಮ್ಮ ಪಕ್ಷದ ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆಗಾಗಿ ವಿಧಾನಸಭೆ ಕಾರ್ಯದರ್ಶಿ ಕೊಠಡಿಯ ಹೊರಗಡೆ ಸಿದ್ದರಾಮಯ್ಯ ನಿಂತಿದ್ದರು. ಪಕ್ಷದ ಅಭ್ಯರ್ಥಿಯ ನಾಮಪತ್ರ ಸಲ್ಲಿಸಿ ಕುಮಾರಸ್ವಾಮಿ ಹೊರಗೆ ಬರುತ್ತಿದ್ದಂತೆ, ಇಬ್ಬರೂ ಮುಖಾಮುಖಿಯಾದರು. ಉಭಯ ನಾಯಕರು ಪರಸ್ಪರ ನಮಸ್ಕರಿಸಿದರು. ಇದೇ ವೇಳೆ, ಸಿದ್ದರಾಮಯ್ಯ ಅವರು ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡರ ಜೊತೆ ಕುಶಲೋಪರಿ ವಿಚಾರಿಸಿದರು. ಜಿ.ಟಿ. ದೇವೇಗೌಡ ಕೈಕುಲುಕಿ ಆತ್ಮೀಯವಾಗಿ ಮಾತನಾಡಿದರು.

ಪರಸ್ಪರ ಮುಖ ನೋಡದ ಡಿಕೆಶಿ - ಎಚ್‌ಡಿಕೆ: ಇದೇ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಎಚ್.ಡಿ. ಕುಮಾರಸ್ವಾಮಿ ಕೂಡಾ ಮುಖಾಮುಖಿಯಾದರು. ಆದರೆ, ಉಭಯ ನಾಯಕರು ಮುಖವನ್ನೂ ನೋಡದೇ ತೆರಳಿದರು.

ಹರ್ಷದಲ್ಲಿ ಬಿಜೆಪಿ ನಾಯಕರು: ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ಹೆಚ್ಚು ಸ್ಥಾನಗಳು ಸಿಗಲಿವೆ ಎಂಬ ಮತಗಟ್ಟೆ ಸಮೀಕ್ಷೆಗಳ ಕಾರಣ ಬಿಜೆಪಿ ನಾಯಕರಲ್ಲಿ ಹರ್ಷೋಲ್ಲಾಸ ಎದ್ದು ಕಾಣುತ್ತಿತ್ತು.

ಮತಗಟ್ಟೆ ಬಳಿ ಬಿಜೆಪಿ, ಕಾಂಗ್ರೆಸ್ ಕಾರ್ಯಕರ್ತರ ಜಟಾಪಟಿ

ಆಗ್ನೇಯ ಶಿಕ್ಷಕರ ಕ್ಷೇತ್ರದ ಮತದಾನದ ವೇಳೆ ಹಿಂಸಾಚಾರ

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ ತಾಲ್ಲೂಕು ಕಚೇರಿ ಮತಗಟ್ಟೆ ಬಳಿ ಪೊಲೀಸರ ಎದುರೇ ಕೈ ಕೈ ಮಿಲಾಯಿಸಲು ಮುಂದಾದ ಬಿಜೆಪಿ ಹಾಗೂ ಕಾಂಗ್ರೆಸ್ ಕಾರ್ಯಕರ್ತರು

ಬಂಗಾರಪೇಟೆ (ಕೋಲಾರ): ಆಗ್ನೇಯ ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಗೆ ಸೋಮವಾರ ನಡೆದ ಮತದಾನದ ವೇಳೆ ಇಲ್ಲಿಯ ತಾಲ್ಲೂಕು ಕಚೇರಿ ಮತಗಟ್ಟೆ ಬಳಿ ಕಾಂಗ್ರೆಸ್ ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ಜಟಾಪಟಿ ನಡೆಯಿತು.

ಮತಕೇಂದ್ರದ ಸುತ್ತ ಎರಡೂ ಪಕ್ಷಗಳ ಕಾರ್ಯಕರ್ತರು ಶಿಕ್ಷಕ ಮತದಾರರಲ್ಲಿ ಮತಯಾಚಿಸುತ್ತಿದ್ದರು. ಮತ ಕೇಂದ್ರದೊಳಗೆ ತೆರಳಿ ಮತದಾರರನ್ನು ಓಲೈಸಲಾಗುತ್ತಿದೆ ಎಂದು ಉಭಯ ಪಕ್ಷಗಳ ಕಾರ್ಯಕರ್ತರು ವಾಗ್ವಾದ ನಡೆಸಿದರು.

ಪೊಲೀಸರ ಎದುರಲ್ಲೇ ಪರಸ್ಪರ ನಿಂದಿಸಿಕೊಂಡ ಎರಡೂ ಪಕ್ಷಗಳ ಕಾರ್ಯಕರ್ತರು ಕೈ ಮಿಲಾಯಿಸಲು ಮುಂದಾದರು. ಆಗ ಪೊಲೀಸರು ಜನರನ್ನು ತಡೆದು ಬ್ಯಾರಿಕೇಡ್ ಹಾಕಿದರು. ಪೊಲೀಸರ ಜತೆ ವಾಗ್ವಾದಕ್ಕಿಳಿದ ಬಿಜೆಪಿ ಮುಖಂಡರು, 'ನಮ್ಮನ್ನು ಮಾತ್ರ ತಡೆಯುತ್ತಿರುವಿರಿ' ಎಂದು ದೂರಿದರು.

ಶಾಸಕ ಎಸ್.ಎನ್. ನಾರಾಯಣಸ್ವಾಮಿ ಅವರಿಗೆ ಅಧಿಕಾರವಿದೆ ಎಂದು ಪದೇ ಪದೇ ಗಲಾಟೆಗೆ ಪ್ರಚೋದನೆ ನೀಡುತ್ತಿದ್ದಾರೆ
– ಬಿ.ವಿ. ಮಹೇಶ, ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ, ಕೋಲಾರ

ಬಿಜೆಪಿಯ ಕಾರ್ಯಕರ್ತರು ಪದೇ ಪದೇ ಕಾಂಗ್ರೆಸ್ ಕಾರ್ಯಕರ್ತರ ಮೇಲೆ ದೌರ್ಜನ್ಯ ಮತ್ತು ರೌಡಿಸಂ ಮಾಡುತ್ತಿದ್ದಾರೆ
– ಎಸ್.ಎನ್. ನಾರಾಯಣಸ್ವಾಮಿ, ಕಾಂಗ್ರೆಸ್ ಶಾಸಕ

ಟ್ರಕ್ ಟರ್ಮಿನಲ್ ಹಗರಣ: ವೀರಯ್ಯಗೆ ಜಾಮೀನು

ಬೆಂಗಳೂರು: ಡಿ.ದೇವರಾಜ ಅರಸು ಟ್ರಕ್ ಟರ್ಮಿನಲ್‌ನಲ್ಲಿ (ಡಿಡಿಯುಟಿಟಿಎಲ್) ನಡೆದಿದೆ ಎನ್ನಲಾದ ₹47.10 ಕೋಟಿ ಅಕ್ರಮ ಆರೋಪದ ಪ್ರಕರಣದಲ್ಲಿ ನಿಗಮದ ಮಾಜಿ ಅಧ್ಯಕ್ಷರೂ ಆದ ಡಿ.ಎಸ್.ವೀರಯ್ಯ ಸಲ್ಲಿಸಿದ್ದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಿಸಿಎಚ್‌-52ನೇ ಕೋರ್ಟ್‌ ಮಾನ್ಯ ಮಾಡಿದ್ದು, ಷರತ್ತುಬದ್ಧ ಮಧ್ಯಂತರ ಜಾಮೀನು ನೀಡಿದೆ.

ಈ ಕುರಿತಂತೆ ಡಿ.ಎಸ್.ವೀರಯ್ಯ ಸಲ್ಲಿಸಿದ್ದ ಕ್ರಿಮಿನಲ್ ಮಿಸಲೇನಿಯಸ್ ಅರ್ಜಿಯನ್ನು ಸಿಟಿ ಸಿವಿಲ್ ಮತ್ತು ಸೆಷನ್ಸ್ ಕೋರ್ಟ್‌ನ 52ನೇ ನ್ಯಾಯಾಲಯದ ನ್ಯಾಯಾಧೀಶ ಯಶವಂತ ಕುಮಾರ್ ಸೋಮವಾರ ವಿಚಾರಣೆ ನಡೆಸಿ ಮಧ್ಯಂತರ ಜಾಮೀನು ಮಂಜೂರು ಮಾಡಿದರು.

ಅತ್ಯಾಚಾರ: ಮೌಲ್ವಿ ಸೇರಿ ಇಬ್ಬರು ಸೆರೆ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ದೈಹಿಕ ಸುಖ ನೀಡಿದರೆ ದೆವ್ವ ಬಿಟ್ಟು ಹೋಗುತ್ತದೆ' ಎಂಬುದಾಗಿ ನಂಬಿಸಿ 17 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಮಸೀದಿಯೊಂದರ ಮೌಲ್ವಿ ಸೇರಿ ಇಬ್ಬರು ಆರೋಪಿಗಳನ್ನು ಮಹಿಳಾ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನಗರದ ಮಸೀದಿಯೊಂದರ ಮೌಲ್ವಿ ಅಬ್ದುಲ್ ರೆಹಮಾನ್ ಹಾಗೂ ಬಾಲಕಿಯ 23 ವರ್ಷದ ಅಣ್ಣ ಬಂಧಿತರು. ಗರ್ಭಿಣಿಯಾಗಿದ್ದ ಬಾಲಕಿಗೆ ಅವಧಿಪೂರ್ವ ಪ್ರಸವವಾಗಿದ್ದು, ಜಿಲ್ಲಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾಳೆ. ಆರೋಪಿ ಮೌಲ್ವಿಯು ಮೂರು ವರ್ಷಗಳಿಂದ ಬಾಲಕಿಗೆ ಕುರಾನ್ ಪಠಿಸಲು ನೆರವಾಗಿದ್ದ. ಮೂಲತಃ ಉತ್ತರಪ್ರದೇಶದ ಅಬ್ದುಲ್ ರೆಹಮಾನ್ 20 ವರ್ಷಗಳಿಂದ ಕರ್ನಾಟಕದಲ್ಲಿ ನೆಲೆಸಿದ್ದಾರೆ.

ಅಬ್ದುಲ್ ರೆಹಮಾನ್

ಬಾಲಕಿಗೆ ಗಾಳಿ (ದೆವ್ವ) ಸೋಕಿರುವುದಾಗಿ ಕುಟುಂಬದ ಸದಸ್ಯರನ್ನು ನಂಬಿಸಿದ್ದ. ದೆವ್ವ ಬಿಡಿಸುವುದಾಗಿ ಹೇಳಿ ಬಾಲಕಿಯ ತಾಯಿಯನ್ನು ಮನೆಯಿಂದ ಹೊರಗೆ ಕಳುಹಿಸಿದ್ದ. ತಂಗಿಯ ಮೇಲೆ ಅತ್ಯಾಚಾರ ಎಸಗುವಂತೆ ಬಾಲಕಿಯ ಅಣ್ಣನನ್ನು ಪುಸಲಾಯಿಸಿ ಈ ದೃಶ್ಯವನ್ನು ಮೊಬೈಲ್‌ನಲ್ಲಿ ಸೆರೆ ಹಿಡಿದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಮೌಲ್ವಿ, 'ಬೇರೆ ಯಾರಿಗಾದರೂ ತಿಳಿಸಿದರೆ ಪೂಜೆ ಫಲಿಸದು' ಎಂದಿದ್ದ. ವಾರಕ್ಕೊಮ್ಮೆ ಪೂಜೆಯ ನೆಪದಲ್ಲಿ ಮನೆಗೆ ಬಂದು ಈ ಕೃತ್ಯ ಎಸಗುತ್ತಿದ್ದ. ವಿಪರೀತ ಹೊಟ್ಟೆನೋವಿನಿಂದ ಬಳಲುತ್ತಿದ್ದ ಬಾಲಕಿಯನ್ನು ತಾಯಿ ಜಿಲ್ಲಾ ಆಸ್ಪತ್ರೆಗೆ ಕರೆತಂದಾಗ ಕೃತ್ಯ ಬೆಳಕಿಗೆ ಬಂದಿದೆ.

ಜಮ್ಮು ಮತ್ತು ಕಾಶ್ಮೀರದ ಆರು ಜಿಲ್ಲೆಗಳಲ್ಲಿ ಕಾಳ್ಗಿಚ್ಚು

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಆರು ಜಿಲ್ಲೆಗಳಲ್ಲಿ ಕಾಳ್ಗಿಚ್ಚು ಹೊತ್ತಿಕೊಂಡಿದ್ದು, ಕಳೆದ 24 ಗಂಟೆಗಳಲ್ಲಿ ಭಾರಿ ಪ್ರಮಾಣದ ಅರಣ್ಯ ಪ್ರದೇಶಕ್ಕೆ ಹಾನಿಯಾಗಿದೆ.

ಇರುವೆ ಇರುವೆ ನೀಲಿ ಇರುವೆ!

ಒಂದನೇ ಪುಟದಿಂದ...

ಅವುಗಳ ದೇಹದಲ್ಲಿರುವ 'ಬಯೋಲಾಜಿಕಲ್ ಫೋಟೊನಿಕ್ ನ್ಯಾನೊಸ್ಟ್ರಕ್ಚರ್' ಕಣಗಳಿಂದ ಬಣ್ಣ ಉತ್ಪತ್ತಿಯಾಗುತ್ತದೆ. ಕೀಟಗಳಲ್ಲಿ ಇದು ಸಾಮಾನ್ಯವಾದರೂ ಇರುವೆಗಳಲ್ಲಿ ಅಪರೂಪ. ಪ್ರಪಂಚದಲ್ಲಿ 16,724 ಜಾತಿ ಇರುವೆ ಪ್ರಭೇದಗಳಲ್ಲಿ ಕೆಲವು ಮಾತ್ರ ನೀಲಿ ಬಣ್ಣದ ದೇಹ ಹೊಂದಿವೆ ಎನ್ನುತ್ತಾರೆ ಸಹನಶ್ರೀ.

'ಪ ರಾ ಪ ರಾ ಟ್ರೆ ಚೀ ನಾ ನೀ ಲಾ' ಆವಿಷ್ಕಾರವು ಹಿಮಾಲಯದ ವಿಶಿಷ್ಟ ಜೀವ ವೈವಿಧ್ಯವನ್ನು ಪ್ರತಿನಿಧಿಸುತ್ತದೆ. ನೀಲಿ ಬಣ್ಣದ ಇರುವೆ ಕೀಟಶಾಸ್ತ್ರಜ್ಞರಲ್ಲಿ ಅನೇಕ ಕುತೂಹಲಕಾರಿ ಪ್ರಶ್ನೆ ಹುಟ್ಟುಹಾಕಲಿದೆ. ಈ ಬಣ್ಣವು ಇರುವೆಯ ಸಂವಹನ, ರಕ್ಷಣೆಗಾಗಿ ವೈರಿಗಳಿಂದ ಮರೆ ಮಾಚುವಿಕೆ ಮತ್ತು ಪರಿಸರ ಸಂವಹನಗಳಲ್ಲಿ ಸಹಾಯ ಮಾಡುತ್ತದೆಯೇ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಳ್ಳಬೇಕಿದೆ ಎನ್ನುತ್ತಾರೆ.

ಹಿಮಾಲಯದ ಜೀವ ವೈವಿಧ್ಯದ ಹಾಟ್‌ಸ್ಪಾಟ್‌ನಲ್ಲಿರುವ ಅರುಣಾಚಲ ಪ್ರದೇಶದ ಸಿಯಾಂಗ್ ಕಣಿವೆ ಸರಿಸಾಟಿ ಇಲ್ಲದ ವೈವಿಧ್ಯಮಯ ಜೀವ ಜೀವ ಜಗತ್ತನ್ನು ಹೊಂದಿದೆ. ಇದರಲ್ಲಿ ಹೆಚ್ಚಿನದನ್ನು ಇನ್ನೂ ಅನ್ವೇಷಿಸಬೇಕಾಗಿದೆ. ಪರಿಸರ ಶ್ರೀಮಂತಿಕೆ ಹೊಂದಿರುವ ಈ ಅಭೂತಪೂರ್ವ ಪ್ರದೇಶ ಆಪತ್ತು ಎದುರಿಸುತ್ತಲಿದೆ. ಹವಾಮಾನ ಬದಲಾವಣೆ ಜೊತೆ ಮೂಲಸೌಕರ್ಯ ಯೋಜನೆ, ಅಣೆಕಟ್ಟು, ಹೆದ್ದಾರಿ ಮತ್ತು ಮಿಲಿಟರಿ ನೆಲೆ ನಿರ್ಮಾಣದಂತಹ ಚಟುವಟಿಕೆಗಳು ಈ ಕಣಿವೆಯ ಸ್ವರೂಪವನ್ನು ವೇಗವಾಗಿ ಬದಲಾಯಿಸುತ್ತಿವೆ' ಎಂದು ಡಾ. ಪ್ರಿಯದರ್ಶನನ್ ಧರ್ಮರಾಜನ್ ಕಳವಳ ವ್ಯಕ್ತಪಡಿಸುತ್ತಾರೆ.

ನೀಲಿ ಬಣ್ಣದ ಅಪರೂಪದ ಇರುವೆ ಪತ್ತೆ ಮಾಡಿರುವ ತಂಡದ ಬಗ್ಗೆ ಅರುಣಾಚಲ ಪ್ರದೇಶದ ಮುಖ್ಯಮಂತ್ರಿ ಪೇಮ ಖಂಡು 'ಎಕ್ಸ್' ಖಾತೆಯಲ್ಲಿ ಮೆಚ್ಚುಗೆ ಸೂಚಿಸಿದ್ದು, ಇರುವೆಯ ಚಿತ್ರವನ್ನೂ ಹಂಚಿಕೊಂಡಿದ್ದಾರೆ.

ಝೂಕೀಸ್ ಜರ್ನಲ್ ಲಿಂಕ್: https://zookeys.pensoft.net/article/114168/

ಅನ್ವೇಷಣಾ ಯಾತ್ರೆಗೆ ಶತಮಾನದ ಇತಿಹಾಸ

ಅರುಣಾಚಲ ಪ್ರದೇಶದ ಸ್ಥಳೀಯರ ವಿರುದ್ಧ ಬ್ರಿಟಿಷ್ ಸರ್ಕಾರ 1911-1912ರಲ್ಲಿ 'ಅಭೋರ್' ಹೆಸರಿನ ದಂಡಯಾತ್ರೆ ನಡೆಸಿತ್ತು. ಆಗ ಸಿಯಾಂಗ್ ಕಣಿವೆಯ ನೈಸರ್ಗಿಕ ಇತಿಹಾಸ ಮತ್ತು ಭೌಗೋಳಿಕ ಇತಿಹಾಸ ದಾಖಲಿಸಲು ವೈಜ್ಞಾನಿಕ ತಂಡವೊಂದು ಮಿಲಿಟರಿಯ ಜೊತೆಗೂಡಿತ್ತು.

ಈ ತಂಡವು ಮೊದಲ ಬಾರಿಗೆ ಸಿಯಾಂಗ್ ಕಣಿವೆ ಪ್ರದೇಶದ ದೊಡ್ಡಭಾಗಗಳನ್ನು ಅನ್ವೇಷಿಸಲು ವೈಜ್ಞಾನಿಕ ನಕ್ಷೆ ರೂಪಿಸಲು ಯಶಸ್ವಿಯಾಯಿತು. ಅಲ್ಲಿರುವ ಪ್ರತಿ ಸಸ್ಯ, ಕಪ್ಪೆ, ಹಲ್ಲಿ, ಮೀನು, ಪಕ್ಷಿ ಮತ್ತು ಸಸ್ತನಿ ಮತ್ತು ಕೀಟಗಳನ್ನು ವೈಜ್ಞಾನಿಕವಾಗಿ ದಾಖಲಿಸಿತ್ತು.

ಇದಾಗಿ ಒಂದು ಶತಮಾನದ ನಂತರ ಬೆಂಗಳೂರಿನ ಏಟ್ರಿ ಸಂಸ್ಥೆಯ ಸಂಶೋಧಕರ ತಂಡ ಮತ್ತು ಫೆಲಿಸ್ಕ್ರಿಯೇಷನ್ಸ್ ತಂಡ 'ಸಿಯಾಂಗ್ ಅನ್ವೇಷಣೆ' ಬ್ಯಾನರ್ ಅಡಿ ಈ ಪ್ರದೇಶದ ಜೀವ ವೈವಿಧ್ಯ ಮರು ಸಮೀಕ್ಷೆಗೆ ಯಾತ್ರೆ ಆರಂಭಿಸಿದೆ. ಇದಕ್ಕೆ ನ್ಯಾಷನಲ್ ಜಿಯೋಗ್ರಾಫಿಕ್ ಸೊಸೈಟಿ ಅನುದಾನ ನೀಡಿದೆ.

ಯಾತ್ರೆ ವೇಳೆ ಪ್ರಾಣಿ ವರ್ಗದ ಒಂದು ಹೊಸ ಉಪ ಕುಟುಂಬ, ಆರು ಹೊಸ ತಳಿ ಮತ್ತು 40ಕ್ಕೂ ಹೆಚ್ಚು ಹೊಸ ಪ್ರಾಣಿ ಪ್ರಭೇದಗಳನ್ನು ಕೀಟಶಾಸ್ತ್ರಜ್ಞರು ಪತ್ತೆ ಮಾಡಿದ್ದಾರೆ.

ಅನೈತಿಕ ಪೊಲೀಸ್‌ಗಿರಿ, ಯುವಕನ ಮೇಲೆ ಹಲ್ಲೆ

ಶಿವಮೊಗ್ಗ: ಸಹೋದ್ಯೋಗಿಯಾಗಿರುವ ಮುಸ್ಲಿಂ ಯುವತಿಯನ್ನು ಬೈಕ್‌ನಲ್ಲಿ ಕರೆದೊಯ್ಯುತ್ತಿದ್ದ ಹಿಂದೂ ಯುವಕನ ಮೇಲೆ ಕಳೆದ ಶನಿವಾರ ಮಧ್ಯಾಹ್ನ ಇಲ್ಲಿನ ಇಲಿಯಾಸ್ ನಗರದ ಬಳಿ ಗುಂಪೊಂದು ಅನೈತಿಕ ಪೊಲೀಸ್‌ಗಿರಿ ನಡೆಸಿದ್ದು, ಪ್ರಕರಣ ದಾಖಲಾಗಿದೆ.

ಸೀಗೆಹಟ್ಟಿಯ ಕುಂಬಾರಗುಂಡಿ ನಿವಾಸಿ ಎಸ್.ಬಿ.ನಂದನ್ ಹಲ್ಲೆಗೊಳಗಾದ ಯುವಕ. ಖಾಸಗಿ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಇವರು, ನ್ಯೂಮಂಡ್ಲಿಯ ಮಸೀದಿ ಬಳಿ ಯುವತಿಯನ್ನು ಬೈಕ್‌ನಲ್ಲಿ ಹತ್ತಿಸಿಕೊಂಡು ಆರ್‌ಎಂಎಲ್ ನಗರಕ್ಕೆ ಹೊರಟಿದ್ದರು. ಇಬ್ಬರನ್ನೂ ಆರ್‌ಎಂಎಲ್ ನಗರದ ಟಿಂಬರ್ ಯಾರ್ಡ್ ಬಳಿ ಮುಸ್ಲಿಂ ಯುವಕರ ಗುಂಪೊಂದು ತಡೆದು ಯಾರ್ಡ್ ಒಳಗೆ ಕರೆದೊಯ್ದಿದೆ.

'ನಮ್ಮ ಸಮುದಾಯದ ಯುವತಿಯನ್ನು ಬೈಕ್‌ನಲ್ಲಿ ಕರೆದೊಯ್ಯುತ್ತಿರುವುದೇಕೆ?' ಎಂದು ಪ್ರಶ್ನಿಸಿ ಯುವಕರ ಗುಂಪು ಹಲ್ಲೆ ನಡೆಸಿದೆ. ಮತ್ತೊಮ್ಮೆ ಜೊತೆಯಲ್ಲಿ ಕಾಣಿಸಿಕೊಂಡರೆ ಜೀವಸಹಿತ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿರುವುದಾಗಿ ತಿಳಿದುಬಂದಿದೆ. ಹಲ್ಲೆಯಿಂದಾಗಿ ನಂದನ್ ಅವರಿಗೆ ತೀವ್ರ ಗಾಯವಾಗಿದ್ದು, ಮೆಗ್ಗಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಕೆಎಎಸ್ ಪರೀಕ್ಷೆ ಉಚಿತ ತರಬೇತಿಗೆ ಅರ್ಜಿ ಆಹ್ವಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರ್.ಎಲ್. ಜಾಲಪ್ಪ ಅಕಾಡೆಮಿಯು ಹಿಂದುಳಿದ ಸಮುದಾಯದ ಪ್ರವರ್ಗ 1 ಮತ್ತು ಪ್ರವರ್ಗ 2ಎ ಗೆ ಸೇರಿದ ಗ್ರಾಮೀಣ ಪದವೀಧರರಿಗೆ ಕೆಎಎಸ್, ಪಿಎಸ್‌ಐ, ಎಫ್‌ಡಿಎ, ಎಸ್‌ಡಿಎ ಪರೀಕ್ಷೆಗಳಿಗೆ ನಾಲ್ಕು ತಿಂಗಳ ಉಚಿತ ತರಬೇತಿಯನ್ನು ಜುಲೈ 5ರಂದು ಪ್ರಾರಂಭಿಸಲಿದೆ.

ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕಿನ ಸೋಲೂರಿನಲ್ಲಿ ತರಬೇತಿ ನಡೆಯಲಿದ್ದು, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಪ್ರತ್ಯೇಕ ವಿದ್ಯಾರ್ಥಿನಿಲಯಗಳ ವ್ಯವಸ್ಥೆ ಇದೆ. ಆಸಕ್ತರು www.rljacademy.in ವೆಬ್‌ಸೈಟಿನಲ್ಲಿ ಜ.31ರ ಒಳಗೆ ಅರ್ಜಿಯನ್ನು ಸಲ್ಲಿಸಬೇಕು. ಮಾಹಿತಿಗೆ 9731480759, 7337705513 ಸಂಪರ್ಕಿಸಬಹುದು ಎಂದು ಅಕಾಡೆಮಿಯ ಪ್ರಕಟಣೆ ತಿಳಿಸಿದೆ.

ಉಡುಗೊರೆಗಾಗಿ ಶಿಕ್ಷಕರ ಗಲಾಟೆ!

ಕೆಜಿಎಫ್ (ಕೋಲಾರ): ಮತದಾನ ಮಾಡಲು ಬಂದ ಕೆಲವು ಶಿಕ್ಷಕರು ತಮಗೆ ಇನ್ನೂ ಗಿಫ್ಟ್ ಬಂದಿಲ್ಲ, ಸೀರೆ ಕೊಟ್ಟಿಲ್ಲ, ಹಣದ ಕವರ್ ಸೇರಿಲ್ಲ ಎಂದು ಸೋಮವಾರ ಮತದಾನ ಕೇಂದ್ರದ ಬಳಿ ತಗಾದೆ ತೆಗೆದರು.

ಮತದಾನ ಮಾಡದೇ ನೇರವಾಗಿ ಅಭ್ಯರ್ಥಿಗೆ ಕರೆ ಮಾಡಿದ ಕೆಲವು ಶಿಕ್ಷಕರು, 'ನಮಗೆ ಬರಬೇಕಾಗಿದ್ದು ಇನ್ನೂ ಬಂದಿಲ್ಲ' ಎಂದು ದೂರು ಹೇಳಿದರು.

ಪಕ್ಷೇತರ ಅಭ್ಯರ್ಥಿಯೊಬ್ಬರು ತಲಾ ₹10 ಸಾವಿರ ಇದ್ದ ಕವರ್ ಕೊಟ್ಟಿದ್ದಾರೆ ಎಂಬ ವಿಷಯ ಸ್ಥಳೀಯವಾಗಿ ದೊಡ್ಡ ಮಟ್ಟದಲ್ಲಿ ಚರ್ಚೆಗೆ ಗ್ರಾಸವಾಗಿದೆ.

ಒಬ್ಬ ಅಭ್ಯರ್ಥಿಯು ಮಹಿಳೆಯರಿಗೆ ಸೀರೆ, ಪುರುಷರಿಗೆ ವಾಚ್, ಕವರ್ ಕೊಟ್ಟಿದ್ದಾರೆ. ಮತ್ತೊಬ್ಬ ಅಭ್ಯರ್ಥಿ ಸೀರೆ ಮತ್ತು ಕವರ್ ಕೊಟ್ಟಿದ್ದಾರೆ ಎಂದು ಹೇಳಲಾಗುತ್ತಿದೆ.

'ಎಲ್ಲಾ ಅಭ್ಯರ್ಥಿಗಳಿಂದ ಪ್ರತಿ ಮತದಾರರಿಗೆ ಸುಮಾರು ₹ 21 ಸಾವಿರ ಬಂದಿದ್ದರೂ, ಇನ್ನೂ ಗಿಫ್ಟ್ ಬಂದಿಲ್ಲ. ಕವರ್ ಬಂದಿಲ್ಲ ಎಂದು ಶಿಕ್ಷಕರು ಗೊಣಗಾಡುತ್ತಿದ್ದಾರೆ' ಎಂದು ರಾಜಕೀಯ ಪಕ್ಷವೊಂದರ ಮುಖಂಡರು ಮತಗಟ್ಟೆ ಬಳಿ ಬೇಸರ ವ್ಯಕ್ತಪಡಿಸಿದರು.

ಕೆಇಎ: ಮೊದಲ ದಿನವೇ 1,500 ವಿದ್ಯಾರ್ಥಿಗಳಿಂದ ಅಂಕ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಯ (ಸಿಇಟಿ) ರ‍್ಯಾಂಕ್ ತಡೆಹಿಡಿದಿದ್ದ ಮತ್ತು ರ‍್ಯಾಂಕ್ ನೀಡದಿದ್ದ ಸುಮಾರು 1,500 ವಿದ್ಯಾರ್ಥಿಗಳು ಮೊದಲ ದಿನವೇ ತಮ್ಮ ಅಂಕಗಳನ್ನು ಅಪ್‌ಡೇಟ್ ಮಾಡಿಕೊಂಡಿದ್ದು, ಆ ಎಲ್ಲ ವಿದ್ಯಾರ್ಥಿಗಳಿಗೆ ಮಂಗಳವಾರ ಸ್ಪಾಟ್ ರ‍್ಯಾಂಕ್ ನೀಡಲಾಗುವುದು' ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

'ಪಿಯುಸಿಯಲ್ಲಿ ನೀಡುವ ವಿಶಿಷ್ಟ ಸಂಖ್ಯೆಯನ್ನು ತಪ್ಪಾಗಿ ನಮೂದಿಸಿರುವ ಸುಮಾರು 3 ಸಾವಿರ ಅಭ್ಯರ್ಥಿಗಳಿಗೆ ರ‍್ಯಾಂಕ್ ಘೋಷಣೆ ಆಗಿಲ್ಲ. ಅವರಿಗೆ ಅಪ್‌ಡೇಟ್ ಮಾಡಿಕೊಳ್ಳಲು ಪ್ರತ್ಯೇಕ ಲಿಂಕ್ ಅನ್ನು ಕೆಇಎ ಸೋಮವಾರ ಪ್ರಕಟಿಸಿತ್ತು. ಸೋಮವಾರ ಬೆಳಿಗ್ಗೆಯಿಂದಲೇ ಸರಾಗವಾಗಿ ವಿದ್ಯಾರ್ಥಿಗಳು ಅಂಕಗಳನ್ನು ಅಪ್‌ಡೇಟ್ ಮಾಡಿಕೊಂಡಿದ್ದಾರೆ' ಎಂದು ಅವರು ವಿವರಿಸಿದ್ದಾರೆ.

ಅಭ್ಯರ್ಥಿ ಪರ ಹಣ ಹಂಚಿಕೆ: ಇಬ್ಬರು ವಶಕ್ಕೆ

ಪ್ರಜಾವಾಣಿ ವಾರ್ತೆ

ಹೊನ್ನಾಳಿ (ದಾವಣಗೆರೆ): ವಿಧಾನ ಪರಿಷತ್‌ನ ನೈರುತ್ಯ ಪದವೀಧರ ಕ್ಷೇತ್ರದ ಪಕ್ಷೇತರ ಅಭ್ಯರ್ಥಿ ಎಸ್.ಪಿ. ದಿನೇಶ್ ಪರ ಹಣ ಹಂಚುತ್ತಿದ್ದರು ಎಂಬ ಆರೋಪದ ಮೇಲೆ ಮಹಿಳೆ ಸೇರಿ ಇಬ್ಬರ ವಿರುದ್ಧ ದೂರು ದಾಖಲಿಸಲಾಗಿದೆ.

ಸೋಮವಾರ ಬೆಳಿಗ್ಗೆ 9.35ರ ಹೊತ್ತಿಗೆ ಎಂ.ಜಿ. ಶಶಿಕಲಾ ಎಂಬ ಮಹಿಳೆ ತಾಲ್ಲೂಕು ಪಂಚಾಯಿತಿ ಕಚೇರಿ ಬಳಿ ವ್ಯಾನಿಟಿ ಬ್ಯಾಗ್‌ನಲ್ಲಿ ಹಣ ಇಟ್ಟುಕೊಂಡು ಅಭ್ಯರ್ಥಿ ಎಸ್.ಪಿ. ದಿನೇಶ್ ಪರ ಮತ ನೀಡುವಂತೆ ಹಣ ಹಂಚುತ್ತಿದ್ದರು ಎಂದು ಉಪ ವಿಭಾಗಾಧಿಕಾರಿ ತಿಳಿಸಿದ್ದು, ಚುನಾವಣೆ ಕಾರ್ಯಕ್ಕೆ ನಿಯುಕ್ತರಾಗಿದ್ದ ಅಧಿಕಾರಿ ಶಶಿಧರ್ ಹೊನ್ನಾಳಿ ಪೊಲೀಸರಿಗೆ ದೂರು ನೀಡಿದರು.

'ಎಂ.ಜಿ. ಶಶಿಕಲಾ ಮತ್ತು ಅವರಿಗೆ ಸಹಕಾರ ನೀಡುತ್ತಿದ್ದ ಬಸವನಹಳ್ಳಿ ಬೀರೇಶ್ ಅವರನ್ನು ವಶಕ್ಕೆ ಪಡೆದು ಸ್ಟೇಷನ್ ಬೇಲ್ ಮೇಲೆ ಬಿಡುಗಡೆ ಮಾಡಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಶಶಿಕಲಾ ಅವರು ನ್ಯಾಮತಿ ತಾಲ್ಲೂಕು ಮಾದಾಪುರ ಗ್ರಾಮದವರಾಗಿದ್ದು, ಶಿಕಾರಿಪುರದ ಪ್ರಥಮದರ್ಜೆ ಕಾಲೇಜಿನಲ್ಲಿ ಅತಿಥಿ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಬೀರೇಶ್ ಅವರು ನ್ಯಾಮತಿ ತಾಲ್ಲೂಕಿನ ಬಸವನಹಳ್ಳಿ ಗ್ರಾಮದವರು ಎಂಬ ಮಾಹಿತಿ ಲಭ್ಯವಾಗಿದೆ. 'ಶಶಿಕಲಾ ಅವರ ಬಳಿ ಇದ್ದ ₹ 30,000 ನಗದು, ಸ್ಮಾರ್ಟ್ ಫೋನ್, ಚುನಾವಣಾ ಐ.ಡಿ ಕಾರ್ಡ್ ಹಾಗೂ ಬೀರೇಶ್ ಬಳಿ ಇದ್ದ ಸ್ಮಾರ್ಟ್‌ಫೋನ್ ಮತ್ತು ಬೈಕ್ ಕೀ ವಶಪಡಿಸಿಕೊಳ್ಳಲಾಗಿದೆ' ಎಂದು ಪಿಎಸ್‌ಐ ಶಾಂತಲಾ ತಿಳಿಸಿದ್ದಾರೆ.

ನಿಧನ ವಾರ್ತೆ

ಮಾಜಿ ಸಚಿವ ಎಂ.ಪಿ. ಕೇಶವಮೂರ್ತಿ

ಆನೇಕಲ್ : ಮಾಜಿ ಸಚಿವ ಎಂ.ಪಿ. ಕೇಶವಮೂರ್ತಿ (85) ವಯೋಸಹಜ ಕಾಯಿಲೆಯಿಂದ ಸೋಮವಾರ ನಿಧನರಾದರು. ಅನಾರೋಗ್ಯ ದಿಂದ ಬಳಲುತ್ತಿದ್ದ ಅವರು ಕೆಲ ಕಾಲದಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಮೃತರಿಗೆ ಒಬ್ಬ ಪುತ್ರ ಇದ್ದಾನೆ. ಅಂತ್ಯಕ್ರಿಯೆ ಮಂಗಳವಾರ ಬೆಂಗಳೂರು ವಿಲ್ಸನ್ ಗಾರ್ಡನ್‌ನ ಚಿತಾಗಾರದಲ್ಲಿ ನಡೆಯಲಿದೆ ಎಂದು ಪುತ್ರ ಶ್ರೀನಾಥ್ ತಿಳಿಸಿದ್ದಾರೆ.

ಆನೇಕಲ್ ವಿಧಾನಸಭಾ ಕ್ಷೇತ್ರದಿಂದ ಎರಡು ಬಾರಿ ಶಾಸಕರಾಗಿದ್ದ ಎಂ.ಪಿ. ಕೇಶವಮೂರ್ತಿ ಅವರು ವೀರಪ್ಪಮೊಯ್ಲಿ ಅವರ ಸಂಪುಟದಲ್ಲಿ ಅರಣ್ಯ ಮತ್ತು ಸಣ್ಣ ನೀರಾವರಿ ಖಾತೆ ಸಚಿವರಾಗಿ ಕಾರ್ಯನಿರ್ವಹಿಸಿದ್ದರು.

ಆನೇಕಲ್ ತಾಲ್ಲೂಕಿನಲ್ಲಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಅನುಷ್ಠಾನಗೊಳಿಸುವಲ್ಲಿ ಕೇಶವಮೂರ್ತಿ ಅವರ ಪಾತ್ರ ಪ್ರಮುಖವಾಗಿತ್ತು. ಗ್ರಾಮಗಳಿಗೆ ಕುಡಿಯುವ ನೀರು, ಸರ್ಕಾರಿ ಆಸ್ಪತ್ರೆ, ಎಎಸ್‌ಬಿ ಕಾಲೇಜು, ರಸ್ತೆ ಸೇರಿದಂತೆ ವಿವಿಧ ಮೂಲಸೌಲಭ್ಯ ಕಲ್ಪಿಸಲು ಮತ್ತು ಬಡ ಕುಟುಂಬಗಳಿಗೆ ಹಕ್ಕುಪತ್ರ ಮತ್ತು ಸಾಗುವಳಿ ಚೀಟಿ ನೀಡಲು ಶ್ರಮಿಸಿದ್ದರು.

ಪ್ರೊ.ಜಿ.ವೈ.ಅಜ್ಜಪ್ಪ



ಬೆಂಗಳೂರು: ನಿವೃತ್ತ ಡೀನ್ ಹಾಗೂ ಧಾರವಾಡ ವಿಶ್ವವಿದ್ಯಾಲಯ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಜಿ.ವೈ.ಅಜ್ಜಪ್ಪ ಸೋಮವಾರ ಬೆಳಗಿನ ಜಾವ ಮೈಸೂರಿನ ಕುವೆಂಪು ನಗರದಲ್ಲಿರುವ ಅನಿಕೇತನ ರಸ್ತೆಯಲ್ಲಿನ ತಮ್ಮ ನಿವಾಸದಲ್ಲಿ ನಿಧನ ಹೊಂದಿದರು.

ಅವರಿಗೆ 95 ವರ್ಷವಾಗಿತ್ತು. ಪತ್ನಿ, ಒಬ್ಬ ಪುತ್ರ ಮತ್ತು ಒಬ್ಬ ಪುತ್ರಿಯನ್ನು ಅಗಲಿದ್ದಾರೆ. ಅಂತ್ಯ ಸಂಸ್ಕಾರ ಸಂಜೆ 4 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ಚಿತಾಗಾರದಲ್ಲಿ ನೆರವೇರಿತು.

ಕರ್ನಾಟಕ ಸರ್ಕಾರ (ರಾಷ್ಟ್ರೀಯ ಆರೋಗ್ಯ ಅಭಿಯಾನ)
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ, ಗದಗ.
ಜಿಲ್ಲಾ ಕಾರ್ಯಕ್ರಮ ನಿರ್ವಹಣಾ ಘಟಕ, ಗದಗ ಫೋ.ನಂ.08372-220307
ಕ್ರ.ಸಂ:ಜಿಆಕುಕ/ಎನ್.ಹೆಚ್.ಎಮ್/ಇ-ಟೆಂಡರ್/ಹೆಚ್.ಆರ್/41/2024-25
ದಿನಾಂಕ : 03.06.2024

ಟೆಂಡರ್ ಪ್ರಕಟಣೆ

ಎನ್.ಎಚ್.ಎಮ್ ಹಾಗೂ ವಿವಿಧ ರಾಷ್ಟ್ರೀಯ ಕಾರ್ಯಕ್ರಮಗಳಡಿಯಲ್ಲಿ ಹೊರಗುತ್ತಿಗೆ ಮೇಲೆ ವಿವಿಧ ವೃಂದದ ಸಿಬ್ಬಂದಿಗಳನ್ನು ಮಾನವ ಸಂಪನ್ಮೂಲ ಹೊರಗುತ್ತಿಗೆ ಸಂಸ್ಥೆಯಿಂದ ಹೊರಗುತ್ತಿಗೆ ಮೇಲೆ ಪಡೆಯಲು ಇ-ಪ್ರಕ್ಯೂರ್‌ಮೆಂಟ ಮೂಲಕ ಟೆಂಡರ್ (**DHFWS/2024-25/SE0690**) ಅಹ್ವಾನಿಸಲಾಗಿದೆ. ಟೆಂಡರ್ ಅಂದಾಜು ಮೊತ್ತ ರೂ. **205.12** ಲಕ್ಷಗಳು. ಇ.ಎಮ್.ಡಿ ಮೊತ್ತ ರೂ. **3,07,692/-** ಟೆಂಡರ್ ಸಲ್ಲಿಸಲು ಪ್ರಾರಂಭ ಮತ್ತು ಕೊನೆಯ ದಿನಾಂಕ : **01.06.2024** ರಿಂದ **03.07.2024** ಮಧ್ಯಾಹ್ನ 2:00 ಗಂಟೆವರೆಗೆ. ತಾಂತ್ರಿಕ ಲಕೋಟೆ ತೆರೆಯುವ ದಿನಾಂಕ : **04.07.2024** ಸಂಜೆ 04:00 ಗಂಟೆಗೆ. ಆರ್ಥಿಕ ಲಕೋಟೆ ತೆರೆಯುವ ದಿನಾಂಕ : **08.07.2024** ಬೆಳಿಗ್ಗೆ 11:00 ಗಂಟೆಗೆ. ಹೆಚ್ಚಿನ ಮಾಹಿತಿಗಾಗಿ ಮೇಲ್ಕಂಡ ಕಚೇರಿ ಅಥವಾ ಇ-ಪ್ರಕ್ಯೂರ್‌ಮೆಂಟ ವೆಬ್ ಸೈಟ್ **https://kppp.karnataka.gov.in** ಅಥವಾ **dhogadag@gmail.com/rchogadag@gmail.com** ಸಂಪರ್ಕಿಸಬಹುದಾಗಿದೆ.

ಸಹಿ/- ಉಪಾಧ್ಯಕ್ಷರು,
ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೊಸೈಟಿ ಹಾಗೂ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳು ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/08/2024-25

ಕರ್ನಾಟಕ ಸರ್ಕಾರ
ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ-577004
ಸಂ.ಚಿಜಿಆ/ಹೆಚ್‌ಎಂಎಸ್(1)/23/2024-25 ದಿನಾಂಕ:29-05-2024

ಇ-ಪ್ರಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ

2024-25ನೇ ಸಾಲಿಗೆ ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ ಇಲ್ಲಿಗೆ ಅವಶ್ಯಕವಾಗಿ ಬೇಕಾಗಿರುವ DRUGS – TABLET, INJECTIONS, MISCELLENIUOS, LAB, X-RAY, SUTURES & PHERISHABLESಗಳನ್ನು ಸರಬರಾಜು ಪಡೆಯಲು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಅಧಿನಿಯಮ 1999-2000ರ 'ಪ್ರಕಾರ ಇ-ಪ್ರಕ್ಯೂರ್‌ಮೆಂಟ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರ್ ಕರೆಯಲಾಗಿದೆ. ಟೆಂಡರಿನ ವಿವರಗಳು:- (1) Tender reference No: CGH/HMS(1)/23/2024-25 Dated:-29-05-2024 (2) Amount put to tender Rs. 5,00,00,000/- (Rupees Five Crore Only) (3) EMD amount Rs. 5,00,000-00 (Rs. Five Lacks) (4) Availability of tender document 30-05-2024 To 29-06-2024 before 04:30 PM, IST upload all documents is compulsory else will be disqualified. (5) Last date and time for receipt bid document 29-06-2024 before 04:30 PM all documents must be attested by the agency (6) Time, date and place of opening of tender (Technical Bid): 04-07-2024 at 03:00 PM Chigateri District Hospital, Davangere (7) Date of Submission of Samples 29-06-2024 before 03:00 PM Chigateri District Hospital, Davangere (8) Time, date and place of opening of tender (Financial Bid): After Completion of technical bid process (9) Address for communication: Chigateri District Hospital, Davangere PH- 08192-259050

ವಾಸಾಇ/ದಾವಣಗೆರೆ/32/ಕೆಎಸ್‌ಎಂಸಿಎ/2024-25
ಸಹಿ/- ಅಧೀಕ್ಷಕರು/ಜಿಲ್ಲಾ ಶಸ್ತ್ರ ಚಿಕಿತ್ಸಕರು, ಚಿಗಟೇರಿ ಜಿಲ್ಲಾ ಆಸ್ಪತ್ರೆ, ದಾವಣಗೆರೆ

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಸಂ:ಕಾನಿಇಂ:ಲೋಇ:ವಿಕೊ:ಡಿಬಿ:KW- 4:ಟೆಂ:2024-25: 428 ದಿನಾಂಕ:01-06-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

2023-24ನೇ ಸಾಲಿನ ಲೆಕ್ಕ ಶೀರ್ಷಿಕೆ: ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ಮೆಗಾ ಮೈಕ್ರೋ ಮತ್ತು ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿಯ ಮೈಕ್ರೋ ಅಡಿಯಲ್ಲಿ ಮಂಜೂರಾದ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆಧ್ಯಾದೇಶ 1999-2000ರ ಪ್ರಕಾರ ಪಾರದರ್ಶಕತೆ ಆಕ್ಟ 2000ರ ನಿಯಮದಂತೆ, ಸ್ಟ್ಯಾಂಡರ್ಡ ಬಿಡ್ ಡಾಕೂಮೆಂಟ್ KW-4 ರ ನಿಯಮಗಳನ್ವಯ ಅರ್ಹ ಗುತ್ತಿಗೆದಾರರಿಂದ ಟೆಂಡರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು, ಕೆಪಿಪಿಪಿ ಪೋರ್ಟಲ್ **http://kppp.karnataka.gov.in** ಮುಖಾಂತರ ಭಾಗವಹಿಸಬಹುದು. ಒಟ್ಟು 2 ಕಾಮಗಾರಿಗಳಿಗೆ (**ವರ್ಕ ಇಂಡೆಂಟ್ ಸಂಖ್ಯೆ: 8666/Call-2 & 9703**) ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ: **10-06-2024** ಸಮಯ 16.00 ಗಂಟೆ, ತಾಂತ್ರಿಕ ಬಿಡ್ ತೆರೆಯುವ ದಿನಾಂಕ: **11-06-2024** ಸಮಯ 16.30 ಗಂಟೆ. ಆರ್ಥಿಕ ಬಿಡ್ ತೆರೆಯುವ ದಿನಾಂಕ: **13-06-2024** ಸಮಯ 11.00 ಗಂಟೆ, **ಕನಿಷ್ಟ ಅಂದಾಜು ಮೊತ್ತ ರೂ. 350.00 ಲಕ್ಷಗಳು ಹಾಗೂ ಗರಿಷ್ಟ ಅಂದಾಜು ಮೊತ್ತ ರೂ. 554.30 ಲಕ್ಷಗಳು** ಇರುತ್ತದೆ. ಈ ಟೆಂಡರ್ ದಾಖಲೆಗಳನ್ನು ಸದರಿ ವೆಬ್‌ಸೈಟ್‌ನಲ್ಲಿಯ ದಾಖಲೆಯಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಇ.ಎಂ.ಡಿ. ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಕಾಮಗಾರಿ ಪೂರ್ಣಗೊಳಿಸಲು ನಿಗದಿತ ಕಾಲಾವಧಿ, ಪ್ರೀಬಿಡ್ ಮೀಟಿಂಗ್ ದಿನಾಂಕ, ಟೆಂಡರ್ ಆಕ್ಷೇಪಣೆ/ಸ್ಪಷ್ಟೀಕರಣ ಹಾಗೂ ಇತ್ಯಾದಿಗಳಿಗಾಗಿ ಹೆಚ್ಚಿನ ಮಾಹಿತಿಗಳನ್ನು **http://kppp.karnataka.gov.in** ನೋಡಿಕೊಳ್ಳುವುದು/ಕೆಲಸದ ವೇಳೆಯಲ್ಲಿ ಈ ಕಛೇರಿಯಿಂದ ಪಡೆಯಬಹುದು. ವಿಶೇಷ ಸೂಚನೆ: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು ಕೆಪಿಪಿಪಿ ಪೋರ್ಟಲ್‌ನಲ್ಲಿ ನೋಡಿಕೊಳ್ಳಬಹುದು ಯಾವುದೇ ರೀತಿಯ ಪ್ರತ್ಯೇಕವಾಗಿ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/-ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ ವಿಭಾಗ, ಕೊಪ್ಪಳ.
ಡಿಐಪಿಆರ್/ಕೊಪ್ಪಳ/26/ಕೆಎಸ್‌ಎಂಸಿಎ/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ,
ಜಯನಗರ ವಿಭಾಗ, ಬಿಬಿಎಂಪಿ, 39ನೇ ಅಡ್ಡರಸ್ತೆ, 18ನೇ ಮುಖ್ಯರಸ್ತೆ,
ಜಯನಗರ 4ನೇ 'ಟಿ' ಬ್ಲಾಕ್, ಬೆಂಗಳೂರು – 560041.
ಸಂಖ್ಯೆ: ಕಾ.ಅ.(ಜೆಎನ್)/ಡಿಎಂ/ಇ-ಪ್ರೊಕ್/01/2024-25 ದಿನಾಂಕ: 03-06-2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ದ್ವಿ-ಲಕೋಟೆ ಪದ್ಧತಿ) (ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ, ಬಿಬಿಎಂಪಿ, ಬೆಂಗಳೂರು ಇವರು ಈ ಕೆಳಕಂಡ ನಿರ್ಮಾಣ ಕಾಮಗಾರಿಗಳಿಗೆ ಬಿಬಿಎಂಪಿ ಮತ್ತು ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ತತ್ಸಮಾನ ದರ್ಜೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು / ಪ್ರವರ್ಗ
1	ವಾರ್ಡ್ ಸಂಖ್ಯೆ. 182, ಭೈರಸಂದ್ರದ ಮೌಂಟೇನ್ ಸ್ಟ್ರೀಟ್ ಹತ್ತಿರ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆ ಬದಿಯ ಚರಂಡಿ, ಪಾದಚಾರಿಮಾರ್ಗ ಸುಧಾರಣೆಗಳು ಹಾಗೂ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿ. (2ನೇ ಕರೆ) – (ಇತರೆ). **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 60.50, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,21,000/–**
2	ವಾರ್ಡ್ ಸಂಖ್ಯೆ. 182, ಭೈರಸಂದ್ರದ ಜಯನಗರ 4ನೇ ಬ್ಲಾಕ್ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆ ಬದಿಯ ಚರಂಡಿ, ಪಾದಚಾರಿಮಾರ್ಗ ಸುಧಾರಣೆಗಳು ಹಾಗೂ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿ. (2ನೇ ಕರೆ)– (ಎಸ್.ಟಿ). **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 65.00, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 65,000/–**
3	ಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 186, ಶಾಕಾಂಬರಿನಗರ ಇಲ್ಲಿನ 47ನೇ ಅಡ್ಡರಸ್ತೆಯ 24ನೇ ಮುಖ್ಯರಸ್ತೆ ಯಿಂದ 46ನೇ ಅಡ್ಡರಸ್ತೆ ವರೆಗೆ, 9ನೇ ಮುಖ್ಯರಸ್ತೆಯ 47ನೇ ಅಡ್ಡರಸ್ತೆ ಯಿಂದ 46ನೇ ಅಡ್ಡರಸ್ತೆ ವರೆಗೆ ಮತ್ತು ಸುತ್ತಮುತ್ತ ಪ್ರದೇಶದಲ್ಲಿ ರಸ್ತೆಗಳು, ಪಾದಚಾರಿಮಾರ್ಗ ಸಮಗ್ರ ಅಭಿವೃದ್ಧಿ ಹಾಗೂ ರಸ್ತೆಗಳಿಗೆ ಡಾಂಬರೀಕರಣ ಕಾಮಗಾರಿ. (2ನೇ ಕರೆ) – (ಎಸ್.ಸಿ). **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 99.50, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 99,500/–**
4	ಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 185, ಜೆ.ಪಿ. ನಗರ (ಹಳೇ ವಾರ್ಡ್ ಸಂಖ್ಯೆ. 177) 7ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ ಮತ್ತು ಸುತ್ತಮುತ್ತ ಪ್ರದೇಶ ಜೆ.ಪಿ. ನಗರ 3ನೇ ಹಂತ ಹಾಗೂ 2ನೇ ಮುಖ್ಯರಸ್ತೆ ಜೆ.ಪಿ. ನಗರ 4ನೇ ಹಂತ ಇಲ್ಲಿ ರಸ್ತೆಗಳು ಹಾಗೂ ಚರಂಡಿಗಳ ಸುಧಾರಣೆಗಳ ಕಾಮಗಾರಿ. (2ನೇ ಕರೆ) – (ಇತರೆ). **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 50.40, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,00,800/–**
5	ಜಯನಗರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ. 187, ಸಾರಕ್ಕಿ (ಹಳೇ ವಾರ್ಡ್ ಸಂಖ್ಯೆ.178) ಇಲ್ಲಿನ ಜೆ.ಪಿ. ನಗರ 6ನೇ ಹಂತದ 16ನೇ ಅಡ್ಡರಸ್ತೆ, 17ನೇ, 17ನೇ ಎ, 17ನೇ ಬಿ, 17ನೇ ಸಿ ಮತ್ತು 17ನೇ ಡಿ ಅಡ್ಡರಸ್ತೆಗಳಲ್ಲಿ ಚರಂಡಿಗಳು ಹಾಗೂ ರಸ್ತೆಗಳ ಸುಧಾರಣೆಗಳ ಕಾಮಗಾರಿ. (2ನೇ ಕರೆ) – (ಇತರೆ). **ಕಾಮಗಾರಿ ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ): 99.50, ಇ.ಎಂ.ಡಿ ಮೊತ್ತ (ರೂ. ಗಳಲ್ಲಿ): 1,99,000/–**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. 2) ಟೆಂಡರ್‌ಗಳನ್ನು ಕೆಪಿಪಿ ಪೋರ್ಟಲ್ ಮೂಲಕ ಆನ್‌ಲೈನ್‌ನಲ್ಲಿ ಸಲ್ಲಿಸುವ ದಿನಾಂಕ: **19-06-2024 ರಂದು 16.00 ಗಂಟೆಗೆ ಅಥವಾ ಮುಂಚಿತವಾಗಿ.** 3) ಬಿಡ್ ಪೂರ್ವಭಾವಿ ಸಭೆ ದಿನಾಂಕ: **10-06-2024 ರಂದು ಮಧ್ಯಾಹ್ನ 3.00 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಜಯನಗರ ವಿಭಾಗ, 18ನೇ ಮುಖ್ಯರಸ್ತೆ, 39ನೇ ಅಡ್ಡರಸ್ತೆ, ಜಯನಗರ 4ನೇ 'ಟಿ' ಬ್ಲಾಕ್, ಬೆಂಗಳೂರು – 560041** ಇಲ್ಲಿ ನಡೆಯುವುದು. 4) ತಾಂತ್ರಿಕ ಬಿಡ್‌ಗಳನ್ನು ದಿನಾಂಕ: **20-06-2024 ರಂದು 16.05 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಜಯನಗರ** ವಿಭಾಗದಲ್ಲಿ ವೆಬ್‌ಸೈಟ್: **https://kppp.karnataka.gov.in** ನಲ್ಲಿ ತೆರೆಯಲಾಗುವುದು. 5) **ಆರ್ಥಿಕ ಬಿಡ್‌ಗಳನ್ನು ದಿನಾಂಕ: 21-06-2024 ರಂದು 16.05 ಗಂಟೆಗೆ ಕಾರ್ಯಪಾಲಕ ಅಭಿಯಂತರರ ಕಛೇರಿ, ಜಯನಗರ ವಿಭಾಗದಲ್ಲಿ ವೆಬ್‌ಸೈಟ್: https://kppp.karnataka.gov.in** ನಲ್ಲಿ ತೆರೆಯಲಾಗುವುದು. ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.

ಸಹಿ/- ಕಾರ್ಯಪಾಲಕ ಅಭಿಯಂತರರು, ಜಯನಗರ ವಿಭಾಗ, ಬಿಬಿಎಂಪಿ.

ಕರ್ನಾಟಕ ಸರ್ಕಾರ
ಲೋಕೋಪಯೋಗಿ, ಇಲಾಖೆ ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ.
ಸಂ:ಪಿಬಿ/ಟೆಂಡರ್ ಪ್ರಕಟಣೆ/2024-25/564 ದಿ:-31.05.2024

ಅಲ್ಪಾವದಿ ಇ-ಟೆಂಡರ್ ಆಹ್ವಾನ ಪ್ರಕಟಣೆ

ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ **https://kppp.karnataka.gov.in** ಮುಖಾಂತರ ಈ ಕೆಳಕಂಡ ಕಾಮಗಾರಿಗಳಿಗೆ ಟೆಂಡರ್ ಅಹ್ವಾನಿಸಲಾಗಿದೆ ಹೆಚ್ಚಿನ ವಿವರಗಳನ್ನು ಕಾರ್ಯನಿರ್ವಾಹಕ ಇಂಜಿನೀಯರರು, ಲೋಕೋಪಯೋಗಿ ಇಲಾಖೆ, ವಿಭಾಗ, ಹೊಸಪೇಟೆ, ವಿಜಯನಗರ ಜಿಲ್ಲೆ ಕಾರ್ಯಾಲಯದಿಂದ ಮಾಹತಿಯನ್ನು ಪಡೆಯಬಹುದು.

ಕ್ರ ಸಂ	ಕಾಮಗಾರಿಯ ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ ರೂ. ಲಕ್ಷಗಳಲ್ಲಿ
1	PWD/2024-25/BD/WORK_INDENT10785	100.72
2	PWD/2024-25/RD/WORK_INDENT10713	144.62
3	PWD/2024-25/BD/WORK_INDENT6725	55.39
4	PWD/2024-25/BD/WORK_INDENT10714/CALL-2	12.95
5	PWD/2024-25/RD/WORK_INDENT10783/CALL-2	31.21

1.ಗುತ್ತಿಗೆದಾರರ ಕ್ವಾರೀಸ್ ದಿನಾಂಕ **Kppp Portal** ನಲ್ಲಿ ಇರುವಂತೆ. 2.ಟೆಂಡರ್‌ಗೆ ಅರ್ಜಿ ಮತ್ತು ಟೆಂಡರ್ ಸಲ್ಲಿಸುವ ದಿನಾಂಕ **10.06.2024 (16.00 ಗಂಟೆಗೆ).** 3.ಇ-ಪ್ರಾಕ್ಯೂರ್‌ಮೆಂಟ್ ಮುಖಾಂತರ ಬಿಡ್‌ಗಳನ್ನು ತೆರೆಯುವ ದಿನಾಂಕ **11.06.2024 (16.30 ಗಂಟೆಗೆ).** 4.ಆರ್ಥಿಕ ಬಿಡ್ ತೆರೆಯುವ ದಿನಾಂಕ: **Kppp Portal** ನಲ್ಲಿ ಇರುವಂತೆ
NOTE: ಕಾರಣಾಂತರಗಳಿಂದ ಮೇಲೆ ತಿಳಿಸಿದ ಟೆಂಡರ್ ದಿನಾಂಕಗಳು ಹಾಗೂ ಇತರೆ ಬದಲಾವಣೆಗಳಾದಲ್ಲಿ ಗುತ್ತಿಗೆದಾರರು **kppp Portal** ನಲ್ಲಿ ನೊಡಿಕೊಳ್ಳಬಹುದು

ವಾ.ಸಾ.ಸಂ.ಇ/ವಿಜಯನಗರ/2024-25/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/22
ಸಹಿ/-ಕಾರ್ಯನಿರ್ವಾಹಕ ಅಭಿಯಂತರು, ಲೋಕೋಪಯೋಗಿ ಇಲಾಖೆ ವಿಭಾಗ ಹೊಸಪೇಟೆ, ವಿಜಯನಗರ ಜಿಲ್ಲೆ.

ಭವಾನಿ ರೇವಣ್ಣ ಪತ್ತೆಗೆ ಮುಂದುವರಿದ ಶೋಧ: ಲುಕ್‌ಔಟ್ ಸಾಧ್ಯತೆ

ಅಸಲಿ ವಿಡಿಯೊ: ಬಾಯಿ ಬಿಡದ ಪ್ರಜ್ವಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೈಂಗಿಕ ದೌರ್ಜನ್ಯ ಹಾಗೂ ಅತ್ಯಾಚಾರ' ಪ್ರಕರಣದ ಮಹತ್ವದ ಪುರಾವೆ ಆಗಿರುವ ಅಸಲಿ ವಿಡಿಯೊಗಳ ಪತ್ತೆಗಾಗಿ ಎಸ್‌ಐಟಿ ಅಧಿಕಾರಿಗಳು ತನಿಖೆ ಮುಂದುವರಿಸಿದ್ದಾರೆ. ಪ್ರಕರಣದ ಆರೋಪಿಯೂ ಆಗಿರುವ ಸಂಸದ ಪ್ರಜ್ವಲ್ ರೇವಣ್ಣ ಅವರು ವಿಡಿಯೊಗಳ ಬಗ್ಗೆ ಮಾಹಿತಿ ನೀಡಲು ನಿರಾಕರಿಸಿದ್ದಾರೆ ಎಂದು ಗೊತ್ತಾಗಿದೆ.

ಪ್ರಕರಣದಲ್ಲಿ ಪ್ರಜ್ವಲ್ ರೇವಣ್ಣ ಅವರನ್ನು ಬಂಧಿಸಿ ವಿಚಾರಣೆಗಾಗಿ ಕಸ್ಟಡಿಗೆ ಪಡೆದಿರುವ ಎಸ್‌ಐಟಿ ಅಧಿಕಾರಿಗಳು, ಅವರನ್ನು ಸಿಐಡಿಯ ಸೆಲ್‌ನಲ್ಲಿ ಇರಿಸಿದ್ದಾರೆ. ಸೋಮವಾರವೂ ಬೆಳಿಗ್ಗೆ ಹಾಗೂ ಸಂಜೆ ಅಧಿಕಾರಿಗಳು, ಪ್ರಜ್ವಲ್ ಅವರನ್ನು ವಿಚಾರಣೆಗೆ ಒಳಪಡಿಸಿದರು. ಅಸಲಿ ವಿಡಿಯೊ ಇರುವ ಮೊಬೈಲ್ ಬಗ್ಗೆಯೇ ಹೆಚ್ಚು ಪ್ರಶ್ನೆಗಳನ್ನು ಕೇಳಿದ್ದರೆಂಬ ಮಾಹಿತಿ ಲಭ್ಯವಾಗಿದೆ.

'ಯಾವುದೇ ಪ್ರಶ್ನೆ ಕೇಳಿದರೂ ನನ್ನದು ಒಂದೇ ಉತ್ತರ. ನಾನು ಯಾವುದೇ ತಪ್ಪು ಮಾಡಿಲ್ಲ. ನ್ಯಾಯಾಲಯದ ಎದುರು ಇದನ್ನೇ ಹೇಳುತ್ತೇನೆ. ತನಿಖೆ ಹೆಸರಿನಲ್ಲಿ ಕಿರುಕುಳ ನೀಡಿದರೆ ಪರಿಣಾಮ ಎದುರಿಸ ಬೇಕಾಗುತ್ತದೆ' ಎಂದು ಪ್ರಜ್ವಲ್ ರೇವಣ್ಣ ಅಧಿಕಾರಿಗಳನ್ನು ಬೆದರಿಸಿದ್ದಾರೆ ಎಂದು ಗೊತ್ತಾಗಿದೆ.

ಎಸ್‌ಐಟಿ ತಂಡದಲ್ಲಿರುವ ಮಹಿಳಾ ಐಪಿಎಸ್ ಅಧಿಕಾರಿಗಳು ಸಹ ಪ್ರಜ್ವಲ್ ಅವರನ್ನು ವಿಚಾರಣೆಗೆ ಒಳಪಡಿಸಿದರು. ಕೆಲ ತಾಂತ್ರಿಕ ಪುರಾವೆಗಳನ್ನು ಮುಂದಿಟ್ಟುಕೊಂಡು ಪ್ರಶ್ನೆ ಕೇಳಿದರು. ಇವುಗಳಿಗೂ ಪ್ರಜ್ವಲ್ ಅವರು ಸಮರ್ಪಕವಾಗಿ ಉತ್ತರಿಸಿಲ್ಲವೆಂದು ಮೂಲಗಳು ಹೇಳಿವೆ.

'ಮಹಿಳೆಯರ ಮೇಲೆ ನಡೆದಿರುವ ಲೈಂಗಿಕ ದೌರ್ಜನ್ಯದ ವಿಡಿಯೊಗಳು, ಪ್ರಕರಣದ ಪ್ರಮುಖ ಪುರಾವೆಗಳು. ಆರೋಪಿ ಪ್ರಜ್ವಲ್ ರೇವಣ್ಣ ಅವರು ತಮ್ಮ ಮೊಬೈಲ್‌ನಲ್ಲಿ ವಿಡಿಯೊ ಚಿತ್ರೀಕರಿಸಿಕೊಂಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಆದರೆ, ವಿಡಿಯೊ ಇರುವ ಮೊಬೈಲ್ ಇದುವರೆಗೂ ಪತ್ತೆಯಾಗಿಲ್ಲ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಲೋಕಸಭಾ ಚುನಾವಣೆ ಮತದಾನದ ಬಳಿಕ ಪ್ರಜ್ವಲ್ ದೇಶ ತೊರೆದಿದ್ದರು. ಮೇ 30ರಂದು ತಡರಾತ್ರಿ ಜರ್ಮನಿಯಿಂದ ಬೆಂಗಳೂರಿಗೆ ಬಂದಾಗ ವಿಮಾನ ನಿಲ್ದಾಣದಲ್ಲಿ ಅವರನ್ನು ಬಂಧಿಸಲಾಗಿದೆ. ಅವರ ಬಳಿಯಿದ್ದ ಮೊಬೈಲ್ ಜಪ್ತಿ ಮಾಡಲಾಗಿತ್ತು. ಆದರೆ, ಆ ಮೊಬೈಲ್ ಹೊಸದಾಗಿ ಖರೀದಿಸಿದ್ದೆಂದು ಗೊತ್ತಾಗಿದೆ. ಹಳೆ ಮೊಬೈಲ್ ಬಗ್ಗೆ ಸದ್ಯಕ್ಕೆ ಯಾವುದೇ ಸುಳಿವು ಸಿಕ್ಕಿಲ್ಲ' ಎಂದು ತಿಳಿಸಿವೆ.

'ನಾನು ಯಾವಾಗ, ಯಾವ ಮೊಬೈಲ್ ಬಳಸುತ್ತೇನೆ ಎಂಬುದು ನನಗೆ ಗೊತ್ತಿಲ್ಲ. ಹೆಚ್ಚಾಗಿ ನನ್ನ ಸಹಾಯಕರ ಬಳಿಯೇ ಮೊಬೈಲ್‌ಗಳು ಇರುತ್ತವೆ. ಯಾರಾದರೂ ಕರೆ ಮಾಡಿದರೆ, ಸಹಾಯಕರು ನನಗೆ ತಂದು ಕೊಡುತ್ತಾರೆ. ಮಾತನಾಡಿ ವಾಪಸು ಕೊಡುತ್ತೇನೆ. ವೈಯಕ್ತಿಕ ಮೊಬೈಲ್ ಇದ್ದರೂ ಬಳಕೆ ಮಾಡುವುದು ಕಡಿಮೆ. ಹೆಚ್ಚಿನ ಸಂದರ್ಭದಲ್ಲಿ ನನ್ನ ಬಳಿ ಮೊಬೈಲ್ ಇಟ್ಟುಕೊಳ್ಳುವುದಿಲ್ಲ. ನನ್ನ ಹಲವು ಮೊಬೈಲ್‌ಗಳು ಕಳ್ಳತನ ಸಹ ಆಗಿವೆ. ಅವುಗಳನ್ನು ನೀವೇ ಹುಡುಕಿ ತನ್ನಿ' ಎಂದು ಪ್ರಜ್ವಲ್ ಹೇಳಿರುವುದಾಗಿ ಗೊತ್ತಾಗಿದೆ.

'ನಾನು ಯಾವುದೇ ವಿಡಿಯೊ ಚಿತ್ರೀಕರಣ ಮಾಡಿಲ್ಲ. ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿರುವ ವಿಡಿಯೊಗಳು ಎಲ್ಲವೂ ನಕಲಿ. ವಿಡಿಯೊ ಮಾರ್ಫಿಂಗ್ ಮಾಡಿ ಎಲ್ಲೆಡೆ ಹಂಚಿ ನನ್ನ ಗೌರವಕ್ಕೆ ಧಕ್ಕೆ ತಂದಿದ್ದಾರೆ. ಈ ಸಂಬಂಧ ಹಾಸನ ಸೆನ್ ಠಾಣೆಯಲ್ಲೂ ಈಗಾಗಲೇ ಪ್ರಕರಣ ದಾಖಲಾಗಿದ್ದು, ಅದರ ಆರೋಪಿಗಳನ್ನು ಹೆಚ್ಚಿನ ವಿಚಾರಣೆ ನಡೆಸಿದರೆ ನಕಲಿ ವಿಡಿಯೊಗಳು ನಿಮಗೆ ಸಿಗಬಹುದು' ಎಂಬುದಾಗಿ ಪ್ರಜ್ವಲ್ ಎಸ್‌ಐಟಿ ಅಧಿಕಾರಿಗಳಿಗೆ ತಿಳಿಸಿರುವುದಾಗಿ ಮೂಲಗಳು ಹೇಳಿವೆ.

ಪ್ರಯೋಗಾಲಯಕ್ಕೆ ಮೊಬೈಲ್

'ಪ್ರಜ್ವಲ್ ರೇವಣ್ಣ ಅವರ ಬಳಿ ಸಿಕ್ಕಿರುವ ಮೊಬೈಲ್ ಹಾಗೂ ಇತರೆ ತಾಂತ್ರಿಕ ಪುರಾವೆಗಳನ್ನು ಈಗಾಗಲೇ ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಅದರ ವರದಿಗಾಗಿ ಕಾಯುತ್ತಿದ್ದೇವೆ. ವಿಡಿಯೊ ಅಳಿಸಿ ಹಾಕಿರುವುದು ಕಂಡುಬಂದರೆ, ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಭವಾನಿಗಾಗಿ ಹುಡುಕಾಟ, ಸಿಗದ ಸುಳಿವು

'ಅತ್ಯಾಚಾರ ಸಂತ್ರಸ್ತೆ ಅಪಹರಣ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ' ಎನ್ನಲಾದ ಭವಾನಿ ರೇವಣ್ಣ ಅವರ ಪತ್ತೆಗಾಗಿ ಎಸ್‌ಐಟಿ ಅಧಿಕಾರಿಗಳು ಶೋಧ ಮುಂದುವರಿಸಿದ್ದಾರೆ. ಹಾಸನ, ಮಂಡ್ಯ, ಮೈಸೂರು ಹಾಗೂ ಬೆಂಗಳೂರಿನ ಹಲವು ಸ್ಥಳಗಳಿಗೆ ತೆರಳಿದ್ದ ಅಧಿಕಾರಿಗಳಿಗೆ ಸದ್ಯಕ್ಕೆ ಯಾವುದೇ ಸುಳಿವು ಸಿಕ್ಕಿಲ್ಲ.

'ವಿಚಾರಣೆಗೆ ಹಾಜರಾಗುವಂತೆ ಭವಾನಿ ರೇವಣ್ಣ ಅವರಿಗೆ ನೋಟಿಸ್ ನೀಡಲಾಗಿತ್ತು. ಆದರೆ, ಅವರು ವಿಚಾರಣೆಗೆ ಬಂದಿಲ್ಲ. ಈಗ ಅವರಿಗಾಗಿ ಹುಡುಕಾಟ ನಡೆಸಲಾಗುತ್ತಿದೆ. ಅವರ ಸುಳಿವು ಸಿಗದಿದ್ದರೆ, ಕಾನೂನು ತಜ್ಞರ ಜೊತೆ ಚರ್ಚಿಸಿ ಲುಕ್‌ಔಟ್ ನೋಟಿಸ್ ಹೊರಡಿಸುವ ಸಂಬಂಧ ಚರ್ಚಿಸ ಲಾಗುವುದು' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

ಜಾಮೀನಿಗಾಗಿ ಹೈಕೋರ್ಟ್‌ಗೆ ಭವಾನಿ

ಸಂಸದ ಪ್ರಜ್ವಲ್ ರೇವಣ್ಣ ವಿರುದ್ಧದ ಅತ್ಯಾಚಾರ ಆರೋಪ ಪ್ರಕರಣದಲ್ಲಿನ ಸಂತ್ರಸ್ತೆಯೊಬ್ಬರ ಅಪಹರಣ ಆರೋಪಕ್ಕೆ ಸಂಬಂಧಿಸಿದಂತೆ, ಪ್ರಜ್ವಲ್ ತಾಯಿ ಭವಾನಿ ರೇವಣ್ಣ ನಿರೀಕ್ಷಣಾ ಜಾಮೀನು ಕೋರಿ ಹೈಕೋರ್ಟ್ ಮೆಟ್ಟಲೇರಿದ್ದಾರೆ.ಈ ಕುರಿತ ಅರ್ಜಿಯನ್ನು ಜನಪ್ರತಿನಿಧಿಗಳ ವಿಶೇಷ ಸೆಷನ್ಸ್ ನ್ಯಾಯಾಲಯ ತಿರಸ್ಕರಿಸಿರುವ ಕಾರಣ ಭವಾನಿ ಈಗ ಹೈಕೋರ್ಟ್ ಮೊರೆ ಹೊಕ್ಕಿದ್ದಾರೆ. ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ.

ಭ್ರೂಣಹತ್ಯೆ: ಅಧಿಕಾರಿಗಳ ವಿರುದ್ಧ ಕಿಡಿ

ರಾಜ್ಯ ಮಾನವ ಹಕ್ಕು ಆಯೋಗದ ಸದಸ್ಯ ನ್ಯಾ. ಒಂಟಗೋಡಿ

ಪ್ರಜಾವಾಣಿ ವಾರ್ತೆ

ಮಹಾಲಿಂಗಪುರ (ಬಾಗಲಕೋಟೆ ಜಿಲ್ಲೆ): 'ಭ್ರೂಣಹತ್ಯೆ ಪ್ರಕರಣದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಸೂಕ್ತ ಕ್ರಮ ಕೈಗೊಂಡಿಲ್ಲ. ತಪ್ಪಿತಸ್ಥ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ರಾಜ್ಯ ಸರ್ಕಾರಕ್ಕೆ ಶಿಫಾರಸು ಮಾಡಲಾಗುವುದು' ಎಂದು ರಾಜ್ಯ ಮಾನವ ಹಕ್ಕುಗಳ ಆಯೋಗದ ಸದಸ್ಯ ನ್ಯಾ. ಎಸ್.ಕೆ. ಒಂಟಗೋಡಿ ಹೇಳಿದರು.

ಭ್ರೂಣಹತ್ಯೆ ಆರೋಪದಡಿ ಬಂಧಿತಳಾಗಿರುವ ಕವಿತಾ ಬಾಡನವರ ಮನೆಗೆ ಸೋಮವಾರ ಭೇಟಿ ನೀಡಿದ ಬಳಿಕ ಮಾತನಾಡಿ, 'ತನಿಖೆ ನಡೆಸಿ, ದೋಷಾರೋಪ ಪಟ್ಟಿ ಸಲ್ಲಿಸಲು ಪೊಲೀಸರಿಗೆ ತಿಳಿಸಿದ್ದೇನೆ. ಘಟನೆಯಲ್ಲಿ ಮಾನವ ಹಕ್ಕುಗಳ ಉಲ್ಲಂಘನೆಯಾಗಿದ್ದು, ಆಯೋಗದಿಂದಲೂ ಕ್ರಮ ಕೈಗೊಳ್ಳಲಾಗುವುದು' ಎಂದರು.

'ಭ್ರೂಣಹತ್ಯೆ ನಡೆದಿರುವ ಮನೆಯನ್ನು ಮಹಜರು ಮಾಡಿ, ಆರೋಗ್ಯ ಅಧಿಕಾರಿಗಳು ಅಗತ್ಯ ಕ್ರಮ ತೆಗೆದುಕೊಂಡಿದ್ದಾರೆ. 2022ರಲ್ಲಿ ಮುಖ್ಯದ್ವಾರವನ್ನು ಬಂದ್ ಮಾಡಲಾಗಿತ್ತು. ಆದರೆ, ಮನೆ ಒಳಗಡೆ ಸಂಪರ್ಕ ಕಲ್ಪಿಸುವ ಇನ್ನೆರಡು ಬಾಗಿಲುಗಳನ್ನು ಬಂದ್ ಮಾಡಿರಲಿಲ್ಲ. ಇದರಿಂದ ಆರೋಪಿಗಳಿಗೆ ಕೃತ್ಯ ಎಸಗಲು ಅನುಕೂಲವಾಗಿತ್ತು' ಎಂದರು.

ಮನೆಯ ಮಹಜರು ಕುರಿತು ಕೇಳಿದ ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡದ ತಾಲ್ಲೂಕು ಆರೋಗ್ಯಾಧಿಕಾರಿ ಡಾ.ವೆಂಕಟೇಶ ಮಲಘಾಣ ಅವರನ್ನು ಒಂಟಗೋಡಿ ಅವರು ತರಾಟೆಗೆ ತೆಗೆದುಕೊಂಡರು.

ಮೊಬೈಲ್ ಫೋನ್‌ನಲ್ಲಿ ದಾಖಲಿಸಿಕೊಂಡಿರುವ 'ಸಾಹುಕಾರ' ಹೆಸರಿನ ವ್ಯಕ್ತಿಯ ಕುರಿತು ಆರೋಪಿ ಕವಿತಾ ಬಾಡನವರ ಪೊಲೀಸ್ ವಿಚಾರಣೆ ವೇಳೆ ಬಹಿರಂಗಪಡಿಸಿದ್ದು, 2014ರಿಂದ ಆ ವ್ಯಕ್ತಿ ಪರಿಚಯವಿದೆ ಎಂದು ತಿಳಿಸಿದ್ದಾರೆ. ಕೆಲ ಮುಖಂಡರಿಂದ ಫೋನ್ ಪೇ ಮೂಲಕ ಕವಿತಾ ಮೊಬೈಲ್‌ಗೆ ಹಣ ಬಂದಿರುವ ಬಗ್ಗೆಯೂ ಪೊಲೀಸರು ಮಾಹಿತಿ ಸಂಗ್ರಹಿಸಿದ್ದು, ಅವರನ್ನು ಕರೆಸಿ ವಿಚಾರಣೆ ಮಾಡುವ ಸಾಧ್ಯತೆಗಳಿವೆ.

ಡಾ.ಪಟ್ಟಣಶೆಟ್ಟಿ ಅಮಾನತಿಗೆ ಶಿಫಾರಸು

ಭ್ರೂಣಹತ್ಯೆ ಪ್ರಕರಣದಲ್ಲಿ ಕರ್ತವ್ಯ ನಿರ್ಲಕ್ಷ್ಯ ವಹಿಸಿದ ಆರೋಪದ ಮೇಲೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಪಿ.ಪಿ. ಪಟ್ಟಣಶೆಟ್ಟಿ ಅವರನ್ನು ಅಮಾನತುಗೊಳಿಸುವಂತೆ ಜಿಲ್ಲಾಧಿಕಾರಿ ಜಾನಕಿ ಕೆ.ಎಂ ಅವರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆಯುಕ್ತ ಡಿ. ರಂದೀಪ್ ಅವರಿಗೆ ಶಿಫಾರಸು ಮಾಡಿದ್ದಾರೆ.

ಪಿಸಿ ಆ್ಯಂಡ್ ಪಿಎನ್‌ಡಿಟಿಯ ಜಿಲ್ಲಾ ಮಟ್ಟದ ತಪಾಸಣಾ ಮತ್ತು ಪರಿಶೀಲನಾ ಸಮಿತಿ ಅಧ್ಯಕ್ಷರಾಗಿರುವ ಡಾ.ಪಟ್ಟಣಶೆಟ್ಟಿ ಅವರ ನಿರ್ಲಕ್ಷ್ಯ ವಹಿಸಿದ್ದಾರೆ. ಆರೋಪಿ ಕವಿತಾ ಬಾಡನವರ ಹಿಂದೆ ಎರಡು ಬಾರಿ ಸಿಕ್ಕಿಬಿದ್ದರೂ ಆಕೆಯ ಮೇಲೆ ನಿಗಾವಹಿಸಿಲ್ಲ ಎಂದು ಜಿಲ್ಲಾಧಿಕಾರಿ ತಿಳಿಸಿದ್ದಾರೆ.

ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಸದಸ್ಯ ಶಶಿಧರ ಕೋಸುಂಬೆ ಮಹಾಲಿಂಗಪುರಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ ಪಟ್ಟಣಶೆಟ್ಟಿ ಅವರ ಕರ್ತವ್ಯ ನಿರ್ವಹಣೆ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದ್ದರು.

ಪ್ರತಿಭಟನೆ... ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳಲ್ಲಿ ಆರಂಭಿಕ ಬಾಲ್ಯದ ಆರೈಕೆ (ಇಸಿಸಿಇ) ತರಗತಿ ಪ್ರಾರಂಭಿಸಲು ಹೊರಡಿಸಿದ್ದ ಸುತ್ತೋಲೆಯನ್ನು ವಾಪಸ್ ಪಡೆಯುವಂತೆ ಒತ್ತಾಯಿಸಿ ಕಲಬುರಗಿಯ ಕೆಕೆಆರ್‌ಡಿಬಿ ಕಚೇರಿ ಮುಂಭಾಗದಲ್ಲಿ ಸೋಮವಾರ ರಾಜ್ಯ ಅಂಗನವಾಡಿ ನೌಕರರ ಸಂಘದ ಕಾರ್ಯಕರ್ತೆಯರು ಬೃಹತ್ ಪ್ರತಿಭಟನೆ ನಡೆಸಿದರು. ಶಿಕ್ಷಣ ಇಲಾಖೆಯ ಕಲಬುರಗಿ ವಿಭಾಗದ ಹೆಚ್ಚುವರಿ ಆಯುಕ್ತರು ಈ ಕುರಿತು ಹೊರಡಿಸಿದ್ದ ಸುತ್ತೋಲೆಯನ್ನು ರಾತ್ರಿಯ ವೇಳೆಗೆ ತಡೆಹಿಡಿದು ಆದೇಶ ಹೊರಡಿಸಿದರು. –ಪ್ರಜಾವಾಣಿ ಚಿತ್ರ/ ತಾಜುದ್ದೀನ್ ಆಜಾದ್

ಅಸಮಾಧಾನದ ಪೋಸ್ಟ್ ಹಾಕಿ ಅಳಿಸಿ ಹಾಕಿದ ಪ್ರತಾಪ ಸಿಂಹ

ಮೈಸೂರು: ಬಿಜೆಪಿ ಸಂಸದ ಪ್ರತಾಪ ಸಿಂಹ ಅವರು ಪಕ್ಷದ ವರಿಷ್ಠರ ನಡೆಗೆ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಸಾಮಾಜಿಕ ಜಾಲತಾಣ 'ಎಕ್ಸ್' ಮತ್ತು ಫೇಸ್‌ಬುಕ್‌ನಲ್ಲಿ ಸೋಮವಾರ ಬೆಳಿಗ್ಗೆ ಪೋಸ್ಟ್ ಹಾಕಿದ್ದ ಅವರು, 'ಉಡುಪಿಯ ಶಿಕ್ಷಣ ಸಂಸ್ಥೆಯೊಂದರಲ್ಲಿ ಸಮವಸ್ತ್ರ ಸಂಹಿತೆಯನ್ನು ಮುರಿದು ಬುರ್ಖಾ ಧರಿಸಿ ಕ್ಲಾಸಿಗೆ ಬಂದ ಜಿಹಾದಿ ಮನಸ್ಥಿತಿಯ ವಿರುದ್ಧ ಹೋರಾಡಿದ ರಘುಪತಿ ಭಟ್ಟರಿಗೆ ಎಂಎಲ್‌ಎ ಟಿಕೆಟ್ಟೂ ಸಿಗಲಿಲ್ಲ, ಎಂಎಲ್‌ಸಿ ಟಿಕೆಟ್ಟನ್ನೂ ಕೊಡಲಿಲ್ಲ. ಸಾಲದೆಂಬಂತೆ ಪಕ್ಷದಿಂದಲೂ ಉಚ್ಚಾಟನೆಗೆ ಒಳಗಾಗಿ ಬುರ್ಖಾ ಸ್ಟೂಡೆಂಟ್ ಆಲಿಯಾ ಅಸ್ಸಾದಿಯಿಂದ ಗೇಲಿಗೆ ಒಳಗಾಗುವ ಪರಿಸ್ಥಿತಿ ಹಿಂದುತ್ವವಾದಿಗಳಿಗೆ ಬಂದಿದ್ದು ದುರದೃಷ್ಟಕರ' ಎಂದು ಹೇಳಿದ್ದರು.

ಇದು ಚರ್ಚೆಗೆ ಗ್ರಾಸವಾಗುತ್ತಿದ್ದಂತೆಯೇ ಪಕ್ಷದ ಹಿರಿಯರು ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆನ್ನಲಾಗಿದೆ. ಹೀಗಾಗಿ, ಆ ಪೋಸ್ಟ್ ಅನ್ನು ಡಿಲೀಟ್ ಮಾಡಿದ್ದಾರೆ.

ಕೊಲೆ ಬೆದರಿಕೆ: ದೂರು ದಾಖಲಿಸಿದ ರೇಣುಕಾಚಾರ್ಯ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಮಾಜಿ ಸಚಿವ ಎಂ.ಪಿ.ರೇಣುಕಾಚಾರ್ಯ ಅವರಿಗೆ ಅಪರಿಚಿತ ವ್ಯಕ್ತಿಯೊಬ್ಬರು ದೂರವಾಣಿ ಕರೆ ಮಾಡಿ ಕೊಲೆ ಬೆದರಿಕೆಯೊಡ್ಡಿದ್ದಾರೆ.

'ಸೋಮವಾರ ಮಧ್ಯಾಹ್ನ ಎರಡು ಪ್ರತ್ಯೇಕ ಸಂಖ್ಯೆಯ ದೂರವಾಣಿ ಕರೆಗಳು ಬಂದಿದ್ದು, ಅನಾಮಧೇಯ ವ್ಯಕ್ತಿಯು 'ಏಯ್, ನಿನ್ನ ಹಾಗೂ ನಿನ್ನ ಮಗನನ್ನು ಇವತ್ತು ರಾತ್ರಿಯೇ ಕೊಲೆ ಮಾಡುತ್ತೇವೆ ಎಂದು ಬೆದರಿಕೆ ಹಾಕಿದ. ನೀನು ಯಾರು ಎಂದು ಪ್ರಶ್ನಿಸಿದಾಗ ಕರೆ ಕಟ್ ಮಾಡಿದ' ಎಂದು ರೇಣುಕಾಚಾರ್ಯ ದೂರಿದ್ದಾರೆ.

'ಈ ಹಿಂದೆಯೂ ನನಗೆ ಮತ್ತು ನನ್ನ ಕುಟುಂಬದವರಿಗೆ ಬೆದರಿಕೆ ಕರೆ ಬಂದಿದ್ದು, ಬೆಂಗಳೂರಿನ ಸದಾಶಿವನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದೆ' ಎಂದರು.

'ಪದೇಪದೇ ಕರೆ ಮಾಡಿ ಜೀವ ಬೆದರಿಕೆ ಹಾಕುತ್ತಿರುವ ಅನಾಮಧೇಯ ವ್ಯಕ್ತಿಗಳನ್ನು ಪತ್ತೆ ಮಾಡಿ ಸೂಕ್ತ ಕಾನೂನು ಕ್ರಮ ಜರುಗಿಸಬೇಕು. ನನಗೂ, ನನ್ನ ಕುಟುಂಬದವರಿಗೆ ಭದ್ರತೆ ಒದಗಿಸಬೇಕು' ಎಂದು ಹೊನ್ನಾಳಿ ಪೊಲೀಸ್ ಠಾಣೆಯಲ್ಲಿ ನೀಡಿರುವ ದೂರಿನಲ್ಲಿ ಅವರು ಕೋರಿದ್ದಾರೆ.

ದೂರುದಾರ ರೇಣುಕಾಚಾರ್ಯ ಅವರಿಗೆ ಮಲೇಷ್ಯಾದಿಂದ ಕರೆ ಬಂದಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಮೋದಿ 100 ದಿನಗಳ ಕಾರ್ಯಕ್ರಮ ರಾಜಕೀಯ ತಂತ್ರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಧಾನಿ ನರೇಂದ್ರ ಮೋದಿಯವರ ನೂರು ದಿನಗಳ ಕಾರ್ಯಕ್ರಮ ರಾಜಕೀಯ ತಂತ್ರದ ಭಾಗ. ಜನರ ಮನಃಸ್ಥಿತಿಯನ್ನು ಸಜ್ಜು ಮಾಡುವ ವ್ಯಾಖ್ಯಾನ ಬಿಟ್ಟರೆ ಬೇರೇನೂ ಅಲ್ಲ' ಎಂದು ಉಪ ಮುಖ್ಯಮಂತ್ರಿ ಡಿ. ಕೆ. ಶಿವಕುಮಾರ್ ಅಭಿಪ್ರಾಯಪಟ್ಟರು.

ಸುದ್ದಿಗಾರರ ಪ್ರಶ್ನೆಗಳಿಗೆ ಸೋಮವಾರ ಪ್ರತಿಕ್ರಿಯಿಸಿದ ಅವರು, 'ನಾವು ಕೂಡಾ ರಾಜಕೀಯ ತಂತ್ರ ಹೊಂದಿದ್ದೇವೆ. ಪ್ರತಿಯೊಂದು ಪಕ್ಷವೂ ಒಂದೊಂದು ತಂತ್ರ ಅನುಸರಿಸುತ್ತದೆ' ಎಂದರು.

'ಲೋಕಸಭೆ ಚುನಾವಣೋತ್ತರ ಸಮೀಕ್ಷೆ ಸುಳ್ಳಾಗಲಿದೆ. 'ಇಂಡಿಯಾ' ಮೈತ್ರಿ ಒಕ್ಕೂಟ ಬಹುಮತ ಪಡೆದು ಸರ್ಕಾರ ರಚಿಸಲಿದೆ' ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಚುನಾವಣೋತ್ತರ ಸಮೀಕ್ಷೆಯ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಪಕ್ಷದ ವರಿಷ್ಠ ರಾಹುಲ್ ಗಾಂಧಿ ಅವರು ಸಮೀಕ್ಷೆ ಒಪ್ಪಲು ಸಾಧ್ಯವಿಲ್ಲ ಎಂದು ಈಗಾಗಲೇ ಹೇಳಿದ್ದಾರೆ. ರಾಜ್ಯದಲ್ಲಿ ನಾವು ಕನಿಷ್ಠ 15 ಸ್ಥಾನಗಳನ್ನು ಗೆಲ್ಲುತ್ತೇವೆ. ಸಮೀಕ್ಷೆಯನ್ನು ನಾವು ತಳ್ಳಿಹಾಕುತ್ತೇವೆ' ಎಂದರು.

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು–560 001, ಕರ್ನಾಟಕ, ಭಾರತ
ಫೋನ್: 25581383, 25589112, 25586520, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್ : https://kspcb.karnataka.gov.in.

ಸಂಖ್ಯೆ:ಮಾನಿಮಂ/74/17ನೇ ಪ್ರವರ್ಗ/ಹೆಚ್‌ಪಿಐ/ಇ.ಪಿ.ಎಚ್/2023/2024/949 ದಿನಾಂಕ:03/06/2024

ಪರಿಸರ ಸಾರ್ವಜನಿಕ ಸಭೆಗಾಗಿ ಸೂಚನೆ

ಮೆ॥ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಇವರು ಬೆಳಗಾವಿ ಜಿಲ್ಲೆ, ಅಥಣಿ ತಾಲ್ಲೂಕು, ಸಂಕೋನಟ್ಟಿ ಗ್ರಾಮದ ಸರ್ವೇ ನಂ.1141, 1142, 1143, 1136, 1137, 225 & 226 ರಲ್ಲಿ ಹಾಲಿ ಇರುವ ಸಕ್ಕರೆ ಘಟಕದ ಆವರಣದಲ್ಲಿ ಎಥನಾಲ್ ಉತ್ಪಾದಿಸಲು 150 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ ಘಟಕ ಹಾಗೂ 2.5 ಮೆಗಾವ್ಯಾಟ್ ಸಾಮರ್ಥ್ಯದ ಸಹ–ವಿದ್ಯುತ್ ಘಟಕವನ್ನು ಸ್ಥಾಪಿಸಲು ಉದ್ದೇಶಿಸಿದ್ದು, ಈ ಬಗ್ಗೆ ಸಾರ್ವಜನಿಕ ಪರಿಸರ ಸಭೆ ನಡೆಸಲು ಉದ್ದೇಶಿಸಲಾಗಿದೆ.ಸದರಿ ಯೋಜನೆಯ ಪ್ರವರ್ತಕರು ಪರಿಸರ ಅಘಾತ ಅಧ್ಯಯನದ ಅಧಿಸೂಚನೆ ದಿನಾಂಕ: 14.9.2006ರ (ತಿದ್ದುಪಡಿ ದಿನಾಂಕ: 09.05.2022) ಪ್ರಕಾರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ ಭಾರತ ಸರ್ಕಾರ, ಇವರಿಂದ ಪೂರ್ವ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಮತ್ತು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಬೇಕಾಗಿರುತ್ತದೆ. ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರ ಇವರ Terms of Reference ಪತ್ರ ಸಂಖ್ಯೆ: IA-J-11011/193/2023-IA-II(I) ದಿನಾಂಕ: 10.05.2023 ರಂತೆ ಹಾಗೂ ಉದ್ದಿಮೆ ನಿವೇದನೆ ಪತ್ರ ಮಂಡಳಿಯಲ್ಲಿ ಸ್ವೀಕೃತಿ ದಿನಾಂಕ:06.12.2023 ರ ಪ್ರಕಾರ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ದಿನಾಂಕ:17.04.2024ರಂದು ನಡೆಸಲು ಯೋಜಿಸಲಾಗಿತ್ತು. ಈ ಸಂಬಂಧ ದಿನಾಂಕ:14.03.2024ರಂದು ಪ್ರಜಾವಾಣಿ (ಕನ್ನಡ) ಮತ್ತು ಇಂಡಿಯನ್ ಎಕ್ಸಪ್ರೆಸ್ (ಆಂಗ್ಲ ಭಾಷೆ) ದಿನ ಪತ್ರಿಕೆಗಳಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ವತಿಯಿಂದ ಪತ್ರಿಕಾ ಪ್ರಕಟಣೆ ನೀಡಲಾಗಿತ್ತು. ಆದರೆ ಲೋಕಸಭಾ 2024 ಚುನಾವಣೆಯ ಮಾದರಿ ನೀತಿ ಸಂಹಿತೆ ಜಾರಿ ಇರುವ ಕಾರಣ ಬೆಳಗಾವಿ ಜಿಲ್ಲಾಧಿಕಾರಿಗಳು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮುಂದೂಡಲು ಸೂಚಿಸಿದ್ದು, ಅದರಂತೆ ದಿನಾಂಕ:11.04.2024ರಂದು ಅದೇ ದಿನಪತ್ರಿಕೆಗಳಲ್ಲಿ ಸಭೆ ಮುಂದೂಡಿಕೆ ಪತ್ರಿಕಾ ಪ್ರಕಟಣೆಯನ್ನು ನೀಡಲಾಗಿತ್ತು.ಮುಂದುವರೆದು, ದಿನಾಂಕ:19.06.2024ರಂದು ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಡೆಸಲು ಬೆಳಗಾವಿ ಜಿಲ್ಲಾಧಿಕಾರಿಗಳು ಮರು ದಿನಾಂಕ ನಿಗದಿ ಪಡಿಸಿದ್ದು, ಈ ಸಂಬಂಧ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯ, ಭಾರತ ಸರ್ಕಾರದ ಅಧಿಸೂಚನೆ ಸಂಖ್ಯೆ: No.S.O.2163(E) ದಿನಾಂಕ: 09.05.2022 ರಂತೆ 15 ದಿನಗಳ ಸೂಚನಾ ಅವಧಿ ನೀಡಿ ಪತ್ರಿಕಾ ಪ್ರಕಟಣೆಯನ್ನು ನೀಡಲಾಗುತ್ತಿದೆ. **ಯೋಜನೆಯ ವಿವರಗಳು ಕಳಕಂಡಂತಿವೆ.**

1. **ಕಂಪನಿಯ ಹೆಸರು ಮತ್ತು ವಿಳಾಸ:** ಮೆ॥ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಸಂಕೋನಟ್ಟಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ–591304.
2. **ಉದ್ದೇಶಿತ ಯೋಜನೆಯ ಸ್ಥಳ:** ಸರ್ವೇ ನಂ.1141, 1142, 1143, 1136, 1137, 225 & 226, ಸಂಕೋನಟ್ಟಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.
3. **ಉದ್ದೇಶಿತ ಕಾರ್ಖಾನೆಯ ಯೋಜನೆ:** ಹಾಲಿ ಇರುವ ಸಕ್ಕರೆ ಘಟಕದ ಆವರಣದಲ್ಲಿ ಎಥನಾಲ್ ಉತ್ಪಾದಿಸಲು 150 ಕೆಎಲ್‌ಪಿಡಿ ಸಾಮರ್ಥ್ಯದ ಡಿಸ್ಟಿಲರಿ ಘಟಕ ಹಾಗೂ 2.5 ಮೆಗಾವ್ಯಾಟ್ ಸಾಮರ್ಥ್ಯದ ಸಹ–ವಿದ್ಯುತ್ ಘಟಕವನ್ನು ಸ್ಥಾಪಿಸುವುದು.
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ: 19.06.2024 (ಬುಧವಾರ)ಸಮಯ: ಬೆಳಿಗ್ಗೆ 11:30 ಗಂಟೆಸ್ಥಳ: ಯೋಜನಾ ಸ್ಥಳ, ಮೆ॥ ಕೃಷ್ಣಾ ಸಹಕಾರಿ ಸಕ್ಕರೆ ಕಾರ್ಖಾನೆ ನಿಯಮಿತ, ಸಂಕೋನಟ್ಟಿ ಗ್ರಾಮ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ.**

5 ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ : ಅ) ಜಿಲ್ಲಾಧಿಕಾರಿಗಳ ಕಛೇರಿ, ಬೆಳಗಾವಿ ಜಿಲ್ಲೆ, ಬೆಳಗಾವಿ. ಆ) ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬೆಳಗಾವಿ ಜಿಲ್ಲೆ, ಬೆಳಗಾವಿ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬೆಳಗಾವಿ ಜಿಲ್ಲೆ, ಬೆಳಗಾವಿ. ಈ. ಸಂಕೋನಟ್ಟಿ ಗ್ರಾಮ ಪಂಚಾಯಿತಿ, ಅಥಣಿ ತಾಲ್ಲೂಕು, ಬೆಳಗಾವಿ ಜಿಲ್ಲೆ. ಉ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಪ್ಲಾಟ್ ನಂ3224/3, "ಹನುಮಾನ್ ನಿವಾಸ್", 1ನೇ ಮಹಡಿ, ಬಿ.ಕೆ.ಕಾಲೇಜು ರಸ್ತೆ, ಚಿಕ್ಕೋಡಿ–591201. ಊ) ಕೇಂದ್ರ ಅರಣ್ಯ, ಪರಿಸರ ಹಾಗೂ ಹವಾಗುಣ ಬದಲಾವಣೆ ಮಂತ್ರಾಲಯ, ದಕ್ಷಿಣ ವಲಯ ಕಛೇರಿ, ನಂ.ಇ–3/240, ಕೇಂದ್ರೀಯ ಸದನ, 4ನೇ ಮಹಡಿ, ಇ ಮತ್ತು ಎಫ್ ವಿಂಗ್ಸ್, 17ನೇ ಮುಖ್ಯರಸ್ತೆ, 2ನೇ ಬ್ಲಾಕ್, ಕೋರಮಂಗಲ, ಬೆಂಗಳೂರು–560034. ಋ) ಸಹಾಯ ಕೇಂದ್ರ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಿಗೆ ಈ ಅಧಿಸೂಚನೆ ಪ್ರಕಟವಾದ 30 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್: kspcb.karnataka.gov.in ನಲ್ಲಿ ಪಡೆಯಬಹುದು.

ಸಹಿ/–
ಸದಸ್ಯ ಕಾರ್ಯದರ್ಶಿ

ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ
ನಂ.49, "ಪರಿಸರ ಭವನ", 1 ರಿಂದ 5ನೇ ಅಂತಸ್ತು, ಚರ್ಚ್ ಸ್ಟ್ರೀಟ್,
ಬೆಂಗಳೂರು–560 001. ಕರ್ನಾಟಕ ರಾಜ್ಯ, ಭಾರತ.
ಫೋನ್: 25581383, 25589112, 25589113, ಫ್ಯಾಕ್ಸ್: 080–25586321
ಈ–ಮೇಲ್: ho@kspcb.gov.in ವೆಬ್‌ಸೈಟ್: https://kspcb.karnataka.gov.in

ಸಂಖ್ಯೆ: ಮಾನಿಮಂ/269/ಹಿಪಅ/ಗಣಿ/ಪಸಾಸ/2024–25/758 ದಿನಾಂಕ: 23/05/2024

ಪರಿಸರ ಸಾರ್ವಜನಿಕ ಸಭೆಗಾಗಿ ಅಧಿಸೂಚನೆ

ಮೆ. ರಂಗಿನೇನಿ ಸ್ಟೀಲ್ ಅಂಡ್ ಪವರ್ ಪ್ರೈವೇಟ್ ಲಿಮಿಟೆಡ್, ರವರು ಬಳ್ಳಾರಿ ಜಿಲ್ಲೆ, ಬಳ್ಳಾರಿ ತಾಲ್ಲೂಕು, ಹರಗಿನದೋಣಿ ಗ್ರಾಮದ ಸರ್ವೆ ನಂ. 22/1, 22/2, 22/3, 22/A, 22/B1, 22/B2, 22/B3, 22/C1, 22/C2, 22/C3, 22/C4, 139(P), 142, 140/2, 140/3, 140/A, 140/B, 141/A, 143/2C/1 & 143/5 ರ ಒಟ್ಟು 78.39 ಎಕರೆ ಪ್ರದೇಶದಲ್ಲಿ 62,700 TPA (2 x 95 TPD) ಉತ್ಪಾದನಾ ಸಾಮರ್ಥ್ಯದ ಸ್ಪಾಂಜ್ ಐರನ್ ಘಟಕ, 12 Ton/Hr ಸಾಮರ್ಥ್ಯದ ಇಂಡಕ್ಷನ್ ಫರ್ನೇಸ್ ಮೂಲಕ 39,600 TPA MS ಬಿಲ್ಲೆಟ್ಸ್ ತಯಾರಿಕಾ ಘಟಕ ಹಾಗು 6 MW ಸಾಮರ್ಥ್ಯದಕ್ಯಾಪ್ಟಿವ್ ಪವರ್ ಪ್ಲಾಂಟ್ (AFBC- 3MW & WHRB- 3MW) ಘಟಕವನ್ನು ಹೊಸದಾಗಿ ಸ್ಥಾಪಿಸಲು ಯೋಜನಾ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಯೋಜನೆಯ ಪ್ರವರ್ತಕರು ಪರಿಸರ ಆಘಾತ ಅಧ್ಯಯನದ ಅಧಿಸೂಚನೆ ದಿನಾಂಕ:14.09.2006ರ (ತಿದ್ದುಪಡಿ ದಿನಾಂಕ: 01.12.2009) ಪ್ರಕಾರ, ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರಿಂದ ಮೊದಲೇ ಪರಿಸರ ವಿಮೋಚನಾ ಪತ್ರವನ್ನು ಪಡೆಯಬೇಕಾಗಿರುತ್ತದೆ ಹಾಗೂ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ನಿಯೋಜಿಸುವ ಜವಾಬ್ದಾರಿಯು ಮಂಡಳಿಯದ್ದಾಗಿರುತ್ತದೆ. ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, ಕರ್ನಾಟಕ, ಇವರ Terms of Reference ಪತ್ರ ಸಂಖ್ಯೆ : SEIAA 39 IND 2023, ದಿನಾಂಕ: 30.08.2023 ಹಾಗೂ ಉದ್ದಿಮೆಯವರು ನೀಡಿದ ನಿವೇದನೆಯ ಪತ್ರ ದಿನಾಂಕ: 11.01.2024 ರ ಪ್ರಕಾರ ಮತ್ತು ಪ್ರಾದೇಶಿಕ ಅಧಿಕಾರಿ, ಬಳ್ಳಾರಿ, ಇವರ ಪತ್ರ ದಿನಾಂಕ: 20.02.2024 ರಲ್ಲಿ ಸೂಚಿಸಿದ ದಿನಾಂಕದಂತೆ, ಈ ಹಿಂದೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯು ದಿನಾಂಕ:28.03.2024ರಂದು ನಿಗದಿಯಾಗಿತ್ತು ಮತ್ತು ಈ ಕುರಿತು ದಿನಾಂಕ:27.02.2024 ರಂದು ಪತ್ರಿಕಾ ಪ್ರಕಟಣೆಯನ್ನು (ಕನ್ನಡ: ಪ್ರಜಾವಾಣಿ ಮತ್ತು ಆಂಗ್ಲ: ಇಂಡಿಯನ್ ಎಕ್ಸ್‌ಪ್ರೆಸ್) ಸಹ ನೀಡಲಾಗಿತ್ತು.

ಮುಂದುವರೆದಂತೆ, ಪ್ರಾದೇಶಿಕ ಅಧಿಕಾರಿ, ಬಳ್ಳಾರಿ ಇವರು ದಿನಾಂಕ: 22.03.2024ರ ಪತ್ರದಲ್ಲಿ ಲೋಕಸಭಾ ಚುನಾವಣೆ–2024ರ ಮಾದರಿ ನೀತಿ ಸಂಹಿತೆ (MCC) ರಾಜ್ಯದಲ್ಲಿ ಜಾರಿಯಲ್ಲಿರುವುದರಿಂದ ನಿಗದಿಯಾಗಿದ್ದ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು ಮುಂದೂಡಲಾಗಿದೆ ಎಂದು ಜಿಲ್ಲಾಧಿಕಾರಿಗಳು ಸೂಚಿಸಿರುವುದಾಗಿ ತಿಳಿಸಿರುತ್ತಾರೆ. ಮುಂದುವರೆದಂತೆ, ಉದ್ದಿಮೆದಾರರು ದಿನಾಂಕ: 04.05.2024ರ ಪತ್ರದಲ್ಲಿ ಸದರಿ ಯೋಜನೆ ಕುರಿತು ಪರಿಸರ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಮರು ದಿನಾಂಕ ನಿಗದಿ ಮಾಡುವಂತೆ ಕೋರಿರುತ್ತಾರೆ. ಅದರಂತೆ, ಮಂಡಳಿಯ ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರಿಗೆ ದಿನಾಂಕ: 14.05.2024ರ ಪತ್ರದಲ್ಲಿ ಸಾರ್ವಜನಿಕ ಆಲಿಕೆ ಸಭೆ ನಡೆಸಲು ಮರು ದಿನಾಂಕ ನಿಗದಿ ಪಡಿಸುವಂತೆ ಕೋರಲಾಗಿತ್ತು.

ಪ್ರಸ್ತುತ, ಪ್ರಾದೇಶಿಕ ಅಧಿಕಾರಿ, ಬಳ್ಳಾರಿ ಇವರು ದಿನಾಂಕ:22.05.2024ರ ಪತ್ರದಲ್ಲಿ ಮಾನ್ಯ ಜಿಲ್ಲಾಧಿಕಾರಿಗಳು, ಬಳ್ಳಾರಿ ಜಿಲ್ಲೆ ಇವರ ಸೂಚನೆ ಮೇರೆಗೆ ಪರಿಸರ ಸಾರ್ವಜನಿಕ ಆಲಿಕೆ ಸಭೆಯನ್ನು **ದಿನಾಂಕ: 25.06.2024 (ಮಂಗಳವಾರ) ಬೆಳಿಗ್ಗೆ 11.00 ಘಂಟೆಗೆ, ಯೋಜನಾ ಪ್ರದೇಶದಲ್ಲಿ ಹಮ್ಮಿಕೊಳ್ಳಲು ಮರುನಿಗದಿಪಡಿಸಲಾಗಿದೆ** ಎಂದು ತಿಳಿಸಿರುತ್ತಾರೆ.

ಯೋಜನೆಯ ವಿವರಗಳು ಕೆಳಕಂಡಂತಿದೆ:

1. **ಕಂಪನಿಯ ಹೆಸರು ಮತ್ತು ವಿಳಾಸ:** ಮೆ. ರಂಗಿನೇನಿ ಸ್ಟೀಲ್ ಅಂಡ್ ಪವರ್ ಪ್ರೈವೇಟ್ ಲಿಮಿಟೆಡ್, **Admin Office:** ಡೋರ್ ನಂ. 15, ಕಲ್ಪವೃಕ್ಷ ರೆಸಿಡೆನ್ಸಿ, ಬಾಲ ಭಾರತಿ ಸ್ಕೂಲ್ ಪಕ್ಕ, 3ನೇ ಕ್ರಾಸ್, ಗಾಂಧಿ ನಗರ, ಬಳ್ಳಾರಿ ಜಿಲ್ಲೆ– 583 103.
Regd Office: 42ಎ,ಎಫ್ ನಂ. 201, ಹ್ಯಾಪಿ ಹೋವ್ಸ್, ಶ್ರೀನಿ ಎನ್‌ಕ್ಲೇವ್, ಗೇಟ್ ನಂ. 1, ಎಚ್‌ಟಿ ರಸ್ತೆ, ಬಾಶೀರ್‌ಬಾದ್ ಪೇಟ್, ಹೈದ್ರಾಬಾದ್–500 055.
2. **ಉದ್ದೇಶಿತ ಯೋಜನೆಯ ಸ್ಥಳ:** ಸರ್ವೆ ನಂ. 22/1, 22/2, 22/3, 22/A, 22/B1, 22/B2, 22/B3, 22/C1, 22/C2, 22/C3, 22/C4, 139(P), 142, 140/2, 140/3, 140/A, 140/B, 141/A, 143/2C/1 & 143/5, ಹರಗಿನದೋಣಿ ಗ್ರಾಮ, ಬಳ್ಳಾರಿ ತಾಲ್ಲೂಕು & ಬಳ್ಳಾರಿ ಜಿಲ್ಲೆ.
3. **ಉದ್ದೇಶಿತ ವಿಸ್ತರಣಾ ಯೋಜನೆಯ ವಿವರ:** 62,700 TPA (2 x 95 TPD) ಉತ್ಪಾದನಾ ಸಾಮರ್ಥ್ಯದ ಸ್ಪಾಂಜ್ ಐರನ್ ಘಟಕ, 12 Ton/Hr ಸಾಮರ್ಥ್ಯದ ಇಂಡಕ್ಷನ್ ಫರ್ನೇಸ್ ಮೂಲಕ 39,600 TPA MS ಬಿಲ್ಲೆಟ್ಸ್ ತಯಾರಿಕಾ ಘಟಕ ಹಾಗು 6 MW ಸಾಮರ್ಥ್ಯದ ಕ್ಯಾಪ್ಟಿವ್ ಪವರ್ ಪ್ಲಾಂಟ್ (AFBC- 3MW & WHRB- 3MW) ಘಟಕವನ್ನು ಒಟ್ಟು 78.39 ಎಕರೆ ಪ್ರದೇಶದಲ್ಲಿ ಸ್ಥಾಪಿಸಲು ಉದ್ದೇಶಿಸಿ ಯೋಜನಾ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.
4. **ಪರಿಸರ ಸಾರ್ವಜನಿಕ ಸಭೆಯ ಸ್ಥಳ, ದಿನಾಂಕ ಮತ್ತು ಸಮಯ: ದಿನಾಂಕ : 25.06.2024 (ಮಂಗಳವಾರ). ಸಮಯ : ಬೆಳಗ್ಗೆ 11.00 ಗಂಟೆ. ಸ್ಥಳ : ಯೋಜನಾ ಸ್ಥಳ,** ಮೆ. ರಂಗಿನೇನಿ ಸ್ಟೀಲ್ ಅಂಡ್ ಪವರ್ ಪ್ರೈವೇಟ್ ಲಿಮಿಟೆಡ್, ಹರಗಿನದೋಣಿ ಗ್ರಾಮ, ಬಳ್ಳಾರಿ ತಾಲ್ಲೂಕು & ಬಳ್ಳಾರಿ ಜಿಲ್ಲೆ.
5. **ಪರಿಸರ ಸಾರ್ವಜನಿಕ ಕಾರ್ಯಕಾರಿ ಸಾರಾಂಶ ಸಾರ್ವಜನಿಕ ಪರಾಮರ್ಶೆಗೆ ಲಭ್ಯವಿರುವ ಸ್ಥಳ:** ಅ) ಜಿಲ್ಲಾಧಿಕಾರಿಗಳ ಕಛೇರಿ, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಆ) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಕಛೇರಿ, ಜಿಲ್ಲಾ ಪಂಚಾಯತ್, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಇ) ಜಿಲ್ಲಾ ಕೈಗಾರಿಕಾ ಕೇಂದ್ರ, ಬಳ್ಳಾರಿ ಜಿಲ್ಲೆ, ಬಳ್ಳಾರಿ. ಈ) ತಹಶೀಲ್ದಾರರ ಕಾರ್ಯಲಯ, ಬಳ್ಳಾರಿ ತಾಲ್ಲೂಕು. ಉ) ಪಟ್ಟಣ ಪಂಚಾಯತಿ ಕಾರ್ಯಾಲಯ, ಕುಡಿತಿನಿ. ಊ) ಗ್ರಾಮ ಪಂಚಾಯತಿ ಕಾರ್ಯಾಲಯ, ಬೆಳಗಲ್ಲು ಗ್ರಾಮ, ಬಳ್ಳಾರಿ ತಾಲ್ಲೂಕು. ಎ) ಗ್ರಾಮ ಪಂಚಾಯತಿ ಕಾರ್ಯಾಲಯ, ವೇಣಿವೀರಾಪುರ ಗ್ರಾಮ, ಬಳ್ಳಾರಿ ತಾಲ್ಲೂಕು. ಏ) ಪ್ರಾದೇಶಿಕ ಕಛೇರಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, ಬಳ್ಳಾರಿ. ಒ) ರಾಜ್ಯ ಮಟ್ಟದ ಪರಿಸರ ಆಘಾತ ಅಧ್ಯಯನ ಪ್ರಾಧಿಕಾರ, 7ನೇ ಮಹಡಿ 4ನೇ ಗೇಟ್, ಬಹುಮಹಡಿಗಳ ಕಟ್ಟಡ, ಕರ್ನಾಟಕ, ಬೆಂಗಳೂರು–560 001. ಓ) **ಸಹಾಯ ಕೇಂದ್ರ,** ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ, "ಪರಿಸರ ಭವನ", ನೆಲ ಅಂತಸ್ತು, ನಂ.49, ಚರ್ಚ್ ಸ್ಟ್ರೀಟ್, ಬೆಂಗಳೂರು–560001.

ಸೂಚನೆ: ಯೋಜನಾ ಸ್ಥಳದಲ್ಲಿ ವಾಸವಾಗಿರುವ ಆಸಕ್ತ ನಿವಾಸಿಗಳು, ಪರಿಸರಾಸಕ್ತ ಗುಂಪುಗಳು ಮತ್ತು ಈ ಯೋಜನೆಯಿಂದ ತೊಂದರೆಗೊಳಗಾಗಬಹುದಾದ ಸಾರ್ವಜನಿಕರು ತಮ್ಮ ಸಲಹೆಗಳು, ಅನಿಸಿಕೆಗಳು, ಟೀಕೆ–ಟಿಪ್ಪಣಿಗಳು ಹಾಗು ಅಹವಾಲುಗಳನ್ನು ಮೌಖಿಕ/ಲಿಖಿತ/ಇ–ಮೇಲ್ ಮೂಲಕ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ/ಅಧ್ಯಕ್ಷರು, ಪರಿಸರ ಸಾರ್ವಜನಿಕ ಸಮಿತಿ (ಜಿಲ್ಲಾಧಿಕಾರಿಗಳು, ಬಳ್ಳಾರಿಜಿಲ್ಲೆ, ಬಳ್ಳಾರಿ) ಇವರಿಗೆ ಈ ಅಧಿಸೂಚನೆ ಪ್ರಕಟವಾದ 15 ದಿನಗಳ ಒಳಗೆ ಸಲ್ಲಿಸತಕ್ಕದ್ದು. ಇಚ್ಛೆಯುಳ್ಳ ಸಾರ್ವಜನಿಕರು ಮೇಲೆ ತಿಳಿಸಿರುವ ದಿನದಂದು ಪರಿಸರ ಸಾರ್ವಜನಿಕ ಸಭೆಯಲ್ಲಿ ಪಾಲ್ಗೊಳ್ಳಬಹುದಾಗಿದೆ. **ಹೆಚ್ಚಿನ ವಿವರಗಳನ್ನು ಮಂಡಳಿಯ ವೆಬ್‌ಸೈಟ್ : kspcb.karnataka.gov.in ನಲ್ಲಿ ಪಡೆಯಬಹುದು.**

ಸಹಿ/–
ಸದಸ್ಯ ಕಾರ್ಯದರ್ಶಿ

Infosys®
Navigate your next
ಇನ್‌ಫೋಸಿಸ್ ಲಿಮಿಟೆಡ್
ಕಾರ್ಪೊರೇಟ್ ಗುರುತು ಸಂಖ್ಯೆ (ಸಿಐಎನ್): L85110KA1981PLC013115
ನೋಂದಾಯಿತ ಕಛೇರಿ: ಎಲೆಕ್ಟ್ರಾನಿಕ್ಸ್ ಸಿಟಿ, ಹೊಸೂರು ರಸ್ತೆ, ಬೆಂಗಳೂರು – 560 100
ದೂರವಾಣಿ: 91 80 2852 0261, ಫ್ಯಾಕ್ಸ್: 91 80 2852 0362
investors@infosys.com, www.infosys.com

43ನೇ ವಾರ್ಷಿಕ ಸರ್ವಸದಸ್ಯರ ಸಭೆ ಮತ್ತು ವಿ–ಮತದಾನ ಮಾಹಿತಿ ಸೂಚನೆ

ಈ ಕೆಳಕಂಡಂತೆ ಸೂಚಿಸಲಾಗಿದೆ:

1. ಇನ್‌ಫೋಸಿಸ್ ಲಿಮಿಟೆಡ್ ("ಕಂಪನಿ")ನ 43ನೇ ವಾರ್ಷಿಕ ಸರ್ವಸದಸ್ಯರ ಸಭೆಯನ್ನು (ಎಜಿಎಮ್) ಬುಧವಾರ, ಜೂನ್ 26, 2024 ಭಾರತೀಯ ಕಾಲಮಾನ ಸಂಜೆ 4:00ಕ್ಕೆ ಸರಿಯಾಗಿ ವಿಡಿಯೋ ಕಾನ್ಫರೆನ್ಸ್/ಇತರೆ ದೃಶ್ಯಶ್ರಾವ್ಯ ಮಾಧ್ಯಮದ (ವಿಸಿ) ಮೂಲಕ ನಡೆಸಲಾಗುವುದು. ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಮ್‌ಸಿಎ) ಹೊರಡಿಸಿರುವ ಸಾಮಾನ್ಯ ಸುತ್ತೋಲೆ ಸಂಖ್ಯೆ 09/2023, ದಿನಾಂಕ ಸೆಪ್ಟೆಂಬರ್ 25, 2023 ಅನ್ವಯ ಸೆಕ್ಯುರಿಟೀಸ್ ಮತ್ತು ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಸೆಬಿ) ಹೊರಡಿಸಿರುವ ಸುತ್ತೋಲೆ ಸಂಖ್ಯೆ SEBI/HO/CFD/CFD-PoD-2/P/CIR/2023/167 ದಿನಾಂಕ ಅಕ್ಟೋಬರ್ 7, 2023, (ಇನ್ನು ಮುಂದೆ ಸಂಗ್ರಾಹ್ಯವಾಗಿ "ಸುತ್ತೋಲೆಗಳು" ಎಂದು ಸೂಚಿಸಲಾಗುವುದು), ಅನ್ವಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಸಿ ಮೂಲಕ, ಒಂದು ಸ್ಥಳದಲ್ಲಿ ಸದಸ್ಯರು ಭೌತಿಕ ಉಪಸ್ಥಿತಿಯಿಲ್ಲದೆ ನಡೆಸಲು ಅನುವುಮಾಡಿಕೊಡುತ್ತವೆ. ಆದ್ದರಿಂದ, ಕಂಪನಿಯ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ವಿಸಿ ಮೂಲಕ ದಿನಾಂಕ ಏಪ್ರಿಲ್ 18, 2024ರ ವಾರ್ಷಿಕ ಸರ್ವ ಸದಸ್ಯರ ಸಭೆಯ ಸೂಚನೆಯಲ್ಲಿ ಹೇಳಲಾದಂತೆ ವ್ಯಾಪಾರ ವಹಿವಾಟುಗಳನ್ನು ನಡೆಸಲಾಗುವುದು.
2. ಮೇಲ್ಕಾಣಿಸಿದ ಸುತ್ತೋಲೆಗಳಂತೆ, ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆ ಹಾಗೂ ಸಂಯೋಜಿತ ವಾರ್ಷಿಕ ವರದಿ 2023-24 ಇವುಗಳನ್ನು ಯಾವ ಸದಸ್ಯರು ವಿದ್ಯುನ್ಮಾನ ಅಂಚೆ, ಕಂಪನಿ / ಡಿಪಾಸಿಟರಿ ಪಾರ್ಟಿಸಿಪೇಂಟ್(ಗಳು) ("ಡಿಪಿ") ಇವರಲ್ಲಿ ನೋಂದಾಯಿತವಾಗಿದೆಯೋ ಆ ವಿದ್ಯುನ್ಮಾನ ಅಂಚೆಗಳಿಗೆ ವಿದ್ಯುನ್ಮಾನ ಪ್ರತಿಗಳನ್ನು ಕಳುಹಿಸಲಾಗಿದೆ. ಸದರಿ ದಸ್ತಾವೇಜುಗಳು ಕಂಪನಿಯ ಜಾಲತಾಣ www.infosys.com ದಲ್ಲಿಯೂ ಸ್ಟಾಕ್ ಎಕ್ಸ್‌ಚೇಂಜ್ ಜಾಲತಾಣಗಳಲ್ಲಿಯೂ ಮತ್ತು ನ್ಯಾಷನಲ್ ಸೆಕ್ಯೂರಿಟೀಸ್ ಡೆಪಾಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್)ನ ಜಾಲತಾಣ https://www.evoting.nsdl.com.ಗಳಲ್ಲಿಯೂ ಲಭ್ಯವಿರುತ್ತದೆ. ವಿದ್ಯುನ್ಮಾನ ಅಂಚೆಯ ಮೂಲಕ ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನೆಯನ್ನು ಕಳುಹಿಸುವ ಪ್ರಕ್ರಿಯೆ ದಿನಾಂಕ ಜೂನ್ 3, 2024ರಂದು ಪೂರ್ಣಗೊಳಿಸಲಾಗಿದೆ.
3. ನಿರ್ಣಾಯಕ ದಿನಾಂಕದಂತೆ ಅಂದರೆ ಜೂನ್ 19, 2024 ಭೌತಿಕ ಅಥವಾ ಡಿಮೆಟೀರಲೈಸ್ಡ್ ರೂಪದಲ್ಲಿ ಷೇರುಗಳನ್ನು ಹೊಂದಿರುವ ಷೇರುದಾರರುಗಳು ವಿದ್ಯುನ್ಮಾನ ರೂಪದಲ್ಲಿ ವ್ಯಾಪಾರ ವಹಿವಾಟುಗಳನ್ನು ನಿರ್ವಹಿಸುವ ಕುರಿತಾಗಿ ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆಯಲ್ಲಿ ಹೇಳಿದಂತೆ ಎನ್‌ಎಸ್‌ಡಿಎಲ್‌ನ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ (ರಿಮೋಟ್ ಇ–ವೋಟಿಂಗ್) ಮತಚಲಾಯಿಸಬಹುದಾಗಿರುತ್ತದೆ. ಷೇರುದಾರರ ಮತದಾನದ ಹಕ್ಕುಗಳು ಕಂಪನಿಯ ಈಕ್ವಿಟಿ ಷೇರು ಬಂಡವಾಳದಲ್ಲಿ ಅವರು ಹೊಂದಿರುವ ಈಕ್ವಿಟಿ ಷೇರುಗಳಿಗೆ ಅನುಗುಣವಾಗಿರುತ್ತವೆ. ವಿಸಿ ಮೂಲಕ ಭಾಗವಹಿಸುವ ಷೇರುದಾರರನ್ನು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 103 ರ ಅಡಿಯಲ್ಲಿ ಕೋರಂ ಅನ್ನು ಲೆಕ್ಕಾಚಾರ ಮಾಡುವ ಉದ್ದೇಶಕ್ಕಾಗಿ ಎಣಿಸಲಾಗುತ್ತದೆ.
4. ಎಲ್ಲ ಷೇರುದಾರರಿಗೆ ಈ ಕೆಳಕಂಡಂತೆ ಮಾಹಿತಿನೀಡಲಾಗಿರುತ್ತದೆ:
   i. ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆಯಲ್ಲಿ ತಿಳಿಸಿರುವಂತೆ ವ್ಯಾಪಾರ ವಹಿವಾಟುಗಳನ್ನು ಸದೂರ ವಿ–ಮತದಾನ ಅಥವಾ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುತ್ತಿರುವಾಗ ನಡೆಸಬಹುದಾಗಿರುತ್ತದೆ.
   ii. ಸದೂರ ವಿದ್ಯುನ್ಮಾನ ವಿಧಾನದಲ್ಲಿ ಅಥವಾ ವಿದ್ಯುನ್ಮಾನ ವಿಧಾನದಲ್ಲಿ ವಾರ್ಷಿಕ ಸರ್ವಸದ್ಯಸರ ಸಭೆಯಲ್ಲಿ ಮತಚಲಾಯಿಸುವ ಅರ್ಹತೆ ಗೊತ್ತುಪಡಿಸುವ ನಿರ್ಣಾಯಕ ದಿನಾಂಕ ಜೂನ್ 19, 2024;
   iii. ಸದೂರ ವಿ–ಮತದಾನ (ರಿಮೋಟ್ ಇ–ವೋಟಿಂಗ್) ಶುಕ್ರವಾರ, ದಿನಾಂಕ ಜೂನ್ 21, 2024 (ಭಾರತೀಯ ಕಾಲಮಾನ ಬೆಳಿಗ್ಗೆ 9:00 ಗಂಟೆಗೆ)ರಂದು ಆರಂಭವಾಗುತ್ತದೆ.
   iv. ಸದೂರ ವಿ–ಮತದಾನ (ರಿಮೋಟ್ ಇ–ವೋಟಿಂಗ್) ಮಂಗಳವಾರ, ದಿನಾಂಕ ಜೂನ್ 25, 2024 (ಭಾರತೀಯ ಕಾಲಮಾನ ಸಂಜೆ 5:00 ಗಂಟೆಗೆ)ರಂದು ಮುಕ್ತಾಯವಾಗುತ್ತದೆ.
   v. ದಿನಾಂಕ ಜೂನ್ 25, 2024 ಭಾರತೀಯ ಕಾಲಮಾನ ಸಂಜೆ 5:00 ಗಂಟೆಯ ನಂತರ ವಿದ್ಯುನ್ಮಾನ ಕ್ರಮದಲ್ಲಿ ರಿಮೋಟ್ ಇ–ವೋಟಿಂಗ್ ಸೌಲಭ್ಯವನ್ನು ನಿಷ್ಕ್ರಿಯಗೊಳಿಸಲಾಗುವುದು.
   vi. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಷೇರುದಾರರು ಅಥವಾ ಯಾವುದೇ ವ್ಯಕ್ತಿ, ಯಾರು ಕಂಪನಿಯ ಷೇರುಗಳನ್ನು ವಾರ್ಷಿಕ ಸರ್ವಸದಸ್ಯರ ಸಭಾ ಸೂಚನೆ ರವಾನೆಯಾದ ನಂತರ ಪಡೆದುಕೊಂಡು ಕಂಪನಿಯ ಸದಸ್ಯರಾಗುತ್ತಾರೋ ನಿರ್ಣಾಯಕ ದಿನಾಂಕವಾದ, ಅಂದರೆ ಜೂನ್ 19, 2024ರೊಳಗೆ ತಮ್ಮ ಸೇರ್ಪಡೆ ಗುರುತು ಪದ ಮತ್ತು ಗುಪ್ತಪದಗಳನ್ನು evoting@nsdl.com ಇಲ್ಲಿಗೆ ಕೋರಿಕೆ ಸಲ್ಲಿಸಿ ಪಡೆದುಕೊಳ್ಳಬಹುದು.
   vii. ಸದಸ್ಯರ ಗಮನಕ್ಕೆ:
      ಅ) ಒಮ್ಮೆ ಠರಾವಿನ ಮೇಲೆ ಷೇರುದಾರರು ಮತಚಲಾಯಿಸಿದ ನಂತರ ಷೇರುದಾರರು ಅದನ್ನು ಬದಲಿಸಲು ಅವಕಾಶವಿರುವುದಿಲ್ಲ.
      ಆ) ಮತಚಲಾಯಿಸುವ ಸೌಲಭ್ಯ ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುವ ಸ್ಥಳದಲ್ಲಿಯೂ ಲಭ್ಯವಿದ್ದು ವಿಡಿಯೋ ಕಾನ್ಫರೆನ್ಸ್ (ವಿಸಿ) ವ್ಯವಸ್ಥೆಯಲ್ಲಿ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಹಾಜರಿರುವ ಸದಸ್ಯರು ಯಾರು ಠರಾವುಗಳ ಕುರಿತಾಗಿ ಸದೂರ ವಿದ್ಯುನ್ಮಾನ ಮತದಾನದ ಮೂಲಕ ಮತಚಲಾಯಿಸಿಲ್ಲವೋ ಹಾಗೂ ಮತದಾನ ಮಾಡದಂತೆ ನಿರ್ಬಂಧಿಸಿಲ್ಲವೋ ಅವರು ವಾರ್ಷಿಕ ಸರ್ವಸದಸ್ಯರ ಸಭೆ ನಡೆಯುತ್ತಿರುವಾಗ ವಿದ್ಯುನ್ಮಾನ ಮತದಾನ ವ್ಯವಸ್ಥೆಯ ಮೂಲಕ ಮತದಾನ ಮಾಡಬಹುದಾಗಿರುತ್ತದೆ.
      ಇ) ವಾರ್ಷಿಕ ಸರ್ವಸದಸ್ಯರ ಸಭೆಗೆ ಮುಂಚಿತವಾಗಿ ಸದೂರ ವಿ–ಮತದಾನದ ಮೂಲಕ ಮತಚಲಾಯಿಸಿದವರು ವಾರ್ಷಿಕ ಸರ್ವಸದಸ್ಯರ ಸಭೆಗೆ ಹಾಜರಾಗಬಹುದು, ಆದರೆ ಮತ್ತೊಮ್ಮೆ ಮತಚಲಾಯಿಸುವ ಅವಕಾಶವಿರುವುದಿಲ್ಲ; ಮತ್ತು
      ಈ) ನಿರ್ಣಾಯಕ ದಿನಾಂಕದೊಳಗೆ ಷೇರುದಾರರು ವಹಿಯಲ್ಲಿ ದಾಖಲಾಗಿರುವ ಹೆಸರಿನ ಷೇರುದಾರರು ಅಥವಾ ಡಿಪಾಸಟರೀಸ್ ಅವರಲ್ಲಿನ ಲಾಭಹಕ್ಕುದಾರರ ವಹಿಯಲ್ಲಿ ದಾಖಲಾಗಿರುವ ಷೇರುದಾರರು ಮಾತ್ರ ಸದೂರ ವಿ–ಮತದಾನ ಅಥವಾ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿನ ವಿದ್ಯುನ್ಮಾನ ಮತದಾನದ ಸೌಲಭ್ಯವನ್ನು ಬಳಸಿಕೊಳ್ಳಬಹುದಾಗಿರುತ್ತದೆ.
   viii. ಷೇರುಗಳನ್ನು ಭೌತಿಕ, ಡಿಮೆಟೀರಿಲೈಸ್ಡ್ ರೂಪದಲ್ಲಿ ಹೊಂದಿರುವ ಷೇರುದಾರರು ಹಾಗೂ ವಿದ್ಯುನ್ಮಾನ ಅಂಚೆಯನ್ನು ನೋಂದಾಯಿಸಿಲ್ಲದ ಷೇರುದಾರಿಗೆ ಸದೂರ ವಿ–ಮತದಾನದ ಕ್ರಮವನ್ನು ವಾರ್ಷಿಕ ಸರ್ವಸದಸ್ಯರ ಸಭೆಯ ಸೂಚನಾ ಪತ್ರದಲ್ಲಿ ನೀಡಲಾಗಿದೆ. ಸದರಿ ವಿವರಗಳನ್ನು ಕಂಪನಿಯ ಜಾಲತಾಣದಲ್ಲಿಯೂ ಸಹ ಒದಗಿಸಲಾಗಿದೆ. ಷೇರುದಾರರು ವಿವರಗಳಿಗಾಗಿ www.infosys.com ಜಾಲತಾಣವನ್ನು ಸಂಪರ್ಕಿಸಬಹುದಾಗಿರುತ್ತದೆ.
   ix ಅವರು ತಮ್ಮ ವಿದ್ಯುನ್ಮಾನ ಅಂಚೆ (ಈ ಮೇಲ್) ಅನ್ನು ಇತರ ಕೆವೈಸಿ ಮಾಹಿತಿಗಳೊಂದಿಗೆ ತಮ್ಮ ಡೆಪಾಸಿಟರಿಯವರಲ್ಲಿ ಅವರ ಡೆಪಾಸಿಟೊರಿ ಪಾರ್ಟಿಸಿಪೇಂಟ್ ಮೂಲಕ ನೋಂದಾಯಿಸಲು ಕೋರಲಾಗಿದೆ. ಷೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಹಾಗೂ ತಮ್ಮ ಕೆವೈಸಿ ಮಾಹಿತಿಯನ್ನು ಒದಗಿಸಿಲ್ಲವೋ ಅವರು ನಮೂನೆ ಐಎಸ್‌ಆರ್–1 (ನಿಗದಿತ ನಮೂನೆಯು https://www.infosys.com/investors/shareholderservices/investors-service.html ಜಾಲತಾಣದಲ್ಲಿ ಲಭ್ಯ) ಅನ್ನು ತಮ್ಮ ವಿದ್ಯುನ್ಮಾನ ಅಂಚೆ, ಬ್ಯಾಂಕ್ ಖಾತೆ ವಿವರಗಳು ಮತ್ತು ಇತರ ಕೆವೈಸಿ ಮಾಹಿತಿಯನ್ನು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟರು (ಆರ್‌ಟಿಎ), ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್ ಭರ್ತಿ ಮಾಡಿದ ನಮೂನೆಯನ್ನು einward.ris@kfintech.com ಇಲ್ಲಿಗೆ ವಿದ್ಯುನ್ಮಾನ ಅಂಚೆ ಮೂಲಕ ರವಾನಿಸಲು ಕೋರಲಾಗಿದೆ. ಇದು ಷೇರುದಾರರು 2023-24ನೇ ಸಾಲಿನ ಸಂಯೋಜಿತ ವಾರ್ಷಿಕ ವರದಿ, ಸೂಚನೆ, ಸದೂರ ವಿದ್ಯುನ್ಮಾನ ಮತದಾನಕ್ಕೆ ಸೂಚನೆಗಳು, ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ವಿಸಿ ಮೂಲಕ ಭಾಗವಹಿಸಲು ಬೇಕಾದ ಸೂಚನೆ ಇವುಗಳನ್ನು ವಿದ್ಯುನ್ಮಾನ ರೂಪದಲ್ಲಿ ಪಡೆದುಕೊಳ್ಳಲು ಹಾಗೂ ಲಾಭಾಂಶವನ್ನು ತಮ್ಮ ಬ್ಯಾಂಕ್ ಖಾತೆಯಲ್ಲಿ ಪಡೆದುಕೊಳ್ಳಲು ಅನುವು ಮಾಡಿಕೊಡುತ್ತದೆ. ತಮ್ಮ ಲಾಭಾಂಶವನ್ನು ಪಡೆಯಲು ಬ್ಯಾಂಕ್ ಆದೇಶಗಳನ್ನು ನೋಂದಾಯಿಸಲು ಬಯಸುವ ಸದಸ್ಯರು ನೋಟಿಸ್‌ನಲ್ಲಿ ವಿವರಿಸಲಾಗಿದೆ.
   x. ಸದೂರ ವಿದ್ಯುನ್ಮಾನ ಮತದಾನ ಕುರಿತಾಗಿ ಸಂದೇಹಗಳಿದ್ದಲ್ಲಿ, ಷೇರುದಾರರು, ಷೇರುದಾರರ ಸಾಮಾನ್ಯ ಸಂದೇಹಗಳ ವಿಭಾಗವನ್ನು ಮತ್ತು ವಿ–ಮತದಾನ ಬಳಕೆದಾರ ಕೈಪಿಡಿಯನ್ನು https://evoting.nsdl.com ದಲ್ಲಿನ ಡೌನ್‌ಲೋಡ್ ವಿಭಾಗದಿಂದ ಇಳಿಸಿಕೊಂಡು ನೋಡಬಹುದು ಅಥವಾ ಉಚಿತ ಕರೆಸಂಖ್ಯೆ 022-4886 7000ಕ್ಕೆ ಕರೆಮಾಡಬಹುದು ಅಥವಾ ಅಮಿತ್ ವಿಶಾಲ್, ಉಪ ಉಪಾಧ್ಯಕ್ಷ–NSDL ವಿ–ಅಂಚೆ amitv@nsdl.com ಅಥವಾ ಪಲ್ಲವಿ ಮ್ಹಾತ್ರೆ, ಹಿರಿಯ ವ್ಯವಸ್ಥಾಪಕಿ – pallavid@nsdl.com ನಲ್ಲಿ; ವಿಳಾಸ– 4ನೇ ಮಹಡಿ, ಎ ವಿಂಗ್, ಟ್ರೇಡ್ ವರ್ಲ್ಡ್, ಕಮಲಾ ಮಿಲ್ಸ್ ಕಾಂಪೌಂಡ್, ಸೇನಾಪತಿ ಬಾಪತ್ ಮಾರ್ಗ, ಲೋವರ್ ಪರೇಲ್, ಮುಂಬೈ 400013, ಅಥವಾ ಕೆಫಿನ್ ಟೆಕ್ನಾಲಜೀಸ್ ಲಿಮಿಟೆಡ್, ಸೆಲಿನಿಯಮ್ ಟವರ್ ಬಿ, ಪ್ಲಾಟ್ 31-32, ಫೈನಾನ್ಷಿಯಲ್ ಡಿಸ್ಟ್ರಿಕ್ಟ್, ನಾನಕ್ರಮ್‌ಗುಡ, ಸೆರಿಲಿಂಗಮ್‌ಪಲ್ಲಿ ಮಂಡಲ್, ಹೈದರಾಬಾದ್–500 032, ವಿ–ಅಂಚೆ einward.ris@kfintech.com. ಅಥವಾ ಶುಲ್ಕ ರಹಿತ ಸಂಖ್ಯೆ 1800 309 4001ಅನ್ನು ಸಂಪರ್ಕಿಸಬಹುದು.
   xi. ವಿಡಿಯೋ ಕಾನ್ಫರೆನ್ಸ್ ಸೌಲಭ್ಯವನ್ನು ಬಳಸಿಕೊಂಡು ಸಭೆಯಲ್ಲಿ ಭಾಗವಹಿಸುವ ಕುರಿತಾಗಿ ತಾಂತ್ರಿಕ ಸಹಾಯ ಬೇಕಾದ ಷೇರುದಾರರು +91 80 4156 5555 / +91 80 4156 5777 ಮೂಲಕ ಸಹಾಯವಾಣಿಯನ್ನು ಸಂಪರ್ಕಿಸಿ ಸಹಾಯವನ್ನು ಪಡೆದುಕೊಳ್ಳಬಹುದು.
   xii. ಸೂಚನೆಯೊಂದಿಗೆ ಸಂಯೋಜಿತ ವಾರ್ಷಿಕ ವರದಿಯು ಜಾಲತಾಣ https://www.infosys.com/investors/reports-filings.html#sec ನಲ್ಲಿ ಲಭ್ಯವಿದೆ
5. ಅಂತಿಮ ಹಾಗೂ ವಿಶೇಷ ಲಾಭಾಂಶ ನೀಡಿಕೆಗೆ ನಿಗದಿಪಡಿಸಲಾಗಿರುವ ಅಧಿಕೃತ ದಿನಾಂಕವು ಮೇ 31, 2024 ಆಗಿರುತ್ತದೆ. ಅಂತಿಮ ಹಾಗೂ ವಿಶೇಷ ಲಾಭಾಂಶವನ್ನು, ಷೇರುದಾರರು 43ನೇ ಸರ್ವ ಸದಸ್ಯರ ಸಭೆಯಲ್ಲಿ ಅನುಮೋಸಿದಿದ ಅನಂತರ ಜುಲೈ 01, 2024ರಂದು ಪಾವತಿಸಲಾಗುವುದು.

ಇನ್‌ಫೋಸಿಸ್ ಲಿಮಿಟೆಡ್ ಪರವಾಗಿ
ಸಹಿ/–
ಎ.ಜಿ.ಎಸ್. ಮಣಿಕಂಠ
ಕಂಪನಿ ಕಾರ್ಯದರ್ಶಿ

ಬೆಂಗಳೂರು, ಭಾರತ
ಜೂನ್ 3, 2024

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಸುಭಾಷಿತ

ಸಣ್ಣ ಸಣ್ಣ ಗೆಲುವುಗಳನ್ನು ಗುರುತಿಸುವುದು ಕೂಡ ಮುಖ್ಯ.
–ರಫೆಲ್ ನಡಾಲ್

ಜಿಡಿಪಿ ಸಮೃದ್ಧ ಬೆಳವಣಿಗೆಯ ಜೊತೆಗೆ ಹಲವು ಸಮಸ್ಯೆಗಳೂ ಇವೆ

ಕಳೆದ ಆರ್ಥಿಕ ವರ್ಷದಲ್ಲಿ (2023–24) ಭಾರತದ ಆರ್ಥಿಕತೆಯು ಶೇಕಡ 8.2ರಷ್ಟು ಸಮೃದ್ಧವಾದ ಬೆಳವಣಿಗೆ ದಾಖಲಿಸಿದೆ. ರಾಷ್ಟ್ರೀಯ ಸಾಂಖ್ಯಿಕ ಕಚೇರಿಯು (ಎನ್‌ಎಸ್‌ಒ) ಈ ಹಿಂದೆ ಮಾಡಿದ್ದ ಅಂದಾಜು ಮತ್ತು ಈ ಹಿಂದಿನ ನಿರೀಕ್ಷೆಗಳಿಗೆ ಅನುಗುಣವಾಗಿಯೇ ಆರ್ಥಿಕ ಬೆಳವಣಿಗೆ ದಾಖಲಾಗಿದೆ. ಭಾರತೀಯ ರಿಸರ್ವ್ ಬ್ಯಾಂಕ್ ಶೇ 7ರಷ್ಟು ಬೆಳವಣಿಗೆಯನ್ನು ಅಂದಾಜಿಸಿದ್ದರೆ, ಎನ್‌ಎಸ್‌ಒ ಶೇ 7.6ರಷ್ಟು ಬೆಳವಣಿಗೆ ಆಗಬಹುದು ಎಂಬ ಮುನ್ನೋಟವನ್ನು ಕೊಟ್ಟಿತ್ತು. ಕೊನೆಯ ತ್ರೈಮಾಸಿಕದಲ್ಲಿ ಶೇ 5.9ರಷ್ಟು ಬೆಳವಣಿಗೆ ಮಾತ್ರ ಸಾಧ್ಯ ಎಂದು ಎನ್‌ಎಸ್‌ಒ ಅಂದಾಜಿಸಿತ್ತು. ಆದರೆ, ನಾಲ್ಕನೇ ತ್ರೈಮಾಸಿಕದಲ್ಲಿ ಶೇ 7.8ರಷ್ಟು ಬೆಳವಣಿಗೆ ಸಾಧ್ಯವಾಗಿದ್ದರಿಂದ ಇಡೀ ವರ್ಷದ ಸರಾಸರಿ ಬೆಳವಣಿಗೆ ಏರಿಕೆಯಾಗುವುದು ಸಾಧ್ಯವಾಗಿದೆ. ಈ ಮಟ್ಟದ ಬೆಳವಣಿಗೆಯಿಂದಾಗಿ ದೇಶವು ಪ್ರಮುಖ ಅರ್ಥ ವ್ಯವಸ್ಥೆಗಳಲ್ಲಿ ಮುಂಚೂಣಿ ಸಾಲಿನಲ್ಲಿ ನಿಲ್ಲುವುದು ಸಾಧ್ಯವಾಗಿದೆ. ಶೇ 7ಕ್ಕಿಂತ ಹೆಚ್ಚಿನ ಬೆಳವಣಿಗೆಯು ಸತತ ಮೂರನೆಯ ವರ್ಷ ಸಾಧ್ಯವಾಗಿದೆ. ದೇಶದ ಒಟ್ಟು ಆಂತರಿಕ ಉತ್ಪಾದನೆಯ (ಜಿಡಿಪಿ) ಮೌಲ್ಯವು ₹ 173.82 ಲಕ್ಷ ಕೋಟಿಯಷ್ಟಾಗಿದೆ. ಅದಕ್ಕೂ ಹಿಂದಿನ ವರ್ಷದಲ್ಲಿ ಈ ಮೊತ್ತವು ₹ 160.71 ಲಕ್ಷ ಕೋಟಿಯಷ್ಟಾಗಿತ್ತು. ಒಟ್ಟು ಮೌಲ್ಯವರ್ಧನೆಯ (ಜಿವಿಎ) ಬೆಳವಣಿಗೆಯು ನಾಲ್ಕನೇ ತ್ರೈಮಾಸಿಕದಲ್ಲಿ ಶೇ 6.3ರಷ್ಟಿದ್ದರೆ, ಇಡೀ ವರ್ಷದಲ್ಲಿ ಶೇ 7.2ರಷ್ಟಾಗಿದೆ.



ಮುಂದಿನ ದಿನಗಳಲ್ಲಿ ಅರ್ಥಿಕತೆಯು ಯಾವ ದಿಕ್ಕಿನಲ್ಲಿ ಸಾಗಲಿದೆ ಎಂಬುದನ್ನು ಮುಂಗಾರು ಮಳೆ ಮತ್ತು ಕೇಂದ್ರ ಸರ್ಕಾರದ ಬಜೆಟ್ ನಿರ್ಧರಿಸಲಿವೆ

ದತ್ತಾಂಶವನ್ನು ಪ್ರತ್ಯೇಕಗೊಳಿಸಿ ನೋಡಿದರೆ, ಆರ್ಥಿಕತೆ, ಅದರ ಶಕ್ತಿ ಮತ್ತು ಸಮಸ್ಯೆಗಳ ಹೆಚ್ಚು ಸಮರ್ಪಕವಾದ ಚಿತ್ರಣ ದೊರಕುತ್ತದೆ. ತಯಾರಿಕಾ ಕ್ಷೇತ್ರವು ಉತ್ತಮ ಬೆಳವಣಿಗೆ ದಾಖಲಿಸಿದೆ. ಎರಡು ಮತ್ತು ಮೂರನೇ ತ್ರೈಮಾಸಿಕದಲ್ಲಿ ಬೆಳವಣಿಗೆ ಸ್ವಲ್ಪ ಕಡಿಮೆಯಾದರೂ ಶೇ 10ರವರೆಗೆ ಬೆಳವಣಿಗೆ ದಾಖಲಿಸಿದೆ. ನಿರ್ಮಾಣ ಚಟುವಟಿಕೆ, ಸಿಮೆಂಟ್ ಮತ್ತು ಉಕ್ಕು ಬಳಕೆ ಉತ್ತಮವಾಗಿದೆ. ಆದರೆ, ಹೋಟೆಲ್ ಉದ್ಯೋಗ ಸೃಷ್ಟಿಸುವ ಚಿಲ್ಲರೆ ವ್ಯಾಪಾರ, ಹೋಟೆಲ್ ಮತ್ತು ಸಾರಿಗೆಯ ಬೆಳವಣಿಗೆ ಮಂದಗತಿಯಲ್ಲಿದೆ. ಕೃಷಿಯ ಬೆಳವಣಿಗೆಯು ಈ ಹಿಂದಿನ ತ್ರೈಮಾಸಿಕಗಳ ರೀತಿಯಲ್ಲಿ ಕಳಪೆಯಾಗಿಯೇ ಇದೆ. ನಾಲ್ಕನೇ ತ್ರೈಮಾಸಿಕದಲ್ಲಿ ಕೃಷಿ ಕ್ಷೇತ್ರದ ಬೆಳವಣಿಗೆ ಶೇ 0.6ರಷ್ಟು ಮಾತ್ರ. ಮೂರನೇ ತ್ರೈಮಾಸಿಕದಲ್ಲಿ ಶೇ 0.4ರಷ್ಟು ದಾಖಲಾಗಿತ್ತು. ಕಳೆದ ವರ್ಷ ದೇಶದ ಬಹುಭಾಗಗಳಲ್ಲಿ ಮುಂಗಾರು ಮಳೆ ಕೈಕೊಟ್ಟಿದ್ದು ಇದಕ್ಕೆ ಮುಖ್ಯವಾದ ಕಾರಣ.

ದತ್ತಾಂಶವನ್ನು ಹೆಚ್ಚು ವಿವರವಾಗಿ ಗಮನಿಸಬೇಕಾದ ಅಗತ್ಯ ಇದೆ. ಹಾಗೆ ಮಾಡಿದಾಗ, ಆರ್ಥಿಕತೆಯ ಶಕ್ತಿಯ ಜೊತೆಗೆ, ಹೆಚ್ಚು ಗಮನ ಹರಿಸಬೇಕಾದ ವಲಯಗಳೂ ಗಮನಕ್ಕೆ ಬರುತ್ತವೆ. ಕಳೆದ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಒಟ್ಟು ತೆರಿಗೆ ಸಂಗ್ರಹದಲ್ಲಿ ಶೇ 20ರಷ್ಟು ಭಾರಿ ಏರಿಕೆ ಮತ್ತು ಸಹಾಯಧನ ಪಾವತಿಯ ಕಡಿಮೆ ಆಗಿರುವುದು ಜಿಡಿಪಿ ಬೆಳವಣಿಗೆ ಏರಿಕೆಯ ಹಿಂದಿನ ಮುಖ್ಯ ಕಾರಣ. ಜಿಡಿಪಿ ಮತ್ತು ಜಿವಿಎ ಮಧ್ಯೆ ಸಹಮತ ಇಲ್ಲದಿರುವುದು ಇದನ್ನೇ ಸೂಚಿಸುತ್ತದೆ. ಲೋಕಸಭೆಗೆ 2019ರಲ್ಲಿ ಚುನಾವಣೆ ನಡೆಯುವುದಕ್ಕೆ ಮುಂಚೆಯೂ ಜಿಡಿಪಿ ಬೆಳವಣಿಗೆಯಲ್ಲಿ ಇದೇ ಪ್ರವೃತ್ತಿ ದಾಖಲಾಗಿದ್ದು ಎಂಬುದನ್ನೂ ಗಮನಿಸಬೇಕು. ಹೂಡಿಕೆಯ ಏರಿಕೆಯು ಆರೋಗ್ಯಕರ ಗತಿಯಲ್ಲಿಯೇ ಇದೆ; ಆದರೆ, ಗ್ರಾಹಕ ಬಳಕೆ ವಸ್ತುಗಳಿಗಾಗಿ ಮಾಡುವ ವೆಚ್ಚದ ಬೆಳವಣಿಗೆಯು ಕಳವಳಕಾರಿ ಮಟ್ಟದಲ್ಲಿ ಇದೆ ಎಂಬುದು ಆರ್ಥಿಕತೆಯ ದೊಡ್ಡ ಸಮಸ್ಯೆಯಾಗಿದೆ. 2023–24ರಲ್ಲಿ ಈ ದರವು ಶೇ 4ರಷ್ಟು ಇತ್ತು. ಇದು 12 ವರ್ಷಗಳಲ್ಲಿಯೇ ಕನಿಷ್ಠ. ಉದ್ಯೋಗದ ಸ್ಥಿತಿಗತಿ, ಗ್ರಾಮೀಣ ಪ್ರದೇಶದಲ್ಲಿ ಆದಾಯ ಕಡಿಮೆಯಾಗಿರುವುದು, ಬೇಡಿಕೆ ಕುಸಿತ, ಹಣದುಬ್ಬರದ ಒತ್ತಡಗಳು ಎಲ್ಲವನ್ನೂ ಇದು ಪ್ರತಿಫಲಿಸುತ್ತದೆ. ಮುಂದಿನ ದಿನಗಳಲ್ಲಿ ಅರ್ಥಿಕತೆಯು ಯಾವ ದಿಕ್ಕಿನಲ್ಲಿ ಸಾಗಲಿದೆ ಎಂಬುದನ್ನು ಮುಂಗಾರು ಮಳೆ ಮತ್ತು ಕೇಂದ್ರ ಸರ್ಕಾರದ ಬಜೆಟ್ ನಿರ್ಧರಿಸಲಿವೆ.

ದಿನದ ಟ್ವೀಟ್

ಚರಂಡಿ ತ್ಯಾಜ್ಯ: ನಿರ್ಲಕ್ಷ್ಯ ಸಲ್ಲ

ಬೆಂಗಳೂರಿನಲ್ಲಿ ಮಳೆನೀರಿನ ಚರಂಡಿಗಳ ನಡುವೆ ಅಂತರಸಂಪರ್ಕ ಇಲ್ಲದಿರುವುದರಿಂದ ಅಥವಾ ಈ ಚರಂಡಿಗಳಲ್ಲಿನ ಹೂಳು ತೆಗೆಯದೇ ಇರುವುದರಿಂದ ಇವು ಕೊಳಚೆ ನೀರಿನ ಮತ್ತು ಕಸದ ಕಾಲುವೆಗಳಾಗಿ ಮಾರ್ಪಡುತ್ತವೆ. ಹೆಬ್ಬಾಳ ಕಣಿವೆಯಲ್ಲಿ ಕೆಲವಾರು ವರ್ಷಗಳಿಂದ ಕೊಳಚೆ ನೀರು ಮತ್ತು ಕಸ ತುಂಬಿಕೊಂಡಿದೆ. ಇದಕ್ಕೆ ಬಿಬಿಎಂಪಿ ಮಾತ್ರವೇ ಕಾರಣವಲ್ಲ. ನೈರ್ಮಲ್ಯಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಸರಿಯಾಗಿ ನಿರ್ವಹಿಸದ ಬೆಂಗಳೂರು ಜಲಮಂಡಳಿಯನ್ನೂ (ಬಿಡಬ್ಲ್ಯುಎಸ್‌ಎಸ್‌ಬಿ) ಇದಕ್ಕೆ ಉತ್ತರದಾಯಿಯಾಗಿಸಬೇಕು.

ಕಿರಣ್ ಕುಮಾರ್

ಕಿಡಿನುಡಿ

ಚುನಾವಣಾ ಆಯುಕ್ತರು ಇಂಗ್ಲಿಷ್‌ನಲ್ಲಿ ಮಾತನಾಡುವುದಿಲ್ಲವೇಕೆ? ಶೋಚನೀಯ.

(ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು ಹಿಂದಿ ಭಾಷೆಯಲ್ಲಿ ಸುದ್ದಿಗೋಷ್ಠಿ ನಡೆಸಿದ್ದಕ್ಕೆ ಪ್ರತಿಕ್ರಿಯೆ)

ಶರವಣನ್ ಅಣ್ಣಾದೊರೆ, ಡಿಎಂಕೆ ವಕ್ತಾರ, ವಕೀಲ

25 ವರ್ಷಗಳ ಹಿಂದೆ

ಶುಕ್ರವಾರ, 4-6-1999

- **ಪ್ರಬಲ ದಾಳಿ: 6 ಯೋಧರು ಹುತಾತ್ಮ 31 ಉಗ್ರರ ಸಾವು**

ಜಮ್ಮು, ಜೂನ್ 3 (ಪಿಟಿಐ-ಯುಎನ್‌ಐ)– ಅತಿಕ್ರಮಣಕಾರರ ಮೇಲೆ ನಡೆದ ಸತತ 9ನೇ ದಿನದ ದಾಳಿ ಹಾಗೂ ಪಾಕ್ ಬೆಂಬಲಿತ ಉಗ್ರರ ಪ್ರತಿದಾಳಿಯಿಂದಾಗಿ ಇಂದು ಭಾರತದ ಲೆಫ್ಟಿನೆಂಟ್ ಕರ್ನಲ್ ಆರ್. ವಿಶ್ವನಾಥನ್, ಕ್ಯಾಪ್ಟನ್ ಪಿ.ವಿ. ವಿಕ್ರಂ ಸೇರಿದಂತೆ ಆರು ಮಂದಿ ಸೇನಾ ಸಿಬ್ಬಂದಿ ಹುತಾತ್ಮರಾದರೆ, 31 ಮಂದಿ ಅತಿಕ್ರಮಣಕಾರರು ಗುಂಡಿಗೆ ಬಲಿಯಾಗಿದ್ದಾರೆ.

ಕಕ್ಸರ್ ಉಪವಲಯದಲ್ಲಿ ಫಿರಂಗಿ ದಳಕ್ಕೆ ಸೂಚನೆ ನೀಡುತ್ತಿದ್ದ ಕ್ಯಾಪ್ಟನ್ ಪಿ.ವಿ. ವಿಕ್ರಂ ಅವರು ಪಾಕ್ ದಾಳಿಗೆ ತುತ್ತಾದರು. ಡ್ರಾಸ್ ಉಪವಲಯದಲ್ಲಿ ದಾಳಿಯ ನೇತೃತ್ವ ವಹಿಸಿದ್ದ ಲೆಫ್ಟಿನೆಂಟ್ ಕರ್ನಲ್ ಆರ್. ವಿಶ್ವನಾಥನ್ ಅವರು ಉಗ್ರರ ಗುಂಡಿಗೆ ಬಲಿಯಾದರೂ, ಉಗ್ರರ ನೆಲೆಯನ್ನು ವಶಪಡಿಸಿಕೊಳ್ಳುವಲ್ಲಿ ಸೇನೆ ಯಶ ಕಂಡಿದೆ.

- **ನಚಿಕೇತ ಬಿಡುಗಡೆ**

ಇಸ್ಲಾಮಾಬಾದ್, ಜೂನ್ 3 (ಪಿಟಿಐ)– ಭಾರತದ ವಿಮಾನ ಪೈಲಟ್ ಲೆಫ್ಟಿನೆಂಟ್ ಕೆ. ನಚಿಕೇತ ಅವರನ್ನು ಎಂಟು ದಿನಗಳ ಬಂಧನದ ನಂತರ ಇಂದು ರಾತ್ರಿ ಬಿಡುಗಡೆ ಮಾಡಿ ಭಾರತದ ಹೈಕಮಿಷನರ್ ಜಿ. ಪಾರ್ಥಸಾರಥಿ ಅವರಿಗೆ ಒಪ್ಪಿಸಲಾಯಿತು.

ನಚಿಕೇತ ಅವರನ್ನು ಮಾಧ್ಯಮಗಳ ಮುಂದೆ ಬಿಡುಗಡೆ ಮಾಡುವುದಕ್ಕೆ ಪಾರ್ಥಸಾರಥಿ ಅವರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ, ಪಾಕಿಸ್ತಾನದ ವಿದೇಶಾಂಗ ಕಾರ್ಯಾಲಯದಲ್ಲಿ ರೆಡ್‌ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳಿಗೆ ರಾತ್ರಿ 11ಕ್ಕೆ ಅವರನ್ನು ಒಪ್ಪಿಸಲಾಯಿತು.

50 ವರ್ಷಗಳ ಹಿಂದೆ

ಮಂಗಳವಾರ, 4-6-1974

- **ಸ್ವಂತಕ್ಕೆಂದು ಅರ್ಜಿ ಸಲ್ಲಿಸಿ ಗಿರಣಿಗೆ ತರುವ ಭತ್ತಕ್ಕೆ ಲೆವಿ ಇಲ್ಲ: ಪಾಟೀಲ್ ಸ್ಪಷ್ಟನೆ**

ಬೆಂಗಳೂರು, ಜೂನ್ 3– ರೈತ ಸ್ವಂತ ಉಪಯೋಗಕ್ಕಾಗಿ ಅಕ್ಕಿಯನ್ನು ಪಡೆಯಲು ಗಿರಣಿಗೆ ಭತ್ತ ತಂದಿರುವಾಗ, ಅಲ್ಲಿ ಶೇ 20ರಷ್ಟು ಲೆವಿಯನ್ನು ಕೊಡಬೇಕಾಗಿಲ್ಲ ಎಂದು ಆಹಾರ ಸಚಿವ ಕೆ.ಎಚ್.ಪಾಟೀಲ್ ಅವರು ವಿಧಾನಪರಿಷತ್ತಿನಲ್ಲಿ ಇಂದು ಸ್ಪಷ್ಟಪಡಿಸಿದರು.

ಗಿರಣಿ ಹಂತದಲ್ಲಿ ಲೆವಿ ಕೊಡಬೇಕೆಂದು ಸರ್ಕಾರ ಇತ್ತೀಚೆಗೆ ಹೊರಡಿಸಿದ ಆಜ್ಞೆಯಲ್ಲಿ ಇದು ಸ್ಪಷ್ಟವಾಗಿಲ್ಲವಾದರೂ ಸ್ವಂತ ಉಪಯೋಗಕ್ಕೆಂದು ರೈತ ಅರ್ಜಿ ಸಲ್ಲಿಸಿದರೆ ಆ ಹಂತದ ಲೆವಿಯಿಂದ ವಿನಾಯಿತಿ ನೀಡಲಾಗುವುದೆಂದರು.

ಮುನಿರೆಡ್ಡಿ ಪಾಳ್ಯದ ನ್ಯಾಯಬೆಲೆ ಅಂಗಡಿಯೊಂದಕ್ಕೆ ಸಂಬಂಧಿಸಿದಂತೆ 21 ಖೋಟಾ ರೇಷನ್ ಕಾರ್ಡುಗಳನ್ನು ನೀಡಿರುವುದಕ್ಕೆ ಕಾರಣಕರ್ತರಾದವರ ವಿರುದ್ಧ ತೀವ್ರ ಕ್ರಮ ಕೈಗೊಳ್ಳಲಾಗುವುದು. ಈ ಸಂಬಂಧ ಈಗಾಗಲೇ ತನಿಖೆ ನಡೆಯುತ್ತಿದೆ ಎಂದು ಸಚಿವರು ಗಮನ ಸೆಳೆಯುವ ಸೂಚನೆಯೊಂದಕ್ಕೆ ಪ್ರತಿಕ್ರಿಯಿಸಿದರು.

- **ಹರಿಜನರು ರಾಜಕೀಯ ಶಕ್ತಿ ಬೆಳೆಸಿಕೊಂಡರೆ ಶೋಷಣೆ ತಪ್ಪುವುದು: ದೇವರಾಜ ಅರಸು**

ಮಂಡ್ಯ, ಜೂನ್ 3– ‘ನನ್ನ ವೋಟು ಎರಡು ರೂಪಾಯಿಗೆ ಮಾರಲಿಕ್ಕಾಗಿ ಇಲ್ಲ. ಮತದಾನದ ದಿನ ಕೂಲಿ ಹೋದರೂ ಉಪವಾಸ ಇರುತ್ತೇನೆ. ಜಾತಿ ಆಧಾರದ ಮೇಲೆ ಮತ ನೀಡುವುದಿಲ್ಲ.’

–ಇದೇ ಜಾಗೃತಿ ಹಿಂದುಳಿದವರು, ಹರಿಜನ–ಗಿರಿಜನ ಹಾಗೂ ಅಲ್ಪಸಂಖ್ಯಾತರಲ್ಲಿ ಬೆಳೆದು ಬರಬೇಕೆಂದು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ಇಲ್ಲಿ ಒತ್ತಿ ಹೇಳಿದರು.

48ನೇ ಸಾಹಿತ್ಯ ಸಮ್ಮೇಳನ ನಡೆದ ಚಪ್ಪರದಲ್ಲಿ ಮಂಡ್ಯ ಜಿಲ್ಲೆಯ ಈ ವರ್ಗಗಳ ಪ್ರಥಮ ಸಮ್ಮೇಳನವನ್ನು ಉದ್ಘಾಟಿಸಿದ ಮುಖ್ಯಮಂತ್ರಿಗಳು, ಈ ದೃಷ್ಟಿಯಿಂದ ಈ ವರ್ಗಗಳು ಮತ ಚಲಾಯಿಸಿದರೆ ಅವರಿಗಾಗಿ ಹೋರಾಡುವ ಪ್ರಾಮಾಣಿಕ ನಾಯಕರು ದೊರಕುವರು. ಇಲ್ಲದಿದ್ದರೆ ಹಣ–ಜಾತಿಯ ಮೇಲೆ ಮೋಸ ಮಾಡುವ ನಾಯಕರು ಸಲ್ಲುವರೆಂದು ಎಚ್ಚರಿಕೆ ನೀಡಿದರು.

ಬೀಳುತ್ತಿದೆ ಸೌರ ಫಲಕಗಳ ಕಸದ ರಾಶಿ, ನಿರ್ವಹಣೆಗಿಲ್ಲ ವೈಜ್ಞಾನಿಕ ಕ್ರಮ

ಸೌರಶಕ್ತಿ: ಮಾಲಿನ್ಯದ ಕಣಜವಾದೀತು!

ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಇನ್ನು ಕೆಲವೇ ವರ್ಷಗಳು. ಚಂದ್ರಯಾನ ಮಾಡಲು ರಾಕೆಟ್ ಹಾರಿಸಲೇಬೇಕೆಂದಿಲ್ಲ. ಮೆಟ್ಟಿಲು ಹತ್ತಿಕೊಂಡೇ ಹೋಗಿಬಿಡಬಹುದು! ಹೇಗೆ ಅಂತೀರಾ? ವಿದ್ಯುತ್ ಉತ್ಪಾದನೆಗಾಗಿ ಈಗಾಗಲೇ ನಾವು ಬಳಸಿ ಬಿಸಾಡಿರುವ ಸೌರ ಫಲಕಗಳನ್ನು ಒಂದರ ಮೇಲೊಂದು ಮೆಟ್ಟಿಲಿನಂತೆ ಜೋಡಿಸಿಟ್ಟು, ಹತ್ತಿಕೊಂಡು ಹೋದರೆ ಸೀದಾ ಚಂದ್ರನ ನೆಲದ ಮೇಲೆ ಕಾಲಿಡಬಹುದು! ಅಂದರೆ, ಸೋಲಾರ್ ವಿದ್ಯುತ್‌ಗಾಗಿ ನಾವೆಲ್ಲ ಬಳಸುತ್ತಿರುವ ಮತ್ತು ಮುಂದಕ್ಕೂ ಬಳಸುವ ಸೌರ ಫಲಕಗಳ ಕಸದ ದೊಡ್ಡ ರಾಶಿ ಬೀಳಲಿದೆ. ಇ–ತ್ಯಾಜ್ಯ ಎನಿಸಿರುವ, ಬಳಸಿ ಬಿಸಾಡಿದ ಸೌರ ಫಲಕಗಳ ಸಂಖ್ಯೆ ದಿನೇ ದಿನೇ ಲಕ್ಷಗಳಲ್ಲಿ ಏರುತ್ತಿದೆ. ಅದರ ಪುನರ್ಬಳಕೆ ಮತ್ತು ವೈಜ್ಞಾನಿಕ ನಿರ್ವಹಣೆಗೆ ನಮ್ಮಲ್ಲಿ ಯಾವುದೇ ಸಮರ್ಪಕವಾದ ಯೋಜನೆ ಇಲ್ಲದಿರುವುದು ದೊಡ್ಡ ಸಮಸ್ಯೆಯಾಗಿದೆ.

ಕಲ್ಲಿದ್ದಲು ಉರಿಸುವ ಉಷ್ಣ ಸ್ಥಾವರಗಳಿಂದ ಮಾಲಿನ್ಯ ಹೆಚ್ಚು. ಜಲವಿದ್ಯುತ್ ಯೋಜನೆಗಳಿಂದ ಸಿಗುವ ಶಕ್ತಿಯು ಅವಶ್ಯಕತೆಯ ಕಾಲು ಭಾಗವನ್ನೂ ಪೂರೈಸುವುದಿಲ್ಲ. ಪವನ ಮತ್ತು ಅಣುವಿದ್ಯುತ್ ಯಾವುದಕ್ಕೂ ಸಾಲುವುದಿಲ್ಲ ಎಂಬ ಸಂಕ್ರಮಣ ಸ್ಥಿತಿ ಇರುವುದರಿಂದ, ಸುಸ್ಥಿರ ಅಭಿವೃದ್ಧಿ ಹಾಗೂ ವಾಯುಗುಣ ನಿಯಂತ್ರಣಕ್ಕಾಗಿ ಸೌರ ವಿದ್ಯುತ್ ಯೋಜನೆಗಳ ಕಡೆ ಮುಖ ಮಾಡಲೇಬೇಕಾದ ಅನಿವಾರ್ಯ ಎದುರಾಗಿದೆ. ಜಾಗತಿಕ ತಾಪಮಾನ ನಿಯಂತ್ರಣಕ್ಕೆ ಸೌರಶಕ್ತಿ ಯೋಜನೆಗಳೇ ಪರಿಹಾರವೆಂಬ ಮಾತು ಎಲ್ಲೆಡೆ ಇದೆ. 2070ರ ವೇಳೆಗೆ ಶೂನ್ಯ ಇಂಗಾಲದ ಉತ್ಸರ್ಜನೆ ಸಾಧಿಸುತ್ತೇವೆ ಎಂದು ನಿರ್ಧರಿಸಿರುವ ನಾವು, ಸೌರ ವಿದ್ಯುತ್‌ನ ಮೇಲೆ ಹೆಚ್ಚು ಅವಲಂಬಿತರಾಗಿದ್ದೇವೆ. ಮುಂದಿನ ವರ್ಷದ ಕೊನೆಯ ವೇಳೆಗೆ ಬರೋಬ್ಬರಿ 100 ಗಿಗಾವಾಟ್‌ನಷ್ಟು ಶಕ್ತಿಯನ್ನು ಸೂರ್ಯನಿಂದ ಪಡೆಯಲು ಯೋಜನೆ ರೂಪಿಸಿ ಈಗಾಗಲೇ ಅರ್ಧ ದಾರಿ ಕ್ರಮಿಸಿದ್ದೇವೆ.

ಆದರೆ ಸೂರ್ಯನಿಂದ ಶಕ್ತಿ ಉತ್ಪಾದಿಸುವಾಗ ಹುಟ್ಟುವ ಸೌರ ಫಲಕಗಳ ತ್ಯಾಜ್ಯದ ವಿಲೇವಾರಿ, ನಿರ್ವಹಣೆ ಮತ್ತು ಪುನರ್ಬಳಕೆಯ ವಿಚಾರಗಳೇ ಬೃಹತ್ ಸಮಸ್ಯೆಗಳಾಗಿ ಎದುರಿಗೆ ನಿಂತಿವೆ. ಅವಧಿ ಮುಗಿದ ನಂತರ ಎಲೆಕ್ಟ್ರಾನಿಕ್ ಕಸವಾಗಿ ಬದಲಾಗುವ ಸೌರ ಫಲಕಗಳ ಕಸದ ಶೇಕಡ 80ರಷ್ಟು ಭೂಭರ್ತಿ ತಾಣ ಸೇರುತ್ತಿದೆ. ಅದರಲ್ಲಿರುವ ಗಾಜು, ಸಿಲಿಕಾನ್, ಕ್ಯಾಡ್ಮಿಯಂ, ಸೀಸ, ಪಾದರಸ, ನಿಕ್ಕಲ್, ಅಲ್ಯೂಮಿನಿಯಂನ ಭಾಗಗಳು ಮಣ್ಣು, ಗಾಳಿ, ನೀರು, ಅಂತರ್ಜಲವನ್ನು ಮಾಲಿನ್ಯಗೊಳಿಸುತ್ತಿವೆ. 2022ರ ಎಲೆಕ್ಟ್ರಾನಿಕ್ಸ್ ವೇಸ್ಟ್ ಮ್ಯಾನೇಜ್‌ಮೆಂಟ್ ನಿಯಮಗಳ ಪ್ರಕಾರ, ಸೌರ ಫಲಕಗಳ ಕಸವನ್ನು ಎಲ್ಲೆಂದರಲ್ಲಿ ಬಿಸಾಡುವುದು ಅಪರಾಧ ಎನಿಸುತ್ತದೆ. ನಮ್ಮಲ್ಲಿ ಈಗಾಗಲೇ ಸೌರಫಲಕ ತ್ಯಾಜ್ಯ ಅಪಾರ ಪ್ರಮಾಣದಲ್ಲಿ ಉತ್ಪತ್ತಿಯಾಗಿದ್ದು, ಇನ್ನು ಆರು ವರ್ಷಗಳಲ್ಲಿ ಅದು ಹಲವು ಪಟ್ಟು ಹೆಚ್ಚಲಿದೆ.

ಕೇಂದ್ರೀಯ ಮಾಲಿನ್ಯ ನಿಯಂತ್ರಣ ಮಂಡಳಿಯು ಒಟ್ಟು 106 ಬಗೆಯ ಎಲೆಕ್ಟ್ರಾನಿಕ್ ವಸ್ತುಗಳನ್ನು ಇ-ತ್ಯಾಜ್ಯ ಎಂದು ಗುರುತಿಸಿದ್ದು, ಅದರಲ್ಲಿ ಕಂಪ್ಯೂಟರ್, ಲ್ಯಾಪ್‌ಟಾಪ್, ಮೊಬೈಲ್ ಫೋನ್, ಟಿ.ವಿ., ರೆಫ್ರಿಜಿರೇಟರ್ ಮತ್ತು ಹವಾನಿಯಂತ್ರಕಗಳ ಜೊತೆಗೆ ಸೌರ ಫಲಕಗಳನ್ನೂ ಸೇರಿಸಿದೆ. 2022ರಲ್ಲಿ ಇ- ತ್ಯಾಜ್ಯ ನಿರ್ವಹಣೆ ನಿಯಮಗಳಿಗೆ ತಿದ್ದುಪಡಿ ಮಾಡಿದ ಪರಿಸರ, ಅರಣ್ಯ ಮತ್ತು ವಾಯುಗುಣ ಬದಲಾವಣೆ ಸಚಿವಾಲಯವು ಸೌರ ವಿದ್ಯುತ್ ಸಂಗ್ರಹ ಕೋಶಗಳು ಮತ್ತು ಫಲಕಗಳನ್ನು ತ್ಯಾಜ್ಯದ ಪಟ್ಟಿಗೆ ಸೇರಿಸಿ, ಇವುಗಳ ಬಳಕೆಯ ಅವಧಿ ಮುಗಿದ ನಂತರ ಹುಟ್ಟುವ ಕಸದ ನಿರ್ವಹಣೆಯನ್ನು ಉತ್ಪಾದಿಸಿದ ಕಂಪನಿಗಳೇ ಮಾಡಬೇಕು ಎಂದು ತಾಕೀತು ಮಾಡಿದೆ.

ಸೌರ ವಿದ್ಯುತ್ ಉತ್ಪಾದನೆ ವಿಧಾನವು ಅತ್ಯಂತ ಪರಿಸರಸ್ನೇಹಿ ಎಂದುಕೊಂಡಿದ್ದ ನಮಗೆಲ್ಲಾ ಅದು ಉತ್ಪಾದಿಸುತ್ತಿರುವ ಕಸವನ್ನು ಕಂಡ ನಂತರ ಮೊದಲಿದ್ದ ಅಭಿಪ್ರಾಯ ಬದಲಾಗುತ್ತಿದೆ. ಸೌರ ವಿದ್ಯುತ್ ಉತ್ಪಾದನಾ ಕ್ರಮಗಳಲ್ಲಿ ಇಂಗಾಲದ ಹೆಜ್ಜೆ ಗುರುತು ಮತ್ತು ಉತ್ಸರ್ಜನೆ ಕಡಿಮೆ ಎಂಬುದೇನೋ ನಿಜ. ಆದರೆ ಬಳಸಿದ ಸೌರ ವಿದ್ಯುತ್ ಕೋಶಗಳ ಕಸವನ್ನು ವೈಜ್ಞಾನಿಕವಾಗಿ ವಿಲೇವಾರಿ ಮಾಡದಿದ್ದರೆ ಉತ್ಪಾದನೆಯ ವಿಷಯದಲ್ಲಿ ಗಳಿಸಿದ ಪಾರಿಸರಿಕ ಅನುಕೂಲಗಳೆಲ್ಲ ಮಂಗಮಾಯವಾಗುತ್ತವೆ.

ಹಿಂದಿನ ದಶಕದಲ್ಲಿ ದೇಶದ ಸೌರ ವಿದ್ಯುತ್ ಉತ್ಪಾದನೆಯ ಪ್ರಮಾಣ ಗಣನೀಯವಾಗಿ ಹೆಚ್ಚಿದೆ. 2014ರಲ್ಲಿ 2.63 ಗಿಗಾವಾಟ್‌ನಷ್ಟಿದ್ದ ಸ್ಥಾಪಿತ ಸಾಮರ್ಥ್ಯವು 2023ರ ವೇಳೆಗೆ 73.32 ಗಿಗಾವಾಟ್‌ಗೆ ಹೆಚ್ಚಿದೆ. ಇನ್ನು ಆರು ವರ್ಷಗಳಲ್ಲಿ ಅದನ್ನು 292 ಗಿಗಾವಾಟ್‌ಗೆ ತಲುಪಿಸುವ ಗುರಿ ಇಟ್ಟುಕೊಂಡಿರುವ ನಾವು, ಈ ಶತಮಾನದ ಮಧ್ಯಭಾಗದ ವೇಳೆಗೆ 1,700 ಗಿಗಾವಾಟ್‌ಗೆ ತಲುಪಿಸುವ ಅಭಿಲಾಷೆ ಇಟ್ಟುಕೊಂಡಿದ್ದೇವೆ. ಯೋಜಿಸಿದಂತೆ ನಡೆದರೆ 2070ಕ್ಕೆ ಸೂರ್ಯ ಮೂಲದಿಂದ 5,600 ಗಿಗಾವಾಟ್ ಶಕ್ತಿ ಉತ್ಪಾದನೆ ನಮಗೆ ಸಾಧ್ಯವಾಗಲಿದೆ. ಇದಕ್ಕಾಗಿ ನಾವು ಪಾವಗಡದಲ್ಲಿ ಇರುವ ಸೋಲಾರ್ ಪಾರ್ಕ್‌ನ ಮಾದರಿಯ 39 ಹೊಸ ಸೌರ ವಿದ್ಯುತ್ ಉತ್ಪಾದನಾ ಘಟಕಗಳನ್ನು ಸ್ಥಾಪಿಸಬೇಕಾಗುತ್ತದೆ. ಜೊತೆಗೆ ದೇಶದ ಒಂದು ಕೋಟಿ ಮನೆಗಳ ತಾರಸಿಗಳ ಮೇಲೆ ಸೌರ ಫಲಕಗಳನ್ನು ಅಳವಡಿಸುವ ಗುರಿ ಇಟ್ಟುಕೊಳ್ಳಲಾಗಿದೆ. ಒಂದು ಮೆ.ವಾ. ಸೋಲಾರ್ ಶಕ್ತಿ ಉತ್ಪಾದನೆಗೆ ಬೇಕಾದ ಸೋಲಾರ್ ಫಲಕಗಳನ್ನು ಜೋಡಿಸಲು ಕನಿಷ್ಠ 5ರಿಂದ 10 ಎಕರೆ ಜಾಗ ಬೇಕಾಗುತ್ತದೆ. ಸಾವಿರಗಟ್ಟಲೆ ಗಿಗಾವಾಟ್ ಉತ್ಪಾದಿಸಲು ಲಕ್ಷಾಂತರ ಎಕರೆ ಜಾಗ ಬೇಕು.

ಸೌರ ಫಲಕಗಳ ಸರಾಸರಿ ಆಯುಷ್ಯ 20ರಿಂದ 30 ವರ್ಷ ಮಾತ್ರ. ಹದಿನೈದು ವರ್ಷಗಳ ಹಿಂದೆ ಅಳವಡಿಸಲಾಗಿದ್ದ ನೆಲಮಟ್ಟದ ಸೌರ ಫಲಕಗಳ ಜೀವಿತಾವಧಿ ಇಷ್ಟರಲ್ಲೇ ಮುಗಿಯುತ್ತಿದೆ. ಇವುಗಳನ್ನು ಪುನರ್ಬಳಕೆ ಮಾಡಲು ಅಥವಾ ಇವುಗಳ ಕಸವನ್ನು ರೀಸೈಕಲ್ ಮಾಡಲು ಯಾವುದೇ ಸಮರ್ಥ ವ್ಯವಸ್ಥೆ ನಮ್ಮಲ್ಲಿ ಇಲ್ಲ ಎಂಬುದು ತಜ್ಞರ ಮಾತು. ಅಂಕಿ ಅಂಶಗಳ ಪ್ರಕಾರ, ಸದ್ಯಕ್ಕೆ ಸೌರಫಲಕಗಳಿಂದ ಶೇ 3ರಷ್ಟು ಇ- ತ್ಯಾಜ್ಯ ಹೊಮ್ಮುತ್ತಿದೆ. ಬೃಹತ್ ಸೌರ ಪಾರ್ಕುಗಳ ಸ್ಥಾಪನೆಯಿಂದ ಸಾಂಸ್ಕೃತಿಕ, ಸಾಮಾಜಿಕ ಮತ್ತು ಜೀವವೈವಿಧ್ಯಕ್ಕೆ ಸಂಬಂಧಿಸಿದ ಕೆಲವು ಸಮಸ್ಯೆಗಳೂ ಎದುರಾಗಿವೆ. ರಾಜಸ್ಥಾನದ ಭಡ್ಲಾದಲ್ಲಿ ರೈತರು ತಾವು ತಮ್ಮ ಪವಿತ್ರ ‘ಒರಾನ್’ ಜಮೀನು ಕಳೆದುಕೊಂಡಿದ್ದೇವೆ ಮತ್ತು ಕುರಿ ಮೇಯಿಸಲು ಜಾಗಗಳೇ ಇಲ್ಲ ಎಂದು ದೂರುತ್ತಾರೆ. ಫಲಕಗಳ ಕ್ಷಮತೆ ಹೆಚ್ಚಿಸುವ ಸಲುವಾಗಿ ಅದರ ಮೇಲಿನ ದೂಳನ್ನು ತೆಗೆಯಲು ನೀರಿನಿಂದ ತೊಳೆಯಬೇಕಾಗುತ್ತದೆ. ಬೇಕಾದ ನೀರಿಗೆ ಸುತ್ತಲಿನ ನೀರಿನ ಮೂಲಗಳನ್ನೇ ಅವಲಂಬಿಸಬೇಕು. ಅದರಿಂದಾಗಿ ಕೃಷಿಗೆ ಸಿಗುತ್ತಿದ್ದ ಅಷ್ಟೋ ಇಷ್ಟೋ ನೀರು ಸೋಲಾರ್ ಪಾರ್ಕಿನ ಪಾಲಾಗುತ್ತದೆ. ಎಲ್ಲೆಲ್ಲಿ ಬೃಹತ್ ಸೋಲಾರ್ ಪಾರ್ಕುಗಳು ಇವೆಯೋ ಅಲ್ಲೆಲ್ಲಾ ಈ ಸಮಸ್ಯೆ ಇದೆ. ಸುತ್ತಲಿನ ಕೃಷಿ ಕುಂಠಿತಗೊಂಡು ಆಹಾರ ಭದ್ರತೆ ಕಡಿಮೆಯಾಗುತ್ತದೆ.

ಸೌರ ಮತ್ತು ಪವನ ಶಕ್ತಿ ಉತ್ಪಾದನೆಗೆ ಪ್ರಶಸ್ತ ತಾಣಗಳೆನಿಸಿರುವ ಗುಜರಾತ್ ಮತ್ತು ರಾಜಸ್ಥಾನದಲ್ಲಿ ಅಳಿವಿನಂಚಿನಲ್ಲಿರುವ ಗ್ರೇಟ್ ಇಂಡಿಯನ್ ಬಸ್ಟರ್ಡ್ ಪಕ್ಷಿಯ ಸದೃಢ ಆವಾಸಗಳೂ ಇವೆ. ವಿದ್ಯುತ್ ಸಾಗಿಸಲು ಎಳೆದ ತಂತಿಗಳಿಗೆ ಸಿಲುಕಿ ಪಕ್ಷಿಗಳು ಸಾಯುತ್ತಿದ್ದುದರಿಂದ ಈ ಎರಡೂ ರಾಜ್ಯಗಳಿಗೆ ಸೇರಿದ 80 ಸಾವಿರ ಚದರ ಕಿ.ಮೀ. ವ್ಯಾಪ್ತಿಯಲ್ಲಿ ಕಂಬಗಳ ಮೇಲೆ ವಿದ್ಯುತ್ ತಂತಿ ಎಳೆಯಲು ನಿರ್ಬಂಧವಿತ್ತು. ನೆಲದಡಿಯಲ್ಲಿ ಎಳೆದರೆ ಒಳ್ಳೆಯದು ಎಂಬ ಸಲಹೆಯೂ ಇತ್ತು. ಅದು ಕಾರ್ಯರೂಪಕ್ಕೆ ಬರದಿದ್ದುದರಿಂದ ಈಗ 67 ಸಾವಿರ ಚದರ ಕಿ.ಮೀ. ಜಾಗದಲ್ಲಿ ಸೌರಶಕ್ತಿ ಚಟುವಟಿಕೆಗೆ ಮತ್ತು ತಂತಿಗಳನ್ನು ಕಂಬಗಳ ಮೂಲಕ ಎಳೆಯಲು ಅನುಮತಿ ನೀಡಲಾಗಿದೆ. ಇದರಿಂದಾಗಿ, ಇರುವ ಕೆಲವೇ ಕೆಲವು ಪಕ್ಷಿಗಳಿಗೂ ಅಪಾಯ ಎದುರಾಗಿದೆ.

ಹಿಂದೆ ಕೈಗೊಂಡ ಬೃಹತ್ ಯೋಜನೆಗಳಲ್ಲಾದ ಅಪಸವ್ಯಗಳು ಪುನರಾವರ್ತನೆ ಆಗಕೂಡದು. ಸೌರ ಪಾರ್ಕ್‌ಗಳನ್ನು ಸರ್ಕಾರ ಮತ್ತು ಖಾಸಗಿ ಕಂಪನಿಗಳೇ ಸ್ಥಾಪಿಸಬೇಕೆಂದಿಲ್ಲ. ಕೃಷಿ ಮತ್ತು ಸೌರ ವಿದ್ಯುತ್ ಉತ್ಪಾದನೆಯನ್ನು ಸರಿಸಮವಾಗಿ ಪರಿಗಣಿಸುವ ‘ಅಗ್ರಿವೋಲ್ಟಾಯಿಕ್ಸ್’ ಎಂಬ ಸುಸ್ಥಿರ ಅಭಿವೃದ್ಧಿ ಮಾದರಿ ನಮ್ಮದಾಗಬೇಕು. ಜಾನುವಾರುಗಳನ್ನು ಮೇಯಿಸುವ ಜಾಗ ಮತ್ತು ಕೃಷಿಯ ತಾಣಗಳನ್ನು ರೈತರಿಗೆ ಉಳಿಸಿ ಕೊಡಬೇಕಾದ ಎಲ್ಲಾ ತುರ್ತು ಈಗ ಇದೆ.

ಸ್ಥಳೀಯ ಪಂಚಾಯಿತಿ ಮತ್ತು ಸಮುದಾಯಗಳಿಗೆ ಅವಕಾಶ ನೀಡಿ, ಕೌಶಲ ಕಲಿಸಿ ಉತ್ಪಾದನೆಯ ಜವಾಬ್ದಾರಿ ವಹಿಸಿದರೆ ಸ್ಥಳೀಯ ಆರ್ಥಿಕತೆ ವೃದ್ಧಿಯಾಗುತ್ತದೆ ಮತ್ತು ಜೀವವೈವಿಧ್ಯಕ್ಕೂ ಸಂರಕ್ಷಣೆ ದೊರಕುತ್ತದೆ. ಉತ್ಪಾದನಾ ಘಟಕದ ಬಳಿಯೇ ರೀಸೈಕ್ಲಿಂಗ್ ಘಟಕವಿದ್ದರೆ ಮಾಲಿನ್ಯ, ಅನಗತ್ಯ ಸಾಗಣೆ ವೆಚ್ಚಕ್ಕೆ ಕಡಿವಾಣ ಬೀಳುತ್ತದೆ.

ಚುರುಮುರಿ

ಘನವಂತರ ನೆರಳು

• ಡಿ.ಎಸ್.ಲಿಂಗರಾಜು

ತುರೇಮಣೆಗೆ ಅವರ ಅವ್ವ ಅಂದ್ರೆ ಬಲು ಪ್ರೀತಿ. ಬದುಕಿರಗಂಟಾ ‘ಯವ್ವಾ, ಯವ್ವಾ’ ಅಂತ ಹಿಂದಿಂದೆ ಸುತ್ತಾಡ್ತಾ ಹೆಂಡ್ತಿ ಕೈಲಿ ಉಗಿಸ್ಕಳೋರು. ಈಗಲೂ ನಶೆ ಏರಿದ್ದಾಗ ‘ನಮ್ಮವ್ವ ಬೇಕೂ’ ಅಂತ ಕಣ್ಣೀರು ಸುರಿಸ್ತಿದ್ರು. ಮೊನ್ನೆ ರಾತ್ರಿ ಉಂಡು ಮನಗಿದ್ದಾಗ ‘ಲೇ ಮಗಾ, ಎದ್ದು ಮಕ್ಕೆ ಏಡು ನೀರು ಹಾಕ್ಕಂದು ಸೀಟಿಕ್ಕಂದು ಬಯ್ಯಾ’ ಅಂತ ಅವ್ವ ಹೇಳಿದಂಗಾಯ್ತಂತೆ. ಕಣ್ಣುಬುಟ್ಟು ನೋಡಿದ್ರೆ ಅವರವ್ವ ನಿಜರೂಪದೇಲಿ ಬಂದು ಕೂತವ್ಳೆ!

‘ಅವ್ವೆ, ನೀನು ಅದೆಂಗೆ ಇಲ್ಲಿ?’ ಅಂತ ತುರೇಮಣೆ ಕೇಳಿದರು.

‘ಕುಡಿದಾಗೆಲ್ಲಾ ನನ್ನ ಗ್ಯಪ್ತಿಗೆ ತಕ್ಕಂದು ಅಳ್ತೀಯಲ್ಲಾ ಅದುಕ್ಕೆ ಬಂದೆ ಕಾ ಮಗಾ. ಸೊಪ್ಪಿನ ಉಪ್ಸಾರು, ಮುದ್ದೆ ತಂದಿವ್ನಿ ಉಣ್ಣುವೆ ಎದ್ದೇಳಲಾ ಮೂದೇಯ್’ ಅಂದಂಗಾಯ್ತಂತೆ. ತುರೇಮಣೆಗೆ ಖುಷಿಯಾಗಿ ಈಗ ದಿನಕ್ಕೊಂದು ಸಾರಿ ಅವ್ವನ್ನ ಕರೆಸ್ಗಂದು ಮಾತಾಡ್ತಿರತರಂತೆ.

‘ಇದೇನಾ ಸಾ, ನಿಜರೂಪಕ್ಕೆ ತರಿಸೋ ಮಾಯಕಾರ ಇದ್ಯ ಅಂದ್ರೆ. ಮೋದಿ ತಂದಿದ್ದೋ ಇದು?’ ಚಂದ್ರು ಬಾಯ ಮೇಲೆ ಬೆಳ್ಳು ಮಡಗಿದ.

‘ಕೃತಕ ಬುದ್ಧಿಮತ್ತೆ ಬಂದದಲ್ಲಾ ಅದರ ಮುಂದುವರಿದ ಭಾಗ ಡೀಪ್‌ಫೇಕ್ ಅಂತ ಗೊತ್ತಾಯ್ತು ಕನೇಳಿ. ಇದರ ಬಗ್ಗೆ ತಮ್ಮ ವಿಚಾರ ಏನು?’ ಅಂತ ತುರೇಮಣೆಗೆ ಕೇಳಿದೆ.

‘ಅಲ್ಲ ಪೊಲೀಸ್ನೋರು ಡೀಪ್‌ಫೇಕ್ ತಂತ್ರಗ್ನಾನ್ದೇಲಿ, ಕೊಲೆಯಾದೋರ್ನ ಕರೆಸಿ, ಕೊಂದೋರು ಯಾರು ಅಂತ ತಿಳಕಬೋದಲ್ಲವಾ’ ಯಂಟಪ್ಪಣ್ಣ ಅಚ್ಚರಿಗೆ ಬಿತ್ತು.

‘ನೋಡ್ಲಾ, ಸತುವಂತರೆಲ್ಲಾ ಹಳೆ ರಾಗಿ ತರಕೆ ಹೋಂಟೋದ್ಮೇಲೆ ರಾಜಕೀಯದೇಲಿ ಫೇಕು ಮರ್ಯಾದೆ ಮೇಂಟೇನ್ ಮಾಡೋ ಆಗಂತುಕ-ಹೋಗಂತುಕರೇ ಜಾಸ್ತಿಯಾಗ್ಯವ್ರೆ. ಈಗ ಡೀಪ್‌ಫೇಕ್ ತಂತ್ರಜ್ಞಾನ ಬಳಸ್ಕಂದು ಹಳೆ ಘನವಂತರನ್ನೆಲ್ಲಾ ಜೀವಂತ ಮಾಡಿ ಅವರ ಬಾಯಲ್ಲಿ ನಾಕು ಒಳ್ಳೆ ಮಾತು ಹೇಳಿಸಿ ಮಕ್ಕುಗಿಸಿದ್ರೆ ಕುಲಗೆಟ್ಟ ರಾಜಕೀಯ ಸುದ್ದಾಯ್ತುದೇನೊ ಅಂತ ಅಂದ್ಕತಿದೀನಿ’ ಎಂದು ತಮ್ಮ ಮನಸ್ಸು ಬಿಚ್ಚಿಟ್ಟರು.

ಸಂಗತ

ಲೋಕಾಂತದಲ್ಲೂ ಏಕಾಂತಕ್ಕಿರಲಿ ಜಾಗ

ಆಗಾಗ ಏಕಾಂತವನ್ನು ಪ್ರವೇಶಿಸಿ ತನ್ನನ್ನು ತಾನು ಆತ್ಮವಿಮರ್ಶೆಗೆ ಒಳಗಾಗಿಸಿಕೊಳ್ಳುವುದು ಭಾವಶುದ್ಧಿಯ ದೃಷ್ಟಿಯಿಂದ ತುಂಬ ಅಗತ್ಯ

• ರಾಜಕುಮಾರ ಕುಲಕರ್ಣಿ

ಕುಟುಂಬದ ಸದಸ್ಯರ ನಡುವಣ ಜಗಳಗಳು, ಕಚೇರಿಯಲ್ಲಾದ ಗಲಾಟೆ, ಮೇಲಧಿಕಾರಿ ಕುರಿತು ಒಂದಿಷ್ಟು ಅಸಹನೆಯ ಮಾತುಗಳು, ಸಹೋದ್ಯೋಗಿಗಳ ನಡವಳಿಕೆಯ ವಿಶ್ಲೇಷಣೆ, ದಾಯಾದಿಗಳೊಂದಿಗಿನ ಕಾದಾಟ, ಪಕ್ಕದ ಮನೆಯವರ ಉಪದ್ರವದಂತಹ ಎಲ್ಲ ಸಂಗತಿಗಳ ಕುರಿತ ಸಂಭಾಷಣೆಗಳು ಬೇಡವೆಂದರೂ ಬೆಳಗಿನ ವಾಕಿಂಗ್ ವೇಳೆ ಕಿವಿಯ ಮೇಲೆ ಬೀಳುತ್ತವೆ. ಮಹಿಳೆಯರ ಸಂಭಾಷಣೆಯಲ್ಲಿ ಅತ್ತೆ, ನಾದಿನಿ, ವಾರಗಿತ್ತಿಯರ ಕುರಿತು ಅತ್ಯಂತ ಕೆಟ್ಟ ಬೈಗುಳಗಳು ಮಾರ್ದನಿಸುತ್ತವೆ. ತಾವು ರಸ್ತೆಯ ಮೇಲೆ ನಡೆಯುತ್ತಿದ್ದೇವೆ ಎನ್ನುವುದನ್ನೂ ಮರೆತು, ತಮಗಾಗದವರನ್ನು ಜೋರು ಧ್ವನಿಯಿಂದ ನಿಂದಿಸುತ್ತ, ಹೀಯಾಳಿಸುತ್ತ, ಬೈಯುತ್ತ ಪ್ರತೀಕಾರ ತೀರಿಸಿಕೊಳ್ಳುತ್ತಿರುವ ಉದ್ವೇಗದಲ್ಲಿ ಹೆಜ್ಜೆ ಹಾಕುವ ಪರಿ ಅಚ್ಚರಿ ಮೂಡಿಸುತ್ತದೆ.

ಬೆಳಗಿನ ಆಹ್ಲಾದಕರವಾದ ವಾತಾವರಣದಲ್ಲಿ ಶುದ್ಧ ಗಾಳಿ ಸೇವಿಸುತ್ತ ದೇಹ ಮತ್ತು ಮನಸ್ಸು ಎರಡನ್ನೂ ಶುದ್ಧಿಯಾಗಿಸಿಕೊಳ್ಳುವುದು ವಾಯುವಿಹಾರದ ಹಿಂದಿರುವ ಉದ್ದೇಶ. ಆದರೆ ಹಲವರ ಜೊತೆಗೂಡಿ ಮಾತನಾಡುತ್ತಾ ನಡಿಗೆಯಲ್ಲಿ ತೊಡಗುವ ಈ ಸಂದರ್ಭವು ಅನ್ಯರ ನಿಂದನೆಯ ಸುತ್ತ ಗಿರಕಿ ಹೊಡೆಯುತ್ತ ಮನುಷ್ಯನ ಮನಸ್ಸನ್ನು ಅನಾರೋಗ್ಯಕ್ಕೆ ದೂಡುತ್ತಿದೆ. ದೇಹದ ಆರೋಗ್ಯದಷ್ಟೇ ಮನಸ್ಸಿನ ಆರೋಗ್ಯವೂ ಮಹತ್ವದ್ದು.

‘ಮನುಷ್ಯ ಏಕಾಂಗಿಯಾಗಿದ್ದಾಗ ಅದು ಆತ್ಮದ ವಿಶ್ಲೇಷಣೆಗೆ ದಾರಿ ಮಾಡಿಕೊಡುತ್ತದೆ. ಇನ್ನೊಬ್ಬ ಜೊತೆಗೂಡಿದಾಗ ಬೇರೆಯವರನ್ನು ನಿಂದಿಸುವುದು ಶುರುವಾಗುತ್ತದೆ. ಮೂರು ಜನ ಕಲೆತಾಗ ಅದು ಜಗಳಕ್ಕೆ ನಾಂದಿ ಹಾಡುತ್ತದೆ’ ಎಂದಿರುವರು ಅನುಭಾವಿಗಳು.

ವಾಯುವಿಹಾರ, ಯೋಗ, ಧ್ಯಾನ, ಅಧ್ಯಾತ್ಮ ಪ್ರವಚನ, ದೇವಸ್ಥಾನ ಭೇಟಿ ಈ ಎಲ್ಲ ಸಂದರ್ಭಗಳಲ್ಲೂ ಮನುಷ್ಯನು ಮನಸ್ಸಿನ ಶುದ್ಧತೆಗೆ ಆದ್ಯತೆ ಕೊಡುತ್ತಿಲ್ಲ. ಅಲೌಕಿಕ ವಾತಾವರಣದಲ್ಲೂ ರಾಗದ್ವೇಷ, ಮದ, ಮೋಹ, ಮತ್ಸರದಂತಹ ಅರಿಷಡ್ವರ್ಗಗಳಿಂದ ಬಂಧಿತನಾಗುತ್ತಿದ್ದಾನೆ. ಬದುಕಿನಲ್ಲಿ ಭೌತಿಕ ಸಂಗತಿಗಳೇ ಮುನ್ನೆಲೆಗೆ ಬರುತ್ತಿರುವ ಇಂದಿನ ದಿನಗಳಲ್ಲಿ ವಾಯುವಿಹಾರ, ಯೋಗ, ಧ್ಯಾನದಂತಹ ಕ್ರಿಯೆಗಳು ಬರೀ ತೋರಿಕೆಯಾಗುತ್ತಿವೆ.

ಸದಾಕಾಲ ಲೋಕಾಂತದ ವ್ಯವಹಾರಗಳಲ್ಲಿ ಮುಳುಗಿರುವವರಿಗೆ ಏಕಾಂತಕ್ಕೆ ಲಗ್ಗೆ ಇಡುವುದು ಕಷ್ಟದ ಕೆಲಸ. ಆಗಾಗ ಏಕಾಂತವನ್ನು ಪ್ರವೇಶಿಸಿ ತನ್ನನ್ನು ತಾನು ಆತ್ಮವಿಮರ್ಶೆಗೆ ಒಳಗಾಗಿಸಿಕೊಳ್ಳುವುದು ಭಾವಶುದ್ಧಿಯ ದೃಷ್ಟಿಯಿಂದ ತುಂಬ ಅಗತ್ಯವಾಗಿದೆ. ಇಂದಿನ ದಿನಗಳಲ್ಲಿ ಯೋಗ, ಧ್ಯಾನದಂಥ ಏಕಾಂತದ ಕ್ರಿಯೆಗಳಿಗೆ ಮಾರುಕಟ್ಟೆಯ ಮೌಲ್ಯ ಪ್ರಾಪ್ತವಾಗಿದೆ. ಎಲ್ಲವನ್ನೂ ಲಾಭ ಮತ್ತು ನಷ್ಟದ ನೆಲೆಯಲ್ಲೇ ಅಳೆಯುತ್ತ ಯೋಗ ಮತ್ತು ಧ್ಯಾನದಂತಹ ಏಕಾಂತದ ಕ್ರಿಯೆಗಳನ್ನು ಲೋಕಾಂತದಲ್ಲಿ ಮಾರಾಟದ ಸರಕುಗಳಾಗಿ ಪರಿವರ್ತಿಸಲಾಗಿದೆ. ತನ್ನ ನಡೆ-ನುಡಿ, ತನ್ನೊಳಗಿನ ಸರಿ-ತಪ್ಪುಗಳ ವಿವೇಚನೆ ಮತ್ತು ವಿಶ್ಲೇಷಣೆ ಇದೆಲ್ಲ ಸಾಧ್ಯವಾಗುವುದು ಏಕಾಂತದಲ್ಲಿ ಮಾತ್ರ. ಲೋಕಾಂತದಲ್ಲಿ ಕಳೆದುಹೋಗಿರುವ ಮನುಷ್ಯನಿಗೆ ಏಕಾಂತದ ಸುಖದ ಅರಿವಿಲ್ಲವಾಗಿದೆ.

ಶರಣರು ಲೋಕಾಂತದಲ್ಲೇ ಬದುಕಿನ ಸತ್ಯವನ್ನು ಶೋಧಿಸಿದರು ಮತ್ತು ಮೋಕ್ಷವನ್ನು ಸಾಧಿಸಿದರು. ಅಂತರಂಗ ಮತ್ತು ಬಹಿರಂಗ ಎರಡನ್ನೂ ಏಕತ್ರಗೊಳಿಸಿ ಲೋಕಾಂತದಲ್ಲೂ ಏಕಾಂತವನ್ನು ಪ್ರವೇಶಿಸುತ್ತಿದ್ದ ಅನುಭಾವಿಗಳ ಬದುಕು ನಿಜಕ್ಕೂ ಒಂದು ಪವಾಡವೇ ಸರಿ. ಅಲ್ಲಮಪ್ರಭು, ಬಹಿರಂಗಕ್ಕಿಂತ ಅಂತರಂಗ ಶುದ್ಧಿ ಮೇಲು ಎನ್ನುತ್ತಾರೆ.

ಪುಸ್ತಕಗಳ ಓದು ಮನುಷ್ಯನನ್ನು ಧ್ಯಾನಸ್ಥ ಸ್ಥಿತಿಗೆ ಕೊಂಡೊಯ್ಯುತ್ತದೆ. ಪುಸ್ತಕಗಳಲ್ಲಿ ಅಂತರಂಗವನ್ನು ಶುದ್ಧವಾಗಿಸುವ ವಿಚಾರಗಳು ಹೇರಳವಾಗಿ ಲಭಿಸುತ್ತವೆ. ಶಾಂತಿನಾಥ ದೇಸಾಯಿ ಅವರ ‘ಓಂ ಣಮೋ’ ಕಾದಂಬರಿಯಲ್ಲಿ ಮೋಕ್ಷಕ್ಕೆ ದಾರಿ ಮಾಡಿಕೊಡುವ ಐದು ತತ್ವಗಳನ್ನು ಪಾತ್ರವೊಂದು ರೂಢಿಸಿಕೊಳ್ಳುವುದು ಹೀಗಿದೆ- ‘ನಾನಂತೂ ಮರಣದ ಮುಖ ನೋಡಿದ ಮೇಲೆ ನಿರ್ಲಿಪ್ತನಾಗಿಬಿಟ್ಟಿದ್ದೇನೆ. ಇದಕ್ಕೆ ನಾವು ಅಪರಿಗ್ರಹ ಅಂತೀವಿ. ಹೆಂಡತಿಯಿಂದಲೂ ನಿರ್ಲಿಪ್ತ. ಅದಕ್ಕೆ ಬ್ರಹ್ಮಚರ್ಯ ಅಂತಾರೆ. ಬಿಜಿನೆಸ್ಸನ್ನೆಲ್ಲ ಮಗನ ಕೊರಳಿಗೆ ಕಟ್ಟೀನಿ-ಅದಕ್ಕಂತಾರೆ ಅಸ್ತೇಯ. ಯಾವ ಪ್ರಾಣಿಗೂ ತ್ರಾಸ ಕೊಡೋಲ್ಲ-ಅದಕ್ಕಂತಾರೆ ಅಹಿಂಸಾ. ಇನ್ನು ಸತ್ಯ, ಎಂದಾದರೂ ಸಾಯೋದೇ ಸತ್ಯ’. ಆದರೆ ಇಂದಿನ ದಿನಗಳಲ್ಲಿ ಪುಸ್ತಕಗಳನ್ನು ಓದುವ ಓದುಗರ ಸಂಖ್ಯೆ ಗಣನೀಯವಾಗಿ ಕ್ಷೀಣಿಸುತ್ತಿದ್ದು, ಪುಸ್ತಕಗಳ ಓದು ಸೃಷ್ಟಿಸುವ ಧ್ಯಾನಸ್ಥದ ಸುಖದಿಂದ ಮನುಷ್ಯ ವಂಚಿತನಾಗುತ್ತಿದ್ದಾನೆ.

ಕಥೆಗಾರ್ತಿ ಕಸ್ತೂರಿ ಬಾಯರಿ ಬದುಕಿನ ಕುರಿತು ತುಂಬ ಅರ್ಥಪೂರ್ಣವಾದ ಮಾತೊಂದನ್ನು ಸಂದರ್ಶನವೊಂದರಲ್ಲಿ ಹೇಳಿದ್ದಾರೆ- ‘ಅಸಹಾಯಕತೆ, ಹಸಿವು ನಮ್ಮನ್ನು ಕಾಡಲಿಲ್ಲವೆಂದರೆ, ‘ಹೌ ಮಚ್ ವಿ ಆರ್ ಸ್ಟ್ರಾಂಗ್ ಇನ್ ಫ್ರಂಟ್ ಆಫ್ ಹಂಗರ್?’ ಅಂತ ಹ್ಯಾಂಗ ಗೊತ್ತಾಗೋದು. ಯಾರು ನಮ್ಮನ್ನು ನೋಡಿದರೂ ಒಂದು ಕೆಟ್ಟ ಭಾವ ಬರದಂಗ ಘನತೆಯ ಬದುಕು ಬದುಕೀವಿ ಅಂದರ ಅದು ಸಣ್ಣ ಮಾತಲ್ಲ’. ಲೋಕಾಂತದಲ್ಲೂ ಏಕಾಂತಕ್ಕೆ ಲಗ್ಗೆ ಇಡುವ ಅನುಭಾವಿಗಳ ಅಧ್ಯಾತ್ಮವಿದು. ಬದುಕಿನ ಪಯಣವೇ ಮನುಷ್ಯನಿಗೆ ಅಗತ್ಯವಾದ ಏನೆಲ್ಲ ಪಾಠಗಳನ್ನು ಕಲಿಸುತ್ತದೆ ಎಂದು ಅರ್ಥೈಸುತ್ತದೆ ಈ ಮಾತು.

ಮನುಷ್ಯನಿಗೆ ತನ್ನನ್ನು ತಾ ಅರಿಯಲು ತರಬೇತಿ ಶಾಲೆಗಳ ಅಗತ್ಯವಿಲ್ಲ. ಜೀವನವೇ ಒಂದು ಪಾಠಶಾಲೆ. ಬದುಕಿನ ತನ್ನ ಪಯಣದ ದಾರಿಯಲ್ಲೇ ಆತ ಜೀವನದ ಪಾಠಗಳನ್ನು ಕಲಿಯಬೇಕಿದೆ. ಲೋಕಾಂತದ ನಡುವೆಯೂ ಏಕಾಂತಕ್ಕೆ ಲಗ್ಗೆ ಇಟ್ಟು ಬದುಕನ್ನು ಅರ್ಥ ಮಾಡಿಕೊಳ್ಳುವ ಮನಃಸ್ಥಿತಿಯನ್ನು ರೂಢಿಸಿಕೊಳ್ಳಬೇಕಿದೆ.

ವಾಚಕರ ವಾಣಿ

ಶಾಲೆಯ ಪರಿಸರ ಮಕ್ಕಳನ್ನು ಸೆಳೆಯಲಿ

ಅಥಣಿ ತಾಲ್ಲೂಕಿನ ಅಡಹಳ್ಳಟ್ಟಿಯ ಹಿಪ್ಪರಗಿ ತೋಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗಣನೀಯವಾಗಿ ಕುಸಿದಿರುವ ಮಕ್ಕಳ ದಾಖಲಾತಿ ಹೆಚ್ಚಿಸುವ ಕ್ರಮವಾಗಿ, ಪ್ರಸಕ್ತ ಸಾಲಿನಲ್ಲಿ ಒಂದನೇ ತರಗತಿಗೆ ಪ್ರವೇಶ ಪಡೆಯುವ ಮಕ್ಕಳ ಹೆಸರಿನಲ್ಲಿ ಮುಖ್ಯ ಶಿಕ್ಷಕರು ಸ್ವಂತ ಹಣದಿಂದ ₹ 1,000 ಠೇವಣಿ ಇರಿಸಲು ಮುಂದಾಗಿರುವ ಬಗ್ಗೆ ವರದಿಯಾಗಿದೆ (ಪ್ರ.ವಾ., ಜೂನ್ 3). ಮುಖ್ಯ ಶಿಕ್ಷಕರ ಈ ನಡೆ ಮೇಲ್ನೋಟಕ್ಕೆ ಶ್ಲಾಘನೀಯ ಎನಿಸಿದರೂ ಇದು ಸಮಸ್ಯೆಗೆ ಪರಿಹಾರವಲ್ಲ.

ಶಿಕ್ಷಕರ ಮತ್ತು ಮೂಲ ಸೌಕರ್ಯದ ಕೊರತೆಯು ಶಾಲೆಯಲ್ಲಿ ದಾಖಲಾತಿ ಕುಸಿಯಲು ಕಾರಣ ಎಂದು ವರದಿಯಾಗಿದೆ. ಹೀಗಾಗಿ, ಸರ್ಕಾರವು ಶಾಲೆಗೆ ಅಗತ್ಯವಾದ ಶಿಕ್ಷಕರನ್ನು ನೇಮಿಸಬೇಕು ಮತ್ತು ಶಾಲೆಗೆ ಉತ್ತಮ ಕಟ್ಟಡ, ಅದರ ಸುತ್ತ ಕಾಂಪೌಂಡ್, ಅಗತ್ಯ ಪೀಠೋಪಕರಣ, ಪಾಠೋಪಕರಣ, ಆಟದ ಮೈದಾನ, ಶೌಚಾಲಯ, ನೀರಿನಂತಹ ಮೂಲ ಸೌಲಭ್ಯಗಳನ್ನು ಒದಗಿಸಬೇಕು. ಈ ಮೂಲಕ ಶಾಲೆಯಲ್ಲಿ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಬೇಕೇ ವಿನಾ ಮುಖ್ಯ ಶಿಕ್ಷಕರ ಠೇವಣಿ ಹಣದ ಯೋಜನೆಯಿಂದ ಅಲ್ಲ. ಶಾಲೆಯ ಪರಿಸರ, ಅಲ್ಲಿ ನಡೆಯುವ ಪಾಠ-ಪ್ರವಚನ, ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಂತಹವು ಮಕ್ಕಳನ್ನು ಶಾಲೆಗೆ ಸೆಳೆದಾಗ ಮಾತ್ರವೇ ಅದಕ್ಕೊಂದು ಸೊಗಸು ಪ್ರಾಪ್ತವಾಗುವುದು.

ಸಿ.ಚಿಕ್ಕತಿಮ್ಮಯ್ಯ ಹಂದನಕೆರೆ, ಬೆಂಗಳೂರು

ಯುವಜನರಿಂದ ಅಡ್ಡಮಾರ್ಗ: ವ್ಯವಸ್ಥೆಯೇ ಹೊಣೆ

ಪುಣೆಯ ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಆರೋಪಿ ಬಾಲಕನ ಕುಟುಂಬಸ್ಥರು ಆತನನ್ನು ರಕ್ಷಿಸಲು ಹಲವು ಅಡ್ಡಮಾರ್ಗಗಳನ್ನು ಹಿಡಿದಿರುವುದನ್ನು ಮುಂದಿಟ್ಟು, ಇಂದಿನ ಯುವಜನರ ವರ್ತನೆಗಳನ್ನು ಚನ್ನು ಅ. ಹಿರೇಮಠ ಅವರು ವಿಶ್ಲೇಷಿಸಿರುವುದು (ಸಂಗತ, ಜೂನ್ 1) ಸರಿಯಾಗಿದೆ. ಅವರು ಲೇಖನದಲ್ಲಿ ಸೂಚಿಸಿರುವ ಎಲ್ಲಾ ಅಂಶಗಳು ಒಂದಲ್ಲ ಒಂದು ರೀತಿಯಲ್ಲಿ ಸಮಾಜದಲ್ಲಿನ ಅವಾಂತರಗಳಿಗೆ ಅದರಲ್ಲಿಯೂ ಯುವಕರ ಮೇಲಿನ ಪ್ರಭಾವಕ್ಕೆ ಕಾರಣಗಳಾಗಿವೆ ಎಂಬುದು ದಿಟವಾದರೂ, ಇವೆಲ್ಲಕ್ಕಿಂತ ಹೆಚ್ಚಾಗಿ ಈ ಅಪಸವ್ಯಗಳನ್ನು ಸಹಜ ಕ್ರಿಯೆಗಳೆಂದು ಒಪ್ಪಿ, ಅಪ್ಪಿ ನಡೆಯುತ್ತಿರುವ ಇಡೀ ವ್ಯವಸ್ಥೆಯೇ ಇದಕ್ಕೆ ಮೂಲ ಕಾರಣ ಎಂಬುದೂ ಅಷ್ಟೇ ದಿಟ. ಅವಾಂತರಗಳನ್ನು ಸೃಷ್ಟಿಸುವವರಿಗೆ ಈ ಕಾರಣಕ್ಕಾಗಿಯೇ ಆ ಬಗ್ಗೆ ಕಿಂಚಿತ್ತೂ ಪಶ್ಚಾತ್ತಾಪ, ವಿಷಾದ ಇಲ್ಲದಿರುವುದು.

ವಿಲಕ್ಷಣವನ್ನೇ ಲಕ್ಷಣವೆಂದು, ಭ್ರಷ್ಟಾಚಾರವನ್ನೇ ಸದಾಚಾರವೆಂದು, ಭೋಗಲಾಲಸೆಯೇ ಬದುಕಿನ ಉದ್ದೇಶವೆಂದು, ವಿಕೃತಿಯನ್ನೇ ಸುಕೃತಿಯೆಂದು ಸಮಾಜ ಇಷ್ಟಕ್ಕೋ ಕಷ್ಟಕ್ಕೋ ಒಪ್ಪಿಕೊಂಡಂತಿದೆ. ತಪ್ಪುಗಳನ್ನೇ ಸಹಜ ನಡವಳಿಕೆಗಳೆಂದು ಮುಗ್ಧ ಮನಸ್ಸುಗಳ ಮೇಲೆ ಬಲವಂತದ ಹೇರಿಕೆ ಮಾಡುತ್ತಿರುವ, ಅದರ ಅರಿವಿಲ್ಲದೆ ಅಸಹಾಯಕ ಕಣ್ಣುಗಳಿಂದ ನೋಡುತ್ತಿರುವ ಈ ಎರಡು ವರ್ಗಕ್ಕೂ ಚಿಕಿತ್ಸೆ ಕೊಡಬೇಕಾದುದು ಈ ಹೊತ್ತಿನ ತುರ್ತು. ಆದರೆ ಈ ಹೊಣೆಗಾರಿಕೆಯನ್ನು ಹೊರುವವರು ಯಾರು ಎಂಬುದೇ ಯಕ್ಷಪ್ರಶ್ನೆಯಾಗಿದೆ.

ರೇವಣ್ಣ ಎಂ.ಜಿ., ಕೃಷ್ಣರಾಜಪೇಟೆ

ನಿಸರ್ಗದ ಕೊಂಡಿ ಬೆಸೆಯೋಣ

ವಿಶ್ವ ಪರಿಸರ ದಿನ (ಜೂನ್ 5) ಸಮೀಪಿಸಿದೆ. ಅಂದು ಹಲವು ಸಂಘ–ಸಂಸ್ಥೆಗಳ ಸದಸ್ಯರು ಹಾಗೂ ಯುವಜನರು ಗಿಡಗಳನ್ನು ನೆಡಲು ಮುಂದಾಗುತ್ತಾರೆ. ಪರಿಸರ ಸಂರಕ್ಷಣೆಯಲ್ಲಿ ಇದೊಂದು ಅತ್ಯುತ್ತಮ ಮಾರ್ಗವೇ ಆಗಿದೆ. ಆದರೆ ಪರಿಸರ ದಿನವೆಂದರೆ ಬರೀ ಸಸಿ ನೆಟ್ಟು ಕೈ ತೊಳೆದುಕೊಳ್ಳುವುದಲ್ಲ. ಬದಲಾಗಿ, ನಿಸರ್ಗದಲ್ಲಿ ಒಂದಕ್ಕೊಂದು ಬೆಸೆದುಕೊಂಡಿರುವ ಸರಪಳಿಯ ಸಂಕೀರ್ಣ ಕೊಂಡಿಗಳನ್ನು ರಕ್ಷಿಸುವುದು ಅಥವಾ ಈ ಸರಪಳಿಯನ್ನು ಮಾನವನ ಹಸ್ತಕ್ಷೇಪದಿಂದ ದೂರವಿರಿಸುವುದೇ ಆಗಿದೆ. ಪ್ರಸ್ತುತ ಈ ಸರಪಳಿಯಲ್ಲಿನ ಜೈವಿಕ ಹಾಗೂ ಅಜೈವಿಕ ಘಟಕಗಳ ನಡುವಿನ ಸಂಬಂಧವನ್ನು ತಿಳಿಯುವುದು ಮತ್ತು ಅವುಗಳನ್ನು ರಕ್ಷಿಸುವ ಮಾರ್ಗಗಳನ್ನು ಅರಿಯುವುದು ಮುಖ್ಯವಾಗಿದೆ.

ಯಾರ ಅಂಕೆಗೂ ಸಿಗದೆ ನಾಗಾಲೋಟದಲ್ಲಿ ಮುನ್ನುಗ್ಗುತ್ತಿರುವ ‘ಆಧುನಿಕ ಜೀವನಶೈಲಿ’ ಎಂಬ ಕಾಯಿಲೆಯಿಂದ ಬಿಡಿಸಿಕೊಂಡು, ಸರಳ ಹಾಗೂ ಮಣ್ಣಿಗೆ ಸಮೀಪದ ಜೀವನಶೈಲಿಯನ್ನು ರೂಢಿಸಿಕೊಳ್ಳುವುದನ್ನು ಕಲಿಯುವುದು ಮುಖ್ಯ. ಪರಿಸರ ವ್ಯವಸ್ಥೆಯ ಪರಿಕಲ್ಪನೆಯೇ ಇರದ ಸಮಾಜದಲ್ಲಿ ಪರಿಸರ ದಿನ ಎಂಬುದು ಮುಂದೊಂದು ದಿನ ‘ಬರೀ ಸಸಿ ನೆಡುವ ದಿನ’ ಎಂದು ತಪ್ಪಾಗಿ ಅರ್ಥೈಸುವ ದಿನವಾಗುವ ಅಪಾಯವೂ ಇದೆ. ಆದ್ದರಿಂದ, ಪರಿಸರದ ದಿನ ಅರ್ಥಪೂರ್ಣಗೊಳ್ಳಲು, ಆಚರಣೆಯ ಸಂದರ್ಭದಲ್ಲಿ ಸರಿಯಾದ ಜಾಗೃತಿ ಮೂಡಿಸುವ ಕೆಲಸವೂ ಆಗಬೇಕಿದೆ.

ಮಹೇಶ್ವರ ಹುರುಕಡ್ಲಿ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಶೀಘ್ರ ಫಲಿತಾಂಶ: ಮಾದರಿ ವಿ.ವಿ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು (ವಿಟಿಯು) ಎಂಜಿನಿಯರಿಂಗ್ ಕೋರ್ಸ್‌ಗಳ ಅಂತಿಮ ಸೆಮಿಸ್ಟರ್‌ನ ಫಲಿತಾಂಶವನ್ನು ಇತ್ತೀಚೆಗೆ ಪರೀಕ್ಷೆ ನಡೆದ 3 ಗಂಟೆಗಳ ಅವಧಿಯಲ್ಲೇ ಪ್ರಕಟಿಸುವ ಮೂಲಕ ದಾಖಲೆ ನಿರ್ಮಿಸಿರುವುದು ಶ್ಲಾಘನೀಯ. ಸಂಜೆ 5 ಗಂಟೆಗೆ ಪರೀಕ್ಷೆ ಕೊನೆಗೊಂಡಿದ್ದು, 42,323 ವಿದ್ಯಾರ್ಥಿಗಳ ಫಲಿತಾಂಶ ಅದೇ ದಿನ ರಾತ್ರಿ 8 ಗಂಟೆಯ ವೇಳೆಗೆ ಪ್ರಕಟವಾಯಿತು. ಫಲಿತಾಂಶವನ್ನು ವಾಟ್ಸ್‌ಆ್ಯಪ್‌ನಲ್ಲಿ ಕೂಡ ಹಂಚಿಕೊಳ್ಳಲಾಯಿತು.

ಹಿಂದೆಲ್ಲಾ ಪರೀಕ್ಷೆ ನಡೆದ ಅನೇಕ ದಿನಗಳ ನಂತರ ಫಲಿತಾಂಶ ಪ್ರಕಟವಾಗುತ್ತಿತ್ತು. ಅದಕ್ಕೆಲ್ಲಾ ಬೇರೆ ಬೇರೆ ಕಾರಣಗಳಿರಬಹುದು. ಇತ್ತೀಚಿನ ವರ್ಷಗಳಲ್ಲಿ ಎಸ್‌ಎಸ್‌ಎಲ್‌ಸಿ ಹಾಗೂ ಪಿಯುಸಿ ಫಲಿತಾಂಶಗಳು ಸಹ ಬೇಗ ಪ್ರಕಟವಾಗುತ್ತಿವೆ. ಫಲಿತಾಂಶಗಳು ಬೇಗ ಪ್ರಕಟವಾದರೆ, ವಿದ್ಯಾರ್ಥಿಗಳ ಮುಂದಿನ ಶೈಕ್ಷಣಿಕ ಚಟುವಟಿಕೆಗೆ ಅಥವಾ ಉದ್ಯೋಗಕ್ಕೆ ನೆರವಾಗುತ್ತದೆ. ಈ ದಿಸೆಯಲ್ಲಿ ವಿಟಿಯು ಉಳಿದ ವಿಶ್ವವಿದ್ಯಾಲಯಗಳಿಗೆ ಮಾದರಿಯಾಗಿದೆ.

ಕೆ.ವಿ.ವಾಸು, ಮೈಸೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಜನರ ಮೇಲೆ ಹೆಚ್ಚುತ್ತಿದೆ ಹೆದ್ದಾರಿ ಟೋಲ್ ಹೊರೆ

ಪ್ರಜಾವಾಣಿ ವಾರ್ತೆ

‘ಮೊದಲೇ ಪೆಟ್ರೋಲ್, ಡೀಸೆಲ್ ಬೆಲೆ ಗಗನಕ್ಕೇರಿವೆ. ಇಂಥಾ ಹೊತ್ತಿನಲ್ಲಿ ಟೋಲ್ ದರವನ್ನು ಹೆಚ್ಚಿಸಲಾಗಿದೆ. ಟೋಲ್ ದರ ಏರಿಕೆಯು ಜನರು ಹೆದ್ದಾರಿಯಲ್ಲಿ ಓಡಾಡದೇ ಇರುವ ಹಾಗೆ ಮಾಡಿದೆ’ ಎನ್ನುತ್ತಾರೆ ದೆಹಲಿಯಿಂದ ಲಖನೌಗೆ ತೆರಳುವ ಹೆದ್ದಾರಿಯಲ್ಲಿ ಪ್ರತಿನಿತ್ಯ ಪ್ರಯಾಣಿಸುವ ಅಂಕುರ್ ಸಕ್ಸೇನಾ. ಇವರು ಜಾಹೀರಾತು ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದಾರೆ.

ದೇಶದಾದ್ಯಂತ ಸೋಮವಾರದಿಂದ ಜಾರಿಯಾಗುವಂತೆ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು (ಎನ್‌ಎಚ್‌ಎಐ) ಹೆದ್ದಾರಿ ಟೋಲ್ ದರವನ್ನು ಶೇ 3ರಿಂದ ಶೇ 5ರವರೆಗೆ ಏರಿಕೆ ಮಾಡಿದೆ. ಪ್ರತಿ ವರ್ಷವೂ ಪ್ರಾಧಿಕಾರ ಟೋಲ್ ದರವನ್ನು ಏರಿಕೆ ಮಾಡುತ್ತದೆ. ಅಂತೆಯೇ 2024ರ ದರ ಏರಿಕೆ ಪ್ರಕ್ರಿಯೆಯನ್ನು ಪ್ರಾಧಿಕಾರ ಕೈಗೊಂಡಿದೆ. ಆದರೆ, ಟೋಲ್ ದರ ಏರಿಕೆ ಬಗ್ಗೆ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ತಮ್ಮ ‘ಎಕ್ಸ್’ ಖಾತೆಗಳಲ್ಲಿ ಸಾರ್ವಜನಿಕರು ಈ ಬಗ್ಗೆ ಚರ್ಚೆ ನಡೆಸುತ್ತಿದ್ದಾರೆ. ‘ಇನ್ನುಮುಂದೆ ವಾಹನದ ಬದಲು ಎಮ್ಮೆಗಳ ಮೇಲೆ ಕೂತು ಹೆದ್ದಾರಿಗಳಲ್ಲಿ ಓಡಾಡುವುದು ಒಳಿತು’ ಎಂದು ಕೆಲವರು ಪೋಸ್ಟ್ ಮಾಡಿದ್ದಾರೆ.

ರಸ್ತೆ ಸಂಪರ್ಕವನ್ನು ವಿಸ್ತರಿಸಲು, ಹೆಚ್ಚು ಹೆಚ್ಚು ಹೆದ್ದಾರಿಗಳನ್ನು ನಿರ್ಮಿಸಲು ಟೋಲ್ ದರವನ್ನು ಹೆಚ್ಚಿಸುವುದು ಅನಿವಾರ್ಯ ಎಂದು ಪ್ರಾಧಿಕಾರ ಹೇಳಿಕೊಂಡಿದೆ. ಹಾಗಾದರೆ, ಪ್ರಾಧಿಕಾರವು ಕೇವಲ ಟೋಲ್‌ವೊಂದರಿಂದಲೇ ಅಭಿವೃದ್ಧಿ ಮಾಡಬೇಕಿದೆಯೇ ಎನ್ನುವ ಪ್ರಶ್ನೆ ಉದ್ಭವಿಸುತ್ತದೆ. ಉತ್ತರ: ಇಲ್ಲ ಎಂದೇ ಹೇಳಬೇಕು. ಹೆದ್ದಾರಿ ಅಭಿವೃದ್ಧಿಗಾಗಿ ಟೋಲ್ ಮಾತ್ರವಲ್ಲದೆ ಇನ್ನು ಎರಡು ರೀತಿಯ ಸೆಸ್ ರೂಪದ ತೆರಿಗೆಯನ್ನು ಪ್ರಾಧಿಕಾರವು ಜನರಿಂದ ಪಡೆದುಕೊಳ್ಳುತ್ತದೆ. ಒಂದು, ರಸ್ತೆ ಮತ್ತು ಮೂಲಸೌಕರ್ಯ ಸೆಸ್ ಮತ್ತೊಂದು ಪೆಟ್ರೋಲ್ ಮತ್ತು ಡೀಸೆಲ್ ಮೇಲೆ ಪಡೆಯುವ ‘ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕ’.

ರಸ್ತೆ ಮತ್ತು ಮೂಲಸೌಕರ್ಯ ಸೆಸ್‌ನಿಂದ ಸಂಗ್ರಹವಾದ ಹಣವನ್ನು ಹೆದ್ದಾರಿ ಅಭಿವೃದ್ಧಿಗಾಗಿಯೇ ಬಳಸಿಕೊಳ್ಳಬೇಕು ಎಂಬ ನಿಯಮವಿತ್ತು. ಆದರೆ, 2018ರಲ್ಲಿ ಈ ನಿಮಯಗಳಿಗೆ ತಿದ್ದುಪಡಿ ತರಲಾಯಿತು. ಮೊದಲು ಈ ಸೆಸ್ ಅನ್ನು ರಾಷ್ಟ್ರೀಯ ಹೆದ್ದಾರಿ ಮತ್ತು ಸೇತುವೆಗಳ ನಿರ್ಮಾಣ ಮತ್ತು ನಿರ್ವಹಣೆಗಷ್ಟೇ ಬಳಸಲಾಗುತ್ತಿತ್ತು. 2018ರಲ್ಲಿ ತಿದ್ದುಪಡಿ ತರುವ ಮೂಲಕ ರೈಲು ಸೌಕರ್ಯ ಅಭಿವೃದ್ಧಿ, ವಿಮಾನ ನಿಲ್ದಾಣಗಳ ಅಭಿವೃದ್ಧಿ-ನಿರ್ವಹಣೆ, ಬಂದರುಗಳ ನಿರ್ಮಾಣ–ನಿರ್ವಹಣೆ, ಶುದ್ಧ ನೀರಿನ ಪೂರೈಕೆ ಯೋಜನೆ ಸೇರಿದಂತೆ ಅನ್ಯ ಸ್ವರೂಪದ ಮೂಲಸೌಕರ್ಯಗಳ ಅಭಿವೃದ್ಧಿಗೆ ಬಳಸಿಕೊಳ್ಳಲು ಅವಕಾಶ ಮಾಡಿಕೊಂಡಿದೆ.

ರಸ್ತೆ ಅಭಿವೃದ್ಧಿಗಾಗಿಯೇ ಸಂಗ್ರಹಿಸುವ ಹಣವನ್ನು ರಸ್ತೆ ಅಭಿವೃದ್ಧಿಗಲ್ಲದೆ, ಇತರ ಮೂಲಸೌಕರ್ಯ ಕಾರ್ಯಗಳಿಗೆ ವಿನಿಯೋಗಿಸಲಾಗುತ್ತಿರುವ ಕಾರಣಕ್ಕಾಗಿಯೇ ಈ ಸೆಸ್ ಅಡಿಯಲ್ಲಿ ರೂಪಿಸಲಾದ ನಿಧಿಯಲ್ಲಿ ಅಗತ್ಯ ಅನುದಾನ ಇಲ್ಲವಾಗಿದೆ. ಇದರ ಜೊತೆಗೆ, ಈ ಎರಡೂ ತೆರಿಗೆಗಳನ್ನು ಕೇಂದ್ರ ಸರ್ಕಾರವು ರಾಜ್ಯಗಳೊಂದಿಗೆ ಹಂಚಿಕೊಳ್ಳುವಂತಿಲ್ಲ. ಬದಲಿಗೆ ಸಂಪೂರ್ಣವಾಗಿ ಕೇಂದ್ರ ಸರ್ಕಾರವೇ ಬಳಸಿಕೊಳ್ಳುತ್ತದೆ. ಇಷ್ಟೆಲ್ಲಾ ತೆರಿಗೆಗಳನ್ನು ಸಂಗ್ರಹ ಮಾಡುತ್ತಿದ್ದರೂ ಪ್ರತಿ ವರ್ಷ ಟೋಲ್ ದರವನ್ನು ಏರಿಕೆ ಮಾಡುವುದು ಎಷ್ಟು ಸರಿ ಎಂದು ಸಾರ್ವಜನಿಕರು ‘ಎಕ್ಸ್’ನಲ್ಲಿ ಚರ್ಚಿಸುತ್ತಿದ್ದಾರೆ ಮತ್ತು ಪ್ರಾಧಿಕಾರವನ್ನೂ ಪ್ರಶ್ನಿಸುತ್ತಿದ್ದಾರೆ.

ವಿರೋಧ ಪಕ್ಷಗಳೂ ಈ ಕ್ರಮವನ್ನು ವಿರೋಧಿಸಿವೆ. ಪ್ರತಿ ವರ್ಷವೂ ಟೋಲ್ ದರವನ್ನು ಏರಿಸುವುದರಿಂದ ಅಗತ್ಯ ವಸ್ತುಗಳ ಬೆಲೆಗಳೂ ಏರಿಕೆಯಾಗುತ್ತವೆ. ಇದು ಮತ್ತೆ ಜನರ ಮೇಲೆಯೇ ಹೊರೆಯಾಗಲಿದೆ. ಜನರು ಒಂದು ಕಡೆ ಟೋಲ್ ದರವನ್ನು ಪಾವತಿ ಮಾಡಬೇಕು, ಇನ್ನೊಂದೆಡೆ, ಅಗತ್ಯ ವಸ್ತಗಳಿಗೂ ಹೆಚ್ಚಿನ ದರ ನೀಡಬೇಕಾಗುತ್ತದೆ ಎಂದು ವಿರೋಧ ಪಕ್ಷಗಳು ಹೇಳಿವೆ.

ಸಂಗ್ರಹಿಸಿದ್ದು ಎರಡೂವರೆ ಲಕ್ಷ ಕೋಟಿ ವೆಚ್ಚ ಮಾಡಿದ್ದು ಒಂದು ಲಕ್ಷ ಕೋಟಿ

₹1.45 ಲಕ್ಷ ಕೋಟಿ
2023–24ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಕಚ್ಚಾತೈಲದ ಮೇಲೆ ಸಂಗ್ರಹಿಸಿದ ‘ವಿಶೇಷ ಹೆಚ್ಚುವರಿ ಎಕ್ಸೈಸ್ ಸುಂಕ’

+

₹44,300 ಕೋಟಿ
2023–24ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಸಂಗ್ರಹಿಸಿದ ರಸ್ತೆ ಮತ್ತು ಮೂಲಸೌಕರ್ಯ ಸೆಸ್

+

₹64,810 ಕೋಟಿ
2023–24ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಸಂಗ್ರಹಿಸಿದ ಹೆದ್ದಾರಿ ಟೋಲ್ ಮೊತ್ತ

=

₹2.54 ಲಕ್ಷ ಕೋಟಿ
2023–24ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ರಸ್ತೆ ಮತ್ತು ಹೆದ್ದಾರಿ ಅಭಿವೃದ್ಧಿ ಮತ್ತು ನಿರ್ವಹಣೆಗೆಂದು ಸಂಗ್ರಹಿಸಿದ ವಿವಿಧ ಸೆಸ್, ತೆರಿಗೆ ಮತ್ತು ಶುಲ್ಕಗಳ ಒಟ್ಟು ಮೊತ್ತ

₹1.08 ಲಕ್ಷ ಕೋಟಿ
2023–24ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ರಸ್ತೆ ಮತ್ತು ಹೆದ್ದಾರಿ ಅಭಿವೃದ್ಧಿಗೆಂದು ಮಾಡಿದ ಒಟ್ಟು ವೆಚ್ಚ

ದಂಡ ಶುಲ್ಕದಿಂದಲೂ ಟೋಲ್ ಸಂಗ್ರಹ ಭಾರಿ ಏರಿಕೆ



* 2023–24ನೇ ಸಾಲಿನ ಅಂತ್ಯದ ವೇಳೆಗೆ ₹64,810 ಕೋಟಿಯಷ್ಟು ಟೋಲ್ ಮೊತ್ತ ಸಂಗ್ರಹವಾಗಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಅಧಿಕಾರಿಗಳು ಹೇಳಿದ್ದಾರೆ ಎಂದು ಮಾಧ್ಯಮಗಳು ವರದಿ ಮಾಡಿವೆ

ರಾಷ್ಟ್ರೀಯ ಹೆದ್ದಾರಿ ಬಳಕೆದಾರರಿಂದ ಸಂಗ್ರಹಿಸಲಾಗುತ್ತಿರುವ ಶುಲ್ಕವು ವರ್ಷದಿಂದ ವರ್ಷಕ್ಕೆ ಭಾರಿ ಪ್ರಮಾಣದಲ್ಲಿ ಏರಿಕೆಯಾಗಿದೆ. 2018–19ನೇ ಆರ್ಥಿಕ ವರ್ಷದಿಂದ 2020–21ನೇ ಆರ್ಥಿಕ ವರ್ಷದವರೆಗಿನ ಅವಧಿಯಲ್ಲಿ ಹೀಗೆ ಸಂಗ್ರಹಿಸಲಾದ ಟೋಲ್ ಮೊತ್ತದಲ್ಲಿನ ಏರಿಕೆಯು ಸಾವಿರ ಕೋಟಿಯ ಆಸುಪಾಸಿನಲ್ಲಿ ಇತ್ತು. 2021–22ನೇ ಸಾಲಿನಲ್ಲಿ ಟೋಲ್ ದರವನ್ನು ಭಾರಿ ಪ್ರಮಾಣದಲ್ಲಿ ಏರಿಕೆ ಮಾಡಿದ ಕಾರಣ ಆ ವರ್ಷ ಸಂಗ್ರಹವಾದ ಟೋಲ್ ಮೊತ್ತದಲ್ಲಿ ಸುಮಾರು ಐದು ಸಾವಿರ ಕೋಟಿಯಷ್ಟು ಏರಿಕೆಯಾಗಿತ್ತು.

ಆದರೆ ನಂತರದ ವರ್ಷಗಳಲ್ಲಿ ಪ್ರತಿ ವರ್ಷ ಸಂಗ್ರಹವಾದ ಟೋಲ್ ಮೊತ್ತದಲ್ಲಿ ಸರಾಸರಿ ₹15,000 ಕೋಟಿಯಷ್ಟು ಏರಿಕೆಯಾಗಿದೆ. 2021–22ನೇ ಆರ್ಥಿಕ ವರ್ಷಕ್ಕೆ ಹೋಲಿಸಿದರೆ, 2022–23ರಲ್ಲಿ ಸಂಗ್ರಹವಾದ ಟೋಲ್ ಮೊತ್ತದಲ್ಲಿ ₹14,121 ಕೋಟಿಯಷ್ಟು ಏರಿಕೆಯಾಗಿತ್ತು. 2023–24ರಲ್ಲಿ ₹16,782ಕೋಟಿಯಷ್ಟು ಏರಿಕೆಯಾಗಿದೆ.

ಫಾಸ್ಟ್‌ಟ್ಯಾಗ್ ಬಳಕೆಯನ್ನು ಕಟ್ಟುನಿಟ್ಟಾಗಿ ಜಾರಿ ಮಾಡಿರುವುದು ಟೋಲ್ ಸಂಗ್ರಹ ಹೆಚ್ಚಾಗಲು ಕಾರಣ ಎನ್ನಲಾಗಿದೆ. ಫ್ಯಾಸ್ಟ್‌ಟ್ಯಾಗ್ ಮೂಲಕ ಹೆಚ್ಚು ಟೋಲ್ ಸಂಗ್ರಹವಾಗುತ್ತಿದ್ದರೂ, ಫಾಸ್ಟ್‌ಟ್ಯಾಗ್ ಇಲ್ಲದ ವಾಹನಗಳಿಗೆ ಒಂದು ಪಟ್ಟು ಹೆಚ್ಚು ದಂಡ ವಿಧಿಸಲಾಗುತ್ತಿದೆ. ಉದಾಹರಣೆಗೆ ಒಂದು ಹೆದ್ದಾರಿಯಲ್ಲಿನ ಎರಡು ಟೋಲ್‌ಗಳ ನಡುವಣ ಶುಲ್ಕ ₹50 ಇದ್ದು, ಫಾಸ್ಟ್‌ಟ್ಯಾಗ್ ಇದ್ದರೆ ₹50ರಷ್ಟು ಶುಲ್ಕವನ್ನೇ ವಿಧಿಸಲಾಗುತ್ತದೆ. ಆದರೆ ಫಾಸ್ಟ್‌ಟ್ಯಾಗ್ ಇಲ್ಲದೇ ಇದ್ದರೆ ದಂಡ ಸೇರಿ ₹100 ಶುಲ್ಕ ವಿಧಿಸಲಾಗುತ್ತದೆ. ಹೀಗೆ ದಂಡ ಸೇರಿ ದುಪ್ಪಟ್ಟು ಶುಲ್ಕ ವಿಧಿಸುತ್ತಿರುವ ಕಾರಣದಿಂದಲೂ ಟೋಲ್ ಸಂಗ್ರಹ ಭಾರಿ ಪ್ರಮಾಣದಲ್ಲಿ ಏರಿಕೆಯಾಗುತ್ತಿದೆ.

ಆದರೆ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು, ರಾಷ್ಟ್ರೀಯ ಹೆದ್ದಾರಿಗಳ ವಿಸ್ತರಣೆ, ಹೊಸ ಹೆದ್ದಾರಿಗಳ ನಿರ್ಮಾಣದಿಂದಾಗಿ ಬಳಕೆದಾರರ ಸಂಖ್ಯೆ ಹೆಚ್ಚಾಗಿದೆ. ಈ ಕಾರಣದಿಂದಲೇ ಟೋಲ್ ಮೊತ್ತ ಏರಿಕೆಯಾಗಿದೆ ಎಂದು ವಿವರಿಸಿದೆ.

ಮೂಲಸೌಕರ್ಯಗಳೇ ಇಲ್ಲದ ಹೆದ್ದಾರಿಗಳು

ಸರ್ಕಾರವೇ ನಿರ್ಮಿಸಿದ ಹೆದ್ದಾರಿಗಳಿರಲಿ, ಸರ್ಕಾರ–ಖಾಸಗಿ ಸಹಭಾಗಿತ್ವದ ಹೆದ್ದಾರಿಗಳಿರಲಿ ಅಥವಾ ಖಾಸಗಿ ಕಂಪನಿಯು ನಿರ್ಮಿಸಿದ ಹೆದ್ದಾರಿಗಳಿರಲಿ ಜನರು ಟೋಲ್ ನೀಡಲೇಬೇಕು. ಟೋಲ್ ಪಾವತಿ ಜೊತೆಯಲ್ಲಿ ಸೆಸ್ ಅನ್ನು ಕೂಡ ಜನರು ನೀಡಬೇಕಿದೆ. ಇಷ್ಟೆಲ್ಲಾ ಹಣ ಪಾವತಿಸಿದರೂ ಹೆದ್ದಾರಿಗಳಲ್ಲಿ ಮೂಲಸೌಕರ್ಯ ಮಾತ್ರ ಮರೀಚಿಕೆಯಾಗಿದೆ. ಇದನ್ನು ಸಿಎಜಿ ವರದಿಯಲ್ಲಿಯೇ ಉಲ್ಲೇಖಿಸಲಾಗಿದೆ.

‘ದಕ್ಷಿಣ ಭಾರತದ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಘಟಕಗಳ ನಿರ್ವಹಣೆ’ ಎಂಬ ವರದಿಯನ್ನು 2023ರಲ್ಲಿ ಸಿದ್ಧಪಡಿಸಲಾಗಿತ್ತು. ದಕ್ಷಿಣ ಭಾರತದ 37 ರಾಷ್ಟ್ರೀಯ ಹೆದ್ದಾರಿಗಳ, ಒಟ್ಟು 41 ಟೋಲ್ ಘಟಕಗಳನ್ನು ಪರಿಶೀಲಿಸಿ ವರದಿ ನೀಡಲಾಗಿದೆ. ಶೌಚಾಲಯ, ಆಂಬುಲೆನ್ಸ್ ಸೇವೆ, ವಿಶ್ರಾಂತಿ ಕೊಠಡಿ... ಹೀಗೆ ಮೂಕಸೌರ್ಕಗಳನ್ನು ಒದಗಿಸುವುದು ಕಡ್ಡಾಯವಾದರೂ, ಹೆದ್ದಾರಿಗಳಲ್ಲಿ ಇವುಗಳು ಯಾವವೂ ಇಲ್ಲದಾಗಿವೆ ಎಂದು ವರದಿಯಲ್ಲಿ ವಿವರಿಸಲಾಗಿತ್ತು.

ಆಧಾರ: ಕೇಂದ್ರ ಬಜೆಟ್, ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯದ ಪ್ರಕಟಣೆಗಳು ಮತ್ತು ರಾಜ್ಯಸಭೆಗೆ ನೀಡಿದ ಲಿಖಿತ ಉತ್ತರಗಳು, ಪಿಟಿಐ, ಸಿಎಜಿ ವರದಿ, ಹಣಕಾಸು ಕಾಯ್ದೆ–2002, ಹಣಕಾಸು ಕಾಯ್ದೆ–2018

ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ 2ನೇ ಆವೃತ್ತಿ

‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ ಎರಡನೇ ಆವೃತ್ತಿ ಸಮಾರಂಭ ಶೀಘ್ರದಲ್ಲೇ ನಡೆಯಲಿದ್ದು, 19 ವಿಭಾಗಗಳಲ್ಲಿ ಪ್ರಶಸ್ತಿಗೆ ನಾಮನಿರ್ದೇಶನಗೊಂಡವರು ಮತ್ತು ಸಿನಿಮಾಗಳ ಪಟ್ಟಿಯನ್ನು ಈಗಾಗಲೇ ಪ್ರಕಟಿಸಲಾಗಿದೆ. ಇದೀಗ ‘ಅತ್ಯುತ್ತಮ ಚೊಚ್ಚಲ ನಿರ್ದೇಶನ’ ವಿಭಾಗದಲ್ಲಿ ನಾಮನಿರ್ದೇಶಿತಗೊಂಡವರ ಪರಿಚಯಿಸುವ ಸಮಯ. ಇನ್ನಷ್ಟು ಮಾಹಿತಿಗಳಿಗಾಗಿ ವೆಬ್‌ಸೈಟ್ ನೋಡಿ. prajavani.net/cinesamman/season2

ಉಮೇಶ್ ಕೆ.ಕೃಪ

‘ಟಗರುಪಲ್ಯ’ ಸಿನಿಮಾ ನಿರ್ದೇಶನಕ್ಕಾಗಿ **ಉಮೇಶ್ ಕೆ.ಕೃಪ** ನಾಮನಿರ್ದೇಶನಗೊಂಡಿದ್ದಾರೆ. ನಟ ಧನಂಜಯ ಅವರ ಡಾಲಿ ಪಿಕ್ಚರ್ಸ್‌ನಡಿ ನಿರ್ಮಾಣಗೊಂಡಿದ್ದ ಈ ಸಿನಿಮಾ ಮಣ್ಣಿನ ಕಥೆಯನ್ನು ಹೊತ್ತು ಪ್ರೇಕ್ಷಕರೆದುರಿಗೆ ಬಂದಿತ್ತು. ಮಣ್ಣಿನ ಕಥೆಗೆ ಕಮರ್ಷಿಯಲ್ ಸ್ಪರ್ಶ ನೀಡಿ ಸಿನಿಮಾ ಮಾಡುವ ಕನಸು ಹೊತ್ತ ಉಮೇಶ್, ಕುವೆಂಪು ವಿಶ್ವವಿದ್ಯಾಲಯದಲ್ಲಿ ಕಲಿತವರು. ಯೋಗರಾಜ್ ಭಟ್ ನಿರ್ದೇಶನದ ‘ಪಂಚತಂತ್ರ’, ‘ಗಾಳಿಪಟ–2’, ನಾಗಶೇಖರ್ ನಿರ್ದೇಶನದ ‘ಮಾಸ್ತಿಗುಡಿ’ ಹಾಗೂ ಪವನ್ ಒಡೆಯರ್ ನಿರ್ದೇಶನದ ‘ರಣವಿಕ್ರಮ’ ಸಿನಿಮಾಗಳಲ್ಲಿ ಸಹ ನಿರ್ದೇಶಕನಾಗಿ ಕೆಲಸ ಮಾಡಿದ ಅನುಭವವಿರುವ ಉಮೇಶ್, ‘ಜಯಮ್ಮನ ಮಗ’, ‘ಕಾಣದಂತೆ ಮಾಯವಾದನು’ ಸೇರಿದಂತೆ ಕೆಲ ಸಿನಿಮಾಗಳಲ್ಲಿ ಪ್ರೊಡಕ್ಷನ್ ಡಿಸೈನರ್ ಆಗಿಯೂ ಕಾರ್ಯನಿರ್ವಹಿಸಿದ್ದಾರೆ.

‘ಡೇರ್‌ಡೆವಿಲ್ ಮುಸ್ತಾಫಾ’ ಚಿತ್ರದ ನಿರ್ದೇಶನಕ್ಕಾಗಿ **ಶಶಾಂಕ್ ಸೋಗಾಲ್** ನಾಮನಿರ್ದೇಶನಗೊಂಡಿದ್ದಾರೆ. ಮೈಸೂರಿನಲ್ಲಿ ಹುಟ್ಟಿ ಬೆಳೆದ ಶಶಾಂಕ್, ಸಾಫ್ಟ್‌ವೇರ್ ಕ್ಷೇತ್ರದಲ್ಲಿ ಕೆಲಸ ಮಾಡಿ ಸಿನಿ ಪಯಣಕ್ಕೆ ಹೆಜ್ಜೆ ಇಟ್ಟವರು. ರಂಗಭೂಮಿಯ ನಂಟು ಹೊಂದಿರುವ ಶಶಾಂಕ್, ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದಾಗ ಕಥೆ, ಕಾದಂಬರಿಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡವರು. ಆ ಸಂದರ್ಭದಲ್ಲೇ ಸಿನಿಮಾದ ಸಣ್ಣ ಕನಸೂ ಅವರಲ್ಲಿ ಚಿಗುರೊಡೆದಿತ್ತು. ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ ಕಥೆಗಳನ್ನು ಸಿನಿಮಾ ಮಾಡಬೇಕು ಎಂಬ ಶಂಶಾಕ್ ಯೋಚನೆಯೇ ‘ಡೇರ್‌ಡೆವಿಲ್ ಮುಸ್ತಾಫಾ’ ಸಿನಿಮಾ ರೂಪ ಪಡೆಯಿತು. ಕನ್ನಡ ಸಿನಿಮಾವನ್ನು ಬ್ರ್ಯಾಂಡ್ ಮಾಡಬೇಕು ಎಂಬ ಆಸೆ ಹೊತ್ತಿರುವ ಶಶಾಂಕ್ ಸದ್ಯ ತಮ್ಮ ಮುಂದಿನ ಚಿತ್ರದ ತಯಾರಿಯಲ್ಲಿದ್ದಾರೆ.

ಶಶಾಂಕ್ ಸೋಗಾಲ್

ಸಿಂಧು

‘ಆಚಾರ್ ಆ್ಯಂಡ್ ಕೋ.’ ಚಿತ್ರದ ನಿರ್ದೇಶನಕ್ಕಾಗಿ **ಸಿಂಧು ಶ್ರೀನಿವಾಸಮೂರ್ತಿ** ನಾಮನಿರ್ದೇಶನಗೊಂಡಿದ್ದಾರೆ. 1960ರಲ್ಲಿ ಬೆಂಗಳೂರಿನಲ್ಲಿ ನಡೆಯುವ ಕಥೆ ಹೊತ್ತ ಈ ಸಿನಿಮಾವನ್ನು ಅಶ್ವಿನಿ ಪುನೀತ್ ರಾಜ್‌ಕುಮಾರ್ ನಿರ್ಮಾಣ ಮಾಡಿದ್ದಾರೆ. ಪುರುಷ ಪ್ರಧಾನ ವ್ಯವಸ್ಥೆಯನ್ನು ಪ್ರಶ್ನಿಸುವ ಈ ಸಿನಿಮಾ ತನ್ನೊಳಗಿನ ಸರಳ ಚಿತ್ರಕಥೆಯಿಂದ ಪ್ರೇಕ್ಷಕರನ್ನು ಸೆಳೆದಿತ್ತು. 16ನೇ ವಯಸ್ಸಿನಲ್ಲಿ ರಂಗಭೂಮಿಗೆ ಹೆಜ್ಜೆ ಇಟ್ಟ ಸಿಂಧು, ಮುಂಬೈನಲ್ಲಿ ನಟನೆಯ ತರಬೇತಿ ಪಡೆದವರು. ಅಲ್ಲಿಯೇ ಚಿತ್ರಕಥೆ ಬರವಣಿಗೆಯ ಕೋರ್ಸ್ ಪೂರ್ಣಗೊಳಿಸಿದ ಅವರು ನಂತರದಲ್ಲಿ ‘ಆಚಾರ್ ಆ್ಯಂಡ್ ಕೋ.’ ಬರೆದಿದ್ದರು. ಸಿಂಧು ‘ಫ್ರೆಂಚ್ ಬಿರಿಯಾನಿ’, ತೆಲುಗಿನ ‘ಸಿನಿಮಾ ಬಂಡಿ’ ಮೊದಲಾದ ಸಿನಿಮಾಗಳಲ್ಲಿ ನಟಿಸಿದ್ದಾರೆ.

‘ಹಾಸ್ಟೆಲ್ ಹುಡುಗರು ಬೇಕಾಗಿದ್ದಾರೆ’ ಸಿನಿಮಾ ನಿರ್ದೇಶನಕ್ಕಾಗಿ **ನಿತಿನ್ ಕೃಷ್ಣಮೂರ್ತಿ** ನಾಮಿನಿರ್ದೇಶನಗೊಂಡಿದ್ದಾರೆ. 2023ರಲ್ಲಿ ಪ್ರಾರಂಭದ ಐದು ತಿಂಗಳುಗಳಲ್ಲಿ ಪ್ರೇಕ್ಷಕರಿಲ್ಲದೆ ಸೊರಗುತ್ತಿದ್ದ ಚಿತ್ರಮಂದಿರಗಳಿಗೆ ಪ್ರೇಕ್ಷಕರನ್ನು ಮತ್ತೆ ಸೆಳೆದ ಮೊದಲ ಚಿತ್ರ ಇದಾಗಿತ್ತು. ಬಿಗ್‌ಬಾಸ್ ಮೊದಲ ಆವೃತ್ತಿಯಲ್ಲಿ ಕೆಲಸ ಮಾಡಿದ ಅನುಭವವಿದ್ದ ನಿತಿನ್, ‘ಜೀ ಕನ್ನಡ’ದಲ್ಲಿ ಏಳು ವರ್ಷ ಪ್ರಚಾರ ವಿಭಾಗದ ಮುಖ್ಯಸ್ಥರಾಗಿದ್ದರು. ‘ಲೂಸಿಯಾ’ದಲ್ಲಿ ಸಹಾಯಕ ನಿರ್ದೇಶಕನಾಗಿಯೂ ಇವರು ಕೆಲಸ ಮಾಡಿದ್ದರು. ಇದು ಸಿನಿಮಾದಲ್ಲಿ ಅವರ ಚೊಚ್ಚಲ ಹೆಜ್ಜೆ. ಬೆಂಗಳೂರಿನಲ್ಲೇ ಬೆಳೆದ ನಿತಿನ್ ಅವರಿಗೆ ರಂಗಭೂಮಿಯ ನಂಟೂ ಇದೆ. ಮೊದಲ ಲಾಕ್‌ಡೌನ್ ಸಂದರ್ಭದಲ್ಲಿ ಹಾಸ್ಯಪ್ರಧಾನ ‘ಹಾಸ್ಟೆಲ್ ಹುಡುಗರು...’ ಸಿನಿಮಾ ಬರೆದಿದ್ದ ನಿತಿನ್, ಸದ್ಯ ಭಿನ್ನ ಜಾನರ್‌ನ ಸಿನಿಮಾ ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ನಿತಿನ್ ಕೃಷ್ಣಮೂರ್ತಿ

ವಿಶಾಲ್ ಅತ್ರೇಯ

‘ತತ್ಸಮ ತದ್ಭವ’ ಚಿತ್ರದ ನಿರ್ದೇಶನಕ್ಕಾಗಿ **ವಿಶಾಲ್ ಅತ್ರೇಯ** ನಾಮನಿರ್ದೇಶನಗೊಂಡಿದ್ದಾರೆ. ಅಪರಾಧ ತನಿಖೆಯ ಕಥೆ ಹೊತ್ತ ಥ್ರಿಲ್ಲರ್ ಜಾನರ್‌ನ ಈ ಸಿನಿಮಾದಲ್ಲಿ ಮೇಘನಾ ರಾಜ್, ಪ್ರಜ್ವಲ್ ದೇವರಾಜ್ ಮುಖ್ಯಭೂಮಿಕೆಯಲ್ಲಿದ್ದಾರೆ. ಭಿನ್ನವಾದ ಶೀರ್ಷಿಕೆ ಹೊತ್ತ ಈ ಸಿನಿಮಾವನ್ನು ನಿರ್ದೇಶಕ ಪನ್ನಗ ಭರಣ ಹಾಗೂ ಸ್ಫೂರ್ತಿ ಅನಿಲ್ ಜಂಟಿಯಾಗಿ ನಿರ್ಮಾಣ ಮಾಡಿದ್ದಾರೆ. ಜಾಹೀರಾತು, ಕಿರುಚಿತ್ರಗಳಲ್ಲಿ ತೊಡಗಿಸಿಕೊಂಡಿದ್ದ ವಿಶಾಲ್, ‘ತತ್ಸಮ ತದ್ಭವ’ ಚಿತ್ರದ ಕಥೆಯನ್ನು ಮೊದಲು ಪಿಆರ್‌ಕೆ ಮುಂದಿಟ್ಟಿದ್ದರು. ಬಳಿಕ ಕಥೆಯನ್ನು ಪನ್ನಗ ಅವರ ಬಳಿ ಹೇಳಿದಾಗ ಅವರು ನೇರವಾಗಿ ವಿಶಾಲ್ ಅವರಿಗೆ ನಿರ್ಮಾಣದ ಆಫರ್ ನೀಡಿದ್ದರು. ಈ ಸಿನಿಮಾ ಬಿಡುಗಡೆ ಸಂದರ್ಭದಲ್ಲೇ ಮಾಸ್ ಕಥೆಯೊಂದನ್ನು ಸಿದ್ಧಪಡಿಸಿಟ್ಟುಕೊಂಡಿದ್ದರು ವಿಶಾಲ್.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ದೇಶದಲ್ಲಿ ಮತದಾನ ಪ್ರಕ್ರಿಯೆ ಪೂರ್ಣಗೊಂಡು, ಜೂನ್ 1ರಂದು ಹಲವು ಸಂಸ್ಥೆಗಳು ನಡೆಸಿದ್ದ ಮತದಾನೋತ್ತರ ಸಮೀಕ್ಷೆಗಳು ಪ್ರಕಟಗೊಂಡವು. ಈ ಎಲ್ಲ ಸಮೀಕ್ಷೆಗಳೂ ಎನ್‌ಡಿಎಗೆ ಭಾರಿ ಬಹುಮತ ಘೋಷಿಸಿದವು. ಹೀಗಾಗಿ, ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರ ಕುರಿತ ಫೋಟೊವೊಂದು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಜೂನ್ 5ರ ಬಳಿಕ ರಾಹುಲ್ ಅವರು ಬ್ಯಾಂಕಾಕ್‌ಗೆ ಓಡಿಹೋಗಲಿದ್ದಾರೆ ಎನ್ನುವ ಅರ್ಥದ ಪೋಸ್ಟ್‌ಗಳು ಹರಿದಾಡುತ್ತಿವೆ. ಆದರೆ, ಇದು ತಿರುಚಿದ ಚಿತ್ರ.



ರಾಹುಲ್ ಗಾಂಧಿಯ ಹೆಸರಿನಲ್ಲಿರುವ, ವಿಸ್ತಾರ ವಿಮಾನಯಾನ ಸಂಸ್ಥೆಯ ಬೋರ್ಡಿಂಗ್ ಪಾಸ್‌ನ ಫೋಟೊವು ತಿರುಚಿದ ಚಿತ್ರವಾಗಿದೆ. ‘ಲೈವ್ ಫ್ರಂ ಎ ಲಾಂಜ್’ ಎನ್ನುವ ಬ್ಲಾಗ್‌ನಲ್ಲಿ ಪ್ರಕಟಗೊಂಡಿದ್ದ ಚಿತ್ರವೊಂದನ್ನು ತಿರುಚಿ, ರಾಹುಲ್ ಅವರ ಬೋರ್ಡಿಂಗ್ ಪಾಸ್ ಎನ್ನಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.

ಗುಂಡಣ್ಣ

ಕೆಲಸದ ಮಹತ್ವ

ನುಡಿ ಬೆಳಗು

ಪಿ. ಚಂದ್ರಿಕಾ

ಒಬ್ಬ ವ್ಯಕ್ತಿ ದಾರಿಯಲ್ಲಿ ನಡೆಯುತ್ತಾ ಬರುತ್ತಿದ್ದಾನೆ. ಕಾಡಿನ ಅಂಚಿಗೆ ಬರುವಾಗ ಸ್ವಲ್ಪ ದೂರದಲ್ಲಿ ಊರಿರುವ ಸೂಚನೆಯಂತೆ ಒಂದಿಷ್ಟು ದನಗಾಹಿಗಳು ಅಲ್ಲಲ್ಲಿ ಹರಟೆ ಹೊಡೆಯುತ್ತಾ, ದನಗಳನ್ನು ದಾರಿಗೆ ತರುವಂತೆ ಕೂಗುತ್ತಲಿದ್ದಾರೆ. ದಾರಿಹೋಕ ವ್ಯಕ್ತಿಗೆ ಇದ್ದಕ್ಕಿದ್ದ ಹಾಗೆ ಬಾಣವೊಂದು ಬಂದು ಎದೆಗೆ ಚುಚ್ಚಿಕೊಳ್ಳುತ್ತದೆ. ಅವನು ನೋವನ್ನು ಸಹಿಸಿಕೊಳ್ಳಲಾಗದೆ ಚೀರಿಕೊಳ್ಳುತ್ತಾನೆ. ಅಲ್ಲಿದ್ದ ದನಗಾಹಿಗಳು ಅವನೆಡೆಗೆ ಓಡಿಬಂದು ಅವನ ಎದೆಗೆ ಚುಚ್ಚಿಕೊಂಡಿದ್ದ ಬಾಣವನ್ನು ತೆಗೆಯಲು ನೋಡುತ್ತಾರೆ ಆದರೆ ದಾರಿಹೋಕ ಅವರನ್ನು ತಡೆದು ‘ದಯವಿಟ್ಟು ಯಾರೂ ಈ ಬಾಣವನ್ನು ತೆಗೆಯಬೇಡಿ’ ಎಂದು ಬೇಡಿಕೊಳ್ಳುತ್ತಾನೆ. ದನಗಾಹಿಗಳಿಗೆ ಅಚ್ಚರಿ, ‘ಅಯ್ಯಾ ಯಾಕೆ ನೀನು ಬಾಣವನ್ನು ತೆಗೆಯಬೇಡಿ ಎನ್ನುತ್ತಿರುವೆ? ನೋಡು ಒಂದೇ ಸಮನೆ ರಕ್ತ ಸುರಿಯುತ್ತಿದೆ. ಹೀಗೆಯೇ ಬಿಟ್ಟರೆ ನೋವು ಹೆಚ್ಚಾಗುತ್ತದೆ’ ಎನ್ನುತ್ತಾರೆ.

ಆ ಮಾತನ್ನು ಕೇಳಿ ದಾರಿಹೋಕ, ‘ಹೌದು ಬಾಣವನ್ನು ತೆಗೆಯುವ ಮೊದಲು ಯಾರು ಈ ಬಾಣವನ್ನು ಬಿಟ್ಟರು? ಯಾಕೆ ಬಿಟ್ಟರು ಮತ್ತು ಅದನ್ನು ನನಗೇ ಬಿಟ್ಟರೇ? ಅಥವಾ ಬೇರೆ ಯಾರಿಗೋ ಬಿಟ್ಟ ಬಾಣ ನನಗೆ ತಾಕಿತೇ? ಈ ಎಲ್ಲ ಸಂಗತಿಗಳನ್ನು ತಿಳಿದುಕೊಳ್ಳಬೇಕು’ ಎಂದನು. ಆಗ ದನಗಾಹಿಗಳು, ‘ಅಯ್ಯಾ ಅದನ್ನೆಲ್ಲಾ ತಿಳಿದುಕೋ, ಬೇಡ ಅಂದವರು ಯಾರು? ಆದರೆ ಅದಕ್ಕೂ ಮೊದಲು ನಿನ್ನ ಎದೆಗೆ ನೆಟ್ಟ ಬಾಣದಿಂದಾಗಿ ಸುರಿಯುತ್ತಿರುವ ರಕ್ತ ನಿಲ್ಲಬೇಕು. ಅದಕ್ಕೆ ಔಷಧ ಮಾಡಬೇಕು’ ಎನ್ನುತ್ತಾರೆ. ಅದಕ್ಕೆ ದಾರಿಹೋಕ, ‘ಇಲ್ಲ ಇಲ್ಲ ನನಗೆ ಸತ್ಯ ಗೊತ್ತಾಗುವವರೆಗೂ ಈ ಬಾಣವನ್ನು ತೆಗೆಯಲು ಬಿಡುವುದಿಲ್ಲ’ ಎಂದು ಹಟ ಮಾಡುತ್ತಾನೆ. ಹೇಳುವವರು ಕೇಳುವವರ ಮಧ್ಯೆ ಮಾತುಕತೆ ಹೀಗೆ ನಡೆಯುತ್ತಲೇ ಇತ್ತು.

ಸ್ವಲ್ಪ ಹೊತ್ತಿನ ನಂತರ ದಾರಿಹೋಕ ರಕ್ತಸ್ರಾವದಿಂದ ನರಳುತ್ತಲೇ ಸಾಯುವ ಸ್ಥಿತಿ ತಲುಪುತ್ತಾನೆ. ಇದನ್ನೆಲ್ಲಾ ಗಮನಿಸುತ್ತಿದ್ದ ದಾರಿಯಲ್ಲಿ ಹೋಗುತ್ತಿದ್ದ ಯುವಕ ಹಿಂದೂ ಮುಂದೂ ಯೋಚಿಸದೆ ಸೀದಾ ಮುಂದೆ ಬಂದು ನಾಟಿದ್ದ ಬಾಣವನ್ನು ಪ್ರತಿಭಟನೆಯ ನಡುವೆಯೂ ಕಿತ್ತುಹಾಕಿದ. ಕೋಪಗೊಂಡ ದಾರಿಹೋಕ ಅವನನ್ನು ಬಯ್ಯಲು ಆರಂಬಿಸಿದ ಇದರಿಂದ ಕೋಪಗೊಂಡ ಯುವಕ ‘ಬದುಕಯ್ಯ, ಮೊದಲು ಬದುಕು. ಪ್ರಶ್ನೆಗೆ ಉತ್ತರ ಸಿಗದಿದ್ದರೆ ಅಷ್ಟೇ ಹೋಯಿತು. ಅದರಿಂದ ನಿನಗೆ ನಷ್ಟವೇನೂ ಇಲ್ಲ. ಮೊದಲು ನಿನ್ನ ಜೀವದ ಬಗ್ಗೆ ಯೋಚಿಸು. ಜೀವ ಹೋದರೆ ಮತ್ತೆ ದಕ್ಕುವುದಿಲ್ಲ’ ಎಂದ. ಅಷ್ಟು ಹೊತ್ತು ಅವನನ್ನು ಸಂತೈಸಿ ಬುದ್ಧಿ ಹೇಳಿದವರೂ ಮತ್ತು ದಾರಿಹೋಕ ಇಬ್ಬರೂ ಅಚ್ಚರಿಗೊಳಗಾದರು. ಆ ಯುವಕ ಹೇಳಿದ, ‘ನಿಮ್ಮಿಬ್ಬರಿಗೂ ಬುದ್ಧಿಯಿಲ್ಲ, ಇದು ಇವನನ್ನು ಸಂತೈಸಿ ಬುದ್ಧಿಹೇಳುವ ಸಮಯವೂ ಅಲ್ಲ, ಜೀವಕ್ಕಿಂತ ಪ್ರಶ್ನೆಗೆ ಉತ್ತರ ಹುಡುಕುವುದೂ ಮುಖ್ಯವಲ್ಲ. ಕಷ್ಟದ ಕ್ಷಣಗಳನ್ನು ದಾಟಿಕೊಳ್ಳಲು ಉಪಾಯವನ್ನು ಮಾತ್ರ ಹುಡುಕಿಕೊಳ್ಳಬೇಕು. ವ್ಯರ್ಥವಾದ ವಾದಗಳು ಯೋಚನೆಗಳು ಯಾವತ್ತೂ ಸರಿಯಲ್ಲ’ ಎನ್ನುತ್ತಾನೆ.

ನಿಜ, ಬಂದ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬೇಕೇ ಹೊರತು ನಮಗೆ ನಾವೇ ಸಮಸ್ಯೆಯಾಗಬಾರದು. ಸಂದರ್ಭ ಕೆಲಸ ಮಾಡುವುದೇ ಆದರೆ ಅದನ್ನಷ್ಟನ್ನು ಮಾತ್ರ ಮಾಡಬೇಕು. ಅಂತಹ ಸಂದರ್ಭದಲ್ಲಿ ಮಾತು ವ್ಯರ್ಥ ಅಲ್ಲವೇ

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಮಂಗಳವಾರ ಜೂನ್ 4, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣತ್ರಯೋದಶಿ ಗಂ. 22-02 ನಕ್ಷತ್ರ: ಭರಣಿ ಗಂ. 22-35 ಯೋಗ: ಶೋಭನ ಗಂ. 06-11 ನಂತರ ಅತಿಗಂಡ ಗಂ. 27-18 ಕರಣ: ಗರ ಗಂ. 11-09, ವೃಷಭ ಮಾಸದ ನೇ 21 ದಿನ, ಮಳೆನಕ್ಷತ್ರ: ರೋಹಿಣಿ 4. ರಾಹುಕಾಲ : ಮಧ್ಯಾಹ್ನ 03-00 – 04-30
ಸೂರ್ಯೋದಯ : 06-06 ಸೂರ್ಯಾಸ್ತ : 06-51
ಮುಸ್ಲಿಂ ದಿನಾಂಕ : 26 ಜುಲ್ಖಾಯಿದ್
ಅದೃಷ್ಟ ಸಂಖ್ಯೆ : 5, 1

ಮೇಷ: ಸ್ನೇಹಿತನ ಸಹಾಯದಿಂದಾಗಿ ಹಲವು ವಿಚಾರಗಳಲ್ಲಿ ಪರಿಪೂರ್ಣತೆಯನ್ನು ಹೊಂದಲು ಸಾಧ್ಯ. ಹಲವು ನಿರೀಕ್ಷೆಗಳೊಂದಿಗೆ ಬಂಧುಗಳ ಮನೆಗೆ ಪ್ರಯಾಣ ಬೆಳೆಸುವಿರಿ. ಪ್ರಯಾಣದಲ್ಲಿ ಜಾಗ್ರತರಾಗಿರಿ.

ವೃಷಭ: ಇಷ್ಟು ದಿನದವರೆಗೂ ತೋರಲಾಗದ ನಿಜವಾದ ಸಾಮರ್ಥ್ಯವನ್ನು ಉತ್ತಮ ಅಭ್ಯಾಸದ ಮೂಲಕ ಪ್ರದರ್ಶಿಸುವಿರಿ. ಊರಿನ ಅಥವಾ ಪರ ಊರಿನ ಉತ್ಸವದಲ್ಲಿ ಭಾಗವಹಿಸಿ ಸಂತುಷ್ಟರಾಗುವಿರಿ.

ಮಿಥುನ: ಕುದುರೆ ಸಾಕುವುದರ ಜತೆಗೆ ಸವಾರಿಯನ್ನು ಮಾಡುವವರಿಗೆ ಉತ್ತಮ ಅವಕಾಶ ದೊರೆಯಲಿದೆ. ಗೋವುಗಳ ಪಾಲನೆಯಿಂದ ಪುಣ್ಯವು ಪ್ರಾಪ್ತಿಯಾಗುವುದು. ಗಾರ್ಮೆಂಟ್ಸ್ ನೌಕರರಿಗೆ ಹೆಚ್ಚಿನ ಕೆಲಸವಿರುವುದು.

ಕರ್ಕಾಟಕ: ಯಾವ ಒತ್ತಡಗಳಿಗೂ, ಯಾರ ದಬ್ಬಾಳಿಕೆಗೂ ಒಳಗಾಗದೆ ಸ್ವತಂತ್ರರಾಗಿರಲು ಬಯಸುವಿರಾದರೂ ಸಾಧ್ಯವಾಗುವುದಿಲ್ಲ. ಅಪೇಕ್ಷಿಸಿದ ಬೆಂಬಲ ದೊರೆಯಲಿದೆ. ಇತರರನ್ನು ತಿರಸ್ಕಾರದಿಂದ ನೋಡದಿರಿ.

ಸಿಂಹ: ವೃತ್ತಿಯಲ್ಲಿದ್ದ ಸ್ಪರ್ಧಾತ್ಮಕ ಪೈಪೋಟಿಯಲ್ಲಿ ಸಿಕ್ಕ ಗೆಲುವಿನಿಂದ ಹೆಚ್ಚಿನ ತೃಪ್ತಿ, ಸಂತೋಷ ಉಂಟಾಗಲಿದೆ. ಬಿಟ್ಟುಹೋದ ಸಂಬಂಧಗಳನ್ನು ಮತ್ತೆ ಬೆಳೆಸುವ ಬಗ್ಗೆ ನಿಮ್ಮ ಕುಟುಂಬದವರೊಂದಿಗೆ ಚರ್ಚಿಸುವಿರಿ.

ಕನ್ಯಾ: ಅನಗತ್ಯ ವಿಷಯಗಳಿಂದ ದೂರವಿರುವುದು ಯೋಜನೆಗಳನ್ನು ಗಂಭೀರವಾಗಿ ಪರಿಗಣಿಸಲು ಅನುಕೂಲವಾಗುವುದು. ಹರಿತ ವಸ್ತುಗಳಿಂದ ಸಣ್ಣ-ಪುಟ್ಟ ಗಾಯ ಆಗುವ ಸಾಧ್ಯತೆ ಇದೆ. ವೃತ್ತಿಯಲ್ಲಿ ನಿಷ್ಠರಾಗಿರಿ.

ತುಲಾ: ಕೆಲವೊಂದು ಅನಿರೀಕ್ಷಿತ ಘಟನೆಗಳಿಂದ ಸುತ್ತ ಮುತ್ತಲಿನ ವಾತಾವರಣವೂ ಧನಾತ್ಮಕವಾಗಿ ಬದಲಾವಣೆಯಾಗುವುದು. ರೈತರು ಉತ್ತಮ ತಳಿಯ ಬೆಳೆಯಿಂದ ಹೆಚ್ಚಿನ ಸಂತೋಷ ಹೊಂದುವರು.

ವೃಶ್ಚಿಕ: ಬಹಳ ದಿನಗಳಿಂದ ನಿರೀಕ್ಷಿಸಿದ ರೀತಿಯಲ್ಲಿ ಉದ್ಯೋಗ ಸಿಕ್ಕದಿದ್ದರೂ, ಸಣ್ಣ ಮಟ್ಟದ ಉದ್ಯೋಗ ಸಿಕ್ಕಿರುವುದು ಸಂತೋಷ ಪಡುವ ವಿಚಾರ. ಹಿಂದಿನ ಕೆಲಸ ಕಾರ್ಯ ಪೂರ್ಣಗೊಳಿಸುವ ಬಗ್ಗೆ ಗಮನ ನೀಡಿ.

ಧನು: ಉದ್ಯೋಗದ ವಿಚಾರದ ಬಗ್ಗೆ ಹೆಚ್ಚಿನ ತರಬೇತಿ ಪಡೆದುಕೊಳ್ಳುವುದರಿಂದ ಬಡ್ತಿಯ ಬಗ್ಗೆ ಯೋಚಿಸಬಹುದು. ಕೃಷಿ ಕಾರ್ಯಗಳು ಬಿಡುವಿಲ್ಲದೆ ನಡೆಯಲಿದೆ. ರಂಗೋಲಿ ಕಲಾವಿದರ ಬೇಡಿಕೆ, ಸ್ಥಾನಮಾನ ಹೆಚ್ಚುತ್ತದೆ.

ಮಕರ: ಮನೆಯಲ್ಲಿ ನಿಮ್ಮ ಮಾತಿನಿಂದ ಉಂಟಾದ ಬಿಗು ವಾತಾವರಣ ದಿನದ ಅಂತ್ಯದ ಸಮಯದಲ್ಲಿ ತಿಳಿಯಾಗಿ ಮನಸ್ಸಿಗೆ ಸಮಾಧಾನ ಉಂಟಾಗುವುದು. ಪರಿಣಾಮಕಾರಿ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅಗತ್ಯವಾಗಿದೆ

ಕುಂಭ: ವಿದ್ಯಾಭ್ಯಾಸಕ್ಕಾಗಿ ಮನೆಯಿಂದ ದೂರ ಇರುವ ನಿಮಗೆ ಪ್ರತಿ ಬಾರಿಯ ಶುಭಕಾರ್ಯಗಳು ತಪ್ಪಿ ಹೋಗುವುದನ್ನು ಸಹಿಸಲಾರದೆ ದುಃಖಿತರಾಗುತ್ತೀರಿ. ಪಾಲುದಾರಿಕೆಯ ವ್ಯವಹಾರದಲ್ಲಿ ಲಾಭವಾಗಲಿದೆ.

ಮೀನ: ಕಾರ್ಯ ವೈಖರಿಯನ್ನು ನೋಡಿದ ಕೆಲವರು ಮತ್ಸರ ಪಡುವಂತಾಗುತ್ತದೆ. ನಿರೀಕ್ಷಿಸಿದ ಕಾರ್ಯಗಳು ನೆರವೇರಿ ಮನಸ್ಸಿಗೆ ನೆಮ್ಮದಿ ಉಂಟಾಗುವುದು. ಕೆಲಸದ ಅಧಿಕ ಒತ್ತಡದಿಂದ ಬೆನ್ನು ನೋವು ಕಾಡಬಹುದು.

ಪದಬಂಧ 5701

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸ್ವಂತ ಅನುಭವಕ್ಕೆ ಬಂದಿರುವ ತಿಳಿವು (4)
3.ಅನಿರೀಕ್ಷಿತ ಘಟನೆ (4)
5.ಅಸಮವಲ್ಲದ್ದು !(2)
7.ನಾರಿಕೇಳದಲ್ಲಿರಿಸಿದ ಕೊಳವೆ (2)
8.ರಾಮನ ಮಗ ಹಿಡಿರುವ ಉಪ್ಪು (3)
10.ನಯವಾಗಿ ಕಾಣುತ್ತಿರುವ ನಮ್ರತೆ (3)
12.ಕಾದಾಡುವ ಜಾಗವಲ್ಲ!ಇದು ಅರಣ್ಯ! (2)
13. ಪ್ರಾಂಗಣದಲ್ಲಿನ ಗುಂಪು ಹಿಂದುಮುಂದಾಗಿದೆಯಲ್ಲಾ (2)
15. ಮಾನವುಳ್ಳ ಮಾಲೀಕ (4)
16.ತರತರದ ಕಾಯಿಪಲ್ಲೆ (4)

ಮೇಲಿಂದ ಕೆಳಕ್ಕೆ
1.ಅರಸುತ್ತಿರುವಾಗ ರಾಜ ಸಿಕ್ಕಿರುವನಲ್ಲಾ! (3)
2.ಸಮುದ್ರದಲ್ಲಿರುವ ದೊಡ್ಡ ಗಾತ್ರದ ಸಸ್ತನಿ (4)
3.ಕೊನೆಗೆ ಹಣವಿಟ್ಟಾಗ ಏರುವುದು! (4)
4.ಕಳವಳಪಟ್ಟುಕೊಂಡು ತಿಂದಿರುವ ತುತ್ತು (3)
6.ವಾಪಾಸಾದಾಗ ಕಾಣಿಸಿದ ಮರುಭೂಮಿ! (5)
7.ಹೆಸರಿಡುವ ಶಾಸ್ತ್ರ (5)
9.ವನದಲ್ಲಿನ ಅಭಿವೃದ್ಧಿ (3)
10.ಕೊನೆಗೆ ಮರ್ಯಾದೆಯಿರುವ ಸಮಾಚಾರ! (4)
11.ಈತ ಮೃತ್ಯುದೇವತೆಯ ಆಳು (4)
12.ಕಾವಿ ಬಣ್ಣದ ಬಟ್ಟೆ (3)
14.ದೊಡ್ಡ ಹಾರೆ ಇಲ್ಲಿದೆ (3)



5700ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಚ್ಛ್ವಾಸ 3.ಗಾವುದ
5.ಭಿನ್ನಾಭಿಪ್ರಾಯ
7.ಕ್ಷುಲ್ಲಕ 8.ಕಹಳೆ
9.ಓರಿಗೆ 11.ಗರ3
13.ಆಹ್ವಾನ 15.ಶುಕ್ತಿಕೆ
16.ವಿಮಾನಯಾನ
17.ಕಂದೀಲು 18.ಕದಿರು

ಮೇಲಿಂದ ಕೆಳಕ್ಕೆ:
2.ಸಭಿಕ 3.ಗಾಯಕ
6.ಭಿಕಾರಿ 9.ಓದುಗ
10.ಗೆಳ3 12.ರದನ 14.ನವಿಲು
15.ಶುನಕ

ಸುಡೊಕು 6086

	2			6	7	4		
3		4					7	2
	7			4	8		6	3
	4			3			8	5
8		9		7				
	5		8		4		9	7
2				9		7	3	
		3					1	
6			4			5		9

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6085 ಸುಡೊಕು

9	6	5	8	7	3	4	1	2
2	8	3	1	4	6	9	7	5
7	1	4	9	5	2	8	3	6
3	4	6	7	1	8	5	2	9
5	7	9	3	2	4	6	8	1
8	2	1	5	6	9	3	4	7
4	5	7	6	8	1	2	9	3
1	3	2	4	9	5	7	6	8
6	9	8	2	3	7	1	5	4

ಕಾದು ನೋಡಿ: ಸೋನಿಯಾ ಗಾಂಧಿ • 'ಇಂಡಿಯಾ' ಕೂಟ 295 ಸ್ಥಾನ ಗಳಿಸಲಿದೆ: ತರೂರ್

'ಮತಗಟ್ಟೆ ಸಮೀಕ್ಷೆಗೆ ವ್ಯತಿರಿಕ್ತ ಫಲಿತಾಂಶ'

ನವದೆಹಲಿ/ತಿರುವನಂತಪುರ (ಪಿಟಿಐ): ಲೋಕಸಭಾ ಚುನಾವಣೆಯ ಫಲಿತಾಂಶವು ಮತಗಟ್ಟೆ ಸಮೀಕ್ಷೆಗಳಿಗೆ ಸಂಪೂರ್ಣವಾಗಿ ವ್ಯತಿರಿಕ್ತವಾಗಿರಲಿದೆ ಎಂಬ ಬಗ್ಗೆ ತಮ್ಮ ಪಕ್ಷವು ಅತೀವ ವಿಶ್ವಾಸ ಹೊಂದಿದೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಸೋಮವಾರ ಹೇಳಿದರು.

ಸೋನಿಯಾ ಗಾಂಧಿ

ಫಲಿತಾಂಶದ ಬಗ್ಗೆ ಪಿಟಿಐ ಸೋನಿಯಾ ಅವರನ್ನು ಪ್ರಶ್ನಿಸಿದಾಗ 'ಕಾದು ನೋಡಿ' ಎಂದು ಉತ್ತರಿಸಿದರು.

ಲೋಕಸಭಾ ಚುನಾವಣೆಯಲ್ಲಿ 350 ಕ್ಕೂ ಹೆಚ್ಚಿನ ಸ್ಥಾನಗಳಲ್ಲಿ ಗೆದ್ದು ನರೇಂದ್ರ ಮೋದಿ ಮೂರನೇ ಬಾರಿಗೆ ಅಧಿಕಾರಕ್ಕೆ ಮರಳಲಿದ್ದಾರೆ ಎಂದು ಬಹುತೇಕ ಮತಗಟ್ಟೆ ಸಮೀಕ್ಷೆಗಳು ಹೇಳಿವೆ. ಅದನ್ನು ಕಾಂಗ್ರೆಸ್ ಮತ್ತು 'ಇಂಡಿಯಾ' ಕೂಟದ ಮಿತ್ರ ಪಕ್ಷಗಳು ಟೀಕಿಸಿವೆ.

ಇಂಡಿಯಾಗೆ 295 ಸ್ಥಾನ: ಮತಗಟ್ಟೆ ಸಮೀಕ್ಷೆಗಳು ಜನರ ನಾಡಿಮಿಡಿತವನ್ನು ಹಿಡಿಯುವಲ್ಲಿ ವಿಫಲವಾಗಿವೆ ಎಂದು ಹೇಳಿದ ಕಾಂಗ್ರೆಸ್ ನಾಯಕ ಶಶಿ ತರೂರ್, 'ಇಂಡಿಯಾ' ಕೂಟವು 295 ಸ್ಥಾನಗಳನ್ನು ಗೆಲ್ಲಲಿದೆ ಎಂದು ಪ್ರತಿಪಾದಿಸಿದರು.

'ನಾವು ಮತಗಟ್ಟೆ ಸಮೀಕ್ಷೆಗಳನ್ನು ಅನುಮಾನ ಮತ್ತು ಅಪನಂಬಿಕೆಯಿಂದ ನೋಡುತ್ತಿದ್ದೇವೆ. ನಾವು ದೇಶದಾದ್ಯಂತ ಚುನಾವಣಾ ಪ್ರಚಾರ ನಡೆಸಿದ್ದು, ಜನರ ನಾಡಿಮಿಡಿತ ಏನು ಅನ್ನುವುದರ ಬಗ್ಗೆ ನಮಗೆ ಗೊತ್ತಿದೆ. ಅದು ಈ ಸಮೀಕ್ಷೆಗಳಲ್ಲಿ ಯಥಾವತ್ತಾಗಿ ವ್ಯಕ್ತವಾಗಿದೆ ಎನ್ನುವುದನ್ನು ನಾವು ಒಪ್ಪುವುದಿಲ್ಲ'ಎಂದರು.

'ಕೆಲವು ಸಮೀಕ್ಷೆಗಳಂತೂ ನಗು ತರಿಸುವಂತಿವೆ. ಒಂದು ರಾಜ್ಯದಲ್ಲಿ ಐದು ಸ್ಥಾನಗಳಿದ್ದರೆ, ಬಿಜೆಪಿ ಅಲ್ಲಿ ಆರು ಸ್ಥಾನ ಗೆಲ್ಲಲಿದೆ ಎಂದು ಅವರು ಹೇಳುತ್ತಿದ್ದಾರೆ' ಎಂದು ಹೇಳಿದರು.

ತಿರುವನಂತಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿರುವ ಅವರು, ತಾವು ನಾಲ್ಕನೇ ಬಾರಿ ಗೆಲ್ಲುವುದು ಖಚಿತ ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಬಿಜೆಪಿಗೆ ಅನುಕೂಲಕರ ವಾತಾವರಣ ನಿರ್ಮಿಸುವ ಪ್ರಯತ್ನ'

ಲಖನೌ (ಪಿಟಿಐ): ಮತಗಟ್ಟೆ ಸಮೀಕ್ಷೆಗಳ ನಿಖರತೆಯನ್ನು ಪ್ರಶ್ನಿಸಿರುವ ಸಮಾಜವಾದಿ ಪಕ್ಷದ (ಎಸ್‌ಪಿ) ಮುಖ್ಯಸ್ಥ ಅಖಿಲೇಶ್ ಯಾದವ್ ಅವರು, ಸಮೀಕ್ಷೆ ನಡೆಸಿದ ಸಂಸ್ಥೆಗಳು ಬಿಜೆಪಿಗೆ ಅನುಕೂಲಕರವಾದ ವಾತಾವರಣ ನಿರ್ಮಿಸಲು ಪ್ರಯತ್ನಿಸುತ್ತಿವೆ ಎಂದು ಸೋಮವಾರ ಪ್ರತಿಪಾದಿಸಿದರು.

ಅಖಿಲೇಶ್ ಯಾದವ್

ಇಲ್ಲಿ ಪತ್ರಿಕಾಗೋಷ್ಠಿ ನಡೆಸಿ ಮಾತನಾಡಿದ ಅವರು, 'ಉತ್ತರ ಪ್ರದೇಶದಲ್ಲಿ 'ಇಂಡಿಯಾ' ಕೂಟ ಹೆಚ್ಚು ಸ್ಥಾನ ಗಳಿಸಲಿದೆ ಎಂದು ನಮ್ಮ ಮತಗಟ್ಟೆ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ. ನಾನು ಆಂತರಿಕ ಸಮೀಕ್ಷೆ ನಡೆಸಿದ್ದು, ಅದರಲ್ಲಿ ಕೂಡ ನಮಗೆ ಹೆಚ್ಚು ಸ್ಥಾನ ಬರುವುದಾಗಿ ಹೇಳಲಾಗಿದೆ' ಎಂದು ತಿಳಿಸಿದರು.

ಮತಗಟ್ಟೆ ಸಮೀಕ್ಷೆ ನಡೆಸಿದ ಹೆಚ್ಚಿನ ಸಂಸ್ಥೆಗಳು ಬಿಜೆಪಿಯ ಬೂತ್ ನಿರ್ವಹಣೆಯ ಕೆಲಸ ಮಾಡುತ್ತಿದ್ದವು ಎಂದು ಆರೋಪಿಸಿದರು.

ಮತ ಎಣಿಕೆಗೆ ಸಂಬಂಧಿಸಿದಂತೆ ಚುನಾವಣಾ ಆಯೋಗವು ಸೂಕ್ತ ರಕ್ಷಣಾ ವ್ಯವಸ್ಥೆಯನ್ನು ಮಾಡಬೇಕು ಎಂದು ಒತ್ತಾಯಿಸಿದ ಅವರು, 'ಬಿಜೆಪಿ ದುರ್ಬಲವಾಗಿ ಕಂಡುಬಂದರೆ, ಅವರದ್ದೇ ಆಡಳಿತ ಇರುವುದರಿಂದ, ಏಜೆಂಟ್‌ಗಳನ್ನು ಬೆದರಿಸಲು ಪ್ರಯತ್ನಿಸುತ್ತದೆ. ಅವರು ಮತ ಎಣಿಕೆಯನ್ನು ನಿಧಾನಿಸಬಹುದು ಅಥವಾ ರಾತ್ರಿ ವೇಳೆ ವಿದ್ಯುತ್ ಸಂಪರ್ಕ ಕಡಿತಗೊಳಿಸಬಹುದು' ಎಂದು ಆರೋಪಿಸಿದರು.

ಮಾನಸಿಕ ತಂತ್ರ ಎಂದ ಆರ್‌ಜೆಡಿ

ಪಟ್ನಾ (ಪಿಟಿಐ): ಮತಗಟ್ಟೆ ಸಮೀಕ್ಷೆಗಳನ್ನು ಒಂದು 'ಮಾನಸಿಕ ತಂತ್ರ' ಎಂದು ಬಣ್ಣಿಸಿರುವ ಆರ್‌ಜೆಡಿ, 40 ಕ್ಷೇತ್ರಗಳಿರುವ ರಾಜ್ಯದಲ್ಲಿ 'ಇಂಡಿಯಾ' ಕೂಟವು 25ಕ್ಕೂ ಹೆಚ್ಚು ಸ್ಥಾನಗಳನ್ನು ಗಳಿಸಲಿದೆ ಎಂದು ಸೋಮವಾರ ಪ್ರತಿಪಾದಿಸಿದೆ.

'ಇಂಡಿಯಾ' ಕೂಟದ ಮಿತ್ರಪಕ್ಷಗಳ ಮುಖಂಡರೊಂದಿಗೆ ಪತ್ರಿಕಾಗೋಷ್ಠಿ ನಡೆಸಿದ ಆರ್‌ಜೆಡಿ ರಾಷ್ಟ್ರೀಯ ವಕ್ತಾರ ಮನೋಜ್ ಕುಮಾರ್ ಝಾ, 'ಇದು ಬೃಹತ್ ಮೊತ್ತದ ಹಣವನ್ನು ಒಳಗೊಂಡಿದೆ. ಷೇರು ಮಾರುಕಟ್ಟೆಯ ಜತೆಗೆ ಇದರಲ್ಲಿ ಪ್ರಧಾನಿ ಕಾರ್ಯಾಲಯವೂ ಪಾಲು ಹೊಂದಿದೆ ಎಂಬುದಾಗಿ ನಮಗೆ ತಿಳಿದುಬಂದಿದೆ' ಎಂದು ಪ್ರತಿಪಾದಿಸಿದರು.

'2020ರ ವಿಧಾನಸಭಾ ಚುನಾವಣೆಯ ಮತ ಎಣಿಕೆಯ ವೇಳೆ ನಡೆದಿದ್ದ 'ಕೈಚಳಕವನ್ನು' ಆರ್‌ಜೆಡಿ ನೇತೃತ್ವದ 'ಮಹಾಘಟಬಂಧನ್' ವಿಫಲಗೊಳಿಸಿತ್ತು. ಮಂಗಳವಾರದ ಮತ ಎಣಿಕೆಯ ವೇಳೆ ಅಂಥ ಪ್ರಯತ್ನಗಳೇನಾದರೂ ನಡೆದರೆ, ಅದರ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳಲಾಗುವುದು' ಎಂದು ಎಚ್ಚರಿಸಿದರು.

'15 ದಿನದಲ್ಲಿ ಮೋದಿ ಸರ್ಕಾರ ಸೇರಲಿರುವ ಉದ್ಧವ್'

ಅಮರಾವತಿ (ಮಹಾರಾಷ್ಟ್ರ): ಶಿವ ಸೇನಾ (ಯುಬಿಟಿ) ಮುಖ್ಯಸ್ಥ ಮತ್ತು ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಲೋಕಸಭಾ ಚುನಾವಣೆಯ ಫಲಿತಾಂಶ ಘೋಷಣೆಯಾದ 15 ದಿನದಲ್ಲಿ ಮೋದಿ ಅವರ ಸರ್ಕಾರವನ್ನು ಸೇರಲಿದ್ದಾರೆ ಎಂದು ಅಮರಾವತಿ ಶಾಸಕ ರವಿ ರಾಣಾ ಮಂಗಳವಾರ ಹೇಳಿದ್ದಾರೆ. ಮುಂದೆ ಬರಲಿರುವುದು ಮೋದಿ ಯುಗ ಎಂದು ಅವರು ಪ್ರತಿಪಾದಿಸಿದರು.

ರವಿ ರಾಣಾ

ಜೂನ್ 4ರಂದು ಮಹಾ ವಿಕಾಸ ಅಘಾಡಿ (ಎಂವಿಎ) ಮುಖಂಡರ ಆರೋಗ್ಯ ಏರುಪೇರಾಗಲಿದ್ದು, ಅವರು ರಕ್ತದೊತ್ತಡ ಪರೀಕ್ಷೆ ಮಾಡುವ ಸಾಧನ ಮತ್ತು ವೈದ್ಯರನ್ನು ತಮ್ಮ ಬಳಿ ಇಟ್ಟುಕೊಳ್ಳುಬೇಕಿದೆ ಎಂದು ಹೇಳಿದರು.

ರವಿ ರಾಣಾ ಪತ್ನಿ ನವನೀತ್ ರಾಣಾ ಅಮರಾವತಿ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಸ್ಪರ್ಧಿಸಿದ್ದಾರೆ.

ಎಫ್‌ಐಆರ್‌ನಿಂದ ಶಾ, ಕಿಶನ್ ರೆಡ್ಡಿ ಹೆಸರಿಗೆ ಕೊಕ್

ಹೈದರಾಬಾದ್ (ಪಿಟಿಐ): ಚುನಾವಣಾ ಪ್ರಚಾರಕ್ಕಾಗಿ ಬಾಲಕರನ್ನು ಬಳಸಲಾಗಿದೆ ಎಂಬ ಆರೋಪ ಕುರಿತು ಮೇ ತಿಂಗಳಲ್ಲಿ ದಾಖಲಿಸಲಾಗಿದ್ದ ಎಫ್‌ಐಆರ್‌ನಿಂದ ಕೇಂದ್ರ ಗೃಹ ಸಚಿವ ಅಮಿತ್ ಶಾ, ತೆಲಂಗಾಣ ಬಿಜೆಪಿ ಅಧ್ಯಕ್ಷ ಜಿ.ಕಿಶನ್ ರೆಡ್ಡಿ ಅವರ ಹೆಸರನ್ನು ಕೈಬಿಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೇ 1ರಂದು ಚುನಾವಣಾ ರ‍್ಯಾಲಿಯಲ್ಲಿ ಬಾಲಕರನ್ನು ಬಳಸಲಾಗಿತ್ತು ಎಂದು ತೆಲಂಗಾಣ ಪ್ರದೇಶ ಕಾಂಗ್ರೆಸ್ ಸಮಿತಿ (ಟಿಪಿಸಿಸಿ) ಉಪಾಧ್ಯಕ್ಷ ಜಿ.ನಿರಂಜನ್ ಅವರು, ರಾಜ್ಯದ ಮುಖ್ಯ ಚುನಾವಣಾ ಅಧಿಕಾರಿಗೆ (ಸಿಇಒ) ದೂರು ನೀಡಿದ್ದರು.

ನಗರ ಪೊಲೀಸರಿಗೆ ದೂರು ಕಳುಹಿಸಿದ್ದ ಸಿಇಒ ವಸ್ತುಸ್ಥಿತಿ ವರದಿ ಕೇಳಿದ್ದರು. ಅದರಂತೆ ಶಾ ಮತ್ತು ಕಿಶನ್ ರೆಡ್ಡಿ, ಹೈದರಾಬಾದ್ ಲೋಕಸಭೆ ಕ್ಷೇತ್ರದ ಅಭ್ಯರ್ಥಿ ಮಾಧವಿ ಲತಾ, ಶಾಸಕ ಟಿ.ರಾಜಾಸಿಂಗ್, ಬಿಜೆಪಿ ನಾಯಕ ಟಿ.ಯಮನ್ ಸಿಂಗ್ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಪ್ರಾಥಮಿಕ ತನಿಖೆಯಿಂದ ಇದರಲ್ಲಿ ಶಾ ಮತ್ತು ಕಿಶನ್ ರೆಡ್ಡಿ ಪಾತ್ರವಿಲ್ಲ ಎಂಬುದು ಗೊತ್ತಾಗಿದೆ. ಹೀಗಾಗಿ ಕೈಬಿಡಲಾಗಿದೆ. ಈ ಪ್ರಕರಣ ಸಂಬಂಧ ಕಳೆದ ವಾರ ಕೋರ್ಟ್‌ಗೆ ದೋಷಾರೋಪ ಪಟ್ಟಿ ದಾಖಲಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಉಳಿದ ಮೂವರ ವಿರುದ್ಧ ಐಪಿಸಿ ಸೆಕ್ಷನ್ 188ರ ಅನ್ವಯ ಪ್ರಕರಣ ಮುಂದುವರಿಯಲಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ದೂರುಗಳ ಬಗ್ಗೆ ಪುರಾವೆ ಒದಗಿಸಿ'

ವಿಪಕ್ಷಗಳಿಗೆ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಸವಾಲು

ಪ್ರಜಾವಾಣಿ ವಾರ್ತೆ/ ಪಿಟಿಐ

ನವದೆಹಲಿ: ಲೋಕಸಭಾ ಚುನಾವಣೆ ಪ್ರಕ್ರಿಯೆ ಮೇಲೆ ಪ್ರಭಾವ ಬೀರುವ ಪ್ರಯತ್ನಗಳು ನಡೆದಿವೆ ಎಂದು ವಿರೋಧ ಪಕ್ಷಗಳು ಮಾಡಿರುವ ಆರೋಪಗಳನ್ನು ತಳ್ಳಿ ಹಾಕಿರುವ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್, ದೂರುಗಳಿಗೆ ಸಂಬಂಧಿಸಿದಂತೆ ಪುರಾವೆಗಳಿದ್ದರೆ ಒದಗಿಸುವಂತೆ ಸವಾಲು ಹಾಕಿದರು.

ರಾಜೀವ್ ಕುಮಾರ್

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಜಿಲ್ಲಾಧಿಕಾರಿಗಳ ಮೇಲೆ ಪ್ರಭಾವ ಬೀರಲಾಗಿದೆ ಎಂದು ಆರೋಪಿಸುತ್ತಿರುವವರು, ಆ ಜಿಲ್ಲಾಧಿಕಾರಿಗಳ ಹೆಸರನ್ನು ಹೇಳಿದರೆ ನಮಗೆ ಶಿಕ್ಷಿಸಲು ಸಾಧ್ಯವಾಗುತ್ತದೆ. ಮತ ಎಣಿಕೆ ಪ್ರಕ್ರಿಯೆ ಆರಂಭವಾಗುವ ಮುನ್ನ ನಮ್ಮ ಜತೆ ಮಾಹಿತಿ ಹಂಚಿಕೊಳ್ಳಬೇಕು. ವದಂತಿಯನ್ನು ಹರಡಿ ಎಲ್ಲರನ್ನೂ ಅನುಮಾನದಿಂದ ನೋಡುವ ಹಾಗೆ ಮಾಡಲು ಸಾಧ್ಯವಿಲ್ಲ' ಎಂದರು.

ಗೃಹ ಸಚಿವ ಅಮಿತ್ ಶಾ ಅವರು ಚುನಾವಣಾಧಿಕಾರಿಯೂ ಆಗಿರುವ 150 ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ಮಾತನಾಡಿದ್ದಾರೆ ಎಂದು ಕಾಂಗ್ರೆಸ್ ಮುಖಂಡ ಜೈರಾಮ್ ರಮೇಶ್ ಮಾಡಿದ ಆರೋಪವನ್ನು ಉಲ್ಲೇಖಿಸಿದ ಅವರು, 'ನಿರ್ದಿಷ್ಟ ದೂರುಗಳ ಮೇಲೆ ಕ್ರಮ ಕೈಗೊಳ್ಳಲು ಪುರಾವೆಗಳನ್ನು ಒದಗಿಸಿ' ಎಂದರು.

ಚುನಾವಣೆ ಅವಧಿಯಲ್ಲಿ ಮತದಾರರ ಪಟ್ಟಿ, ಇವಿಎಂಗಳಿಗೆ ಸಂಬಂಧಿಸಿದಂತೆ ಹರಡಿದ 'ಸುಳ್ಳು ನಿರೂಪಣೆ'ಗಳನ್ನು ಸಮರ್ಥವಾಗಿ ಎದುರಿಸಲು ಆಯೋಗಕ್ಕೆ ಸಾಧ್ಯವಾಗಲಿಲ್ಲ ಎಂಬುದನ್ನು ಅವರು ಒಪ್ಪಿಕೊಂಡರು.

'ಚುನಾವಣಾ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರಲು ವಿದೇಶದಿಂದ ನಡೆಸುವ ಯಾವುದೇ ರೀತಿಯ ಪ್ರಯತ್ನಗಳನ್ನು ಎದುರಿಸಲು ಆಯೋಗವು ಎಲ್ಲ ಸಿದ್ಧತೆಗಳನ್ನು ಮಾಡಿತ್ತು. ಆದರೆ ನಮಗೆ ದೇಶದ ಒಳಗಿನಿಂದಲೇ ಆರೋಪಗಳನ್ನು ಕೇಳಬೇಕಾಗಿ ಬಂತು. ಇದನ್ನು ಎದುರಿಸಲು (ಸುಳ್ಳು ನಿರೂಪಣೆ) ನಾವು ಇನ್ನಷ್ಟು ಸಿದ್ಧರಿರಬೇಕು' ಎಂದರು.

ಮತ ಎಣಿಕೆಗೆ ಸಂಬಂಧಿಸಿದಂತೆ 'ಇಂಡಿಯಾ' ಮೈತ್ರಿಕೂಟದ ನಾಯಕರು ಮುಂದಿಟ್ಟಿರುವ ಎಲ್ಲ ಬೇಡಿಕೆಗಳನ್ನು ಸ್ವೀಕರಿಸಿದ್ದೇವೆ ಎಂದು ತಿಳಿಸಿದರು. ಚುನಾವಣಾ ಆಯುಕ್ತರಾದ ಜ್ಞಾನೇಶ್ ಕುಮಾರ್ ಮತ್ತು ಎಸ್.ಎಸ್.ಸಂಧು ಅವರೂ ಸುದ್ದಿಗೋಷ್ಠಿಯಲ್ಲಿ ಪಾಲ್ಗೊಂಡರು.

64.2 ಕೋಟಿ ಜನರಿಂದ ಮತದಾನ: ವಿಶ್ವದಾಖಲೆ

ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ 31.2 ಕೋಟಿ ಮಹಿಳೆಯರೂ ಸೇರಿದಂತೆ ಒಟ್ಟು 64.2 ಕೋಟಿ ಜನರು ಮತದಾನ ಮಾಡಿದ್ದು, ಭಾರತ ವಿಶ್ವದಾಖಲೆ ಸ್ಥಾಪಿಸಿದೆ ಎಂದು ರಾಜೀವ್ ಕುಮಾರ್ ತಿಳಿಸಿದರು.

ವಿಶ್ವದ ಅತಿದೊಡ್ಡ ಚುನಾವಣಾ ಪ್ರಕ್ರಿಯೆಯನ್ನು ಯಶಸ್ವಿಯಾಗಿ ನಡೆಸಲು 68,000 ಮೇಲ್ವಿಚಾರಣಾ ತಂಡಗಳು ಮತ್ತು 1.5 ಕೋಟಿ ಮತಗಟ್ಟೆ ಹಾಗೂ ಭದ್ರತಾ ಸಿಬ್ಬಂದಿ ಭಾಗಿಯಾಗಿದ್ದರು ಎಂದು ಮಾಹಿತಿ ನೀಡಿದರು.

ಇತರ ಅಂಶಗಳು:

- 2019 ರಲ್ಲಿ 540 ಮತಗಟ್ಟೆಗಳಲ್ಲಿ ಮರುಮತದಾನ ನಡೆದಿದ್ದರೆ, ಈ ಬಾರಿ ಕೇವಲ 39 ಕಡೆ ಮರುಮತದಾನ ನಡೆದಿವೆ.
- ನಗದು, ಉಡುಗೊರೆಗಳು, ಮದ್ಯ ಮತ್ತುಮಾದಕದ್ರವ್ಯ ಸೇರಿ ₹10 ಸಾವಿರ ಕೋಟಿ ವಶಕ್ಕೆ ಪಡೆಯಲಾಗಿದೆ. ಕಳೆದ ಬಾರಿ ₹3,500 ಕೋಟಿ ವಶಪಡಿಸಿಕೊಂಡಿತ್ತು.
- ಜಮ್ಮು ಮತ್ತು ಕಾಶ್ಮೀರದಲ್ಲಿ ನಾಲ್ಕು ದಶಕಗಳಲ್ಲೇ ಅತ್ಯಧಿಕ ಮತದಾನ (ಶೇ 58.58) ಈ ಬಾರಿ ನಡೆದಿದೆ.

ಮೋದಿ ಭೇಟಿಯಾದ ನಿತೀಶ್

ನವದೆಹಲಿ (ಪಿಟಿಐ): ಬಿಹಾರ ಮುಖ್ಯಮಂತ್ರಿನಿತೀಶ್‌ಕುಮಾರ್‌ಅವರುಸೋಮವಾರ ಪ್ರಧಾನಿ ನರೇಂದ್ರ ಮೋದಿ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು. ಇಬ್ಬರು ನಾಯಕರ ನಡುವಿನ ಮಾತುಕತೆಗೆ ಸಂಬಂಧಿಸಿದಂತೆ ಯಾವುದೇ ಅಧಿಕೃತ ಮಾಹಿತಿ ಹೊರಬಿದ್ದಿಲ್ಲ. ನಿತೀಶ್ ನೇತೃತ್ವದ ಜೆಡಿಯು, ಲೋಕಸಭಾ ಚುನಾವಣೆಗೆ ಅಲ್ಪ ಸಮಯದ ಮುನ್ನ ಬಿಹಾರದಲ್ಲಿ ಎನ್‌ಡಿಎ ಜತೆ ಕೈಜೋಡಿಸಿತ್ತು.

ಅವಿರೋಧ ಆಯ್ಕೆ ಅನೂರ್ಜಿತ ಮಾಡಲು ಮನವಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಸೂರತ್ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯ ಅವಿರೋಧ ಆಯ್ಕೆಯನ್ನು ಅನೂರ್ಜಿತಗೊಳಿಸುವಂತೆ ಗುಜರಾತ್ ಹೈಕೋರ್ಟ್‌ನಲ್ಲಿ ಅರ್ಜಿಯೊಂದು ಸೋಮವಾರ ಸಲ್ಲಿಕೆಯಾಗಿದೆ.

ಸೂರತ್‌ನ ಮತದಾರರು ಎಂದು ಹೇಳಿಕೊಂಡ ಅರ್ಜಿದಾರರು, ಕಾಂಗ್ರೆಸ್ ಅಭ್ಯರ್ಥಿಯ ನಾಮಪತ್ರವನ್ನು ತಿರಸ್ಕರಿಸಿದ ಚುನಾವಣಾಧಿಕಾರಿಯ ನಿರ್ಧಾರ ಪ್ರಜಾಪ್ರತಿನಿಧಿ ಕಾಯ್ದೆ, 1951ಕ್ಕೆ ಅನುಗುಣವಾಗಿಲ್ಲ ಎಂದು ವಾದಿಸಿದ್ದಾರೆ. ಫಲಿತಾಂಶ ಘೋಷಣೆ ಅಕ್ರಮ ಎಂದು ಅರ್ಜಿ ಸಲ್ಲಿಕೆಯಾಗುವ ಸಾಧ್ಯತೆ ಇದೆ.

ಪ್ರವಾಸಿಗರ ದಂಡು ಉತ್ತರಾಖಂಡದ ಮಸ್ಸೂರಿಯಲ್ಲಿ ಸೋಮವಾರ ಪ್ರವಾಸಿಗರು ಜಲಪಾತದಲ್ಲಿ ಸ್ನಾನ ಮಾಡಿ ಬೇಸಿಗೆಯ ಬಿಸಿಯ ಧಗೆಯನ್ನು ತಣಿಸಿಕೊಂಡರು –ಪಿಟಿಐ ಚಿತ್ರ

ಹ್ಯಾಟ್ರಿಕ್ ಗೆಲುವೊ, ಅಚ್ಚರಿ ಫಲಿತವೊ?

ಒಂದನೇ ಪುಟದಿಂದ...

ಎನ್‌ಡಿಎ ಮೈತ್ರಿಕೂಟ ಭಾರಿ ಗೆಲುವು ದಾಖಲಿಸಲಿದೆ ಎಂದು ಮತಗಟ್ಟೆ ಸಮೀಕ್ಷೆಗಳು ಅಂದಾಜಿಸಿವೆ. ಆದರೆ 'ಇಂಡಿಯಾ' ಕೂಟದ ಪಕ್ಷಗಳು ಸಮೀಕ್ಷೆಯನ್ನು 'ಸರ್ಕಾರಿ ಪ್ರಾಯೋಜಿತ' ಎಂದು ತಳ್ಳಿಹಾಕಿದ್ದು, ತಮಗೆ 295 ಸ್ಥಾನಗಳು ದೊರೆಯುವ ವಿಶ್ವಾಸ ವ್ಯಕ್ತಪಡಿಸಿವೆ.

ಮತ ಎಣಿಕೆ ಪ್ರಕ್ರಿಯೆ ಬಿಗಿ ಭದ್ರತೆಯೊಂದಿಗೆ ಬೆಳಿಗ್ಗೆ 8ಕ್ಕೆ ಆರಂಭವಾಗಲಿದೆ. ಮತದಾನದ ವೇಳೆ ಹಿಂಸಾಚಾರ ನಡೆದಿದ್ದ ಪಶ್ಚಿಮ ಬಂಗಾಳ ಮತ್ತು ಆಂಧ್ರ ಪ್ರದೇಶದಲ್ಲಿ ಯಾವುದೇ ಅಹಿತಕರ ಘಟನೆ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿದೆ. ಎಣಿಕೆ ಪ್ರಕ್ರಿಯೆಗೆ 70 ರಿಂದ 80 ಲಕ್ಷ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ ಎಂದು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ತಿಳಿಸಿದರು.

ಮುನ್ನೆಚ್ಚರಿಕೆ ಕ್ರಮವಾಗಿ ಹಲವು ರಾಜ್ಯಗಳಲ್ಲಿ ಅರೆಸೇನಾ ಪಡೆಯನ್ನು ನಿಯೋಜಿಸಲಾಗಿದೆ. ಮತ ಎಣಿಕೆ ನಂತರದ 15 ದಿನಗಳವರೆಗೂ ಆಂಧ್ರಪ್ರದೇಶ ಮತ್ತು ಪಶ್ಚಿಮ ಬಂಗಾಳದಲ್ಲಿ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲು ನಿರ್ಧರಿಸಲಾಗಿದೆ.

28 ಕ್ಷೇತ್ರಗಳ ಕುತೂಹಲಕ್ಕೆ ಇಂದು ತೆರೆ

ಒಂದನೇ ಪುಟದಿಂದ...

ವಿಧಾನಸಭಾ ಚುನಾವಣೆಗೂ ಮುನ್ನ ಐದು ಗ್ಯಾರಂಟಿಗಳನ್ನು ಘೋಷಿಸಿದ್ದ ಕಾಂಗ್ರೆಸ್, 135 ಕ್ಷೇತ್ರಗಳಲ್ಲಿ ಗೆಲ್ಲುವ ಮೂಲಕ ಭಾರಿ ಬಹುಮತ ಗಳಿಸಿತ್ತು. ಅದೇ ಮಾದರಿಯಲ್ಲಿ ಮತ್ತಷ್ಟು 'ಗ್ಯಾರಂಟಿ' ಯೋಜನೆಗಳ ಭರವಸೆಗಳನ್ನು ಮುಂದಿಟ್ಟು ಲೋಕಸಭಾ ಚುನಾವಣೆಯನ್ನು ಎದುರಿಸಿದೆ. 2019ರ ಲೋಕಸಭಾ ಚುನಾವಣೆಯಲ್ಲಿ ಕೇವಲ ಒಂದು ಕ್ಷೇತ್ರದಲ್ಲಿ ಗೆಲುವು ಸಾಧಿಸಿದ್ದ ಕಾಂಗ್ರೆಸ್, ಈ ಬಾರಿ ಎರಡಂಕಿ ತಲುಪುವ ಖಚಿತ ವಿಶ್ವಾಸದಲ್ಲಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ 25 ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಿತ್ತು. ಈ ಬಾರಿ ಜೆಡಿಎಸ್ ಜತೆ ಮೈತ್ರಿಯೊಂದಿಗೆ ಚುನಾವಣೆ ಎದುರಿಸಿದೆ. ಮೋದಿ ಜನಪ್ರಿಯತೆ ಮತ್ತು ಜೆಡಿಎಸ್ ಜತೆಗಿನ ಮೈತ್ರಿ ಹೆಚ್ಚು ಸ್ಥಾನ ತಂದುಕೊಡಬಹುದು ಎಂಬ ನಿರೀಕ್ಷೆ ಬಿಜೆಪಿಯಲ್ಲಿದೆ.

ಬಿಜೆಪಿ– ಕಾಂಗ್ರೆಸ್ ಮಧ್ಯೆ ಜಿದ್ದಾಜಿದ್ದಿನ ಕಣದಂತಾಗಿದ್ದ ಕರ್ನಾಟಕದಲ್ಲಿ ಯಾರ ಕೈ ಮೇಲಾಗಲಿದೆ ಎಂಬುದು ಮಂಗಳವಾರದ ಮತ ಎಣಿಕೆಯಲ್ಲಿ ಬಹಿರಂಗವಾಗಲಿದೆ.

ಫಲಿತಾಂಶ ಯಾರಿಗೆಲ್ಲ ನಿರ್ಣಾಯಕ?

ಒಂದನೇ ಪುಟದಿಂದ...

ರಾಜ್ಯದಲ್ಲಿ ಒಬ್ಬ ಸಂಸದರನ್ನು ಮಾತ್ರ ಹೊಂದಿರುವ ಕಾಂಗ್ರೆಸ್ ಪಕ್ಷವನ್ನು ಕನಿಷ್ಠ 10ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಿಸಿಕೊಳ್ಳುವ ಸವಾಲು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೇಲಿದೆ. ಜತೆಗೆ ಮೈಸೂರು–ಕೊಡಗು ಕ್ಷೇತ್ರದ ಗೆಲುವು ಸಿದ್ದರಾಮಯ್ಯ ಅವರಿಗೆ ಅನಿವಾರ್ಯವಾಗಿದ್ದರೆ, ಬೆಂಗಳೂರು ಗ್ರಾಮಾಂತರ ಕ್ಷೇತ್ರದಲ್ಲಿ ತನ್ನ ತಮ್ಮ ಡಿ.ಕೆ. ಸುರೇಶ್ ಗೆಲುವು ಶಿವಕುಮಾರ್ ಅವರಿಗೆ ಪ್ರತಿಷ್ಠೆಯ ಪ್ರಶ್ನೆಯಾಗಿದೆ. ಮಕ್ಕಳು, ಪತ್ನಿ,ಸಹೋದರ,ಸಹೋದರಿ,ಸಂಬಂಧಿಕರನ್ನು ಕಣಕ್ಕಿಳಿಸಿರುವ ಸಚಿವರಿಗೂ ಈ ಚುನಾವಣೆಯಲ್ಲಿ ತಮ್ಮವರನ್ನು ಗೆಲ್ಲಿಸಿಕೊಳ್ಳಲೇಬೇಕಾದ ಸವಾಲು ಇದೆ.

ಪಕ್ಷ ಸ್ಪರ್ಧಿಸಿರುವ ಮೂರೂ ಕ್ಷೇತ್ರಗಳಲ್ಲಿ ಗೆಲ್ಲಲೇಬೇಕಾದ ಅನಿವಾರ್ಯ ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಮತ್ತು ರಾಜ್ಯ ಘಟಕದ ಅಧ್ಯಕ್ಷ ಎಚ್.ಡಿ. ಕುಮಾರಸ್ವಾಮಿ ಅವರಿಗಿದೆ. ಜತೆಯಲ್ಲಿ ಬಿಜೆಪಿಯಿಂದ ಕಣಕ್ಕಿಳಿದಿದ್ದ ಬಾಮೈದ ಡಾ.ಸಿ.ಎನ್. ಮಂಜುನಾಥ್ ಅವರನ್ನು ಗೆಲ್ಲಿಸಿಕೊಂಡು, ಉಳಿದ ಎಲ್ಲ ಕ್ಷೇತ್ರಗಳಲ್ಲೂ ಮೈತ್ರಿಯಿಂದ ಬಿಜೆಪಿಗೆ ಅನುಕೂಲವಾಗಿದೆ ಎಂಬುದನ್ನು ತೋರಿಸಬೇಕಾದ ಸವಾಲೂ ಇದೆ.

₹94.73 ಕೋಟಿ ವಹಿವಾಟಿನ ದಾಖಲೆ ಸಂಗ್ರಹಿಸಿದ ಎಸ್‌ಐಟಿ

'ಪ್ರಭಾವಿ' ಮಾತು ಕೇಳಿ ಹಣ ವರ್ಗಾವಣೆ

• ಸಂತೋಷ ಜಿಗಳಿಕೊಪ್ಪ

ಬೆಂಗಳೂರು: 'ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನಡೆದಿದೆ' ಎನ್ನಲಾದ ಹಗರಣದಲ್ಲಿ 'ಪ್ರಭಾವಿ'ಯೊಬ್ಬರು ಭಾಗಿಯಾಗಿರುವ ಬಗ್ಗೆ ಮಾಹಿತಿ ಕಲೆ ಹಾಕಿರುವ ಎಸ್‌ಐಟಿ (ವಿಶೇಷ ತನಿಖಾ ತಂಡ), ಪ್ರಭಾವಿಯ ಆಪ್ತ ಸೇರಿ ಹಲವರಿಗೆ ನೋಟಿಸ್ ನೀಡಲು ತಯಾರಿ ನಡೆಸಿದೆ.

ನಿಗಮದ ಪ್ರಧಾನ ವ್ಯವಸ್ಥಾಪಕ ನಿರ್ದೇಶಕ ರಾಜಶೇಖರ್ ಅವರು ನೀಡಿದ್ದ ದೂರಿನಡಿ ಹೈಗ್ರೌಂಡ್ಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಎಸ್‌ಐಟಿ, ಕೃತ್ಯದಲ್ಲಿ ಭಾಗಿಯಾದವರ ಪಟ್ಟಿ ಸಿದ್ಧಪಡಿಸುತ್ತಿದೆ.

'ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಸಿಇಒ ಮಣಿಮೇಖಲೈ, ನಿತೇಶ್ ರಂಜನ್, ರಾಮಸುಬ್ರಮಣ್ಯಂ, ಸಂಜಯ್ ರುದ್ರ, ಪಂಕಜ್ ದ್ವಿವೇದಿ ಹಾಗೂ ಬ್ಯಾಂಕ್‌ನ ಮುಖ್ಯ ವ್ಯವಸ್ಥಾಪಕಿ ಸುಚಿಸ್ಮಿತಾ ರಾವಲ್ ವಿರುದ್ಧ ಎಫ್‌ಐಆರ್ ದಾಖಲಾಗಿದೆ. ತನಿಖೆ ಕೈಗೊಂಡಾಗ, ನಿಗಮದ ಹಿಂದಿನ ವ್ಯವಸ್ಥಾಪಕ ನಿರ್ದೇಶಕ (ಎಂ.ಡಿ) ಜೆ.ಜಿ. ಪದ್ಮನಾಭ (55) ಮತ್ತು ಲೆಕ್ಕಾಧಿಕಾರಿಯಾಗಿದ್ದ ಪರಶುರಾಮ್ ಜಿ. ದುರ್ಗಣ್ಣನವರ (40) ಅವರ ಸಹಿ ಇರುವ ಚೆಕ್‌ಗಳು ಪತ್ತೆಯಾಗಿದ್ದವು. ಇವುಗಳನ್ನೇ ಆಧಾರವಾಗಿಟ್ಟುಕೊಂಡು ಪದ್ಮನಾಭ ಹಾಗೂ ಪರುಶುರಾಮ್ ಅವರನ್ನು ಈಗಾಗಲೇ ಬಂಧಿಸಲಾಗಿದೆ' ಎಂದು ಎಸ್‌ಐಟಿ ಮೂಲಗಳು ಹೇಳಿವೆ.

'ಬಂಧಿತ ಆರೋಪಿಗಳು, ಸರ್ಕಾರಿ ನೌಕರರು, ಬ್ಯಾಂಕ್ ಅಧಿಕಾರಿಗಳು, ಇತರರ ಜೊತೆ ಸೇರಿ ನಿಗಮದ ಹಣವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ' ಎಂದು ತಿಳಿಸಿವೆ.

'ಇಬ್ಬರೂ ಆರೋಪಿಗಳು, ಪ್ರಭಾವಿ ವ್ಯಕ್ತಿಯೊಬ್ಬರ ಹೆಸರು ಬಾಯ್ಬಿಟ್ಟಿದ್ದಾರೆ. ಆದರೆ, ಅವರ ಹೇಳಿಕೆಯನ್ನು ಏಕಾಏಕಿ ಪರಿಗಣಿಸಲಾಗದು. ಕೃತ್ಯದಲ್ಲಿ ಭಾಗಿಯಾಗಿರುವ ಹಿನ್ನೆಲೆ ಏನು? ಹಣ ವರ್ಗಾವಣೆಯಾದ ಖಾತೆಗಳ ಖಾತೆದಾರರಿಗೂ ಹಾಗೂ ಪ್ರಭಾವಿ ವ್ಯಕ್ತಿಗೂ ಇರುವ ಸಂಬಂಧವೇನು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಹೇಳಿವೆ.

ಏಜೆಂಟರು ಶಾಮೀಲು: 'ನಿಗಮದ ಹಣವನ್ನು ಒಂದು ಖಾತೆಯಿಂದ ಮತ್ತೊಂದು ಖಾತೆಗೆ ವರ್ಗಾವಣೆ ಮಾಡಿರುವ ಕೃತ್ಯದಲ್ಲಿ ಕೆಲ ಏಜೆಂಟರು ಶಾಮೀಲಾಗಿರುವ ಮಾಹಿತಿ ಇದೆ. ಸರ್ಕಾರದ ಹಣವನ್ನು ವ್ಯವಸ್ಥಿತವಾಗಿ ಬೇರೆ ಬೇರೆ ಖಾತೆಗಳಿಗೆ ವರ್ಗಾಯಿಸಿ, ಬಡ್ಡಿ ಹಾಗೂ ಇತರೆ ರೂಪದಲ್ಲಿ ಲಾಭ ಪಡೆಯುವ ಜಾಲ ಸಕ್ರಿಯವಾಗಿರುವ ಅನುಮಾನವಿದೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ನಿಗಮದ ಹಣ ವರ್ಗಾವಣೆ ಸಂದರ್ಭದಲ್ಲಿ ಕಾನೂನು ಪಾಲನೆಯಾಗಿಲ್ಲ. ಜೊತೆಗೆ, ನಿಗಮದಲ್ಲಿರುವವರು ಹಾಗೂ ಹೊರಗಿನ ಕೆಲವರು ಅಕ್ರಮ ಹಣ ವರ್ಗಾವಣೆಗೆ ಕುಮ್ಮಕ್ಕು ನೀಡಿರುವ ಮಾಹಿತಿಯೂ ಇದೆ' ಎಂದು ಹೇಳಿವೆ.

ಬ್ಯಾಂಕ್ ಅಧಿಕಾರಿಗಳ ವಿಚಾರಣೆ: 'ಅಕ್ರಮ ವರ್ಗಾವಣೆಗೆ ಸಂಬಂಧಪಟ್ಟಂತೆ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ಕೆಲ ಅಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ವಿಚಾರಣೆ ನಡೆಸಲಾಗಿದೆ. ಕೆಲ ದಾಖಲೆಗಳ ಸಮೇತ ವಿಚಾರಣೆಗೆ ಹಾಜರಾಗುವಂತೆ ಸೂಚಿಸಲಾಗಿದೆ. ಮಣಿಮೇಖಲೈ, ನಿತೇಶ್ ರಂಜನ್, ರಾಮಸುಬ್ರಮಣ್ಯಂ, ಸಂಜಯ್ ರುದ್ರ, ಪಂಕಜ್ ದ್ವಿವೇದಿ ಹಾಗೂ ಸುಚಿಸ್ಮಿತಾ ರಾವಲ್ ಅವರನ್ನು ವಿಚಾರಣೆ ನಡೆಸಬೇಕಿದೆ' ಎಂದು ಮೂಲಗಳು ತಿಳಿಸಿವೆ.

ಮೌಖಿಕ ಸೂಚನೆ

'ನಿಗಮದ ಹೆಸರಿನಲ್ಲಿ ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾದ ವಸಂತನಗರದ ಶಾಖೆಯಲ್ಲಿ ಎರಡು ಪ್ರತ್ಯೇಕ ಖಾತೆಗಳಿವೆ. ಈ ಪೈಕಿ ಒಂದು ಖಾತೆಯಿಂದ ₹94.73 ಕೋಟಿ ಹಣವನ್ನು ಅಕ್ರಮವಾಗಿ ಬೇರೆ ಖಾತೆಗಳಿಗೆ ಕೋಟಿ ವರ್ಗಾವಣೆ ಮಾಡಿರುವುದು ಗೊತ್ತಾಗಿದೆ. ಇದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಸಂಗ್ರಹಿಸಲಾಗಿದೆ. ಈ ವರ್ಗಾವಣೆಗೆ, ಪ್ರಭಾವಿಯೊಬ್ಬರು ಮೌಖಿಕ ಸೂಚನೆ ನೀಡಿದ್ದರೆಂದು ಬಂಧಿತ ಆರೋಪಿಗಳು ಹೇಳುತ್ತಿದ್ದಾರೆ' ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

'ಕೃತ್ಯದಲ್ಲಿ ಪ್ರಭಾವಿ ಭಾಗಿಯಾಗಿರುವ ಬಗ್ಗೆ ನ್ಯಾಯಾಲಯಕ್ಕೂ ಮಾಹಿತಿ ನೀಡಲಾಗಿದೆ. ಬಂಧಿತ ಆರೋಪಿಗಳು, ಪ್ರಭಾವಿ ಹಾಗೂ ಇತರರು ಸೇರಿಕೊಂಡು ಸಂಘಟಿತರಾಗಿ ನಿಗಮಕ್ಕೆ ನಷ್ಟವನ್ನುಂಟು ಮಾಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿದೆ' ಎಂದು ಹೇಳಿವೆ.

ಬಿಜೆಪಿಯಿಂದ 6 ಕ್ಕೆ ರಾಜಭವನ ಚಲೋ

ಬೆಂಗಳೂರು: ಇದೇ 6ರೊಳಗೆ ಸಚಿವ ಬಿ.ನಾಗೇಂದ್ರ ಅವರ ರಾಜೀನಾಮೆ ಪಡೆಯದೇ ಇದ್ದರೆ, ಅದೇ ದಿನ ರಾಜ್ಯಭವನಕ್ಕೆ ಕಾಲ್ನಡಿಗೆಯಲ್ಲಿ ತೆರಳಿ ರಾಜ್ಯ ಸರ್ಕಾರವನ್ನು ವಜಾ ಮಾಡುವಂತೆ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಗುವುದು ಎಂದು ಬಿಜೆಪಿ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಪಿ.ರಾಜೀವ್ ಹೇಳಿದರು.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಮತ್ತು ವಿರೋಧಪಕ್ಷದ ನಾಯಕ ಆರ್. ಅಶೋಕ ಅವರ ನೇತೃತ್ವದಲ್ಲಿ ಕಾಲ್ನಡಿಗೆ ನಡೆಯಲಿದೆ ಎಂದರು.

ಮುಖ್ಯಮಂತ್ರಿಯವರ ಮೂಗಿನಡಿಯೇ ಹಣವನ್ನು ಅಕ್ರಮವಾಗಿ ವರ್ಗಾಯಿಸಲಾಗಿದೆ. ಆರ್ಥಿಕ ಇಲಾಖೆಯ ಸಹಮತ ಇಲ್ಲದೇ ಇಷ್ಟು ದೊಡ್ಡ ಮೊತ್ತ ವರ್ಗಾವಣೆ ಆಗಲು ಸಾಧ್ಯವಿಲ್ಲ. ತೆಲಂಗಾಣದ ಚುನಾವಣೆಗಾಗಿ ಈ ಹಣ ವರ್ಗಾಯಿಸಲಾಗಿದೆ ಎಂಬ ಆರೋಪವಿದೆ. ಆದ್ದರಿಂದ ಸಚಿವ ನಾಗೇಂದ್ರ ರಾಜೀನಾಮೆ ನೀಡಬೇಕು ಎಂದರು.

ಸಚಿವ ನಾಗೇಂದ್ರ ರಾಜೀನಾಮೆ ಕೇಳಿಲ್ಲ: ಸಿಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿ ನಡೆದ ಅವ್ಯವಹಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆಯನ್ನು ಕೇಳಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಸ್ಪಷ್ಟಪಡಿಸಿದರು.

ಸಚಿವರು ಮುಖ್ಯಮಂತ್ರಿಗೆ ಬೆದರಿಕೆ ಹಾಕುತ್ತಿದ್ದಾರೆ ಎಂದು ಬಿಜೆಪಿ ಆರೋಪಿಸಿರುವ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಯಾರೂ ಯಾವ ಬೆದರಿಕೆಯನ್ನೂ ಹಾಕಿಲ್ಲ' ಎಂದರು.

ಬಿಜೆಪಿಯವರು ನಾಗೇಂದ್ರ ಅವರ ರಾಜೀನಾಮೆಗೆ ಜೂನ್ 6ರವರೆಗೆ ಗಡುವು ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಪ್ರಾಥಮಿಕ ವರದಿ ಪಡೆದು ನಂತರ ತೀರ್ಮಾನಿಸಲಾಗುವುದು' ಎಂದರು.

ಮತ ಎಣಿಕೆ ಕೇಂದ್ರಕ್ಕೆ ಶಾಸಕನಿಗೆ ನಿರ್ಬಂಧ

ನವದೆಹಲಿ (ಪಿಟಿಐ): ಆಂಧ್ರ ಪ್ರದೇಶದ ಮಾಚೆರ್ಲ ವಿಧಾನಸಭಾ ಕ್ಷೇತ್ರದಲ್ಲಿ ಇವಿಎಂಗೆ ಹಾನಿಪಡಿಸಿದ್ದ ವೈಎಸ್‌ಆರ್‌ಸಿಪಿ ಶಾಸಕ ಪಿನ್ನೆಲ್ಲಿ ರಾಮಕೃಷ್ಣ ರೆಡ್ಡಿ ಅವರು ಜೂನ್ 4ರಂದು ಮತ ಎಣಿಕೆ ಕೇಂದ್ರ ಪ್ರವೇಶಿಸುವುದನ್ನು ನಿರ್ಬಂಧಿಸಿ ಸುಪ್ರೀಂ ಕೋರ್ಟ್ ಸೋಮವಾರ ಆದೇಶಿಸಿದೆ.

ಹಸ್ತಾಂತರವಾಗದ ಕಡತಗಳು: ಕಲಬುರಗಿ ಪೀಠದ ಆಯುಕ್ತರಿಂದ ಬೆಂಗಳೂರಿನಲ್ಲೇ ಕುಳಿತು ಕೆಲಸ

ಇದ್ದೂ ಇಲ್ಲದಂತಾದ ಮಾಹಿತಿ ಆಯೋಗ ಪೀಠ

ಪ್ರಜಾವಾಣಿ ವಾರ್ತೆ

ಕಲಬುರಗಿ: ಈ ವರ್ಷದ ಆರಂಭದಲ್ಲಿ ಶುರುವಾದ ರಾಜ್ಯ ಮಾಹಿತಿ ಆಯೋಗದ ಕಲಬುರಗಿ ಪೀಠದ ಕಚೇರಿಯು ಆಡಳಿತಾತ್ಮಕ ಸಮಸ್ಯೆ, ಸಿಬ್ಬಂದಿ ಕೊರತೆ, ಕೇಂದ್ರ ಕಚೇರಿಯಿಂದ ಹಸ್ತಾಂತರವಾಗದ ಕಡತಗಳು, ಅಧಿಕಾರಿಗಳ ನಡುವಿನ ಆಂತರಿಕ ಸಂಘರ್ಷದಿಂದಾಗಿ ಇದ್ದೂ ಇಲ್ಲದಂತಾಗಿದೆ.

ಕಲಬುರಗಿ ವಿಭಾಗದ ಜನರು ಆಯೋಗದ ಪ್ರಧಾನ ಪೀಠ ಇರುವ ಬೆಂಗಳೂರಿಗೆ ಅಲೆಯುವುದನ್ನು ತಪ್ಪಿಸುವ ನಿಟ್ಟಿನಲ್ಲಿ ಕಲಬುರಗಿಯಲ್ಲೇ 2024ರ ಜನವರಿ 1ರಿಂದ ಪೀಠ ಆರಂಭವಾಗಿತ್ತು. ಪೀಠದ ಕಚೇರಿ ಆರಂಭಗೊಂಡು ಐದು ತಿಂಗಳು ಕಳೆದರೂ ಪೂರ್ಣಪ್ರಮಾಣದಲ್ಲಿ ಕಾರ್ಯನಿರ್ವಹಣೆ ಮಾಡುತ್ತಿಲ್ಲ.

ಕಲ್ಯಾಣ ಕರ್ನಾಟಕ ಭಾಗದ ಏಳು ಜಿಲ್ಲೆಗಳಲ್ಲಿನ ಅವ್ಯವಹಾರಗಳ ವಿರುದ್ಧದ ಆರೋಪಗಳ ಸಂಬಂಧ ಮಾಹಿತಿ ನೀಡಲು ಅಧಿಕಾರಿಗಳು ಅರ್ಜಿದಾರರಿಗೆ ನಿರಾಕರಿಸಿದ್ದಲ್ಲಿ ಅದರ ವಿರುದ್ಧ ಮಾಹಿತಿ ಆಯೋಗಕ್ಕೆ ಮೇಲ್ಮನವಿ ಸಲ್ಲಿಸಲು ಅವಕಾಶವಿದೆ. ಆದರೆ, ಕಲಬುರಗಿ ಪೀಠದ ಆಯೋಗವು ಗೊಂದಲದ ಗೂಡಾಗಿದೆ.

ಕಲಬುರಗಿಯಲ್ಲಿನ ಮಾಹಿತಿ ಆಯೋಗ ಪೀಠದ ಕಚೇರಿ

ನಗರದ ಮಹಲ್‌–ಇ –ಶಾಹಿ ಅತಿಥಿಗೃಹದ ಆವರಣದಲ್ಲಿನ ಪೀಠದ ಕಚೇರಿಯಲ್ಲಿ ಕುಳಿತು ಕೆಲಸ ಮಾಡಬೇಕಿದ್ದ ಪೀಠದ ಆಯುಕ್ತ ರವೀಂದ್ರ ಗುರುನಾಥ ಡಾಕಪ್ಪ ಅವರು ಬೆಂಗಳೂರಿನ ಕಚೇರಿಯಲ್ಲೇ ಕೆಲಸ ಮಾಡುತ್ತಿದ್ದಾರೆ. ಈ ಬಗ್ಗೆ ಅರ್ಜಿದಾರರು ಬೇಸರ ವ್ಯಕ್ತಪಡಿಸುತ್ತಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ' ಜತೆಗೆ ಮಾತನಾಡಿದ ರವೀಂದ್ರ ಅವರು, 'ಕಲಬುರಗಿ ಪೀಠಕ್ಕೆ ಪೂರ್ಣ ಪ್ರಮಾಣದ ಆಡಳಿತಾತ್ಮಕ ಹುದ್ದೆಗಳು ನೇಮಕವಾಗಿಲ್ಲ. ಪ್ರಕರಣಗಳಿಗೆ ಸಂಬಂಧಿಸಿದ ತಿಳಿವಳಿಕೆ ಪತ್ರ ಹೊರಡಿಸುವ ಅಧಿಕಾರ ಆಯುಕ್ತರಿಗೆ ಇಲ್ಲ. ಅದನ್ನು ಅಧೀನ ಕಾರ್ಯದರ್ಶಿ ಅಥವಾ ಸೆಕ್ಷನ್ ಅಧಿಕಾರಿಗಳು ಹೊರಡಿಸಬೇಕು. ಕಲಬುರಗಿ ಪೀಠಕ್ಕೆ ಸೆಕ್ಷನ್ ಅಧಿಕಾರಿ ಹುದ್ದೆ ಸಹ ಮಂಜೂರು ಆಗಿಲ್ಲ. ಇದರ ಜತೆಗೆ ಬಹುತೇಕ ಕಡತಗಳು ಬೆಂಗಳೂರಿನಲ್ಲಿವೆ. ಹೀಗಾಗಿ, ಕೆಲವು ಆಡಳಿತಾತ್ಮಕ ಕೆಲಸಕ್ಕಾಗಿ ಬೆಂಗಳೂರಿನ ಕಚೇರಿಯಲ್ಲಿ ಇದ್ದೇನೆ' ಎಂದರು.

'ಪ್ರಕರಣದ ವಿಚಾರಣೆಯ ಬಳಿಕ ಅರ್ಜಿದಾರ, ಮೊದಲನೇ ಮತ್ತು ಎರಡನೇ ಪ್ರತಿವಾದಿಗಳಿಗೆ ತೀರ್ಪು ಕಳುಹಿಸಬೇಕು. ಅದಕ್ಕೆ ಪರಿಣತ ತೀರ್ಪು ಬರಹಗಾರರು, ಶೀಘ್ರಲಿಪಿಗಾರರು ಮತ್ತು ಬೆರಳಚ್ಚುಗಾರರು ಬೇಕು. ನಮ್ಮಲ್ಲಿ ಅಂತಹ ಪರಿಣತರು ಇಲ್ಲ. ಪ್ರತಿ ಬಾರಿ ವಿಚಾರಣೆಯ ಬಳಿಕ ಬೆಂಗಳೂರಿಗೆ ಕಳುಹಿಸಬೇಕು. ಅರ್ಜಿಯ ಸ್ವೀಕಾರ ಮತ್ತು ತೀರ್ಪು ಪ್ರಕಟಣೆಗೆ ಬೆಂಗಳೂರಿನ ಕಚೇರಿಯನ್ನೇ ಅವಲಂಬಿಸುವಂತೆ ಆಗಿದೆ' ಎಂದು ಹೇಳಿದರು.

'ಆಯೋಗದಲ್ಲಿನ ಕೆಲವು ಅಧಿಕಾರಿಗಳು ತಾವು ಮಾಡಿದ ತಪ್ಪುಗಳನ್ನು ಮುಚ್ಚಿ ಹಾಕಲು ಇನ್ನೊಬ್ಬರ ಮೇಲೆ ಗೂಬೆ ಕೂರಿಸುತ್ತಿದ್ದಾರೆ' ಎಂದು ದೂರಿದರು.

ಬೆಂಗಳೂರಿನಲ್ಲೇ ಅರ್ಜಿಗಳ ಪರಿಶೀಲನೆ

'ಕಲಬುರಗಿ ಪೀಠದಲ್ಲಿ ತೀರ್ಪು ಬರಹಗಾರರು, ಶೀಘ್ರಲಿಪಿಗಾರರು, ಬೆರಳಚ್ಚುಗಾರರು, ದತ್ತಾಂಶ ನಮೂದಿಸುವವರು, ಸಹಾಯಕ ನೌಕರರ ಹುದ್ದೆಗಳಿವೆ. ಆದರೆ, ಬಹತೇಕರು ಹೊಸಬರಿದ್ದಾರೆ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಅಧಿಕಾರಿಯೊಬ್ಬರು 'ಪ್ರಜಾವಾಣಿ' ತಿಳಿಸಿದರು.

'ಸ್ವೀಕೃತ ಅರ್ಜಿಗಳನ್ನು ಪರಿಶೀಲಿಸುವ ಸೆಕ್ಷನ್ ಅಧಿಕಾರಿಗಳೇ ಇಲ್ಲ. ಹೀಗಾಗಿ, ಕಲಬುರಗಿ ಪೀಠದ ಕಚೇರಿಯಲ್ಲಿ ಸಲ್ಲಿಕೆಯಾಗುವ ಅರ್ಜಿಗಳು ಬೆಂಗಳೂರಿನ ಕಚೇರಿಯಲ್ಲಿ ಪರಿಶೀಲನೆಗೆ ಒಳಪಟ್ಟು, ಅಲ್ಲಿಂದ ವಾಪಸ್ ಬರುತ್ತಿವೆ. ಅವು ಬರುವವರೆಗೂ ನಾವು ಕಾಯಬೇಕು. ಕಲಬುರಗಿಯಲ್ಲಿ ಕಚೇರಿ ಇದ್ದೂ ಇಲ್ಲದಂತೆ ಆಗಿದೆ' ಎಂದರು.

'ಹಗರಣದ ಹಿಂದೆ ಕಾಂಗ್ರೆಸ್ ಹೈಕಮಾಂಡ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಾಲ್ಮೀಕಿ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ಹಣ ವರ್ಗಾವಣೆ ಮಾಡಿರುವ ಹಗರಣದ ಹಿಂದೆ ಕಾಂಗ್ರೆಸ್ ಹೈಕಮಾಂಡ್ ಇದೆ. ಚುನಾವಣೆಗೆ ವೆಚ್ಚಕ್ಕೆ ಬೇರೆ ರಾಜ್ಯಗಳಿಗೆ ಹಣ ಪೂರೈಸಲು ಈ ಅಕ್ರಮ ನಡೆದಿದೆ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್‌.ಡಿ. ಕುಮಾರಸ್ವಾಮಿ ಆರೋಪಿಸಿದರು.

ಕುಮಾರಸ್ವಾಮಿ

ಸುದ್ದಿಗಾರರ ಜತೆ ಸೋಮವಾರ ಮಾತನಾಡಿದ ಅವರು, 'ಕಾಂಗ್ರೆಸ್ ಹೈಕಮಾಂಡ್ ಮೂಗಿನ ನೇರದಲ್ಲೇ ಹಣ ವರ್ಗಾವಣೆ ನಡೆದಿದೆ. ಕಾಂಗ್ರೆಸ್ ಪಕ್ಷವು ವಿವಿಧ ರಾಜ್ಯಗಳ ಚುನಾವಣೆಗೆ ಕರ್ನಾಟಕದಿಂದ ಹಣ ಪೂರೈಸುತ್ತಿದೆ ಎಂಬ ಆರೋಪಕ್ಕೆ ಇದು ಸಾಕ್ಷ್ಯ ಒದಗಿಸಿದೆ' ಎಂದರು.

'ಹಣಕಾಸು ಖಾತೆಯನ್ನು ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಈ ಹಗರಣದ ನೇರ ಹೊಣೆ ಹೊತ್ತುಕೊಳ್ಳಬೇಕು. ಈ ಹಗರಣದಲ್ಲಿ ಇಡೀ ಸಂಪುಟವೇ ಭಾಗಿಯಾಗಿದೆ. ಎಲ್ಲವನ್ನೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ಅವರೊಬ್ಬರ ತಲೆಗೆ ಕಟ್ಟುವ ಷಡ್ಯಂತ್ರ ನಡೆಯುತ್ತಿದೆ' ಎಂದು ದೂರಿದರು.

ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸಲಾಗಿದೆ. ಎಸ್‌ಐಟಿ ಆಮೆ ವೇಗದಲ್ಲಿ ಹೋಗುತ್ತಿದೆ. ಆತ್ಮಹತ್ಯೆ ಮಾಡಿಕೊಂಡ ಅಧಿಕಾರಿ ಚಂದ್ರಶೇಖರನ್ ಮರಣ ಪತ್ರದಲ್ಲಿ ನಾಗೇಂದ್ರ ಹೆಸರು ಉಲ್ಲೇಖಿಸಿಲ್ಲ. ಸಂಪುಟದಲ್ಲಿರುವ ಯಾವ ಸಚಿವರು ಹಗರಣದಲ್ಲಿ ಭಾಗಿಯಾಗಿದ್ದಾರೆ ಎಂದು ಭಾವಿಸಬೇಕು ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ದಮ್ ಲೆಸ್ ಆಗಿದ್ದಾರೆ: ಸಿ.ಟಿ.ರವಿ

ಚಿಕ್ಕಮಗಳೂರು: 'ನಿಗಮದಲ್ಲಿ ನಡೆದ ಅವ್ಯವಹಾರ ಪ್ರಕರಣದಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಸಚಿವ ಬಿ. ನಾಗೇಂದ್ರ ಅವರ ರಾಜೀನಾಮೆ ಪಡೆಯಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ದಮ್ಮಿಲ್ಲ' ಎಂದು ಬಿಜೆಪಿ ಮುಖಂಡ ಸಿ.ಟಿ.ರವಿ ಲೇವಡಿ ಮಾಡಿದರು.

'ರಾಜೀನಾಮೆ ಪಡೆದು ನನ್ನ ಚಡ್ಡಿ ಬಿಚ್ಚಲು ಬಂದರೆ ನಿಮ್ಮ ಪಂಚೆ ಬಿಚ್ಚುತ್ತೇನೆ ಎಂದು ನಾಗೇಂದ್ರ ಧಮ್ಕಿ ಹಾಕಿದ್ದಾರೆ. ಆದ್ದರಿಂದ ಸಿದ್ದರಾಮಯ್ಯ ಅವರಿಗೆ ರಾಜೀನಾಮೆ ಕೇಳುವ ಧೈರ್ಯ ಇಲ್ಲವಾಗಿದೆ' ಎಂದು ತಿಳಿಸಿದರು.

'ಪರಿಶಿಷ್ಟ ಜಾತಿ ಮತ್ತು ವರ್ಗಗಳ ಕಲ್ಯಾಣಕ್ಕೆ ಇರಿಸಿದ್ದ ಹಣದಲ್ಲಿ ಕಳೆದ ವರ್ಷ ₹11 ಸಾವಿರ ಕೋಟಿಯನ್ನು ಗ್ಯಾರಂಟಿ ಯೋಜನೆಗಳಿಗೆ ವರ್ಗಾಯಿಸಿದರು. ಈ ವರ್ಷ ಇನ್ನೂ ₹14 ಸಾವಿರ ಕೋಟಿ ವರ್ಗಾಯಿಸಲಿದ್ದಾರೆ. ಒಟ್ಟು ₹25 ಸಾವಿರ ಕೋಟಿ ಬೇರೆ ಕಾರ್ಯಕ್ಕೆ ವರ್ಗಾವಣೆಯಾಗಲಿದೆ. ಇದು ಒಂದೆಡೆಯಾದರೆ, ಮತ್ತೊಂದೆಡೆ ನಕಲಿ ಖಾತೆಗೆ ₹187 ಕೋಟಿ ವರ್ಗಾವಣೆ ಮಾಡಲಾಗಿದೆ. ಸಚಿವರ ರಾಜೀನಾಮೆ ಪಡೆದರೆ ಅವರು ತಮ್ಮನ್ನೂ ಎಳೆಯುವ ಸಾಧ್ಯತೆ ಇದೆ ಎಂಬ ಕಾರಣಕ್ಕೆ ಸಿದ್ದರಾಮಯ್ಯ ಹೆದರುತ್ತಿದ್ದಾರೆ' ಎಂದರು.

ಮೇಜರ್ ರಾಧಿಕಾ ಸೇನ್‌ಗೆ ಸನ್ಮಾನ

ನವದೆಹಲಿ(ಪಿಟಿಐ): ಕಳೆದ ವಾರ ವಿಶ್ವಸಂಸ್ಥೆಯಿಂದ ಪ್ರತಿಷ್ಠಿತ ಪ್ರಶಸ್ತಿಯನ್ನು ಪಡೆದ ಮೇಜರ್ ರಾಧಿಕಾ ಸೆನ್ ಅವರನ್ನು ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಸೋಮವಾರ ಸನ್ಮಾನಿಸಿದರು.

'ವಿಶ್ವಸಂಸ್ಥೆಯ ಪ್ರಧಾನ ಕಚೇರಿಯಲ್ಲಿ ಇತ್ತೀಚೆಗೆ ನಡೆದ ಕಾರ್ಯಕ್ರಮದಲ್ಲಿ ವಿಶ್ವಸಂಸ್ಥೆಯ ಮಹಾ ಕಾರ್ಯದರ್ಶಿ ಆಂಟೋನಿಯೊ ಗುಟೆರೆಸ್ ಅವರು ಮೇಜರ್ ರಾಧಿಕಾ ಸೇನ್ ಅವರಿಗೆ '2023 ಯುಎನ್ ಮಿಲಿಟರಿ ಜೆಂಡರ್ ಅಡ್ವೊಕೇಟ್ ಆಫ್ ದಿ ಇಯರ್ ಪ್ರಶಸ್ತಿ' ಪ್ರದಾನ ಮಾಡಿದ್ದರು. ಮೇಜರ್ ರಾಧಿಕಾ ಸೇನ್ ಅವರನ್ನು ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ನವದೆಹಲಿಯಲ್ಲಿ ಸನ್ಮಾನಿಸಿದರು' ಎಂದು ಸೇನೆಯು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದೆ.

ಪುಲ್ವಾಮಾದಲ್ಲಿ ಭದ್ರತಾ ಪಡೆಗಳು, ಉಗ್ರರ ಮಧ್ಯೆ ಗುಂಡಿನ ಚಕಮಕಿ

ಎನ್‌ಕೌಂಟರ್: ಇಬ್ಬರು ಉಗ್ರರ ಹತ್ಯೆ

ಪ್ರಜಾವಾಣಿ ವಾರ್ತೆ/ ಪಿಟಿಐ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಸೋಮವಾರ ಭದ್ರತಾ ಪಡೆಗಳು ಹಾಗೂ ಉಗ್ರರ ನಡುವಿನ ಗುಂಡಿನ ಚಕಮಕಿಯಲ್ಲಿ ಲಷ್ಕರ್-ಎ-ತಯಬಾದ ಇಬ್ಬರು ಉಗ್ರರನ್ನು ಸದೆಬಡಿಯಲಾಗಿದೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.

ದಕ್ಷಿಣ ಕಾಶ್ಮೀರದ ನಿಹಾಮ ಪ್ರದೇಶದಲ್ಲಿ ಉಗ್ರರು ಅಡಗಿರಬಹುದು ಎಂಬ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಶೋಧ ಕಾರ್ಯಾಚರಣೆ ನಡೆಸಿದವು. ಭದ್ರತಾ ಸಿಬ್ಬಂದಿಯನ್ನು ಗುರಿಯಾಗಿಸಿಕೊಂಡು ಅಡಗಿ ಕೂತಿದ್ದ ಉಗ್ರರು ಗುಂಡಿನ ದಾಳಿ ನಡೆಸಿದ್ದು, ಪ್ರತಿದಾಳಿ ನಡೆಸಿದ ಭದ್ರತಾ ಸಿಬ್ಬಂದಿ ಇಬ್ಬರು ಉಗ್ರರನ್ನು ಹತ್ಯೆ ಮಾಡಿದ್ದಾರೆ. ಘಟನೆಯಲ್ಲಿ ಎರಡು ಮನೆಗಳಿಗೆ ಬೆಂಕಿ ಹೊತ್ತಿಕೊಂಡಿದೆ ಎಂದು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಹತ್ಯೆಯಾದವರನ್ನು ರಿಯಾಜ್ ದಾರ್ ಮತ್ತು ರಾಯೀಸ್ ಎಂದು ಗುರುತಿಸಲಾಗಿದೆ. ದಾರ್ 2015ರಲ್ಲಿ ಹಾಗೂ ರಾಯೀಸ್ 2021ರಲ್ಲಿ ಉಗ್ರ ಸಂಘಟನೆ ಸೇರಿದ್ದ ಎಂದು ತಿಳಿದುಬಂದಿದೆ.

ಹೆಡ್ ಕಾನ್‌ಸ್ಟೆಬಲ್ ಕೊಲೆ-ನಕ್ಸಲರ ಕೈವಾಡದ ಶಂಕೆ: ಛತ್ತೀಸಗಢದ ಸುಕ್ಮಾ ಜಿಲ್ಲೆಯಲ್ಲಿ ನಕ್ಸಲರ ಚಟುವಟಿಕೆ ಇರುವ ಗ್ರಾಮದಲ್ಲಿ ಹೆಡ್ ಕಾನ್‌ಸ್ಟೆಬಲ್ ಒಬ್ಬರ ಹತ್ಯೆಯಾಗಿದ್ದು, ಇದು ನಕ್ಸಲರದ್ದೇ ಕೃತ್ಯ ಎಂದು ಶಂಕಿಸಲಾಗಿದೆ.

ನಕ್ಸಲರಿಂದ ವ್ಯಕ್ತಿಯ ಭೀಕರ ಹತ್ಯೆ: ಛತ್ತೀಸಗಢದ ನಾರಾಯಣಪುರ ಜಿಲ್ಲೆಯಲ್ಲಿ 15–20 ನಕ್ಸಲರ ಗುಂಪೊಂದು ಮನೆಯಲ್ಲಿ ಊಟ ಮಾಡುತ್ತಿದ್ದ 45 ವರ್ಷದ ವ್ಯಕ್ತಿಯೊಬ್ಬರನ್ನು ಹೊರಗೆಳೆದು, ಹತ್ಯೆ ಮಾಡಿ ಪರಾರಿಯಾಗಿದೆ. ಭಾನುವಾರ ರಾತ್ರಿ ಈ ಘಟನೆ ನಡೆದಿದೆ. ನಕ್ಸಲರ ಚಲನವಲನಗಳ ಕುರಿತು ಪೊಲೀಸರಿಗೆ ಮಾಹಿತಿ ನೀಡುತ್ತಿದ್ದ ಎಂಬ ಅನುಮಾನದಿಂದಾಗಿ ಈ ಕೃತ್ಯ ಎಸಗಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಚ್ಚಾ ಬಾಂಬ್ ಸ್ಫೋಟ: ವ್ಯಕ್ತಿ ಸಾವು

ಹೈದರಾಬಾದ್ (ಪಿಟಿಐ): ತೆಲಂಗಾಣದ ಮುಲುಗು ಜಿಲ್ಲೆಯ ಅರಣ್ಯ ಪ್ರದೇಶದಲ್ಲಿ ಸಿಪಿಐ (ಮಾವೋವಾದಿ) ಸದಸ್ಯರೊಬ್ಬರು ಅಡಗಿಸಿಟ್ಟ ಕಚ್ಚಾ ಬಾಂಬ್ ಸ್ಫೋಟಗೊಂಡು 55 ವರ್ಷದ ವ್ಯಕ್ತಿಯೊಬ್ಬರು ಮೃತಪಟ್ಟಿದ್ದಾರೆ.

ಕೊಂಗಲ್ ಗ್ರಾಮದ ಬಳಿಯಿರುವ ಕಾಡಿನಲ್ಲಿ ಉರುವಲು ಸೌದೆ ತರಲು ಹೋಗಿದ್ದ ಸಂತ್ರಸ್ತ ವ್ಯಕ್ತಿಯು, ಮಗನ ಜೊತೆಗೆ ಹೋಗಿದ್ದರು. ಈ ವೇಳೆ ಗೊತ್ತಿಲ್ಲದೆ ಕಚ್ಚಾ ಬಾಂಬ್ ತುಳಿದಾಗ, ಸ್ಫೋಟಗೊಂಡಿದೆ.

ತಮ್ಮ ಇರುವಿಕೆಯನ್ನು ತೋರಿಸುವ ಸಲುವಾಗಿ ಪೀಪಲ್ ಕಮಿಟಿ (ಮಾವೋವಾದಿ) ಈ ಪ್ರದೇಶಗಳಲ್ಲಿ ಕಚ್ಚಾ ಬಾಂಬ್ ಇಡುತ್ತಿದೆ. ಮೇ 30ರಂದು ಮತ್ತೊಂದು ಗ್ರಾಮದಲ್ಲಿ ನಡೆದಿದ್ದ ಇಂಥದ್ದೇ ಘಟನೆಯಲ್ಲಿ ಶ್ವಾನವೊಂದು ಬಲಿಯಾಗಿತ್ತು ಎಂದು ಪೊಲೀಸರು ತಿಳಿಸಿದ್ದಾರೆ.

ಛತ್ತೀಸಗಢ: 9 ನಕ್ಸಲರ ಬಂಧನ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಸೋಮವಾರ ಕಾರ್ಯಾಚರಣೆ ನಡೆಸಿದ ಪೊಲೀಸರು ಒಂಬತ್ತು ನಕ್ಸಲರನ್ನು ಬಂಧಿಸಿದ್ದಾರೆ. ಅಲ್ಲದೆ, ಮೂವರು ಅಪ್ರಾಪ್ತರನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತರ ಬಳಿಯಿದ್ದ ಕರಪತ್ರಗಳು ಮತ್ತು ಬ್ಯಾನರ್‌ಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ

ಈ ಪೈಕಿ ಬೆನ್ಯರಾಮ ಎಂಬಲ್ಲಿ ಬಂಧಿಸಲಾದ ನಾಲ್ವರು ನಕ್ಸಲರು, ಇದೇ ವರ್ಷದಲ್ಲಿ ಛತ್ತೀಸಗಢ ಸಶಸ್ತ್ರ ಪಡೆಯ ಕಂಪನಿಯ ಕಮಾಂಡರ್ ಹತ್ಯೆಯಲ್ಲಿ ಭಾಗಿಯಾಗಿದ್ದರು ಎಂದು ಆರೋಪಿಸಲಾಗಿದೆ. ಜೊತೆಗೆ ಮೊಬೈಲ್ ಫೋನ್ ಗೋಪುರಕ್ಕೆ ಬೆಂಕಿ ಇಟ್ಟ ಕೃತ್ಯದಲ್ಲೂ ಭಾಗಿಯಾಗಿದ್ದರು. ಈ ನಾಲ್ವರ ಪೈಕಿ ಬೋಟಿ ಮಾಡ್ವಿ (36) ಬೆನ್ಯರಾಮ 'ಜನಾತನ ಸರ್ಕಾರ' ಗ್ರೂಪ್‌ನ ಮುಖ್ಯಸ್ಥನಾಗಿದ್ದು, ಈತನ ತಲೆಗೆ 1 ಲಕ್ಷ ಇನಾಮು ಘೋಷಿಸಲಾಗಿತ್ತು ಎಂದು ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಸುಕ್ಮಾದಲ್ಲಿ ಐವರು ನಕ್ಸಲರು ಶರಣಾಗತರಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

'ನಂಬಿಕೆಗಳ ಮರುವಿಮರ್ಶೆ ಆಗಲಿ'

ನರೇಂದ್ರ ಮೋದಿ

ನವದೆಹಲಿ (ಪಿಟಿಐ): 'ವೃತ್ತಿಪರ ನಿರಾಶಾವಾದಿಗಳ ಒತ್ತಡದಿಂದ ಈ ಸಮಾಜವನ್ನು ಮುಕ್ತಗೊಳಿಸಬೇಕು' ಎಂದು ಕರೆ ನೀಡಿರುವ ಪ್ರಧಾನಿ ನರೇಂದ್ರ ಮೋದಿ ಅವರು, 'ಪುರಾತನ ಚಿಂತನೆ ಮತ್ತು ನಂಬಿಕೆಗಳ ಮರುವಿಮರ್ಶೆ ಅಗತ್ಯ' ಎಂದು ಹೇಳಿದ್ದಾರೆ.

ದೇಶದ ಸ್ವಾತಂತ್ರ್ಯೋತ್ಸವದ ಶತಮಾನೋತ್ಸವ ಆಚರಣೆಗೆ ಉಳಿದಿರುವ 25 ವರ್ಷಗಳಲ್ಲಿ 'ವಿಕಸಿತ ಭಾರತ' ನಿರ್ಮಾಣಕ್ಕೆ ಅಡಿಪಾಯವನ್ನು ಹಾಕಲೇಬೇಕಾಗಿದೆ ಎಂದು ಹೇಳಿದ್ದಾರೆ.

ಕನ್ಯಾಕುಮಾರಿಯಿಂದ ನವದೆಹಲಿಗೆ ವಿಮಾನದಲ್ಲಿ ತೆರಳುವಾಗ ಜೂನ್ 1ರಂದು ಬರೆದಿರುವ ಲೇಖನದಲ್ಲಿ ಅವರು ಈ ಮಾತು ಹೇಳಿದ್ದಾರೆ. ಲೋಕಸಭೆ ಚುನಾವಣೆಯ ಬಹಿರಂಗ ಪ್ರಚಾರ ಮುಗಿದ ಬಳಿಕ ಮೇ 30ರಂದು, ತಪಸ್ಸು ಕೈಗೊಳ್ಳಲು ಅವರು ಕನ್ಯಾಕುಮಾರಿಗೆ ತೆರಳಿದ್ದರು.

21ನೇ ಶತಮಾನದ ಜಗತ್ತು, ಹಲವು ಭರವಸೆಗಳೊಂದಿಗೆ ಭಾರತದತ್ತ ದೃಷ್ಟಿ ನೆಟ್ಟಿದೆ. ಜಾಗತಿಕ ಆಯಾಮ ತಲುಪಲು ನಾವು ಅನೇಕ ಬದಲಾವಣೆ ತರಬೇಕಾಗಿದೆ. ಅದಕ್ಕಾಗಿ ನಮ್ಮ ಸಾಂಪ್ರದಾಯಿಕ ಶೈಲಿಯ ಚಿಂತನೆಯನ್ನು ಬದಲಿಸಿಕೊಳ್ಳಬೇಕಾಗಿದೆ ಎಂದು ಹೇಳಿದರು.

ಮೋದಿ ಅವರ ಈ ಲೇಖನ ಹಲವು ದೈನಿಕಗಳಲ್ಲಿ ಲೋಕಸಭೆ ಚುನಾವಣೆಯ ಮತ ಎಣಿಕೆಯ ಮುನ್ನಾದಿನವಾದ ಸೋಮವಾರ ಪ್ರಕಟವಾಗಿದೆ. ಬಿಜೆಪಿ ನೇತೃತ್ವದ ಎನ್‌ಡಿಎಗೆ ಬಹುಮತ ಸಿಗಲಿದ್ದು, ಮೋದಿ 3ನೇ ಅವಧಿಗೆ ಪ್ರಧಾನಿ ಆಗಲಿದ್ದಾರೆ ಎಂದು ಮತಗಟ್ಟೆ ಸಮೀಕ್ಷೆಗಳು ಅಂದಾಜು ಮಾಡಿದ್ದವು. ಈ ಹಿನ್ನೆಲೆಯಲ್ಲಿ ಈ ಲೇಖನವು ಗಮನ ಸೆಳೆದಿದೆ.

ಅಸ್ಸಾಂನ 13 ಜಿಲ್ಲೆಗಳಲ್ಲಿ 5.35 ಲಕ್ಷ ಮಂದಿ ಸಂತ್ರಸ್ತರು: ಎಎಸ್‌ಡಿಎಂಎ

ಮುಂದುವರಿದ ಪ್ರವಾಹ, 3 ಮಂದಿ ಸಾವು

ಗುವಾಹಟಿ (ಪಿಟಿಐ): ಈಶಾನ್ಯ ರಾಜ್ಯ ಅಸ್ಸಾಂನಲ್ಲಿ ಪ್ರವಾಹ ಪರಿಸ್ಥಿತಿ ಮುಂದುವರಿದಿದೆ. ಪ್ರವಾಹದಿಂದಾಗಿ ಮೂವರು ಮೃತಪಟ್ಟಿದ್ದು, ಈ ಮೂಲಕ ಒಟ್ಟು ಮೃತರ ಸಂಖ್ಯೆ 18ಕ್ಕೆ ಏರಿಕೆಯಾಗಿದೆ. 13 ಜಿಲ್ಲೆಗಳಲ್ಲಿ 5.35 ಲಕ್ಷಕ್ಕೂ ಹೆಚ್ಚು ಮಂದಿ ಸಂತ್ರಸ್ತರಾಗಿದ್ದಾರೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಧಾರಾಕಾರ ಮಳೆಯಿಂದಾಗಿ ಕೊಪಿಲಿ, ಬರಾಕ್ ಮತ್ತು ಕುಶಿಯಾರ ನದಿಗಳು ಅಪಾಯದ ಮಟ್ಟವನ್ನು ಮೀರಿ ಹರಿಯುತ್ತಿವೆ. ರಾಜ್ಯದಾದ್ಯಂತ ಪ್ರವಾಹದಿಂದ ನಿರಾಶ್ರಿತರಾಗಿರುವ 39 ಸಾವಿರಕ್ಕೂ ಅಧಿಕ ಜನರು ವಿವಿಧ ಜಿಲ್ಲೆಗಳಲ್ಲಿರುವ 193 ಪರಿಹಾರ ಕೇಂದ್ರಗಳಲ್ಲಿ ಆಶ್ರಯ ಪಡೆಯುತ್ತಿದ್ದಾರೆ ಎಂದು ಹೇಳಲಾಗಿದೆ.

ನಾಗಾಂವ್ ಅತಿ ಹೆಚ್ಚು ಹಾನಿಗೊಳಗಾದ ಜಿಲ್ಲೆಯಾಗಿದ್ದು, 3 ಲಕ್ಷಕ್ಕೂ ಅಧಿಕ ಜನರು ಪ್ರವಾಹದಿಂದ ಸಂತ್ರಸ್ತರಾಗಿದ್ದಾರೆ. ಉಳಿದಂತೆ ಕಚಾರ್(1,09,798) ಹಾಗೂ ಹೊಜೈ ಜಿಲ್ಲೆಯಲ್ಲಿ 86,382 ಜನರು ಸಂತ್ರಸ್ತರಾಗಿದ್ದಾರೆ ಎಂದು ಅಸ್ಸಾಂ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಎಎಸ್‌ಡಿಎಂಎ) ಪ್ರಕಟಣೆಯಲ್ಲಿ ತಿಳಿಸಿದೆ. ವಿವಿಧ ಜಿಲ್ಲೆಗಳಲ್ಲಿ ರಸ್ತೆ, ಸೇತುವೆ ಸೇರಿದಂತೆ ಮೂಲಸೌಕರ್ಯಗಳು ಹಾಳಾಗಿರುವ ಬಗ್ಗೆ ವರದಿಯಾಗುತ್ತಿವೆ. ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್, ಸ್ಥಳೀಯ ಆಡಳಿತ ಸೇರಿದಂತೆ ವಿವಿಧ ತಂಡಗಳು ರಕ್ಷಣಾ ಕಾರ್ಯದಲ್ಲಿ ತೊಡಗಿವೆ. ಜೊತೆಗೆ, ಪ್ರವಾಹ ಪೀಡಿತ ಪ್ರದೇಶಗಳಲ್ಲಿ ವೈದ್ಯಕೀಯ ತಂಡಗಳನ್ನು ನಿಯೋಜಿಸಲಾಗಿದೆ ಎಂದಿದೆ.

ಸಿಡಿಲಿಗೆ ನಾಲ್ವರು ಬಲಿ: ಒಡಿಶಾದ ಗಂಜಾಂ ಜಿಲ್ಲೆಯ ವಿವಿಧ ಸ್ಥಳಗಳಲ್ಲಿ ಭಾನುವಾರ ಸಿಡಿಲು ಬಡಿದು 4 ಮಂದಿ ಮೃತಪಟ್ಟಿರುವುದಾಗಿ ಪೊಲೀಸರು ತಿಳಿಸಿದ್ದಾರೆ. ಮೃತರನ್ನು ಸಂನ್ಯಾಸಿ ಸಾಹು, ಲಂಬೋದರ್ ಪಾಣಿಗ್ರಹಿ, ಸಂಜಯ್ ಗೌಡ ಹಾಗೂ ದುಗುನ್ ಪ್ರಧಾನ್ ಎಂದು ಗುರುತಿಸಲಾಗಿದೆ.

ಅಸ್ಸಾಂನ ಗುವಾಹಟಿಯಲ್ಲಿ ಭಾರಿ ಮಳೆಯಿಂದ ಜಲಾವೃತಗೊಂಡಿರುವ ರಸ್ತೆಯಲ್ಲಿ ಲಗೇಜ್ ಬ್ಯಾಗ್ ಹೊತ್ತ ವಿದ್ಯಾರ್ಥಿಗಳು ನಡೆದಾಡಲು ಹರಸಾಹಸಪಟ್ಟರು —ಪಿಟಿಐ ಚಿತ್ರ

ಶಾಖಾಘಾತ: 20 ಮಂದಿ ಸಾವು

ಭುವನೇಶ್ವರ (ಪಿಟಿಐ): ಪೂರ್ವ ಮತ್ತು ಉತ್ತರ ಭಾರತದಾದ್ಯಂತ ತೀವ್ರ ಬಿಸಿಗಾಳಿಯಿಂದಾಗಿ ಜನರು ತತ್ತರಿಸುತ್ತಿದ್ದಾರೆ. ಈ ನಡುವೆಯೇ, ಕಳೆದ ಮೂರು ದಿನಗಳಲ್ಲಿ ಒಡಿಶಾದಲ್ಲಿ 20 ಮಂದಿ ಶಾಖಾಘಾತದಿಂದಲೇ ಮೃತಪಟ್ಟಿದ್ದಾರೆ ಎಂದು ಒಡಿಶಾ ಸರ್ಕಾರ ತಿಳಿಸಿದೆ.

ಕಳೆದ ಶುಕ್ರವಾರದಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಟ್ಟು 99 ಮಂದಿ ಶಂಕಿತ ಶಾಖಾಘಾತದಿಂದ ಮೃತಪಟ್ಟಿರುವುದಾಗಿ ವರದಿಯಾಗಿದೆ. ಮರಣೋತ್ತರ ಪರೀಕ್ಷೆ ಮತ್ತು ತನಿಖೆಯ ಬಳಿಕ ಶಾಖಾಘಾತದಿಂದಲೇ 20 ಮಂದಿ ಮೃತಪಟ್ಟಿರುವುದು ಖಚಿತವಾಗಿದೆ ಎಂದು ಅಧಿಕೃತ ಪ್ರಕಟಣೆಯಲ್ಲಿ ತಿಳಿಸಿದೆ.

ಬಿಹಾರ: ವಾಯುವಿಹಾರ ಮಾಡುತ್ತಿದ್ದಾಗ ಕೃತ್ಯ

ಜೆಡಿಯು ಮುಖಂಡನ ಹತ್ಯೆ

ನಳಂದ (ಪಿಟಿಐ): ಬಿಹಾರದ ನಳಂದ ಜಿಲ್ಲೆಯಲ್ಲಿ ಸೋಮವಾರ ನಸುಕಿನ 4.30ರ ಸುಮಾರಿಗೆ ಜೆಡಿಯು ಮುಖಂಡ ಅನಿಲ್ ಕುಮಾರ್ ಅವರನ್ನು ಹತ್ಯೆ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮುವಾ ಎಂಬ ಗ್ರಾಮದಲ್ಲಿ ಅನಿಲ್ ಕುಮಾರ್ ಅವರು ವಾಯುವಿಹಾರಕ್ಕೆ ಹೋಗಿದ್ದರು. ಈ ವೇಳೆ ಶಸ್ತ್ರಸಜ್ಜಿತವಾಗಿ ಬಂದಿದ್ದ ಅಪರಿಚಿತ ದುಷ್ಕರ್ಮಿಗಳು ಮೊದಲು ಅವರ ಮೇಲೆ ಹಲ್ಲೆ ನಡೆಸಿ, ಆ ಬಳಿಕ ಚೂಪಾದ ಆಯುಧದಿಂದ ಚುಚ್ಚಿ ಕೊಲೆ ಮಾಡಿದ್ದಾರೆ. ಜೂನ್ 1ರಂದು ಬಿಹಾರದಲ್ಲಿ ನಡೆದ ಲೋಕಸಭಾ ಚುನಾವಣೆ ವೇಳೆ ಇವರು ಜೆಡಿಯು ಪಕ್ಷದ ಪೋಲಿಂಗ್ ಏಜೆಂಟ್ ಆಗಿದ್ದರು ಎಂದು ಪೊಲೀಸರು ತಿಳಿಸಿದರು.

ಮತದಾನದ ದಿನವೂ ಜೆಡಿಯು ಮತ್ತು ಪ್ರತಿಪಕ್ಷಗಳ ಬೆಂಬಲಿಗರ ಮಧ್ಯೆ ಗಲಾಟೆ ನಡೆದಿತ್ತು. ಆದರೆ, ಅನಿಲ್ ಅವರ ಕೊಲೆಗೆ ಕಾರಣವೇನು ಎಂಬುದನ್ನು ಪತ್ತೆ ಹಚ್ಚಬೇಕಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿದ ಜೆಡಿಯು ಹಿರಿಯ ಮುಖಂಡ ಶ್ರವಣ್ ಕುಮಾರ್, 'ಈ ಹತ್ಯೆಯು ಆಘಾತಕಾರಿ ಮತ್ತು ಖಂಡನಾರ್ಹ. ನಮ್ಮ ಪೋಲಿಂಗ್ ಏಜೆಂಟ್ ಅವರ ಹತ್ಯೆಯು ಪ್ರತಿಪಕ್ಷಗಳ ವಿಶೇಷವಾಗಿ ಆರ್‌ಜೆಡಿ ಮತ್ತು ಸಿಪಿಐ (ಎಂಎಲ್) ಲಿಬರೇಷನ್ ಸೋಲುವ ಭೀತಿಯಿಂದ ಹಿಂಸಾಚಾರದಲ್ಲಿ ತೊಡಗಿಕೊಂಡಿರುವುದನ್ನು ಸಾಬೀತುಪಡಿಸುತ್ತದೆ. ಈ ಕೃತ್ಯ ಎಸಗಿದವರನ್ನು ಕೂಡಲೇ ಬಂಧಿಸಬೇಕು. ಜೊತೆಗೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿದರು.

ಲೋಕಸಭಾ ಚುನಾವಣೆಗೆ ಸಂಬಂಧಿಸಿ ಬಿಹಾರದಲ್ಲಿ ನಡೆದ ಮೂರನೇ ಹಿಂಸಾಚಾರ ಘಟನೆ ಇದಾಗಿದೆ. ಮೇ 20ರಂದು ಮತದಾನ ನಡೆಯುತ್ತಿದ್ದ ಸರಣ್ ಲೋಕಸಭಾ ಕ್ಷೇತ್ರದ ಆರ್‌ಜೆಡಿ ಅಭ್ಯರ್ಥಿಯಾದ ಲಾಲು ಪ್ರಸಾದ್ ಅವರ ಪುತ್ರಿ ರೋಹಿಣಿ ಆಚಾರ್ಯ ಮತ್ತು ಬಿಜೆಪಿ ಕಾರ್ಯಕರ್ತರ ಮಧ್ಯೆ ವಾಗ್ವಾದ ನಡೆದಿರುವುದು ಮೊದಲ ಘಟನೆಯಾಗಿತ್ತು. ಮಾರನೇ ದಿನ ಗಲಾಟೆ ತೀವ್ರಗೊಂಡು, ಗುಂಡಿನ ದಾಳಿಯೂ ನಡೆದಿತ್ತು. ಈ ಘಟನೆಯಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟು, ಮೂವರು ಗಾಯಗೊಂಡಿದ್ದರು.

ಜೂನ್ 1ರಂದು ಕೇಂದ್ರದ ಮಾಜಿ ಸಚಿವ ಹಾಗೂ ಪಾಟಲಿಪುತ್ರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ರಾಮ ಕೃಪಾಲ್ ಯಾದವ್ ಅವರ ಮೇಲೆ ಗ್ರಾಮೀಣ ಪಟ್ನಾದಲ್ಲಿ ದಾಳಿ ನಡೆದಿತ್ತು. ಕೃಪಾಲ್ ಬೆಂಬಲಿಗರು ಗಾಯಗೊಂಡಿದ್ದರು.

ಸರ್ಕಾರ ರಚನೆಗೆ ತಮಾಂಗ್ ಹಕ್ಕು ಮಂಡನೆ

ಪ್ರೇಮ್ ಸಿಂಗ್ ತಮಾಂಗ್

ಗ್ಯಾಂಗ್ಟಕ್ (ಪಿಟಿಐ): ಸಿಕ್ಕಿಂನಲ್ಲಿ ಬಹುಮತ ಗಳಿಸಿರುವ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ (ಎಸ್‌ಕೆಎಂ) ಶಾಸಕಾಂಗ ಪಕ್ಷದ ನಾಯಕನಾಗಿ ಪುನರಾಯ್ಕೆ ಆಗಿರುವ, ಮುಖ್ಯಮಂತ್ರಿ ಪ್ರೇಮ್ ಸಿಂಗ್ ತಮಾಂಗ್ ಸೋಮವಾರ ಸರ್ಕಾರ ರಚಿಸಲು ಹಕ್ಕು ಮಂಡಿಸಿದರು.

ರಾಜ್ಯಪಾಲ ಲಕ್ಷ್ಮಣ ಪ್ರಸಾದ್ ಆಚಾರ್ಯ ಅವರನ್ನು ಭೇಟಿಯಾದ ಅವರು, ತಮ್ಮನ್ನು ಸಿಕೆಎಂ ನಾಯಕನಾಗಿ ಆಯ್ಕೆ ಮಾಡಿದ ನಿರ್ಣಯದ ಪ್ರತಿಯನ್ನು ನೀಡಿ, ಹಕ್ಕು ಪ್ರತಿಪಾದಿಸಿದರು.

ತಮಾಂಗ್ ಅವರ ಜೊತೆಗೆ ಪಕ್ಷದ ಎಲ್ಲ ನೂತನ ಶಾಸಕರು ರಾಜಭವನಕ್ಕೆ ತೆರಳಿದ್ದರು. ಪ್ರಮಾಣವಚನ ನಡೆಯುವ ದಿನ ನಿಗದಿಯಾಗಿಲ್ಲ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ನೂತನ ಸರ್ಕಾರ ರಚನೆಗೆ ಪೂರಕವಾಗಿ, ನಿರ್ಗಮಿತ ಮುಖ್ಯಮಂತ್ರಿಯಾಗಿ ತಮಾಂಗ್ ಅವರು ಭಾನುವಾರ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಹೊಸ ಸರ್ಕಾರ ರಚನೆ ಆಗುವವರೆಗೂ ಅವರು ಉಸ್ತುವಾರಿ ಮುಖ್ಯಮಂತ್ರಿಯಾಗಿ ಇರಲಿದ್ದಾರೆ.

ವಿಧಾನಸಭೆ ಚುನಾವಣೆಯ ಮತ ಎಣಿಕೆ ಭಾನುವಾರ ನಡೆದಿತ್ತು. 32 ಸದಸ್ಯ ಬಲದ ವಿಧಾನಸಭೆಯಲ್ಲಿ ಎಸ್‌ಕೆಎಂ 31, ವಿರೋಧ ಪಕ್ಷ ಎಸ್‌ಡಿಎಫ್ 1 ಸ್ಥಾನ ಗೆದ್ದಿದ್ದವು

ಮೂವರು ನಾಯಕರ ಉಚ್ಚಾಟನೆ: ಈ ಮಧ್ಯೆ, ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ (ಎಸ್‌ಕೆಎಂ) ಪಕ್ಷದಿಂದ ಮಾಜಿ ಸಚಿವ ಕರ್ಮನ್ ಲೊಡೆನ್ ಭುಟಿಯಾ ಸೇರಿದಂತೆ ಮೂವರು ನಾಯಕರನ್ನು ಸೋಮವಾರ ಉಚ್ಚಾಟಿಸಲಾಗಿದೆ.

ಪಕ್ಷದ ಮುಖ್ಯಸ್ಥ ಪ್ರೇಮ್ ಸಿಂಗ್ ತಮಾಂಗ್ ಸೂಚನೆಯಂತೆ ಪಕ್ಷ ವಿರೋಧಿ ಚಟುವಟಿಕೆಗಾಗಿ ಭುಟಿಯಾ ಹಾಗೂ ಪಕ್ಷದ ಉಪಾಧ್ಯಕ್ಷ ದುರ್ಗಾ ಪ್ರಸಾದ್ ಪ್ರಧಾನ್, ಪ್ರಧಾನ ಕಾರ್ಯದರ್ಶಿ ಅವಿನಾಶ್ ಯಾಖಾ ಅವರನ್ನು ಉಚ್ಚಾಟಿಸಲಾಯಿತು ಎಂದು ಪಕ್ಷದ ಮೂಲಗಳು ತಿಳಿಸಿವೆ.

'₹1,100 ಕೋಟಿ ಅಕ್ರಮ ವರ್ಗಾವಣೆ'

ಕೆ.ಕವಿತಾ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಹಗರಣದ ಪ್ರಕರಣದಲ್ಲಿ ₹1,100 ಕೋಟಿ ಹಣ ಅಕ್ರಮ ವರ್ಗಾವಣೆ ನಡೆದಿದೆ ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ತಿಳಿಸಿದೆ.

ಈ ಸಂಬಂಧ ಬಿಆರ್‌ಎಸ್ ನಾಯಕಿ ಕೆ. ಕವಿತಾ ಅವರ ವಿರುದ್ಧ ಸೋಮವಾರ ವಿಶೇಷ ನ್ಯಾಯಾಲಯಕ್ಕೆ ಇ.ಡಿ ಪೂರಕ ದೋಷಾರೋಪಪಟ್ಟಿ ಸಲ್ಲಿಸಿದೆ. ಇದರಲ್ಲಿ ಇಷ್ಟು ದೊಡ್ಡ ಪ್ರಮಾಣದ ಹಣ ಅಕ್ರಮ ವರ್ಗಾವಣೆ ನಡೆದಿದ್ದು, ಕೆ. ಕವಿತಾ ₹292.8 ಕೋಟಿ ಮೌಲ್ಯದ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಭಾಗಿಯಾಗಿದ್ದಾರೆ. ಈ ಪೈಕಿ ಕವಿತಾ ಅವರು ಎಎಪಿ ಮುಖಂಡರಿಗೆ ₹100 ಕಿಕ್‌ಬ್ಯಾಕ್ ನೀಡಿದ್ದರು ಎಂದು ಇ.ಡಿ ಉಲ್ಲೇಖಿಸಿದೆ.

ಡಿಜಿಟಲ್ ಸಾಕ್ಷ್ಯ ನಾಶ: ಕವಿತಾ ಅವರು ತಮ್ಮ ಮೊಬೈಲ್‌ನಲ್ಲಿದ್ದ ಸಾಕ್ಷ್ಯ ಮತ್ತು ಮಾಹಿತಿಗಳನ್ನು ಅಳಿಸಿಹಾಕಿದ್ದಾರೆ. ಅವರು ಪರಿಶೀಲನೆಗಾಗಿ 9 ಮೊಬೈಲ್‌ಗಳನ್ನು ನೀಡಿದ್ದರು. ಆದರೆ, ಅವೆಲ್ಲವೂ ಫಾರ್ಮ್ಯಾಟ್ ಆಗಿದ್ದು, ಯಾವುದೇ ದತ್ತಾಂಶ ಇರಲಿಲ್ಲ. ಈ ಕುರಿತು ಅವರು ಯಾವುದೇ ವಿವರಣೆ ನೀಡಿಲ್ಲ. ಜೊತೆಗೆ ಸಾಕ್ಷ್ಯಗಳ ಮೇಲೆ ಪ್ರಭಾವ ಬೀರುವ ಯತ್ನ ಮಾಡಿದ್ದಾರೆ ಎಂದು ಇ.ಡಿ ತಿಳಿಸಿದೆ.

ಈ ಕುರಿತು ಇ.ಡಿ ವಾದ ಆಲಿಸಿದ ವಿಶೇಷ ನ್ಯಾಯಾಧೀಶರಾದ ಕಾವೇರಿ ಬಾವೇಜಾ ಅವರು, ಕವಿತಾ ಅವರ ನ್ಯಾಯಾಂಗ ಬಂಧನವನ್ನು ಜುಲೈ 3ರವರೆಗೆ ವಿಸ್ತರಿಸಿದರು. ಈ ಪ್ರಕರಣದ ಸಹ ಆರೋಪಿಗಳಾದ ಪ್ರಿನ್ಸ್, ದಾಮೋದರ್ ಮತ್ತು ಅರವಿಂದ ಸಿಂಗ್ ಅವರಿಗೆ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ. ಈ ಮೂವರು ಆರೋಪಿಗಳ ವಿರುದ್ಧ ಜಾರಿ ನಿರ್ದೇಶನಾಲಯ ಚಾರ್ಜ್‌ಶೀಟ್ ಹಾಕಲಾಗಿದೆ. ಆದಾಗ್ಯೂ, ಅವರ ಬಂಧನ ಆಗಿರಲಿಲ್ಲ.

ನ್ಯಾಯಾಂಗ ಬಂಧನ ವಿಸ್ತರಣೆ: ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದ ಆರೋಪಿ ಬಿಆರ್‌ಎಸ್ ನಾಯಕಿ ಕೆ.ಕವಿತಾ ಅವರ ನ್ಯಾಯಾಂಗ ಬಂಧನವನ್ನು ದೆಹಲಿ ನ್ಯಾಯಾಲಯವು ಜುಲೈ 3ರವರೆಗೆ ವಿಸ್ತರಿಸಿದೆ.

ಕವಿತಾ ಅವರ ವಿರುದ್ಧದ ಪ್ರೊಡಕ್ಷನ್ ವಾರಂಟ್ ಆದೇಶದನ್ವಯ ಅವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ನಂತರ ವಿಶೇಷ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ನ್ಯಾಯಾಂಗ ಬಂಧನವನ್ನು ಸೋಮವಾರ ವಿಸ್ತರಿಸಿದರು.

ಮೇ 29ರಂದು ಪ್ರಕರಣದಲ್ಲಿ ಬಿಆರ್‌ಎಸ್ ನಾಯಕಿಯ ವಿರುದ್ಧದ ಚಾರ್ಜ್ ಶೀಟ್‌ನ ವಿಚಾರಣೆಯ ನಂತರ ನ್ಯಾಯಾಲಯವು ವಾರಂಟ್ ಹೊರಡಿಸಿತ್ತು.

₹115 ಕೋಟಿ ಆಸ್ತಿ ಜಪ್ತಿ

ದೆಹಲಿ ಅಬಕಾರಿ ಹಗರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಇಬ್ಬರು ಮಾಫಿ ಸಾಕ್ಷಿಗಳ ₹115 ಕೋಟಿಗೂ ಹೆಚ್ಚಿನ ಮೊತ್ತದ ಆಸ್ತಿಯನ್ನು ಸೋಮವಾರ ಜಪ್ತಿ ಮಾಡಿದೆ.

ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಲೋಕಸಭಾ ಚುನಾವಣೆಯ ಟಿಡಿಪಿ ಅಭ್ಯರ್ಥಿಯಾದ ಮಾಗುಂಟ ಶ್ರೀನಿವಾಸುಲು ರೆಡ್ಡಿಯ ಮಗ, ಉದ್ಯಮಿ ರಾಘವ್ ಮಾಗುಂಟ ಮತ್ತು ಅರಬಿಂದೊ ಫಾರ್ಮಾದ ಪ್ರವರ್ತಕ ಶರತ್‌ಚಂದ್ರ ರೆಡ್ಡಿ ಅವರ ಆಸ್ತಿಯನ್ನು ಜಪ್ತಿ ಮಾಡಲಾಗಿದೆ.

ಬಿಆರ್‌ಎಸ್ ನಾಯಕ ಕೆ.ಚಂದ್ರಶೇಖರ ರಾವ್ ಅವರ ಪುತ್ರಿ ಕೆ.ಕವಿತಾ ಮತ್ತು ಇತರ ನಾಲ್ವರ ವಿರುದ್ಧ ಮೇ 10ರಂದು ಜಾರಿ ನಿರ್ದೇಶನಾಲಯವು ಸಲ್ಲಿಸಿರುವ ಆರೋಪ ಪಟ್ಟಿಯಲ್ಲಿ ಈ ಅಂಶ ಉಲ್ಲೇಖಿಸಲಾಗಿದೆ.

'ಕೇಜ್ರಿವಾಲ್‌ಗೆ ಕೂಲರ್ ಒದಗಿಸಿಲ್ಲ'

ಆತಿಶಿ

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರಿಗೆ ತಿಹಾರ್ ಜೈಲಿನಲ್ಲಿ ಕೂಲರ್ ಒದಗಿಸಿಲ್ಲ ಮತ್ತು ಕುತಂತ್ರದ ಭಾಗವಾಗಿ ಮೂರು ಬಾರಿ ಅವರ ತೂಕವನ್ನು ಅಳೆಯಲಾಗಿದೆ ಎಂದು ಎಎಪಿ ಸೋಮವಾರ ಆರೋಪಿಸಿದೆ.

ಮಧ್ಯಂತರ ಜಾಮೀನಿನ ಅವಧಿ ಮುಗಿಸಿ ಕೇಜ್ರಿವಾಲ್ ಮತ್ತೆ ಜೈಲಿಗೆ ಹಿಂದಿರುಗಿದ ಒಂದು ದಿನದ ನಂತರ ಎಎಪಿ ಹಲವು ಆರೋಪಗಳನ್ನು ಮಾಡಿದೆ.

ಈ ಬಗ್ಗೆ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ದೆಹಲಿಯ ಸಚಿವೆ ಆತಿಶಿ, 'ಭಾನುವಾರ ವೈದ್ಯಕೀಯ ಪರೀಕ್ಷೆಯ ವೇಳೆ ಕೇಜ್ರಿವಾಲ್ ಅವರ ತೂಕವನ್ನು ಮೂರು ಯಂತ್ರಗಳನ್ನು ಬಳಸಿ ಅಳೆಯಲಾಗಿದೆ. ಜೈಲಿನಲ್ಲಿರುವ ಕುಖ್ಯಾತ ಪಾತಕಿಗಳಿಗೆ ಕೂಲರ್‌ಗಳನ್ನು ಒದಗಿಸಲಾಗಿದೆ. ಆದರೆ, ದೆಹಲಿಯಲ್ಲಿ 48 ಡಿಗ್ರಿಯಿಂದ 50 ಡಿಗ್ರಿವರೆಗೆ ಉಷ್ಣಾಂಶವಿದ್ದರೂ ಕೇಜ್ರಿವಾಲ್ ಅವರಿಗೆ ಕೂಲರ್ ಒದಗಿಸಿಲ್ಲ. ಬಿಜೆಪಿ ಮತ್ತು ಎಲ್‌ಜಿ ಇಷ್ಟು ಕೀಳು ಮಟ್ಟಕ್ಕೆ ಇಳಿಯಬಾರದಿತ್ತು' ಎಂದು ಟೀಕಿಸಿದರು.

ಎಎಪಿಯ ಆರೋಪಗಳನ್ನು ತಿಹಾರ್ ಜೈಲಿನ ಅಧಿಕಾರಿಗಳು ನಿರಾಕರಿಸಿದ್ದಾರೆ. 'ಕೇಜ್ರಿವಾಲ್ ಅವರ ತೂಕ 63.5 ಕೆ.ಜಿ. ಭಾನುವಾರ ಜೈಲಿಗೆ ಹಿಂದಿರುಗಿದ ನಂತರ ಒಮ್ಮೆ ಮಾತ್ರ ಅವರ ತೂಕವನ್ನು ಅಳೆಯಲಾಗಿದೆ. ತೂಕದ ಯಂತ್ರದಲ್ಲಿ ಯಾವ ದೋಷವೂ ಇಲ್ಲ. ರಕ್ತದೊತ್ತಡ, ಸಕ್ಕರೆ ಅಂಶ ಸೇರಿದಂತೆ ಅವರ ಆರೋಗ್ಯ ಸ್ಥಿರವಾಗಿದೆ' ಎಂದು ಜೈಲಿನ ಹಿರಿಯ ಅಧಿಕಾರಿಯೊಬ್ಬರು ಪಿಟಿಐಗೆ ತಿಳಿಸಿದರು.

ನ್ಯಾಯಾಲಯದ ಆದೇಶದ ನಂತರವಷ್ಟೇ ಅವರಿಗೆ ಕೂಲರ್ ಒದಗಿಸಲಾಗುವುದು ಎಂದು ಅವರು ಹೇಳಿದರು.

ಪಾಕಿಸ್ತಾನಕ್ಕೆ ಮಾಹಿತಿ- ವಿಜ್ಞಾನಿಗೆ ಜೀವಾವಧಿ

ಮುಂಬೈ: ಸೇನೆಗೆ ಸಂಬಂಧಿಸಿದ ಮತ್ತು ಇತರ ಸೂಕ್ಷ್ಮ ಮಾಹಿತಿಗಳನ್ನು ಪಾಕಿಸ್ತಾನದ ಬೇಹುಗಾರಿಕೆ ಸಂಸ್ಥೆಯಾದ ಇಂಟರ್ ಸರ್ವೀಸ್ ಇಂಟೆಲಿಜೆನ್ಸ್‌ಗೆ (ಐಎಸ್‌ಐ) ರವಾನೆ ಮಾಡುತ್ತಿದ್ದ ಆರೋಪದ ಮೇಲೆ ಆರು ವರ್ಷಗಳ ಕೆಳಗೆ ಬಂಧನಕ್ಕೊಳಗಾಗಿದ್ದ ನಿಶಾಂತ್ ಅಗರ್ವಾಲ್‌ಗೆ ನಾಗ್ಪುರದ ನ್ಯಾಯಾಲಯವೊಂದು ಜೀವಾವಧಿ ಶಿಕ್ಷೆಯನ್ನು ವಿಧಿಸಿ ಸೋಮವಾರ ಆದೇಶಿಸಿದೆ.

ಬ್ರಹ್ಮೋಸ್ ಏರೊಸ್ಪೇಸ್ ಪ್ರೈವೆಟ್ ಲಿಮಿಟೆಡ್ ಎಂಬ ಸಂಸ್ಥೆಯಲ್ಲಿ ಕಿರಿಯ ವಿಜ್ಞಾನಿಯಾಗಿದ್ದ ನಿಶಾಂತ್ ಅಗರ್ವಾಲ್ ತಮ್ಮ ಸಂಸ್ಥೆಯ ಸೂಪರ್‌ಸಾನಿಕ್ ಬ್ರಹ್ಮೋಸ್ ಕ್ಷಿಪಣಿ ಕುರಿತ ತಾಂತ್ರಿಕ ಮಾಹಿತಿಯನ್ನು ಸೋರಿಕೆ ಮಾಡಿದ್ದ ಆರೋಪ ಹೊತ್ತಿದ್ದರು.

ಉತ್ತರ ಪ್ರದೇಶದ ಭಯೋತ್ಪಾದನೆ ನಿಗ್ರಹ ದಳ ಮತ್ತು ಮಹಾರಾಷ್ಟ್ರದ ಭಯೋತ್ಪಾದನೆ ನಿಗ್ರಹ ದಳದ ಪೊಲೀಸರ ತಂಡವು 2018ರ ಅಕ್ಟೋಬರ್‌ನಲ್ಲಿ ನಿಶಾಂತ್‌ನನ್ನು ಬಂಧಿಸಿತ್ತು.

ಕ್ರಿಮಿನಲ್ ಪ್ರಕಿಯಾ ಸಂಹಿತೆಯ ಸೆಕ್ಷನ್ 235 ಅಡಿ ನಿಶಾಂತ್ ಅವರ ಅಪರಾಧವನ್ನು ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ಎಂ.ವಿ. ದೇಶಪಾಂಡೆ ಅವರು ಸಾಬೀತುಪಡಿಸಿದರು. ಎರಡು ಪ್ರತ್ಯೇಕ ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಿದರು. ಒಂದು ಪ್ರಕರಣದಲ್ಲಿ ಜೀವಾವಧಿ ಶಿಕ್ಷೆ, ಮತ್ತೊಂದರಲ್ಲಿ 14 ವರ್ಷಗಳ ಕಠಿಣ ಶಿಕ್ಷೆ ಮತ್ತು 3,000 ದಂಡ ವಿಧಿಸಿದರು.

ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ (ಡಿಆರ್‌ಡಿಒ) ಕುರಿತ ಮಾಹಿತಿಗಳನ್ನು ಆತ ಐಎಸ್‌ಐಗೆ ರವಾನೆ ಮಾಡಿದ್ದ.

ನೀಟ್ ಮರು ಪರೀಕ್ಷೆ ಕೋರಿ ಅರ್ಜಿ

ನವದೆಹಲಿ (ಪಿಟಿಐ): ಇತ್ತೀಚೆಗೆ ನಡೆದ ರಾಷ್ಟ್ರೀಯ ಅರ್ಹತಾ ಮತ್ತು ಪ್ರವೇಶ ಪರೀಕ್ಷೆ (ನೀಟ್-ಯುಜಿ) ವೇಳೆ ಪ್ರಶ್ನೆಪತ್ರಿಕೆ ಸೋರಿಕೆಯಾಗಿದೆ ಎಂಬ ವರದಿಗಳ ಬೆನ್ನಲ್ಲೇ, 2024ನೇ ಸಾಲಿನ ನೀಟ್-ಯುಜಿ ಪರೀಕ್ಷೆಯನ್ನು ಹೊಸದಾಗಿ ನಡೆಸಬೇಕು ಎಂದು ಕೋರಿ ಹಲವು ಅಭ್ಯರ್ಥಿಗಳು ಸುಪ್ರೀಂ ಕೋರ್ಟ್ ಮೊರೆಹೋಗಿದ್ದಾರೆ.

ಈ ಕುರಿತು ಶಿವಾಂಗಿ ಮಿಶ್ರಾ ಮತ್ತು ಇತರರು ಜೂನ್ 1ರಂದು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಈ ಪ್ರಕರಣದಲ್ಲಿ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ (ಎನ್‌ಟಿಎ) ಅನ್ನು ಪ್ರತಿವಾದಿಯನ್ನಾಗಿಸಿದ್ದಾರೆ. ಅಲ್ಲದೆ, ಪ್ರಶ್ನೆಪತ್ರಿಕೆಯ ಸೋರಿಕೆ ಹಾಗೂ ಪರೀಕ್ಷೆಯ ಮಾನ್ಯತೆಯನ್ನೂ ಪ್ರಶ್ನಿಸಿದ್ದಾರೆ. ರಜಾಕಾಲದ ಪೀಠವು ಈ ವಾರ ಈ ಅರ್ಜಿ ವಿಚಾರಣೆ ಕೈಗೆತ್ತಿಕೊಳ್ಳುವ ನಿರೀಕ್ಷೆ ಇದೆ. 2024ನೇ ಸಾಲಿನ ನೀಟ್ ಪರೀಕ್ಷೆಯು ಕಳೆದ ತಿಂಗಳ 5ರಂದು ನಡೆದಿತ್ತು. ದೇಶದಲ್ಲಿರುವ ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ವೈದ್ಯಕೀಯ, ದಂತ ವೈದ್ಯಕೀಯ ಮತ್ತು ಆಯುಷ್ ಹಾಗೂ ಇತರೆ ಕೋರ್ಸ್‌ಗಳ ಪ್ರವೇಶಾತಿಗೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆಯು (ಎನ್‌ಟಿಎ) ಈ ಪರೀಕ್ಷೆಯನ್ನು ನಡೆಸಿತ್ತು. ಜೂನ್ 14ರಂದು ಇದರ ಫಲಿತಾಂಶ ಪ್ರಕಟವಾಗಬೇಕಿದೆ.

ಸಂದೇಶ್‌ಖಾಲಿಗೆ ಭೇಟಿ- ಅನುಮತಿ ಕೇಳಿದ ಎನ್‌ಸಿಡಬ್ಲ್ಯು

ನವದೆಹಲಿ (ಪಿಟಿಐ): ಮತದಾನ ಪೂರ್ವ ಹಿಂಸಾಚಾರ ನಡೆದಿದೆ ಎನ್ನಲಾದ ಪಶ್ಚಿಮ ಬಂಗಾಳದ ಸಂದೇಶ್‌ಖಾಲಿಗೆ ತನಿಖೆ ಉದ್ದೇಶಕ್ಕಾಗಿ ಭೇಟಿ ನೀಡಲು ಅವಕಾಶ ನೀಡಬೇಕೆಂದು ಕೋರಿ ಚುನಾವಣಾ ಆಯೋಗಕ್ಕೆ ರಾಷ್ಟ್ರೀಯ ಮಹಿಳಾ ಆಯೋಗದ (ಎನ್‌ಸಿಡಬ್ಲ್ಯು) ಮುಖ್ಯಸ್ಥೆ ರೇಖಾ ಶರ್ಮ ಅವರು ಪತ್ರ ಬರೆದಿದ್ದಾರೆ.

ಸಂದೇಶ್‌ಖಾಲಿ ಮತ್ತಿತರ ಪ್ರದೇಶಗಳಲ್ಲಿ ಮಹಿಳೆಯರ ಮೇಲೆ ಪೊಲೀಸರು ದೌರ್ಜನ್ಯ ಎಸಗಿದ್ದಾರೆ ಎಂಬ ಕುರಿತು ವರದಿಯಾಗಿದೆ. ಮಹಿಳೆಯರ ಮೇಲಿನ ದೌರ್ಜನ್ಯ, ಮಹಿಳೆಯರ ಹಕ್ಕು ಕಸಿಯುವಂಥ ಪ್ರಕರಣಗಳು ನಡೆದಿದ್ದರೆ ಮತ್ತು ಮಹಿಳೆಯರಿಗೆ ರಕ್ಷಣೆ ನೀಡುವಂಥ ಕಾನೂನುಗಳು ಜಾರಿಯಾಗದಿದ್ದರೆ ಅಂಥ ಪ್ರಕರಣಗಳನ್ನು ಲಘುವಾಗಿ ಪರಿಗಣಿಸುವಂತಿಲ್ಲ ಎಂದು ಅವರು ಪತ್ರದಲ್ಲಿ ಹೇಳಿದ್ದಾರೆ.

ಮಾದರಿ ನೀತಿ ಸಂಹಿತೆಯ ಹೊರತಾಗಿಯೂ ಎನ್‌ಸಿಡಬ್ಲ್ಯು ತಂಡಕ್ಕೆ ಸಂದೇಶ್‌ಖಾಲಿಗೆ ಭೇಟಿ ನೀಡಲು ಅನುಮತಿ ನೀಡಬೇಕು ಎಂದು ರೇಖಾ ಅವರು ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರನ್ನು ಉಲ್ಲೇಖಿಸಿ ಬರೆದಿರುವ ಪತ್ರದಲ್ಲಿ ಹೇಳಿದ್ದಾರೆ.

ಸಂದೇಶ್‌ಖಾಲಿ ಸೇರಿ ಪಶ್ಚಿಮ ಬಂಗಾಳದ ಹಲವೆಡೆ ಮತದಾನದ ನಂತರ ಟಿಎಂಸಿ ಬೆಂಬಲಿಗರು ಮತದಾರರನ್ನು ಬೆದರಿಸುವ ಮತ್ತು ಅವರ ಮೇಲೆ ದಾಳಿ ನಡೆಸುವಂಥ ಕೃತ್ಯಗಳಲ್ಲಿ ತೊಡಗಿದ್ದರು ಎಂದು ಬಿಜೆಪಿ ಆರೋಪಿಸಿದೆ.

ಸಲ್ಮಾನ್ ಹತ್ಯೆಗೆ ನಡೆದಿತ್ತು ಬಾಲಕರ ನಿಯೋಜನೆಯ ಸಂಚು- ಪೊಲೀಸ್

ಮುಂಬೈ (ಪಿಟಿಐ): ಲಾರೆನ್ಸ್ ಬಿಷ್ಣೋಯ್ ಹಾಗೂ ಗೋಲ್ಡಿ ಬ್ರಾರ್ ಗ್ಯಾಂಗ್‌ಗಳು 18 ವರ್ಷದೊಳಗಿನವರನ್ನು ನಟ ಸಲ್ಮಾನ್ ಖಾನ್ ಹತ್ಯೆ ಮಾಡಲು ಬಳಸಿಕೊಳ್ಳಲು ನಿರ್ಧರಿಸಿದ್ದವು ಎಂದು ಪೊಲೀಸರು ತಿಳಿಸಿದ್ದಾರೆ.

ತನಿಖೆ ನಡೆಸಿದಾಗ, ಲಾರೆನ್ಸ್ ಗ್ಯಾಂಗ್‌ನ ಸದಸ್ಯ ಅಜಯ್ ಕಶ್ಯಪ್ ಹಾಗೂ ಇನ್ನೊಬ್ಬ ಆರೋಪಿ ನಡುವಿನ ವಿಡಿಯೊ ಕರೆಯ ಸಂಭಾಷಣೆಯಿಂದ ಈ ವಿಷಯ ದೃಢಪಟ್ಟಿದೆ ಎಂದು ನವಿ ಮುಂಬೈ ಪೊಲೀಸರು ಹೇಳಿದ್ದಾರೆ.

ಆಧುನಿಕ ಶಸ್ತ್ರಾಸ್ತ್ರ ಬಳಕೆಯಲ್ಲಿ ಕೈಪಳಗಿಸಿಕೊಂಡ ಶಾರ್ಪ್‌ಶೂಟರ್‌ಗಳನ್ನು ಮುಂಬೈ, ಠಾಣೆ, ನವಿ ಮುಂಬೈ ಪುಣೆ, ರಾಯಗಢ ಹಾಗೂ ಗುಜರಾತ್‌ನ ಕೆಲವೆಡೆ ನಿಯೋಜಿಸಲು ಯೋಜಿಸಲಾಗಿತ್ತು. ಕೆನಡಾದಲ್ಲಿ ನೆಲೆಸಿರುವ ಗ್ಯಾಂಗ್‌ಸ್ಟರ್ ಗೋಲ್ಡಿ ಬ್ರಾರ್ ಆದೇಶದಂತೆ ಈ ರೀತಿ ಆಲೋಚಿಸಲಾಗಿತ್ತು ಎನ್ನುವುದು ಸಂಭಾಷಣೆಯಿಂದ ಗೊತ್ತಾಗಿದೆ ಎಂದು ಹೇಳಿದ್ದಾರೆ.

ಜಾನ್ ಎಂಬಾತ ಹತ್ಯೆ ಕಾರ್ಯಾಚರಣೆಗೆ ವಾಹನ ಪೂರೈಸಲು ನಿಯೋಜಿತನಾಗಿದ್ದ ಎಂದು ಆರೋಪ ಪಟ್ಟಿಯಲ್ಲಿ ಉಲ್ಲೇಖಿಸಲಾಗಿದೆ.

ಸಲ್ಮಾನ್ ಹತ್ಯೆ ನಡೆಸಿದ ನಂತರ ಎಲ್ಲರೂ ಕನ್ಯಾಕುಮಾರಿಯಲ್ಲಿ ಒಂದೆಡೆ ಸೇರಿ, ಅಲ್ಲಿಂದ ಸಮುದ್ರ ಮಾರ್ಗದಲ್ಲಿ ಶ್ರೀಲಂಕಾ ತಲುಪುವುದು. ಆಮೇಲೆ ವಿವಿಧ ದೇಶಗಳಿಗೆ ಒಬ್ಬೊಬ್ಬರನ್ನೂ ಹವಾನಿಸುವುದು ಎಂದು ಯೋಜಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ನಟ ಸಲ್ಮಾನ್ ಚಲನವಲನಗಳ ಮೇಲೆ ನಿಗಾ ಮಾಡಲೆಂದೇ 60–70 ಜನರನ್ನು ನಿಯೋಜಿಸಲು ತಂತ್ರ ಹೆಣೆಯಲಾಗಿತ್ತು ಎಂದಿದ್ದಾರೆ.

ಮಾನವ ಕಳ್ಳಸಾಗಣೆ: ಬಂಧನಕ್ಕೆ ಅನುಮತಿ

ಮುಂಬೈ (ಪಿಟಿಐ): ಉದ್ಯೋಗದ ಆಮಿಷವೊಡ್ಡಿ ಕಾಂಬೋಡಿಯಾ, ಥಾಯ್ಲೆಂಡ್‌ಗೆ ಮಾನವ ಕಳ್ಳಸಾಗಣೆ ಮಾಡುತ್ತಿದ್ದ ಕೃತ್ಯದಲ್ಲಿ ಭಾಗಿಯಾಗಿರುವ ಆರೋಪವುಳ್ಳ ಇಬ್ಬರನ್ನು ಬಂಧಿಸಲು ಇಲ್ಲಿನ ವಿಶೇಷ ಕೋರ್ಟ್, ರಾಷ್ಟ್ರೀಯ ತನಿಖಾ ಸಂಸ್ಥೆಗೆ ಅನುಮತಿ ನೀಡಿದೆ.

ಹೆಚ್ಚಿನ ಸಂಬಳದ ಉದ್ಯೋಗದ ಆಮಿಷದಡಿ ಈ ದೇಶಗಳಿಗೆ ಕಳುಹಿಸುತ್ತಿದ್ದ 20–45 ವರ್ಷದ ಪುರುಷರಿಗೆ ಅಲ್ಲಿ ಜೀತದಾಳುಗಳಾಗಿ ದುಡಿಸಲಾಗುತ್ತಿತ್ತು ಎಂದು ಎನ್‌ಐಎ ಹೇಳಿದೆ. ಆರೋಪಿಗಳಾದ ಜೆರ್ರಿ ಫಿಲಿಪ್ಸ್ ಜಾಕೊಬ್ (46) ಮತ್ತು ಗೊಡಾಫಿ ಅಲ್ವರೆಜ್ (39) ಅವರನ್ನು ಮುಂಬೈನ ಪೊಲೀಸರು ಇದೇ ಆರೋಪಕ್ಕೆ ಸಂಬಂಧಿಸಿದಂತೆ ಕಳೆದ ಮಾರ್ಚ್‌ನಲ್ಲಿ ಬಂಧಿಸಿದ್ದರು. ಸದ್ಯ, ಈ ಇಬ್ಬರೂ ನ್ಯಾಯಾಂಗ ಬಂಧನದಲ್ಲಿ ಇದ್ದಾರೆ.

ಇವರನ್ನು ಬಂಧಿಸಲು ಎನ್‌ಐಎ ಅನುಮತಿ ಕೋರಿತ್ತು. ವಿಶೇಷ ಕೋರ್ಟ್‌ನ ನ್ಯಾಯಾಧೀಶರಾದ ಎ.ಕೆ.ಲಹೋಟಿ ಅವರು ಇದಕ್ಕೆ ಸ್ಪಂದಿಸಿದರು. ಆದರೆ, ಈ ಇಬ್ಬರನ್ನೂ ವಿಚಾರಣೆಗೆ ವಶಕ್ಕೆ ನೀಡಬೇಕು ಎಂಬ ಬೇಡಿಕೆ ಕುರಿತ ಆದೇಶವನ್ನು ಕಾಯ್ದಿರಿಸಿದರು.

ಎನ್‌ಐಎ ಪರವಾಗಿ ವಾದ ಮಂಡಿಸಿದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಸಂದೀಪ್ ಸದಾವರ್ತೆ ಅವರು, 'ಪ್ರಕರಣದ ಗಂಭೀರತೆ ಅರಿತು ಎನ್‌ಐಎ ಈ ಪ್ರಕರಣದ ತನಿಖೆ ಕೈಗೆತ್ತಿಕೊಂಡಿದೆ. ಪೊಲೀಸರ ತನಿಖಾ ವ್ಯಾಪ್ತಿ ಕೇವಲ ದೇಶದ ಗಡಿಯೊಳಗೆ ಇರುತ್ತದೆ' ಎಂದು ತಿಳಿಸಿದರು.

ಪರ ಹಾಗೂ ವಿರೋಧದ ವಾದ ಆಲಿಸಿದ ಕೋರ್ಟ್, ಈ ಕುರಿತ ಆದೇಶವನ್ನು ಮಂಗಳವಾರಕ್ಕೆ ಕಾಯ್ದಿರಿಸಿತು.

ಬಾಂಬ್ ಬೆದರಿಕೆ: ವಿಮಾನ ಹಾರಾಟ 2 ಗಂಟೆ ವಿಳಂಬ

ಚೆನ್ನೈ (ಪಿಟಿಐ): ಬಾಂಬ್ ಬೆದರಿಕೆಯ ಕರೆಯಿಂದಾಗಿ ಚೆನ್ನೈನಿಂದ ಕೋಲ್ಕತ್ತಾಗೆ ತೆರಳುತ್ತಿದ್ದ ಇಂಡಿಗೊ ವಿಮಾನವು ಸೋಮವಾರ ಎರಡು ಗಂಟೆ ವಿಳಂಬವಾಗಿ ತನ್ನ ಪ್ರಯಾಣ ಆರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಇಲ್ಲಿನ ತುರೈಪಕ್ಕಂ ಎಂಬಲ್ಲಿರುವ ಇಂಡಿಗೊ ಕಾಲ್ ಸೆಂಟರ್‌ಗೆ ಕರೆ ಮಾಡಿ ಬಾಂಬ್ ಬೆದರಿಕೆ ಹಾಕಲಾಗಿತ್ತು. ಇದರಿಂದಾಗಿ ವಿಮಾನವನ್ನು ಪ್ರತ್ಯೇಕ ಸ್ಥಳಕ್ಕೆ ಕೊಂಡೊಯ್ದ ಅಧಿಕಾರಿಗಳು, ವಿಮಾನವನ್ನು ಪರಿಶೀಲಿಸಿದರು. ಭದ್ರತಾ ಪ್ರಕ್ರಿಯೆಗಳು ಮುಕ್ತಾಯಗೊಂಡ ಬಳಿಕ ಬೆಳಿಗ್ಗೆ 10.30ಕ್ಕೆ ಚೆನ್ನೈನಿಂದ ಈ ವಿಮಾನ ಹೊರಟಿತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಚಿಕಿತ್ಸೆಗಾಗಿ ದಲೈ ಲಾಮಾ ಅಮೆರಿಕಕ್ಕೆ

ಧರ್ಮಶಾಲಾ (ಪಿಟಿಐ): ಟಿಬೆಟಿಯನ್ ಧರ್ಮಗುರು ದಲೈ ಲಾಮಾ ಅವರು ಮೊಣಕಾಲು ಚಿಕಿತ್ಸೆಗಾಗಿ ಈ ತಿಂಗಳು ಅಮೆರಿಕಕ್ಕೆ ತೆರಳಲಿದ್ದಾರೆ ಎಂದು ಅವರ ಕಚೇರಿ ಸೋಮವಾರ ತಿಳಿಸಿದೆ.

ದಲೈ ಲಾಮಾ ಅವರ ಕಾರ್ಯದರ್ಶಿ ಸೆತೆನ್ ಸಂದುಪ್ ಚೋಕ್ಯಪಾ ಅವರು ಹೇಳಿಕೆ ಬಿಡುಗಡೆ ಮಾಡಿದ್ದು, 'ಸಾರ್ವಜನಿಕ ಭೇಟಿ ಸೇರಿದಂತೆ ಯಾವುದೇ ಕಾರ್ಯಕ್ರಮವನ್ನು ಜೂನ್ 20ರಿಂದ ಮುಂದಿನ ಸೂಚನೆ ಬರುವವರೆಗೆ ನಿಗದಿಪಡಿಸುವುದಿಲ್ಲ. ದಲೈ ಲಾಮಾ ಅವರು ಧರ್ಮಶಾಲಾಗೆ ಹಿಂದಿರುಗಿದ ನಂತರ, ಚಟುವಟಿಕೆಗಳು ಪುನರಾರಂಭಗೊಳ್ಳುತ್ತವೆ' ಎಂದು ತಿಳಿಸಿದ್ದಾರೆ.

ರೈಲಿನ 3 ಬೋಗಿಗಳಿಗೆ ಬೆಂಕಿ

ನವದೆಹಲಿ (ಪಿಟಿಐ): ದೆಹಲಿಯ ಝಾನ್ಸಿಗೆ ತೆರಳುತ್ತಿದ್ದ ತಾಜ್ ಎಕ್ಸ್‌ಪ್ರೆಸ್ ರೈಲಿನ ಮೂರು ಬೋಗಿಗಳಿಗೆ ಬೆಂಕಿ ಹೊತ್ತಿಕೊಂಡ ಘಟನೆ ಸೋಮವಾರ ನಡೆದಿದೆ. ಘಟನೆಯಲ್ಲಿ ಒಬ್ಬ ಪ್ರಯಾಣಿಕರು ಗಾಯಗೊಂಡಿದ್ದಾರೆ. ಅಪಾಯದ ಮುನ್ಸೂಚನೆ ದೊರಕುತ್ತಿದ್ದಂತೆ ಪ್ರಯಾಣಿಕರೆಲ್ಲರೂ ಬೋಗಿಯಿಂದ ಹೊರಬಂದ ಕಾರಣ ಅಪಾಯ ತಪ್ಪಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ದೆಹಲಿಯ ಸರಿತಾ ವಿಹಾರದಲ್ಲಿ ಓಖ್ಲಾ ಮತ್ತು ತುಘಲಕಾಬಾದ್ ರೈಲ್ವೆ ನಿಲ್ದಾಣದ ನಡುವೆ ಈ ಘಟನೆ ನಡೆದಿದೆ. ಬೆಂಕಿ ಹೊತ್ತಿಕೊಳ್ಳಲು ನಿರ್ದಿಷ್ಟ ಕಾರಣವೇನು ಎಂಬುದು ತಿಳಿದುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

ಐಎಎಸ್ ದಂಪತಿ ಪುತ್ರಿ ಆತ್ಮಹತ್ಯೆ

ಮುಂಬೈ (ಪಿಟಿಐ): ಮಹಾರಾಷ್ಟ್ರದ ಐಎಎಸ್ ದಂಪತಿಯ ಪುತ್ರಿಯೊಬ್ಬರು ಮುಂಬೈನಲ್ಲಿ ಬಹುಮಹಡಿ ಕಟ್ಟಡದಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಸೋಮವಾರ ಮುಂಜಾನೆ ಮುಂಬೈನ ಪ್ರತಿಷ್ಠಿತ ನಾರಿಮನ್ ಪಾಯಿಂಟ್‌ನಲ್ಲಿರುವ ಗಗನಚುಂಬಿ ಕಟ್ಟಡದ 10ನೇ ಮಹಡಿಯಿಂದ ಜಿಗಿದು ಲಿಪಿ ರೋಷ್ಟಗಿ (27) ತಮ್ಮ ಪ್ರಾಣ ಕಳೆದುಕೊಂಡಿದ್ದಾರೆ. ಪೊಲೀಸರಿಗೆ ಡೆತ್‌ನೋಟ್ ಸಿಕ್ಕಿದ್ದು, ಅದರಲ್ಲಿ ತಮ್ಮ ಸಾವಿಗೆ ಯಾರೂ ಕಾರಣರಲ್ಲ ಎಂಬುದಾಗಿ ಆಕೆ ಉಲ್ಲೇಖಿಸಿದ್ದಾರೆ ಎನ್ನಲಾಗಿದೆ.

ಸದ್ಯ ಹರಿಯಾಣದ ಸೋನಿಪತ್‌ನಲ್ಲಿ ಕಾನೂನು ಪದವಿ ಅಧ್ಯಯನ ಮಾಡುತ್ತಿದ್ದ ಲಿಪಿ, ತಮ್ಮ ಕಳಪೆ ಶೈಕ್ಷಣಿಕ ಸಾಧನೆಯಿಂದ ಮನನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಶಂಕಿಸಲಾಗಿದೆ.

ಮೃತ ಲಿಪಿ, ಮಹಾರಾಷ್ಟ್ರದ ಉನ್ನತ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆಯ ಪ್ರಧಾನ ಕಾರ್ಯದರ್ಶಿಯಾಗಿರುವ ವಿಕಾಸ್ ರೋಷ್ಟಗಿ ಹಾಗೂ ಮಹಾರಾಷ್ಟ್ರ ಕೇಡರ್‌ನ ಹಿರಿಯ ಐಎಎಸ್ ಅಧಿಕಾರಿ ರಾಧಿಕಾ ರೋಷ್ಟಗಿ ದಂಪತಿಯ ಪುತ್ರಿ.

ದೆಹಲಿಯಲ್ಲಿ ನೀರಿನ ಸಮಸ್ಯೆ: ನಾಳೆ ಸಭೆಗೆ 'ಸುಪ್ರೀಂ' ಸೂಚನೆ

ನವದೆಹಲಿ (ಪಿಟಿಐ): ರಾಜಧಾನಿಯಲ್ಲಿ ತಲೆದೋರಿರುವ ನೀರಿನ ಸಮಸ್ಯೆಗೆ ಪರಿಹಾರ ಕ್ರಮಗಳನ್ನು ಚರ್ಚಿಸಲು ಜೂನ್ 5ರಂದು ಯಮುನಾ ಮೇಲ್ದಂಡೆ ನದಿ ಮಂಡಳಿಯು (ಯುವೈಆರ್‌ಬಿ) ಸಭೆ ನಡೆಸಬೇಕು ಎಂದು ಸುಪ್ರೀಂ ಕೋರ್ಟ್ ಸೂಚಿಸಿದೆ.

ಹಿಮಾಚಲ ಪ್ರದೇಶವು ಒದಗಿಸಿರುವ ಹೆಚ್ಚುವರಿ ನೀರನ್ನು ರಾಜಧಾನಿಗೆ ಬಿಡುಗಡೆ ಮಾಡುವಂತೆ ಹರಿಯಾಣ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಕೋರಿ ದೆಹಲಿ ಸರ್ಕಾರವು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯ ವೇಳೆ ಸುಪ್ರಿಂ ಕೋರ್ಟ್ ಈ ಸೂಚನೆಯನ್ನು ನೀಡಿತು.

ನ್ಯಾಯಮೂರ್ತಿಗಳಾದ ಪಿ.ಕೆ.ಮಿಶ್ರಾ, ಕೆ.ವಿ. ವಿಶ್ವನಾಥನ್ ಅವರಿದ್ದ ರಜೆ ಕಾಲದ ಪೀಠವು, ಕೇಂದ್ರ, ದೆಹಲಿ, ಹರಿಯಾಣ, ಹಿಮಾಚಲ ಪ್ರದೇಶ ಸರ್ಕಾರಗಳನ್ನು ಪ್ರತಿನಿಧಿಸಿದ್ದ ವಕೀಲರು ಸಭೆ ಸೇರಲು ಸಮ್ಮತಿಸಿದ್ದಾರೆ ಎಂಬ ಅಂಶವನ್ನು ಪರಿಗಣಿಸಿತು.

ಕೋರ್ಟ್ ಜೂನ್ 6ಕ್ಕೆ ವಿಚಾರಣೆ ಮುಂದೂಡಿತು.

ಷೇರುಪೇಟೆ ವಹಿವಾಟು 2507



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,530
ಇಂದಿನ ಅಂತ್ಯ	23,263
▲	733
ದಿನದ ಗರಿಷ್ಠ	23,338

ವಿನಿಮಯ ದರ

$ ಡಾಲರ್	83.14
£ ಪೌಂಡ್	105.63
€ ಯುರೊ	90.09
¥ ಯೆನ್ (100ಕ್ಕೆ)	53

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹580
12 ಕ್ಕೆ	₹80
ಮೈಸೂರು	
100ಕ್ಕೆ	₹580

ಖಾದ್ಯ ತೈಲ ಮುಂಬೈ (10 ಕೆಜಿಗೆ)
(ಆವರಣದಲ್ಲಿ ಶನಿವಾರದ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹960 (960)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹906 (910)

ಕೊಬ್ಬರಿ ಧಾರಣೆ
(ಕ್ವಿಂಟಲ್‌ಗೆ)

ಅರಸೀಕೆರೆ	₹8000-9000
ಕೆ.ಆರ್.ಪೇಟೆ	₹9403-9403

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹189
ಆರ್‌ಎಸ್‌ಎಸ್-5	₹182
ಗುಡ್ ಲಾಟ್	₹172

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಪಿ.ಬಿ)	₹322-495
ದ್ವಿತಳಿ (ಬಿ.ವಿ)	₹288-645

ಮುಂಬೈ ಧಾರಣೆ

ಶೇಂಗಾ

03-6-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	925 (925)
ಪಾಮ್ ವಾರದ ಡೆಲಿವರಿ	904(908)
ಸೂರ್ಯಕಾಂತಿ ಎಣ್ಣೆ ಕಚ್ಚಾ	910 (925)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,100 (71,225)
ಬೆಳ್ಳಿ ಕೆ.ಜಿ ₹88,950 (90,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀಮತಿ ಗಂಗರುದ್ರಮ್ಮ ನವರು
ನಮ್ಮ ತಾಯಿ ದಿನಾಂಕ: 3.6.2024 ರಂದು ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು,ಇವರ ಸ್ವಗ್ರಾಮ ದಾಸನಪುರ ಹೋಬಳಿ, ಮಲ್ಲಸಂದ್ರದಲ್ಲಿ ಈ ದಿನ 4.6.2024 ರ ಮಂಗಳವಾರ ದಂದು ಬೆಳಗ್ಗೆ 10.30 ಗಂಟೆಗೆ ನೆರವೇರಿಸಲಾಗುವುದು.
ಇಂತಿ ದುಃಖತಪ್ತರು: ವಿ. ರುದ್ರಪ್ಪ (ನಿವೃತ್ತ ರೆವಿನ್ಯೂ ಇನ್‌ಸ್ಪೆಕ್ಟರ್) ಮತ್ತು ಕುಟುಂಬದವರು.

ಸವಿನೆನಪು

ವಿ. ಕಲ್ಯಾಣಮ್ಮ
ಕೆ. ಎ. ವೆಂಕಟೇಶ ರೆಡ್ಡಿ ಅವರ ಧರ್ಮಪತ್ನಿ
4-6-2002
ನಿಮ್ಮ ನೆನಪು ಸದಾ ಹಸಿರು. ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲೆಂದು ಪ್ರಾರ್ಥಿಸುವ
ಕೆ. ಎ. ವೆಂಕಟೇಶ ರೆಡ್ಡಿ
ಕುಡ್ಲು, ಬೆಂಗಳೂರು
Class - I 'A' K.P.W.D. Contractor
ಮತ್ತು ಮಕ್ಕಳು
S.B.W. Asphalts & Co.

ಮೇ ತಿಂಗಳಲ್ಲಿ 57.5 ಸೂಚ್ಯಂಕ ದಾಖಲು: ಎಸ್ ಆ್ಯಂಡ್ ಪಿ ಗ್ಲೋಬಲ್ ವರದಿ

ತಯಾರಿಕಾ ವಲಯ: ಪ್ರಗತಿ ನಿಧಾನ

ನವದೆಹಲಿ (ಪಿಟಿಐ): ಭಾರತದ ತಯಾರಿಕಾ ವಲಯದ ಪ್ರಗತಿಯು ಮೇ ಸೇರಿ ಸತತ ಎರಡು ತಿಂಗಳಲ್ಲಿ ನಿಧಾನ-ಗತಿಯಲ್ಲಿಯೇ ಇದೆ. ಆದರೆ, ಜಾಗತಿಕ ಮಟ್ಟದಲ್ಲಿ ಮಾರಾಟವು 13 ವರ್ಷಗಳ ಗರಿಷ್ಠ ಮಟ್ಟ ಮುಟ್ಟಿದೆ. ಹಾಗಾಗಿ, ವ್ಯಾಪಾರ ವಿಸ್ತರಣೆಯು ದೃಢವಾಗಿ ನಡೆಯುತ್ತಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಸಂಸ್ಥೆ ಸೋಮವಾರ ತಿಳಿಸಿದೆ.

ಎಚ್‌ಎಸ್‌ಬಿಸಿ ಇಂಡಿಯಾ ಮ್ಯಾನುಫ್ಯಾಕ್ಚರಿಂಗ್ ಪರ್ಚೇಸಿಂಗ್ ಮ್ಯಾನೇಜರ್ಸ್ ಸೂಚ್ಯಂಕವು (ಪಿಎಂಐ) ಏಪ್ರಿಲ್‌ನಲ್ಲಿ 58.8 ದಾಖಲಾಗಿತ್ತು. ಮೇ ತಿಂಗಳಲ್ಲಿ 57.5ಕ್ಕೆ ಇಳಿದಿದೆ. ಸತತ ಎರಡನೇ ತಿಂಗಳೂ ಸೂಚ್ಯಂಕ ಕಡಿಮೆಯಾಗಿದೆ. ಮಾರ್ಚ್‌ನಲ್ಲಿ ಸೂಚ್ಯಂಕವು 16 ವರ್ಷಗಳ ಗರಿಷ್ಠ 59.1ಕ್ಕೆ ಏರಿತ್ತು.

ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿದ್ದರೆ ಸಕಾರಾತ್ಮಕ ಬೆಳವಣಿಗೆ ಎಂದು ಪರಿಗಣಿಸಲಾಗುತ್ತದೆ. 50ಕ್ಕಿಂತಲೂ ಕೆಳಗಿನ ಮಟ್ಟದಲ್ಲಿ ದಾಖಲಾದರೆ ನಕಾರಾತ್ಮಕವೆಂದು ಪರಿಗಣಿಸಲಾಗುತ್ತದೆ.

ತಯಾರಿಕಾ ವಲಯದ ವಿಸ್ತರಣೆಯು ಮೇ ತಿಂಗಳಲ್ಲಿಯೂ ಮುಂದುವರಿದಿದೆ. ಹೊಸ ಬೇಡಿಕೆ ಮತ್ತು ತಯಾರಿಕೆಯಲ್ಲಿ ಅಲ್ಪ ಏರಿಕೆಯಾಗಿದೆ. ಈ ತಿಂಗಳಲ್ಲಿ ಹೆಚ್ಚಿದ ಬಿಸಿಲು ಕೆಲಸದ ಅವಧಿಯನ್ನು ಕಡಿಮೆಗೊಳಿಸಿತು. ತಯಾರಿಕಾ ವೆಚ್ಚ ಹೆಚ್ಚಳವಾಯಿತು. ಇದರಿಂದ ತಯಾರಿಕೆ ನಿಧಾನವಾಯಿತು ಎಂದು ಎಚ್‌ಎಸ್‌ಬಿಸಿಯ ಗ್ಲೋಬಲ್ ಅರ್ಥಶಾಸ್ತ್ರಜ್ಞ ಮೈತ್ರೇಯಿ ದಾಸ್ ಹೇಳಿದ್ದಾರೆ.

ಚುನಾವಣಾ ಸಂಬಂಧಿತ ಅಡ್ಡಿಗಳಿಂದಾಗಿ ಬೆಳವಣಿಗೆಯು ಕುಂಠಿತಗೊಂಡಿದೆ. ಆದರೂ ಹೊಸ ರಫ್ತು ಬೇಡಿಕೆ ವೇಗವಾಗಿ ಏರಿಕೆಯಾಗಿದೆ. ಆಫ್ರಿಕಾ, ಏಷ್ಯಾ, ಅಮೆರಿಕ, ಯುರೋಪ್ ಮತ್ತು ಮಧ್ಯಪ್ರಾಚ್ಯದಲ್ಲಿ ಗ್ರಾಹಕರಿಂದ ಲಾಭಗಳನ್ನು ತಯಾರಕರು ಕಂಡಿದ್ದರಿಂದ ಅಂತರರಾಷ್ಟ್ರೀಯ ಮಾರಾಟದಲ್ಲಿನ ಏರಿಕೆಯು 13 ವರ್ಷಗಳಲ್ಲಿಯೇ ಪ್ರಬಲವಾಗಿದೆ. ಹೆಚ್ಚಿದ ಮಾರಾಟವು ಉದ್ಯೋಗ ಸೃಷ್ಟಿಗೆ ಉತ್ತೇಜನ ನೀಡಿತು ಎಂದು ವರದಿ ತಿಳಿಸಿದೆ.ಸುಮಾರು 400 ತಯಾರಕರಿಗೆ ಕಳುಹಿಸಲಾದ ಪ್ರಶ್ನಾವಳಿಗಳಲ್ಲಿ ನಮೂದಾಗಿರುವ ಪ್ರತಿಕ್ರಿಯೆ ಆಧರಿಸಿ ಈ ವರದಿ ಸಿದ್ಧಪಡಿಸಲಾಗಿದೆ.



ಸುದ್ದಿ 2 ನಿಮಿಷ

ಗ್ರೀನ್‌ಡೇಗೆ ಪಿ.ವಿ. ಸಿಂಧು ರಾಯಭಾರಿ

ನವದೆಹಲಿ (ಪಿಟಿಐ): ಭಾರತದ ಬ್ಯಾಡ್ಮಿಂಟನ್ ಆಟಗಾರ್ತಿ ಪಿ.ವಿ. ಸಿಂಧು ಅವರು ಗ್ರೀನ್‌ಡೇ ಕಂಪನಿಯ 'ಬೆಟರ್ ನ್ಯೂಟ್ರೀಷನ್'ನ ಬ್ರ್ಯಾಂಡ್ ರಾಯಭಾರಿ ಆಗಿದ್ದಾರೆ.

ಜೈವಿಕ ಆಹಾರಗಳ ಮೂಲಕ ಸೂಕ್ಷ್ಮ ಪೋಷಕಾಂಶಗಳ ಕೊರತೆಯನ್ನು ಕಡಿಮೆ ಮಾಡುವ ಗುರಿಯನ್ನು ಕಂಪನಿ ಹೊಂದಿದೆ. ಗ್ರೀನ್‌ಡೇ ಜೊತೆಗಿನ ಸಿಂಧು ಅವರ ಪಾಲುದಾರಿಕೆಯು ಗ್ರಾಹಕರ ಆರೋಗ್ಯ ಮತ್ತು ರೈತರ ಏಳಿಗೆ ಎರಡನ್ನೂ ಗುರಿಯಾಗಿಟ್ಟುಕೊಂಡು ಬೆಳೆಗಳ ಪೌಷ್ಟಿಕಾಂಶವನ್ನು ಹೆಚ್ಚಿಸುತ್ತದೆ ಎಂದು ಕಂಪನಿ ಸೋಮವಾರ ತಿಳಿಸಿದೆ.

'ನಮ್ಮ ದೇಶದಲ್ಲಿ ಪೌಷ್ಟಿಕಾಂಶದ ಕೊರತೆಯ ಸಮಸ್ಯೆಯನ್ನು ಪರಿಹರಿಸಲು ಬ್ರ್ಯಾಂಡ್‌ನೊಂದಿಗೆ ಸಹಕರಿಸುವೆ' ಎಂದು ಸಿಂಧು ಅವರು ಹೇಳಿಕೆಯಲ್ಲಿ ತಿಳಿಸಿದ್ದಾರೆ. ಕಂಪನಿಯಲ್ಲಿ ಸಿಂಧು ಅವರು ಹೂಡಿಕೆ ಮಾಡಿದ್ದಾರೆ. ಆದರೆ ಹೂಡಿಕೆಯ ಮೊತ್ತವನ್ನು ಬಹಿರಂಗಪಡಿಸಿಲ್ಲ.

ಅಹಮದಾಬಾದ್‌ನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ಹಳೆಯ ವಿದ್ಯಾರ್ಥಿಗಳಾದ ರಸ್ತೋಗಿ ಮತ್ತು ಐಶ್ವರ್ಯ ಭಟ್ನಾಗರ್ ಅವರು ಗ್ರೀನ್‌ಡೇ ನವೋದ್ಯಮ ಸ್ಥಾಪಿಸಿದ್ದಾರೆ. ಇದು ಪೋಷಕಾಂಶಯುಕ್ತ ಬೆಳೆಗಳನ್ನು ಬೆಳೆಸಲು ರೈತರೊಂದಿಗೆ ಕೆಲಸ ಮಾಡುತ್ತದೆ.

ಗ್ರೀನ್‌ಡೇ 'ಕಿಸಾನ್ ಕಿ ದುಕಾನ್' ಬ್ರ್ಯಾಂಡ್‌ನ ಅಡಿಯಲ್ಲಿ ದೇಶಾದ್ಯಂತ ಸುಮಾರು 75 ಕೃಷಿ ಉತ್ಪನ್ನ ಮಳಿಗೆ, ಖರೀದಿ ಕೇಂದ್ರ ಹೊಂದಿದೆ. ಪೌಷ್ಟಿಕಾಂಶಯುಕ್ತ ಗೋಧಿ ಹಿಟ್ಟು, ಅಕ್ಕಿ, ಜೋಳ, ರಾಗಿ ಮತ್ತು ಮೆಕ್ಕೆಜೋಳ ಮಾರಾಟ ಮಾಡುತ್ತದೆ.

ಇಮ್ರಾನ್ ಖಾನ್ ಖುಲಾಸೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಮತ್ತು ಅವರ ಪಕ್ಷದ ಪ್ರಮುಖ ಮುಖಂಡರನ್ನು ಇಲ್ಲಿನ ನ್ಯಾಯಾಲಯ ವಿಧ್ವಂಸಕ ಕೃತ್ಯದ ಎರಡು ಆರೋಪಗಳಿಂದ ಖುಲಾಸೆಗೊಳಿಸಿದೆ.

ಇಸ್ಲಾಮಾಬಾದ್‌ನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಇಮ್ರಾನ್ ಖಾನ್, ಮಾಜಿ ವಿದೇಶಾಂಗ ಸಚಿವ ಶಾ ಮಹಮೂದ್ ಖುರೇಷಿ, ಸಂವಹನ ಖಾತೆಯ ಮಾಜಿ ಸಚಿವ ಮುರಾದ್ ಸಯೀದ್ ಮತ್ತು ಇತರ ಪಾಕಿಸ್ತಾನ್ ತೆಹ್ರೀಕ್ ಇನ್ಸಾಫ್ (ಪಿಟಿಐ) ಪಕ್ಷದ ಮುಖಂಡರನ್ನು 'ಹಕೀಕಿ ಆಜಾದಿ' ಜಾಥಾ ವೇಳೆ ನಡೆದಿದ್ದ ವಿಧ್ವಂಸಕ ಕೃತ್ಯಗಳ ಆರೋಪದಿಂದ ಮುಕ್ತಗೊಳಿಸಿದೆ ಎಂದು 'ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್' ವರದಿ ಮಾಡಿದೆ.

ರಾಷ್ಟ್ರ ರಾಜಧಾನಿಯಲ್ಲಿ ವಿಧ್ವಸಂಕ ಕೃತ್ಯ ನಡೆಸಿದ ಆರೋಪದ ಮೇಲೆ ಇಮ್ರಾನ್ ಮತ್ತು ಅವರ ಪಕ್ಷದ ಇತರ 150 ಮಂದಿಯ ವಿರುದ್ಧ ಪೊಲೀಸರು ಪ್ರತ್ಯೇಕ ಪ್ರಕರಣಗಳನ್ನು ದಾಖಲಿಸಿದ್ದರು.

ಹೋಂಡಾ ದ್ವಿಚಕ್ರ ವಾಹನ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ದ್ವಿಚಕ್ರ ವಾಹನಗಳ ತಯಾರಿಕಾ ಕಂಪನಿಯಾದ ಹೋಂಡಾ ಮೋಟರ್‌ಸೈಕಲ್ ಆ್ಯಂಡ್ ಸ್ಕೂಟರ್ ಇಂಡಿಯಾದ (ಎಚ್‌ಎಂಎಸ್‌ಐ) ದೇಶೀಯ ಸಗಟು ಮಾರಾಟವು ಮೇ ತಿಂಗಳಲ್ಲಿ ಶೇ 45ರಷ್ಟು ಏರಿಕೆಯಾಗಿದ್ದು, 4.50 ಲಕ್ಷ ದ್ವಿ ಚಕ್ರ ವಾಹನಗಳು ಮಾರಾಟವಾಗಿವೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ಕಂಪನಿಯು ಡೀಲರ್‌ಗಳಿಗೆ 3.11 ಲಕ್ಷ ದ್ವಿ ಚಕ್ರ ವಾಹನಗಳನ್ನು ಮಾರಲಾಗಿದೆ ಎಂದು ಕಂಪನಿ ಸೋಮವಾರ ತಿಳಿಸಿದೆ.

ರಫ್ತು 18,249ರಿಂದ 41,458ಕ್ಕೆ ಏರಿಕೆಯಾಗಿದೆ. ಒಟ್ಟು ವಾಹನಗಳ ಮಾರಾಟವು 3.29 ಲಕ್ಷದಿಂದ 4.92 ಲಕ್ಷಕ್ಕೆ ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15750
ಎಸಿ	₹9100
ಆರ್‌ಪಿ	₹16000
ಆರ್‌ಸಿ	₹10010

'ಗೂಳಿ'ಯ ನಾಗಾಲೋಟ

ಒಂದನೇ ಪುಟದಿಂದ...

ವಹಿವಾಟಿನ ವೇಳೆ 76,738ಕ್ಕೆ ಏರಿಕೆಯಾಗಿತ್ತು. ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ (ಎನ್‌ಎಸ್‌ಇ) ನಿಫ್ಟಿ 733 ಅಂಶ (ಶೇ 3.25) ಹೆಚ್ಚಳವಾಗಿ 23,263ಕ್ಕೆ ಕೊನೆಗೊಂಡಿತು. ವಹಿವಾಟಿನ ವೇಳೆ 23,338ಕ್ಕೆ ಮುಟ್ಟಿತ್ತು.

ಏರಿಕೆ–ಇಳಿಕೆ: ಸೆನ್ಸೆಕ್ಸ್ ಗುಚ್ಛದಲ್ಲಿ ಎನ್‌ಟಿಪಿಸಿ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪವರ್‌ಗ್ರಿಡ್ ಮೌಲ್ಯ ಶೇ 9ಕ್ಕೂ ಹೆಚ್ಚು ಏರಿಕೆ ಕಂಡಿದೆ. ಲಾರ್ಸೆನ್ ಆ್ಯಂಡ್ ಟೂಬ್ರೊ, ಎಕ್ಸಿಸ್ ಬ್ಯಾಂಕ್, ರಿಲಯನ್ಸ್ ಇಂಡಸ್ಟ್ರೀಸ್, ಅಲ್ಟ್ರಾ ಟೆಕ್ ಸಿಮೆಂಟ್, ಮಹೀಂದ್ರ ಆ್ಯಂಡ್ ಮಹೀಂದ್ರ, ಇಂಡಸ್‌ಇಂಡ್ ಬ್ಯಾಂಕ್, ಐಸಿಐಸಿಐ ಬ್ಯಾಂಕ್ ಮತ್ತು ಟಾಟಾ ಸ್ಟೀಲ್ ಗಳಿಕೆ ಕಂಡಿವೆ.

ಸನ್‌ಫಾರ್ಮಾ, ಎಚ್‌ಸಿಎಲ್ ಟೆಕ್ನಾಲಜೀಸ್, ಏಷ್ಯನ್ ಪೇಂಟ್ಸ್, ನೆಸ್ಲೆ ಮತ್ತು ಇನ್ಫೊಸಿಸ್ ಷೇರಿನ ಮೌಲ್ಯ ಇಳಿದಿದೆ. ಸರ್ಕಾರಿ ಸ್ವಾಮ್ಯದ ಕಂಪನಿಗಳು, ಇಂಧನ, ಯುಟಿಲಿಟಿ, ತೈಲ, ವಿದ್ಯುತ್, ರಿಯಾಲ್ಟಿ ವಲಯದ ಉದ್ಯಮಗಳ ಷೇರು ಮೌಲ್ಯ ಶೇ 8ರಷ್ಟು ಏರಿಕೆಯಾಗಿದೆ.

ಬಿಎಸ್‌ಇ ಮಿಡ್‌ಕ್ಯಾಪ್ ಶೇ 3.54 ಮತ್ತು ಸ್ಮಾಲ್‌ಕ್ಯಾಪ್ ಸೂಚ್ಯಂಕ ಶೇ 2.05ರಷ್ಟು ಏರಿಕೆಯಾಗಿದೆ. ಏಷ್ಯನ್ ಮಾರುಕಟ್ಟೆಯಲ್ಲಿ ಸೋಲ್, ಟೋಕಿಯೊ ಮತ್ತು ಹಾಂಗ್‌ಕಾಂಗ್

ಗಳಿಕೆ ಕಂಡಿದ್ದರೆ, ಶಾಂಘೈ ಇಳಿದಿದೆ. ಜಾಗತಿಕ ಬ್ರೆಂಟ್ ಕಚ್ಚಾ ತೈಲ ದರ ಶೇ 0.18ರಷ್ಟು ಏರಿಕೆಯಾಗಿ ಪ್ರತಿ ಬ್ಯಾರೆಲ್‌ಗೆ 81.26 ಡಾಲರ್‌ಗೆ (₹6,755) ಮುಟ್ಟಿದೆ.

2021ರ ಫೆಬ್ರುವರಿ 1ರಂದು ಕೇಂದ್ರದ ಬಜೆಟ್ ಮಂಡನೆಯಾಯಿತು. ಅಂದು ಒಂದೇ ದಿನ ಸೆನ್ಸೆಕ್ಸ್ ಮತ್ತು ನಿಫ್ಟಿ ಶೇ 5ರಷ್ಟು ಏರಿಕೆ ಕಂಡಿದ್ದವು. 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ ಎನ್‌ಡಿಎ ಗೆಲುವು ಸಾಧಿಸಲಿದೆ ಎಂದು ಮತಗಟ್ಟೆ ಸಮೀಕ್ಷೆಗಳು ಭವಿಷ್ಯ ನುಡಿದ ನಂತರ 2019ರ ಮೇ 20ರಂದು ಶೇ 3ರಷ್ಟು ಸೂಚ್ಯಂಕಗಳು ಏರಿಕೆಯಾಗಿದ್ದವು.

ಹೂಡಿಕೆದಾರರು ನಿರೀಕ್ಷಿಸಿದ್ದಕ್ಕಿಂತ ಮಾರ್ಚ್ ತ್ರೈಮಾಸಿಕದಲ್ಲಿ ಜಿಡಿಪಿ ಉತ್ತಮವಾಗಿರುವುದು ಮತ್ತು ಮತಗಟ್ಟೆ ಸಮೀಕ್ಷೆಯ ಅಂದಾಜಿನಿಂದಾಗಿ ಮೂರು ವರ್ಷಗಳಲ್ಲಿ ನಿಫ್ಟಿ ಅತ್ಯುತ್ತಮ ಸೆಷನ್ ದಾಖಲಿಸಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ದೀಪಕ್ ಜಸಾನಿ ಹೇಳಿದ್ದಾರೆ.

₹19.42 ಲಕ್ಷ ಕೋಟಿ ಅದಾನಿ ಕಂಪನಿಗಳ ಮಾರುಕಟ್ಟೆ ಮೌಲ್ಯ

ಅದಾನಿ ಸಮೂಹದ ಎಲ್ಲ ಕಂಪನಿಗಳ ಷೇರಿನ ಮೌಲ್ಯವು ಭಾರಿ ಏರಿಕೆಯಾಗಿದೆ. ಇದರಿಂದ ಕಂಪನಿಯ ಒಟ್ಟು ಮಾರುಕಟ್ಟೆ ಮೌಲ್ಯವು ₹19.42 ಲಕ್ಷ ಕೋಟಿಗೆ ಮುಟ್ಟಿದೆ.

ಅದಾನಿ ಪವರ್ ಶೇ 15.64, ಅದಾನಿ ಪೋರ್ಟ್ಸ್ ಶೇ 10.25, ಅದಾನಿ ಎನರ್ಜಿ ಸಲ್ಯೂಷನ್ಸ್ ಶೇ 8.84, ಅದಾನಿ ಟೋಟಲ್ ಗ್ಯಾಸ್ ಶೇ 7.77, ಅದಾನಿ ಎಂಟರ್‌ಪ್ರೈಸಸ್ ಶೇ 6.86, ಅದಾನಿ ಗ್ರೀನ್ ಎನರ್ಜಿ ಶೇ 6.39, ಎನ್‌ಡಿಟಿವಿ ಶೇ 6.15, ಅಂಬುಜಾ ಸಿಮೆಂಟ್ಸ್ ಶೇ 5.72, ಎಸಿಸಿ ಶೇ 5.16 ಮತ್ತು ಅದಾನಿ ವಿಲ್ಮರ್ ಶೇ 3.51ರಷ್ಟು ಏರಿಕೆಯಾಗಿದೆ.

ಎಸ್‌ಬಿಐ ಷೇರಿನ ಮೌಲ್ಯ ಶೇ 9 ಏರಿಕೆ

ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಷೇರಿನ ಮೌಲ್ಯ ಶೇ 9ರಷ್ಟು ಏರಿಕೆಯಾಗಿದೆ. ಇದರಿಂದ ಬ್ಯಾಂಕ್‌ನ ಮಾರುಕಟ್ಟೆ ಮೌಲ್ಯಕ್ಕೆ ಒಂದೇ ದಿನ ₹69,388 ಕೋಟಿ ಸೇರ್ಪಡೆಯಾಗಿದ್ದು, ಬ್ಯಾಂಕ್‌ನ ಒಟ್ಟು ಎಂ–ಕ್ಯಾಪ್ ₹8 ಲಕ್ಷ ಕೋಟಿಗೆ ಮುಟ್ಟಿದೆ. ಈ ಮೈಲುಗಲ್ಲು ತಲುಪಿದ ಮೊದಲ ಸಾರ್ವಜನಿಕ ವಲಯದ ಬ್ಯಾಂಕ್ ಆಗಿ ಎಸ್‌ಬಿಐ ಹೊರಹೊಮ್ಮಿದೆ.

'ಬಿಜೆಪಿ ನೇತೃತ್ವದ ಎನ್‌ಡಿಎಗೆ ಭರ್ಜರಿ ವಿಜಯದ ಮುನ್ಸೂಚನೆ ನೀಡಿದ ಮತಗಟ್ಟೆ ಸಮೀಕ್ಷೆಗಳಿಂದಾಗಿ ಮಾರುಕಟ್ಟೆ ಸೂಚ್ಯಂಕವು ಗರಿಷ್ಠ ಮಟ್ಟಕ್ಕೆ ಏರಿತು' ಎಂದು ಸ್ಯಾಮ್‌ಕೊ ಎಂ.ಎಫ್‌ನ ಪಾರಸ್ ಮಟಾಲಿಯಾ ಅಭಿಪ್ರಾಯಪಟ್ಟಿದ್ದಾರೆ.

ಮತಗಟ್ಟೆ ಸಮೀಕ್ಷೆಯ ಅಂದಾಜಿನಿಂದ ಸರ್ಕಾರಕ್ಕೆ ಗೆಲುವಿನ ಆಶಾವಾದ ಹೆಚ್ಚಳವಾಗಿದೆ. ಇದರಿಂದ ಸರ್ಕಾರಿ ಸ್ವಾಮ್ಯದ ಕಂಪನಿಗಳ ಷೇರಿನ ಮೌಲ್ಯ ಏರಿಕೆಯಾಯಿತು ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ. 2023–24ರ ಹಣಕಾಸು ವರ್ಷದಲ್ಲಿ ಭಾರತದ ಆರ್ಥಿಕತೆಯು ಶೇ 8.2ರಷ್ಟು ಬೆಳವಣಿಗೆ ಸಾಧಿಸಿದೆ. ಇದು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯ ದೇಶದ ಸ್ಥಾನವನ್ನು ಭದ್ರಪಡಿಸಿದೆ ಎಂದು ಹೇಳಿದ್ದಾರೆ.

ಅಡಿಕೆ ಧಾರಣೆ

ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಸಾಗರ	
ಬಿಳಿಗೋಟು	19001-29899
ಚಾಲಿ	29599-35599
ಕೋಕ	29599-29599
ಕೆಂಪುಗೋಟು	27001-35099
ರಾಶಿ	37001-53899
ಸಿಪ್ಪೆಗೋಟು	16099-18299
ಶಿವಮೊಗ್ಗ	
ಬೆಟ್ಟೆ	5119-55200
ಗೊರಬಲು	17009-35809
ರಾಶಿ	34118-54299
ಸರಕು	57399-83996
ಸಿದ್ದಾಪುರ	
ಬಿಳಿಗೋಟು	26889-29869
ಚಾಲಿ	34089-36699
ಕೋಕ	26019-29869
ಹಳೆಚಾಲಿ	36599-36719
ಕೆಂಪುಗೋಟು	26889-29459
ರಾಶಿ	43119-49699
ತಟ್ಟಿಬೆಟ್ಟೆ	34699-39219
ಶಿರಸಿ	
ಬೆಟ್ಟೆ	34009-46899
ಬಿಳಿಗೋಟು	22299-30410
ಚಾಲಿ	32108-38001
ಕೆಂಪುಗೋಟು	26499-30299
ರಾಶಿ	44518-49799
ಯಲ್ಲಾಪುರ	
ಕೆಂಪುಗೋಟು	24899-34305
ರಾಶಿ	43895-53469
ತಟ್ಟಿಬೆಟ್ಟೆ	35099-53469
ಅಪಿ	54699-43560
ಬಿಳಿಗೋಟು	22899-31599
ಚಾಲಿ	31709-37040
ಕೋಕ	11299-28329
ಕುಮಟ	
ಚಿಪ್ಪು	26089-29599
ಕೋಕ	13899-27099
ಫ್ಯಾಕ್ಟರಿ	10169-19929
ಹಳೆಚಾಲಿ	37899-39309
ಹೊಸಚಾಲಿ	32869-35529

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ ಕೆಲಸಕ್ಕೆ ಮಹಿಳೆಯರು ಅಥವಾ ಪುರುಷರು ಅಡುಗೆ ಕೆಲಸಕ್ಕೆ, ಮನೆಕೆಲಸಕ್ಕೆ, ಮಗುವನ್ನು, ಬಾಣಂತಿಯರನ್ನು, ವೃದ್ಧರನ್ನು, ವಯಸ್ಸಾದವರನ್ನು, ರೋಗಿಗಳನ್ನು ನೋಡಿಕೊಳ್ಳಲು ಜನರು ಬೇಕಾಗಿದ್ದಾರೆ. ಅನುಭವ ಇರುವವರು ಅಥವಾ ಇಲ್ಲದಿರುವವರು, ಇವರಿಗೆ ಊಟ ವಸತಿ ಸಂಬಳ 15,000/-ರಿಂದ 20,000/-. ESI,PF ಸೌಲಭ್ಯವಿದೆ. ಬೆಂಗಳೂರು-76. ತಕ್ಷಣ ಸಂಪರ್ಕಿಸಿ: 7899235388, 9148525233

Drivers

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನು ಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ! +91 9493275000ಗೆ ಕರೆ ಮಾಡಿ

Hotel

ಬೇಕಾಗಿದ್ದಾರೆ: ಬೆಂಗಳೂರು ಮತ್ತು ಸುಬ್ರಹ್ಮಣ್ಯದಲ್ಲಿ ಹೊಸತಾಗಿ ಪ್ರಾರಂಭವಾಗುವ ಸಸ್ಯಾಹಾರಿ ಹೋಟೆಲ್‌ಗೆ ಸೌತ್ ಇಂಡಿಯನ್ ಕುಕ್, ಇಡ್ಲಿ ಮತ್ತು ದೋಸೆ ಮಾಡುವವರು, ಹೆಲ್ಪರ್, ಕ್ಲೀನರ್, ಸಪ್ಲೈಯರ್, 15,000-45,000 ಸಂಬಳ, ಊಟ, ವಸತಿ ಉಚಿತ. PF, ESI ಸೌಲಭ್ಯವಿದೆ. 9019724183

General

ಕರ್ನಾಟಕದಾದ್ಯಂತ MNC ಕಂಪನಿಗಳಲ್ಲಿ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯುಟವಿದ್ದು, ಸಂಬಳ 16,000- 80,000. 7760014526, 7795199673

Part-Time Jobs

ಆನ್‌ಲೈನ್ ತರಬೇತಿ ಪಡೆದು ಮನೆಯಿಂದಲೇ ಅಣಬೆ ಬೆಳೆಸಿ ತಿಂಗಳಿಗೆ 30,000ಕ್ಕೂ ಹೆಚ್ಚು ಸಂಪಾದಿಸಿ. ತರಬೇತಿಗಾಗಿ ಬೆಂಗಳೂರು 8095555517 ಶಿವಮೊಗ್ಗ 8095555517

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ ತಿಂಗಳಿಗೆ 15,000-20,000/ ಸಂಪಾದಿಸಿ. 'ಕೊರಿಯರ್' ಸೌಲಭ್ಯವಿದೆ. 8884777502, 8884777503.

ಪ್ರವಾಸ

Travel Agencies

6/7/2024 ರಿಂದ 9 ದಿನಗಳ ನೇಪಾಳ ಕಠ್ಮಂಡು ಪಶುಪತಿನಾಥ ಮುಕ್ತಿನಾಥ್ ಪೋಖ್ರಾ ಅಯೋಧ್ಯ ಕಾಶಿ ವಿಮಾನದಲ್ಲಿ 44000/- ಶ್ರೀರಾಮ್ ಟೂರ್ 9108933383

Travel

8 ದಿನಗಳ ಮುಕ್ತಿನಾಥ ನೇಪಾಳ ವಿಶೇಷ. 7/11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 11 ದಿನಗಳ ವಿಯೆಟ್ನಾಂ ಮತ್ತು ಕಾಂಬೋಡಿಯಾ. 6 ದಿನಗಳ ಬಾಲಿ. 13 ದಿನಗಳ ಚಾರ್‌ಧಾಮ್. 9/5 ದಿನಗಳ ಕಾಶಿ, ಅಯೋಧ್ಯ, ಗಯಾ. 6 ದಿನಗಳ ಶ್ರೀಲಂಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. 9900080793 9900080792

7/11 ದಿನಗಳ ಸಿಂಗಾಪೂರ್ ಮಲೇಶಿಯಾ ಥೈಲ್ಯಾಂಡ್. 10 ದಿನಗಳ ವಿಯೆಟ್ನಾಂ ಕಾಂಬೋಡಿಯಾ. 9 ದಿನಗಳ ಕಾಶಿ, ಅಯೋಧ್ಯ. ಭಟ್ ಟ್ರಾವೆಲ್ಸ್. 9844037295 9844166555

ಓದುಗರ ಗಮನಕ್ಕೆ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9900428036
+91 9731810277 | +91 9900428036
*Conditions apply

ಉನ್ನತ ಹುದ್ದೆಗೇರಿದ ಮೊದಲ ಮಹಿಳೆ

ಮೆಕ್ಸಿಕೊ: ಶೈನ್‌ಬಾಮ್ ಅಧ್ಯಕ್ಷೆ

ಮೆಕ್ಸಿಕೊ ಸಿಟಿ (ಎಪಿ/ಎಎಫ್‌ಪಿ): ಕ್ಲಾಡಿಯಾ ಶೈನ್‌ಬಾಮ್ ಅವರು ಮೆಕ್ಸಿಕೊ ದೇಶದ ಮೊದಲ ಮಹಿಳಾ ಅಧ್ಯಕ್ಷರಾಗಿ ಭಾನುವಾರ ಚುನಾಯಿತರಾದರು. ಅಪರಾಧ ಪ್ರಕರಣಗಳು ಮತ್ತು ಲಿಂಗ ಆಧಾರಿತ ಹಿಂಸಾಚಾರಕ್ಕೆ ಕುಖ್ಯಾತಿ ಪಡೆದಿರುವ ದೇಶದಲ್ಲಿ ಈ ಮೂಲಕ ಹೊಸ ಇತಿಹಾಸ ನಿರ್ಮಿಸಿದರು.

ಮೆಕ್ಸಿಕೊದ 200 ವರ್ಷಗಳ ಇತಿಹಾಸದಲ್ಲಿ ಮಹಿಳೆಯೊಬ್ಬರು ಇದುವರೆಗೆ ಅಧ್ಯಕ್ಷ ಸ್ಥಾನಕ್ಕೆ ಏರಿರಲಿಲ್ಲ. ಸಾರ್ವತ್ರಿಕ ಚುನಾವಣೆಯ ಮತದಾನ ಭಾನುವಾರ ನಡೆಯಿತಲ್ಲದೆ, ತಡರಾತ್ರಿಯ ವೇಳೆಗೆ ಫಲಿತಾಂಶ ಹೊರಬಿತ್ತು.

ವಿಜ್ಞಾನಿಯೂ ಆಗಿರುವ 61 ವರ್ಷದ ಶೈನ್‌ಬಾಮ್ ಅವರು ಈ ಹಿಂದೆ ಮೆಕ್ಸಿಕೊ ನಗರದ ಮೇಯರ್ ಆಗಿ ಕಾರ್ಯನಿರ್ವಹಿಸಿದ್ದರು. 'ಈ ಐತಿಹಾಸಿಕ ಚುನಾವಣೆಯಲ್ಲಿ ನಮ್ಮ



ಪಕ್ಷದ ಪರ ಮತ ಹಾಕಿರುವ ಮೆಕ್ಸಿಕೊದ ಲಕ್ಷಾಂತರ ಮಹಿಳೆಯರು ಮತ್ತು ಪುರುಷರಿಗೆ ನಾನು ಧನ್ಯವಾದ ಸಲ್ಲಿಸುತ್ತೇನೆ' ಎಂದು ಶೈನ್‌ಬಾಮ್ ಹೇಳಿದರು.

'ನಾನು ಮೆಕ್ಸಿಕೊದ ಮೊದಲ ಮಹಿಳಾ ಅಧ್ಯಕ್ಷೆ ಆಗಲಿದ್ದೇನೆ. ನಮ್ಮದು ಪ್ರಜಾಪ್ರಭುತ್ವ ದೇಶ ಎಂಬುದನ್ನು ಶಾಂತಿಯುತ ಚುನಾವಣೆ ಮೂಲಕ ತೋರಿಸಿಕೊಟ್ಟಿದ್ದೇವೆ' ಎಂದು ಪ್ರತಿಕ್ರಿಯಿಸಿದರು.

ಶೈನ್‌ಬಾಮ್ ಅವರು ಶೇ 58.3 ರಿಂದ ಶೇ 60.7ರಷ್ಟು ಮತಗಳನ್ನು ಪಡೆದಿದ್ದಾರೆ ಎಂದು ಮೆಕ್ಸಿಕೊ ರಾಷ್ಟ್ರೀಯ ಚುನಾವಣಾ ಸಂಸ್ಥೆಯ ಅಧ್ಯಕ್ಷರು ಪ್ರಕಟಿಸಿದರು. ಅವರ ಸಮೀಪದ ಪ್ರತಿಸ್ಪರ್ಧಿ ಸೋಚಿ ಗಾಲ್ವೆಜ್ ಶೇ 26.6 ರಿಂದ ಶೇ 28.6ರಷ್ಟು ಮತಗಳನ್ನು ಹಾಗೂ ಕಣದಲ್ಲಿದ್ದ ಇನ್ನೊಬ್ಬ ಸ್ಪರ್ಧಿ ಜಾರ್ಜ್ ಅಲ್ವಾರೆಜ್ ಮೇನೆಜ್ ಶೇ 9.9 ರಿಂದ ಶೇ 10.8 ರಷ್ಟು ಮತಗಳನ್ನು ತಮ್ಮದಾಗಿಸಿಕೊಂಡರು.

ಫಲಿತಾಂಶ ಹೊರಬೀಳುತ್ತಿದ್ದಂತೆಯೇ ಶೈನ್‌ಬಾಮ್ ಅವರ ಬೆಂಬಲಿಗರು ಬೀದಿಗಿಳಿದು ಸಂಭ್ರಮಿಸಿದರು. ಆಡಳಿತಾರೂಢ ಪಕ್ಷದ ಬಾವುಟ ಹಿಡಿದು ನೃತ್ಯ ಮಾಡಿದರು.

ಶೈನ್‌ಬಾಮ್ ಅವರು ಅಕ್ಟೋಬರ್ 1ರಂದು ಅಧಿಕಾರ ವಹಿಸಿಕೊಳ್ಳಲಿದ್ದಾರೆ. ಅಧ್ಯಕ್ಷ ಸ್ಥಾನಕ್ಕೆ ಮಹಿಳೆಯನ್ನು ಆಯ್ಕೆ ಮಾಡುವ ಮೂಲಕ ಮೆಕ್ಸಿಕೊ ದೇಶವು ಲ್ಯಾಟಿನ್ ಅಮೆರಿಕದ ಇತರ ದೇಶಗಳಾದ ಬ್ರೆಜಿಲ್, ಚಿಲಿ, ಕೋಸ್ಟರಿಕಾ, ನಿಕಾರಗುವಾ ಮತ್ತು ಪನಾಮಾ ಸಾಲಿಗೆ ಸೇರಿಕೊಂಡಿತು. ಈ ದೇಶಗಳಲ್ಲಿ ಮಹಿಳೆಯರು ಈಗಾಗಲೇ ಅಧ್ಯಕ್ಷ ಸ್ಥಾನಕ್ಕೆ ಏರಿದ್ದಾರೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳ ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ನಮ್ಮ ವೆಬ್‌ಸೈಟ್ ಕುಟುಕಿ ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಿನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಕೊಲಂಬೊ ಬಳಿಯ ಕುದವೆಲ್ಲಾನಲ್ಲಿ ಉಂಟಾದ ಪ್ರವಾಹದಿಂದಾಗಿ ನಿವಾಸಿಗಳು ದೋಣಿಯಲ್ಲಿ ಸುರಕ್ಷಿತ ಸ್ಥಳಗಳಿಗೆ ತೆರಳಿದರು — ಎಎಫ್‌ಪಿ ಚಿತ್ರ

ಶ್ರೀಲಂಕಾ: ಪ್ರವಾಹಕ್ಕೆ 14 ಸಾವು

ಕೊಲಂಬೊ (ಎಪಿ): ಶ್ರೀಲಂಕಾದಲ್ಲಿ ಭಾರಿ ಮಳೆಯಿಂದ ಪ್ರವಾಹ ಪರಿಸ್ಥಿತಿ ಉದ್ಭವಿಸಿದ್ದು, ಮಣ್ಣುಕುಸಿತ ಉಂಟಾಗುತ್ತಿದೆ. ಇದರಿಂದಾಗಿ ದ್ವೀಪ ರಾಷ್ಟ್ರದಲ್ಲಿ ಇದುವರೆಗೆ 14 ಮಂದಿ ಸಾವಿಗೀಡಾಗಿದ್ದು, 6 ಮಂದಿ ನಾಪತ್ತೆಯಾಗಿದ್ದಾರೆ.

ಶಾಲಾ ಕಾಲೇಜುಗಳಿಗೆ ರಜೆ ಘೋಷಿಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮುಂದಿನ ದಿನಗಳ ಹವಾಮಾನವನ್ನು ಆಧರಿಸಿ ಶಾಲೆಗಳನ್ನು ಪುನರಾರಂಭಿಸುವ ಬಗ್ಗೆ ನಿರ್ಧರಿಸಲಾಗುವುದು ಎಂದು ಶಿಕ್ಷಣ ಇಲಾಖೆ ತಿಳಿಸಿದೆ.

ಭಾನುವಾರದಿಂದ ಭಾರಿ ಮಳೆ ಸುರಿಯುತ್ತಿದ್ದು, ಮನೆಗಳು ಮತ್ತು ರಸ್ತೆಗಳು ಜಲಾವೃತಗೊಂಡಿವೆ. ಮುಂಜಾಗ್ರತಾ ಕ್ರಮವಾಗಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸಲಾಗಿದೆ. ರಾಜಧಾನಿ ಕೊಲಂಬೊ ಮತ್ತು ರತ್ನಾಪುರ ಜಿಲ್ಲೆಯಲ್ಲಿ ಆರು ಮಂದಿ ಪ್ರವಾಹದಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ ಎಂದು ವಿಪತ್ತು ನಿರ್ವಹಣಾ ಕೇಂದ್ರ ಮಾಹಿತಿ ನೀಡಿದೆ. ಮನೆಗಳ ಮೇಲೆ ಮಣ್ಣು ಕುಸಿದು ಇತರ ಮೂವರ ಸತ್ತಿದ್ದು, ಮರ ಬಿದ್ದು ಒಬ್ಬ ಮೃತಪಟ್ಟಿದ್ದಾನೆ.

ಪ್ರವಾಹದಿಂದ 400ಕ್ಕೂ ಹೆಚ್ಚು ಮನೆಗಳಿಗೆ ಹಾನಿಯಾಗಿದ್ದು, ಸೋಮವಾರ ಹೊತ್ತಿಗೆ 5 ಸಾವಿರಕ್ಕೂ ಹೆಚ್ಚು ಮಂದಿಯನ್ನು ನಿರಾಶ್ರಿತರ ಶಿಬಿರಗಳಿಗೆ ಸ್ಥಳಾಂತರಿಸಲಾಗಿದೆ ಎಂದು ವಿಪತ್ತು ನಿರ್ವಹಣಾ ಕೇಂದ್ರದ ಪ್ರಕಟಣೆ ತಿಳಿಸಿದೆ. ನೌಕಾಪಡೆ ಮತ್ತು ಸೈನ್ಯವನ್ನು ರಕ್ಷಣಾ ಕಾರ್ಯಕ್ಕೆ ನಿಯೋಜಿಸಲಾಗಿದ್ದು, ಆಹಾರ ಮತ್ತು ಇತರ ಅಗತ್ಯ ವಸ್ತುಗಳನ್ನು ಪೂರೈಸಲಾಗುತ್ತಿದೆ.

20 ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದ್ದು, ಕೆಲವು ಹೆದ್ದಾರಿಗಳು ಸಂಪೂರ್ಣ ಜಲಾವೃತಗೊಂಡಿವೆ. ನದಿ ಸಮೀಪ ವಾಸಿಸುತ್ತಿರುವ ಜನರು ಸುರಕ್ಷಿತ ಸ್ಥಳಗಳಿಗೆ ತೆರಳಬೇಕು ಎಂದು ವಿಪತ್ತು ನಿರ್ವಹಣಾ ಕೇಂದ್ರ ಸೂಚಿಸಿದೆ.

ಕೊಲಂಬೊದ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸುವ ವಿಮಾನಗಳ ಮಾರ್ಗವನ್ನು ಬದಲಾಯಿಸಿ ಬೇರೆ ಸ್ಥಳಕ್ಕೆ ತೆರಳುವಂತೆ ಸೂಚಿಸಲಾಗಿದೆ.

ಅಫ್ಗಾನಿಸ್ತಾನದಲ್ಲಿ ಪ್ರವಾಹ: ಸಂಕಷ್ಟದಲ್ಲಿ ಮಕ್ಕಳು

ಇಸ್ಲಾಮಾಬಾದ್ (ಎಪಿ): ಅಫ್ಗಾನಿಸ್ತಾನದಲ್ಲಿ ಉಂಟಾಗಿರುವ ಪ್ರವಾಹದಿಂದಾಗಿ ಸಾವಿರಾರು ಮಕ್ಕಳು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಯುನಿಸೆಫ್ ತಿಳಿಸಿದೆ.

ಹವಾಮಾನ ವೈಪರೀತ್ಯದಿಂದಾಗಿ ಅಫ್ಗಾನಿಸ್ತಾನದಲ್ಲಿ ಕಳೆದ ವರ್ಷ ತೀವ್ರ ಬರ ಕಾಡಿದ್ದ ಪ್ರದೇಶಗಳಲ್ಲಿಯೂ ಪ್ರಸ್ತುತ ಭಾರಿ ಪ್ರವಾಹ ಪರಿಸ್ಥಿತಿ ನಿರ್ಮಾಣವಾಗಿದೆ. ಪ್ರವಾಹದಿಂದಾಗಿ ಕಳೆದ ಮೇ ತಿಂಗಳಲ್ಲಿ ಕನಿಷ್ಠ 300 ಮಂದಿ ಮೃತಪಟ್ಟಿದ್ದರು. ಸಾವಿರಾರು ಮನೆಗಳು ಕುಸಿದಿದ್ದವು ಎಂದು ವಿಶ್ವಸಂಸ್ಥೆ ಹೇಳಿದೆ.

ಇತ್ತೀಚಿನ ಪ್ರವಾಹ, ದೀರ್ಘಕಾಲೀನ ಬರ ಪರಿಸ್ಥಿತಿಯಿಂದ ಹತ್ತರಲ್ಲಿ ಮೂವರು ಮಕ್ಕಳಿಗೆ ಆಹಾರದ ಕೊರತೆ ಸಮಸ್ಯೆ ಉದ್ಭವಿಸಬಹುದು ಎಂದು ಅಂದಾಜಿಸಲಾಗಿದೆ. ಅಲ್ಲದೆ ಪ್ರಸಕ್ತ ವರ್ಷದಲ್ಲಿ ಕನಿಷ್ಠ 65 ಲಕ್ಷ ಮಕ್ಕಳು ಆಹಾರ ಬಿಕ್ಕಟ್ಟಿನ ಸಮಸ್ಯೆ ಎದುರಿಸಬೇಕಾದ ಅನಿವಾರ್ಯತೆ ಇದೆ ಎಂಬುದಾಗಿ 'ಸೇವ್ ದ ಚಿಲ್ಡ್ರನ್' ಸಂಸ್ಥೆ ಹೇಳಿದೆ.

ಅಂತರರಾಷ್ಟ್ರೀಯ ಸಮುದಾಯವು ಸಂಕಷ್ಟದಲ್ಲಿರುವ ಮಕ್ಕಳ ನೆರವಿಗೆ ಮುಂದಾಗಬೇಕು ಎಂದು ಯುನಿಸೆಫ್ ಅಫ್ಗಾನಿಸ್ತಾನ ಘಟಕದ ರಾಯಭಾರಿ ಡಾ.ತಾಜುದ್ದೀನ್ ಓಯೆವಾಲೆ ಕರೆ ನೀಡಿದ್ದಾರೆ.

ಟೈ ಪಂದ್ಯದಲ್ಲಿ ಒಮಾನ್ • ಮೊದಲೆರಡು ಎಸೆತಗಳಲ್ಲಿ ರುಬೇನ್‌ಗೆ ವಿಕೆಟ್

ನಮಿಬಿಯಾಗೆ 'ಸೂಪರ್' ಜಯ

ನಮಿಬಿಯಾದ ಬವಲರ್ ರುಬೆನ್ ಟ್ರಂಪಲ್ ಮ್ಯಾನ್ ಸಂಭ್ರಮ–ಎಎಫ್‌ಪಿ ಚಿತ್ರ

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ಕ್ರಿಕೆಟ್ ಲೋಕದಲ್ಲಿ ಅಂಬೆಗಾಲಿಡುತ್ತಿರುವ ಎರಡು ತಂಡಗಳು ಸೋಮವಾರ ನಡೆದ ಪಂದ್ಯದಲ್ಲಿ ರೋಚಕ ರಸದೌತಣ ನೀಡಿದವು.

ಟಿ20 ವಿಶ್ವಕಪ್ ಟೂರ್ನಿಯಲ್ಲಿ ಬೆಳಿಗ್ಗೆ (ಭಾರತೀಯ ಕಾಲಮಾನ) ನಡೆದ ಪಂದ್ಯದಲ್ಲಿ ನಮಿಬಿಯಾ ತಂಡವು ಒಮಾನ್ ವಿರುದ್ಧ ಸೂಪರ್ ಓವರ್‌ನಲ್ಲಿ ಜಯಭೇರಿ ಬಾರಿಸಿತು. ಮೊದಲು ಬ್ಯಾಟಿಂಗ್ ಮಾಡಿದ ಒಮಾನ್ ತಂಡವು 19.4 ಓವರ್‌ಗಳಲ್ಲಿ 109 ರನ್ ಗಳಿಸಿತು. ಅದಕ್ಕುತ್ತರವಾಗಿ ಜ್ಯಾನ್ ಫ್ರೈಲಿಂಕ್ (45; 48ಎ) ಬೀಸಾಟದಿಂದಾಗಿ ನಮಿಬಿಯಾ ತಂಡವು ಗೆಲುವಿನ ಹಾದಿ ಹಿಡಿದಿತ್ತು. ಆದರೆ ಒಮಾನ್ ತಂಡದ ಮಧ್ಯಮವೇಗಿ ಮೆಹ್ರಾನ್ ಖಾನ್ (7ಕ್ಕೆ3) ತಡೆಯೊಡ್ಡಿದರು. ಇದರಿಂದಾಗಿ ನಮಿಬಿಯಾ ತಂಡವು 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 109 ರನ್ ಗಳಿಸಿತು.

ಆಗ ಸೂಪರ್ ಓವರ್ ಆಡಿಸಲಾಯಿತು. ನಮಿಬಿಯಾದ ಗೆರಾರ್ಡ್ ಎರಸ್ಮಸ್ ಮತ್ತು ಡೇವಿಡ್ ವೀಸ್ ಜೊತೆಗೂಡಿ ಒಂದೇ ಓವರ್‌ನಲ್ಲಿ 21 ರನ್ ಸೂರೆ ಮಾಡಿದರು. ಗುರಿ ಬೆನ್ನಟ್ಟಿದ ಒಮಾನ್ ತಂಡಕ್ಕೆ 1 ವಿಕೆಟ್‌ಗೆ 10 ರನ್ ಗಳಿಸಲಷ್ಟೇ ಸಾಧ್ಯವಾಯಿತು.

ರುಬೇನ್ ದಾಖಲೆ: ಟಾಸ್ ಗೆದ್ದ ನಮಿಬಿಯಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ನಮಿಬಿಯಾದ ವೇಗಿ ರುಬೇನ್ ಟ್ರಂಪಲ್‌ಮ್ಯಾನ್ (21ಕ್ಕೆ4) ಅವರು ಒಮಾನ್ ತಂಡವನ್ನು ಅಲ್ಪಮೊತ್ತಕ್ಕೆ ಕಟ್ಟಿಹಾಕಿದರು.

ಪಂದ್ಯದ ಮೊದಲ ಎರಡೂ ಎಸೆತಗಳಲ್ಲಿ ವಿಕೆಟ್ ಗಳಿಸಿದ ಪ್ರಥಮ ಬೌಲರ್ ಎಂಬ ವಿಶ್ವದಾಖಲೆಯನ್ನು ರುಬೇನ್ ಬರೆದರು. 26 ವರ್ಷದ ರುಬೇನ್ ಅವರು ಒಮಾನ್ ಆರಂಭಿಕ ಬ್ಯಾಟರ್ ಕಶ್ಯಪ್ ಪ್ರಜಾಪತಿ ಮತ್ತು ನಾಯಕ ಅಕೀಬ್ ಇಲಿಯಾಸ್ ಅವರ ವಿಕೆಟ್ ಕಬಳಿಸಿದರು. ಇಬ್ಬರೂ ಬ್ಯಾಟರ್‌ಗಳೂ 'ಗೋಲ್ಡನ್ ಡಕ್' ಔಟ್ ಆದರು. ಒಮಾನ್ ತಂಡದ ಖಾಲೀದ್ ಕೈಲ್ 39 ಎಸೆತಗಳಲ್ಲಿ 34 ರನ್ ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಒಮಾನ್: 19.4 ಓವರ್‌ಗಳಲ್ಲಿ 109 (ಖಾಲೀದ್ ಕೈಲ್ 34, ರುಬೇನ್ ಟ್ರಂಪಲ್‌ಮ್ಯಾನ್ 21ಕ್ಕೆ4, ಡೇವಿಡ್ ವೀಸ್ 28ಕ್ಕೆ3) ನಮಿಬಿಯಾ: 20 ಓವರ್‌ಗಳಲ್ಲಿ 6 ವಿಕೆಟ್‌ಗಳಿಗೆ 109 (ಜ್ಯಾನ್ ಫ್ರೈಲಿಂಕ್ 45, ಮೆಹ್ರನ್ ಖಾನ್ 7ಕ್ಕೆ3) ಫಲಿತಾಂಶ: ಪಂದ್ಯ ಟೈ, ಸೂಪರ್ ಓವರ್‌ನಲ್ಲಿ ನಮಿಬಿಯಾಗೆ ಜಯ. ಪಂದ್ಯ ಶ್ರೇಷ್ಠ: ಡೇವಿಡ್ ವೀಸ್

ಮುಖ್ಯಾಂಶಗಳು

- ಪಂದ್ಯದ ಮೊದಲೆರಡೂ ಎಸೆತಗಳಲ್ಲಿ ವಿಕೆಟ್ ಗಳಿಸಿದ ರುಬೇನ್ ಟ್ರಂಪೆಲ್‌ಮ್ಯಾನ್
- ಡೇವಿಡ್ ವೀಸ್‌ಗೆ ಮೂರು ವಿಕೆಟ್

ದಕ್ಷಿಣ ಆಫ್ರಿಕಾ ತಂಡದ ಶುಭಾರಂಭ

ವೇಗಿ ಎನ್ರಿಚ್ ದಾಳಿಗೆ ಪರದಾಡಿದ ಶ್ರೀಲಂಕಾ • ಹಸರಂಗಾ ಪಡೆಗೆ ಸೋಲು

ದಕ್ಷಿಣ ಆಫ್ರಿಕಾದ ವೇಗಿ ಎನ್ರಿಚ್ ನಾಕಿಯಾ–ಎಪಿ ಪಿಟಿಐ ಚಿತ್ರ

ನ್ಯೂಯಾರ್ಕ್ (ಪಿಟಿಐ): ವೇಗಿ ಎನ್ರಿಚ್ ನಾಕಿಯ ಅವರ ಅಮೋಘ ದಾಳಿಯ ಬಲದಿಂದ ದಕ್ಷಿಣ ಆಫ್ರಿಕಾ ತಂಡವು ಸೋಮವಾರ ಇಲ್ಲಿ ನಡೆದ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ನಾಸೌ ಕೌಂಟಿ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಸೋಮವಾರ ನಡೆದ ಡಿ ಗುಂಪಿನ ಪಂದ್ಯದಲ್ಲಿ ಟಾಸ್ ಗೆದ್ದ ಶ್ರೀಲಂಕಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು.

ಆದರೆ ನಾಯಕ ವನಿಂದು ಹಸರಂಗಾ ಅವರ ಲೆಕ್ಕಾಚಾರ ತಲೆಕೆಳಗಾಯಿತು. ದಕ್ಷಿಣ ಆಫ್ರಿಕಾ ತಂಡದ ನಾಕಿಯಾ (7ಕ್ಕೆ4) ದಾಳಿಯ ಮುಂದೆ ಶ್ರೀಲಂಕಾ 19.1 ಓವರ್‌ಗಳಲ್ಲಿ 77 ರನ್ ಗಳಿಸಿ ಆಲೌಟ್ ಆಯಿತು.

ಗುರಿ ಬೆನ್ನಟ್ಟಿದ್ದ ದಕ್ಷಿಣ ಆಫ್ರಿಕಾ ತಂಡವು 16.2 ಓವರ್‌ಗಳಲ್ಲಿ 4 ವಿಕೆಟ್‌ಗೆ 80 ರನ್ ಗಳಿಸಿತು. ಆರು ವಿಕೆಟ್‌ಗಳಿಂದ ಜಯಿಸಿತು. ಅಲ್ಪಮೊತ್ತವನ್ನು ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಸುಲಭವಾಗಿ ಜಯಿಸಲು ಸಾಧ್ಯವಾಗಲಿಲ್ಲ. ಶ್ರೀಲಂಕಾದ ಬೌಲರ್‌ಗಳು ಸವಾಲೊಡ್ಡಿದರು.

ರೀಜಾ ಹೆಂಡ್ರಿಕ್ಸ್ (4), ಏಡನ್ ಮರ್ಕರಂ (12) ಮತ್ತು ಟ್ರಿಸ್ಟನ್ ಸ್ಟಬ್ಸ್ (13) ನಿರಾಸೆ ಮೂಡಿಸಿದರು.

ಆರಂಭಿಕ ಆಟಗಾರ ಕ್ವಿಂಟನ್ ಡಿಕಾಕ್ (20, 27ಎ) ಹಾಗೂ ಮಧ್ಯಮ ಕ್ರಮಾಂಕದ ಹೆನ್ರಿಚ್ ಕ್ಲಾಸೆನ್ (ಅಜೇಯ 19, 22) ಅವರು ತಾಳ್ಮೆಯ ಆಟವಾಡಿ ಗೆಲುವಿಗೆ ಕಾಣಿಕೆ ನೀಡಿದರು.

ಲಂಕಾ ಬ್ಯಾಟಿಂಗ್ ವೈಫಲ್ಯ: ಇನಿಂಗ್ಸ್ ಆರಂಭಿಸಿದ ಲಂಕಾ ಬ್ಯಾಟಿಂಗ್ ಪಡೆ ಎಡವಿತು. ನಾಲ್ಕನೇ ಓವರ್‌ನಲ್ಲಿ ಒಟನೀಲ್ ಬಾರ್ಟ್‌ಮನ್ ಅವರ ದಾಳಿಯಲ್ಲಿ ಪಥುಮ ಸಿಸಾಂಕಾ (3 ರನ್) ಔಟಾದರು. ಈ ಹಂತದಲ್ಲಿ ಕುಶಾಲ ಮೆಂಡಿಸ್ (19 ರನ್) ಮತ್ತು ಕಮಿಂದು ಮೆಂಡಿಸ್ (11 ರನ್) ಜೊತೆಗೂಡಿ ಬಲ ತುಂಬುವ ಪ್ರಯತ್ನ ಮಾಡಿದರು.

ಆದರೆ ಎಂಟನೇ ಓವರ್‌ನಲ್ಲಿ ಕಮಿಂದು ವಿಕೆಟ್ ಕಬಳಿಸಿದ ನಾಕಿಯಾ ಪೆಟ್ಟುಕೊಟ್ಟರು. ಇನ್ನೊಂದು ಬದಿಯಿಂದ ವೇಗಿ ಕಗಿಸೊ ರಬಾಡ ಕೂಡ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳ ಮೇಲೆ ಒತ್ತಡ ಹೇರಿದರು.

ಶ್ರೀಲಂಕಾ ನಾಯಕ ಹಸರಂಗಾ ಮತ್ತು ಸಮರವಿಕ್ರಮ ಅವರಿಬ್ಬರ ವಿಕೆಟ್‌ಗಳನ್ನೂ ಸ್ಪಿನ್ನರ್ ಕೇಶವ್ ಮಹಾರಾಜ್ ಗಳಿಸಿದರು.

ಇಬ್ಬರೂ ಬ್ಯಾಟರ್‌ಗಳಿಗೆ ಖಾತೆ ತೆರೆಯಲೂ ಸಾಧ್ಯವಾಗಲಿಲ್ಲ. ಇದು ತಂಡಕ್ಕೆ ಬಹಳ ದೊಡ್ಡ ಹಿನ್ನಡೆಯಾಯಿತು.

ತಂಡದ ಮೊತ್ತ ಹೆಚ್ಚಿಸುವ ಪ್ರಯತ್ನ ಮಾಡಿದ ಅನುಭವಿ ಆಟಗಾರ ಏಂಜೆಲೊ ಮ್ಯಾಥ್ಯೂಸ್ ಹಾಗೂ ಅಸಲಂಕಾ ಅವರ ವಿಕೆಟ್‌ಗಳನ್ನೂ ನಾಕಿಯ ಗಳಿಸಿದರು. ಇದರಿಂದಾಗಿ ತಂಡದ ಮೊತ್ತವು ಮೂರಂಕಿ ಮುಟ್ಟಲಿಲ್ಲ.

ಕುಶಾಲ, ಕಮಿಂದು ಮತ್ತು ಮ್ಯಾಥ್ಯೂಸ್ ಅವರು ಮಾತ್ರ ಎರಡಂಕಿ ಸ್ಕೋರ್ ಗಳಿಸಿದ ಬ್ಯಾಟರ್‌ಗಳು.

ಲಂಕಾ ಇನಿಂಗ್ಸ್‌ನಲ್ಲಿ ಮೂರು ಬೌಂಡರಿ ಹಾಗೂ ಮೂರು ಸಿಕ್ಸರ್‌ಗಳು ದಾಖಲಾದವು.

ಸಂಕ್ಷಿಪ್ತ ಸ್ಕೋರು: ಶ್ರೀಲಂಕಾ: 19.1 ಓವರ್‌ಗಳಲ್ಲಿ 77 (ಕುಶಾಲ ಮೆಂಡಿಸ್ 19, ಕಮಿಂದು ಮೆಂಡಿಸ್ 11, ಏಂಜೆಲೊ ಮ್ಯಾಥ್ಯೂಸ್ 16, ಕಗಿಸೊ ರಬಾಡ 21ಕ್ಕೆ2, ಕೇಶವ್ ಮಹಾರಾಜ 22ಕ್ಕೆ2, ಎನ್ರಿಚ್ ನಾಕಿಯಾ 7ಕ್ಕೆ4)

ದಕ್ಷಿಣ ಆಫ್ರಿಕಾ: 16.2 ಓವರ್‌ಗಳಲ್ಲಿ 4 ವಿಕೆಟ್‌ಗೆ 80 (ಕ್ವಿಂಟನ್ ಡಿಕಾಕ್ 20, ಟ್ರಿಸ್ಟನ್ ಸ್ಟಬ್ಸ್ 13, ಹೆನ್ರಿಚ್ ಕ್ಲಾಸೆನ್ ಅಜೇಯ 19, ವನಿಂದು ಹಸರಂಗಾ 22ಕ್ಕೆ2, ದಾಸುನ್ ಶನಕಾ 6ಕ್ಕೆ1).

ಪಂದ್ಯ ಶ್ರೇಷ್ಠ: ಎನ್ರಿಚ್ ನಾಕಿಯ

ಅಫ್ಗಾನಿಸ್ತಾನಕ್ಕೆ ಉಗಾಂಡ ಸವಾಲು ಇಂದು


ಫ್ರಾಂಕ್ ಎನ್ಸುಬುಗಾ

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ಗಯಾನದಲ್ಲಿ ಮಂಗಳವಾರ ನಡೆಯುವ ಟಿ20 ವಿಶ್ವಕಪ್ ಟೂರ್ನಿಯ ಮತ್ತೊಂದು ಪಂದ್ಯದಲ್ಲಿ ಅಫ್ಗಾನಿಸ್ತಾನ ತಂಡವು ಉಗಾಂಡವನ್ನು ಎದುರಿಸಲಿದೆ. ಟಿ20 ವಿಶ್ವಕಪ್‌ಗೆ ಮೊದಲ ಬಾರಿಗೆ ಆಫ್ರಿಕಾ ತಂಡ ಅರ್ಹತೆ ಪಡೆದಿದೆ.

ಕಳೆದ ವರ್ಷ ಭಾರತದಲ್ಲಿ ನಡೆದ ಏಕದಿನ ವಿಶ್ವಕಪ್‌ನಲ್ಲಿ ಇಂಗ್ಲೆಂಡ್, ದಕ್ಷಿಣ ಆಫ್ರಿಕಾ ಮತ್ತು ಪಾಕಿಸ್ತಾನವನ್ನು ಸೋಲಿಸಿದ ಅಫ್ಗಾನಿಸ್ತಾನವು, ಕಳೆದ ಐಸಿಸಿ ಟೂರ್ನಿಯಲ್ಲೂ ಉತ್ತಮ ಪ್ರದರ್ಶನ ನೀಡಿತು.

ಉಗಾಂಡದ ರಾಜಧಾನಿ ಕಂಪಾಲಾದ ಜನಸಂಖ್ಯೆ ಶೇ 60ರಷ್ಟು ಜನರು ಕೊಳಗೇರಿಗಳಲ್ಲಿ ವಾಸಿಸುತ್ತಿದ್ದಾರೆ. ಇವರ ನಡುವೆ ವೇಗಿ ಜುಮಾ ಮಿಯಾಗಿ ಅವರು ಅಲ್ಲಿಯ ಜನರಿಗೆ ಸ್ಫೂರ್ತಿಯ ಸೆಲೆಯಾಗಿದ್ದಾರೆ.

ಫುಟ್‌ಬಾಲ್ ಪ್ರಧಾನ ದೇಶವಾಗಿರುವ ಉಗಾಂಡದ ಯುವ ಜನರು ಜುಮಾ ಅವರಿಂದಾಗಿ ಕ್ರಿಕೆಟ್‌ನತ್ತ ಒಲವು ಬೆಳೆಸಿಕೊಂಡಿದ್ದಾರೆ. ತಂಡದ ಆಟ ನೋಡಲು ಅಲ್ಲಿನವರು ಮಾತ್ರವಲ್ಲದೇ, ಹೊರಗಿನ ಕ್ರಿಕೆಟ್ ಅಭಿಮಾನಿಗಳು ಕಾತರರಾಗಿದ್ದಾರೆ.

ಮಿಯಾಗಿ 21 ಅಂತರರಾಷ್ಟ್ರೀಯ ಟಿ20 ಪಂದ್ಯಗಳಿಂದ 34 ವಿಕೆಟ್ ಪಡೆದಿದ್ದಾರೆ. ರಾಷ್ಟ್ರೀಯ ತಂಡದ ಇತರೆ ಆಟಗಾರರ ಸ್ಥಿತಿಯೂ ಇದಕ್ಕೆ ಭಿನ್ನವಾಗಿಲ್ಲ.

ಸೈಮನ್ ಸೆಸಾಜಿ ಹಾಗೂ ಮೀಸಲು ಆಟಗಾರ ಇನೊಸೆಂಟ್ ಎಂವೆಬೆಜ್ ಮೊದಲಾದವರು ಹಿಂದುಳಿದ ಪ್ರದೇಶದಿಂದ ಬಂದವರು. ತಂಡದಲ್ಲಿ 43 ವರ್ಷದ ಆಫ್ ಸ್ಪಿನ್ನರ್ ಫ್ರಾಂಕ್ ಎನ್ಸುಬುಗಾ ಅತ್ಯಂತ ಹಿರಿಯ ಕ್ರಿಕೆಟಿಗರಾಗಿದ್ದಾರೆ.

ಉಗಾಂಡ ತಂಡದ ಕೋಚ್ ಭಾರತ ಮೂಲದ ಅಭಯ್ ಶರ್ಮಾ, 'ಹಿಂದುಳಿದ ಪ್ರದೇಶದದಿಂದ ಬಂದ ಹಲವರು ರಾಷ್ಟ್ರೀಯ ತಂಡಕ್ಕಾಗಿ ಆಡುವುದನ್ನು ನೋಡುವುದು ಸ್ಫೂರ್ತಿದಾಯಕವಾಗಿದೆ. ನಾನು ಇಲ್ಲಿಗೆ ಬರುವ ಮೊದಲು ಅವರು ಇಂತಹ ಪರಿಸ್ಥಿತಿಗಳಲ್ಲಿ ಬದುಕುತ್ತಾರೆ ಎಂದು ನಿರೀಕ್ಷಿಸಿರಲಿಲ್ಲ. ಕೋಚ್ ಬಗ್ಗೆ ಅವರಿಗೆ ಅಪಾರ ಗೌರವವೂ ಇದೆ. ತಮ್ಮ ಜೀವನವನ್ನು ಕೋಚ್ ಬದಲಾಯಿಸಬಲ್ಲರು ಎನ್ನುವಷ್ಟು ಅವರು ಮುಗ್ಧರು' ಎಂದು ಹೇಳಿದರು.

ಇಂದಿನ ಪಂದ್ಯಗಳು

- ಅಫ್ಗಾನಿಸ್ತಾನ–ಉಗಾಂಡ (ಬೆಳಿಗ್ಗೆ 6ರಿಂದ)
- ಇಂಗ್ಲೆಂಡ್–ಸ್ಕಾಟ್ಲೆಂಡ್ (ರಾತ್ರಿ 8ರಿಂದ)
- ನೆದರ್ಲೆಂಡ್ಸ್–ನೇಪಾಳ (ರಾತ್ರಿ 9ರಿಂದ)
- **ನೇರಪ್ರಸಾರ:** ಸ್ಟಾರ್ ಸ್ಪೋರ್ಟ್ಸ್, ಡಿಡಿ ಸ್ಪೋರ್ಟ್ಸ್, ಹಾಟ್‌ಸ್ಟಾರ್ ಆ್ಯಪ್

ಅಫ್ಗಾನಿಸ್ತಾನ ತಂಡ: ರಶೀದ್ ಖಾನ್ (ನಾಯಕ), ರಹಮಾನುಲ್ಲಾ ಗುರ್ಬಾಜ್ (ವಿಕೆಟ್ ಕೀಪರ್), ಇಬ್ರಾಹಿಂ ಝುದ್ರನ್, ಅಜ್ಮತುಲ್ಲಾ ಒಮರ್‌ಝೈ, ನಜೀಬುಲ್ಲಾ ಝುದ್ರಾನ್, ಮೊಹಮ್ಮದ್ ಐಸಾಕ್, ಮೊಹಮ್ಮದ್ ನಬಿ, ಗುಲ್ಬಾದಿನ್ ನೈಬ್, ಕರೀಮ್ ಜನತ್, ನಂಗ್ಯಾಲ್ ಖರೋಟಿ, ಮುಜೀಬ್ ಉರ್ ರಹಮಾನ್, ನೂರ್ ಅಹ್ಮದ್, ನವೀನ್-ಉಲ್-ಹಕ್, ಫಜಲ್ಹಾಕ್ ಫಾರೂಕಿ, ಅಹ್ಮದ್ ಫೇರ್ ಮಲಿಕ್.

ಉಗಾಂಡಾ: ಬ್ರಯನ್ ಮಸಾಬಾ (ನಾಯಕ), ಸೈಮನ್ ಸೆಸಾಜಿ, ರೋಜರ್ ಮುಕಾಸಾ, ಕಾಸ್ಮಾಸ್ ಕೈವುಟಾ, ದಿನೇಶ್ ನಕ್ರಾನಿ, ಫ್ರೆಡ್ ಅಚೆಲಾಮ್, ಕೆನ್ನೆತ್ ವೈಸ್ವಾ, ಅಲ್ಪೇಶ್ ರಾಮ್ಜಾನಿ, ಫ್ರಾಂಕ್ ಎನ್ಸುಬುಗಾ, ಹೆನ್ರಿ ಸೆನ್ಯಾಂಡೊ, ಬಿಲಾಲ್ ಹಸುನ್, ರಾಬಿನ್ಸನ್ ಒಬುಯಾ, ರಿಯಾಜತ್ ಅಲಿ ಶಾ (ಉಪನಾಯಕ), ಜುಮಾ ಮಿಯಾಗಿ, ರೋನಕ್ ಪಟೇಲ್.

ಇಂಗ್ಲೆಂಡ್–ಸ್ಕಾಟ್ಲೆಂಡ್ ಹಣಾಹಣಿ ಇಂದು

ವೇಗಿ ಜೋಫ್ರಾ ಮೇಲೆ ಕಣ್ಣು

ಇಂಗ್ಲೆಂಡ್ ತಂಡದ ನಾಯಕ ಜೋಸ್ ಬಟ್ಲರ್ ಮತ್ತು ಜೋಫ್ರಾ ಆರ್ಚರ್ – ಎಎಫ್‌ಪಿ ಚಿತ್ರ

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ಹಾಲಿ ಚಾಂಪಿಯನ್ ಇಂಗ್ಲೆಂಡ್ ತಂಡವು ಮಂಗಳವಾರ ಟಿ20 ವಿಶ್ವಕಪ್ ಟೂರ್ನಿಯಲ್ಲಿ ತನ್ನ ಅಭಿಯಾನ ಆರಂಭಿಸಲಿದೆ.

ಬಿ ಗುಂಪಿನ ಪಂದ್ಯದಲ್ಲಿ ಜೋಸ್ ಬಟ್ಲರ್ ನಾಯಕತ್ವದ ಇಂಗ್ಲೆಂಡ್ ತಂಡವು ಸ್ಕಾಟ್ಲೆಂಡ್ ಎದುರು ಆಡಲಿದೆ. ಈಚೆಗೆ ಮುಗಿದ ಐಪಿಎಲ್ ಟೂರ್ನಿಯಲ್ಲಿ ಫಿಲ್ ಸಾಲ್ಟ್, ಜೋಸ್ ಬಟ್ಲರ್, ಮೋಯಿನ್ ಅಲಿ, ಲಿಯಾಮ್ ಲಿವಿಂಗ್‌ಸ್ಟೋನ್ ಹಾಗೂ ಸ್ಯಾಮ್ ಕರನ್ ಆಡಿದ್ದರು.

ಅವರೊಂದಿಗೆ ವೇಗಿ ಜೋಫ್ರಾ ಆರ್ಚರ್ ಇಂಗ್ಲೆಂಡ್ ತಂಡಕ್ಕೆ ಮರಳಿದ್ದಾರೆ. ಇದು ಬೌಲಿಂಗ್ ಬಲವನ್ನು ದ್ವಿಗುಣಗೊಳಿಸಿದೆ. ಎರಡು ಬಾರಿಯ ಚಾಂಪಿಯನ್ ಇಂಗ್ಲೆಂಡ್ ತಂಡದ ಅನುಭವ ಹಾಗೂ ಸಾಮರ್ಥ್ಯದ ಮುಂದೆ ಸ್ಕಾಟ್ಲೆಂಡ್ ಯಾವ ಆಯಾಮದಿಂದಲೂ ಸಾಟಿಯಾಗುವುದಿಲ್ಲ.

ಆದರೆ ಚುಟುಕು ಮಾದರಿಯಲ್ಲಿ ಯಾವುದೇ ತಂಡವನ್ನು ಹಗುರವಾಗಿ ಪರಿಗಣಿಸುವಂತಿಲ್ಲ. ಮೂರನೇ ಪ್ರಶಸ್ತಿ ಮೇಲೆ ಕಣ್ಣಿಟ್ಟಿರುವ ಇಂಗ್ಲೆಂಡ್ ತಂಡವು ಗೆಲುವಿನೊಂದಿಗೆ ಅಭಿಯಾನ ಆರಂಭಿಸುವ ವಿಶ್ವಾಸದಲ್ಲಿದೆ. ಈ ಗುಂಪಿನಲ್ಲಿ ಇಂಗ್ಲೆಂಡ್ ತಂಡವು ಆಸ್ಟ್ರೇಲಿಯಾ, ನಮಿಬಿಯಾ ಹಾಗೂ ಒಮಾನ್ ತಂಡಗಳ ಎದುರು ಪಂದ್ಯಗಳನ್ನು ಆಡಲಿದೆ.

ಸೂಪರ್ 8ರ ಹಂತ ಪ್ರವೇಶಿಸಲು ಗುಂಪು ಹಂತದಲ್ಲಿ ಅಗ್ರ ಎರಡರಲ್ಲಿ ಸ್ಥಾನ ಪಡೆಯಬೇಕಿದೆ. 2022ರಲ್ಲಿ ಇಂಗ್ಲೆಂಡ್ ಬಳಗವು ಫೈನಲ್‌ನಲ್ಲಿ ಪಾಕಿಸ್ತಾನ ಎದುರು ಜಯಿಸಿತ್ತು.

ಕ್ವಾಲಿಫೈಯರ್ ಹಂತದಲ್ಲಿ ಸ್ಕಾಟ್ಲೆಂಡ್ ತಂಡವು ತನ್ನ ಪಾಲಿನ ಎಲ್ಲ ಆರು ಪಂದ್ಯಗಳಲ್ಲಿಯೂ ಜಯಿಸಿತ್ತು. ಅದರೊಂದಿಗೆ ವಿಶ್ವಕಪ್ ಟೂರ್ನಿಗೆ ಅರ್ಹತೆ ಗಿಟ್ಟಿಸಿತ್ತು.

ರಿಚಿ ಬ್ಯಾರಿಂಗ್ಟನ್ ನಾಯಕತ್ವದ ಸ್ಕಾಟ್ಲೆಂಡ್ ತಂಡದಲ್ಲಿ ಅನುಭವದ ಕೊರತೆ ಇದೆ. ಆದರೆ ಪ್ರತಿಭಾವಂತರಿದ್ದಾರೆ. ಇಂಗ್ಲೆಂಡ್ ತಂಡಕ್ಕೆ ಕಠಿಣ ಸವಾಲೊಡ್ಡಲು ಸಿದ್ಧರಾಗಿದ್ದಾರೆ.

ದೂರದರ್ಶನದಲ್ಲಿ ಟಿ20 ವಿಶ್ವಕಪ್ ಪ್ರಸಾರ

ನವದೆಹಲಿ (ಪಿಟಿಐ): ವೆಸ್ಟ್‌ಇಂಡೀಸ್ ಮತ್ತು ಅಮೆರಿಕ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿ, ಮುಂದಿನ ತಿಂಗಳು ಆರಂಭವಾಗುವ ಪ್ಯಾರಿಸ್ ಒಲಿಂಪಿಕ್ಸ್, ಮತ್ತು ವಿಂಬಲ್ಡನ್ ಟೆನಿಸ್ ಟೂರ್ನಿಯನ್ನು ದೂರದರ್ಶನ ಕ್ರೀಡಾ ವಾಹಿನಿಯಲ್ಲಿ ಪ್ರಸಾರ ಮಾಡುವುದಾಗಿ ಪ್ರಸಾರ ಭಾರತಿ ಸೋಮವಾರ ತಿಳಿಸಿದೆ.

ಮಾಧ್ಯಮ ಸಂವಾದ ವೇಳೆ ಪ್ರಸಾರ ಭಾರತಿ ಸಿಇಒ ಗೌರವ್ ದ್ವಿವೇದಿ ಈ ಘೋಷಣೆ ಮಾಡಿದ್ದಾರೆ. ಟಿ20 ವಿಶ್ವಕಪ್‌ಗಾಗಿ ಪ್ರಸಾರ ಭಾರತಿ ವಿಶೇಷ ಗೀತೆ 'ಝುಜ್ಬಾ' ಅನ್ನು ಬಿಡುಗಡೆ ಮಾಡಿತು.

ಜುಲೈ 26 ರಿಂದ ಆಗಸ್ಟ್ 11 ರವರೆಗೆ ಪ್ಯಾರಿಸ್ ಒಲಿಂಪಿಕ್ಸ್ ಮತ್ತು ಪ್ಯಾರಿಸ್ ಪ್ಯಾರಾಲಿಂಪಿಕ್ಸ್ (ಆಗಸ್ಟ್ 28 ರಿಂದ ಸೆಪ್ಟೆಂಬರ್ 8) ನ ನೇರ ಮತ್ತು ಪ್ರಮುಖ ಅಂಶಗಳನ್ನುಪ್ರಸಾರಮಾಡಲಿದೆ.

ಜುಲೈ 6 ರಿಂದ 14ರವರೆಗೆ ಭಾರತ ಕ್ರಿಕೆಟ್ ತಂಡದ ಜಿಂಬಾಬ್ವೆ ಪ್ರವಾಸ, ಐದು ಟಿ20 ಪಂದ್ಯ ಮತ್ತು ಜುಲೈ 27 ರಿಂದ ಆಗಸ್ಟ್ 7 ರವರೆಗೆ ಶ್ರೀಲಂಕಾ–ಭಾರತ ಏಕದಿನ ಸರಣಿ ಹಾಗೂ ಫ್ರೆಂಚ್ ಓಪನ್ ಮತ್ತು ವಿಂಬಲ್ಡನ್ ಫೈನಲ್ ಪಂದ್ಯಗಳನ್ನು ದೂರದರ್ಶನ ಪ್ರಸಾರ ಮಾಡಲಿದೆ.

'ತನ್ನ ಕ್ರೀಡಾ ವಾಹಿನಿಯಲ್ಲಿ ವಿವಿಧ ಕ್ರೀಡಾ ಲೀಗ್‌ಗಳನ್ನು ಪ್ರಸಾರ ಮಾಡಲು ಕ್ರೀಡಾ ಸಂಸ್ಥೆಗಳು ಮತ್ತು ಏಜೆನ್ಸಿಗಳೊಂದಿಗೆ ಮಾತುಕತೆ ನಡೆಯುತ್ತಿದೆ' ಎಂದು ತಿಳಿಸಿದರು.

ಬೆಂಗಳೂರು ಸ್ಮ್ಯಾಷರ್ಸ್‌ಗೆ ಎಲೆನಾ ಕೋಚ್

ಎಲೆನಾ ಟಿಮಿನಾ

ಮುಂಬೈ (ಪಿಟಿಐ): ನಾಲ್ಕು ಬಾರಿಯ ಒಲಿಂಪಿಯನ್ ಎಲೆನಾ ಟಿಮಿನಾ ಅವರು ಯುಟಿಟಿ (ಅಲ್ಟಿಮೇಟ್ ಟೇಬಲ್ ಟೆನಿಸ್) ಐದನೇ ಆವೃತ್ತಿಯಲ್ಲಿ ಬೆಂಗಳೂರು ಸ್ಮ್ಯಾಷರ್ಸ್ ತಂಡಕ್ಕೆ ಮಾರ್ಗದರ್ಶನ ನೀಡುವರು.

ನೆದರ್ಲೆಂಡ್ಸ್‌ನ ಟಿಮಿನಾ ಅವರು ಕಳೆದ ಆವೃತ್ತಿಯಲ್ಲಿ ಗೋವಾ ಚಾಲೆಂಜರ್ಸ್‌ನ ಕೋಚ್ ಆಗಿ ಕಾರ್ಯ ನಿರ್ವಹಿಸಿದ್ದು, ಆ ತಂಡವು ಪ್ರಶಸ್ತಿ ಮುಡಿಗೇರಿಸಿಕೊಂಡಿತ್ತು.

ಎಂಟು ಫ್ರಾಂಚೈಸಿಗಳು ಸೋಮವಾರ ಇಲ್ಲಿ ಕೋಚ್‌ಗಳ ಡ್ರಾಫ್ಟ್ ಈವೆಂಟ್‌ನಲ್ಲಿ ತಲಾ ಒಂದೊಂದು ವಿದೇಶಿ ಮತ್ತು ಭಾರತೀಯ ಕೋಚ್‌ಗಳನ್ನು ಆಯ್ಕೆ ಮಾಡಿಕೊಂಡವು. ಅನುಭವಿ ಫ್ರಾನ್ಸಿಸ್ಕೊ ಸ್ಯಾಂಟೋಸ್ ಅವರನ್ನು ಅಹಮದಾಬಾದ್ ಎಸ್.ಜಿ. ಪೈಪರ್ಸ್ ತನ್ನ ತೆಕ್ಕೆಗೆ ಹಾಕಿಕೊಂಡಿತು. ಇದು ಫ್ರಾನ್ಸಿಸ್ಕೊ ಅವರಿಗೆ ಐದನೇ ಯುಟಿಟಿ ಆವೃತ್ತಿಯಾಗಿದೆ.

ಯು ಮುಂಬಾ ತಂಡವು ಅನ್ಮೊಲ್ ಗಾರ್ಗ್ (ಭಾರತೀಯ ಕೋಚ್) ಅವರನ್ನು ಉಳಿಸಿಕೊಂಡು, ಇಂಗ್ಲೆಂಡ್ ತಂಡದ ಮುಖ್ಯ ಕೋಚ್ ಜಾನ್ ಮರ್ಫಿ ಅವರನ್ನು ಆಯ್ಕೆ ಮಾಡಿಕೊಂಡಿತು.

ಗೋವಾ ಚಾಲೆಂಜರ್ಸ್ ತಂಡವು ಹಂಗೇರಿಯ ಮಹಿಳಾ ತಂಡದ ಕೋಚ್ ಝೋಲ್ಟಾನ್ ಬಟೋರ್ಫಿ ಅವರನ್ನು ಆಯ್ಕೆ ಮಾಡಿದರೆ, ಚೆನ್ನೈ ಲಯನ್ಸ್ ತಂಡವು ಸ್ವೀಡನ್‌ನ ರಾಷ್ಟ್ರೀಯ ತಂಡದ ಮುಖ್ಯ ಕೋಚ್ ಟೋಬಿಯಾಸ್ ಬರ್ಗ್‌ಮನ್ ಅವರನ್ನು ತೆಕ್ಕೆಗೆ ಹಾಕಿಕೊಂಡಿತು.

ಸಚಿನ್ ಶೆಟ್ಟಿ ಮತ್ತು ಸೋಮನಾಥ್ ಘೋಷ್ ಅವರು ಕ್ರಮವಾಗಿ ದಬಾಂಗ್ ಡೆಲ್ಲಿ ಟಿಟಿಸಿ ಮತ್ತು ಜೈಪುರ ಪೇಟ್ರಿಯಾಟ್ಸ್ ತಂಡಗಳಿಗೆ ಭಾರತೀಯ ಕೋಚ್‌ಗಳಾಗಿ ಆಯ್ಕೆಯಾದರು.

ನಾಲ್ವರು ಭಾರತೀಯ ಕೋಚ್‌ಗಳು ಈ ಆವೃತ್ತಿಯಲ್ಲಿ ಯುಟಿಟಿಗೆ ಪದಾರ್ಪಣೆ ಮಾಡುವರು.

ಜೇ ಮೋದಕ್ ಅವರು ಅಹಮದಾಬಾದ್ ತಂಡಕ್ಕೆ, ಅನ್ಷುಮನ್ ರಾಯ್ ಅವರು ಬೆಂಗಳೂರು ತಂಡಕ್ಕೆ, ರಾಷ್ಟ್ರೀಯ ಮಾಜಿ ಚಾಂಪಿಯನ್ ಶುಭಜಿತ್ ಸಹಾ ಅವರು ಗೋವಾ ಚಾಲೆಂಜರ್ಸ್ ತಂಡಕ್ಕೆ ಮತ್ತು ಸುಬಿನ್ ಕುಮಾರ್ ಅವರು ಚೆನ್ನೈ ಲಯನ್ಸ್ ತಂಡಕ್ಕೆ ಮಾರ್ಗದರ್ಶನ ನೀಡುವರು.

ಐದನೇ ಆವೃತ್ತಿಯು ಆ.22ರಿಂದ ಸೆ.7 ರವರೆಗೆ ಚೆನ್ನೈನಲ್ಲಿ ನಡೆಯಲಿದೆ.

ಆಸ್ಟ್ರೇಲಿಯಾ ತಂಡದ ವಿಮಾನ ವಿಳಂಬ

ಬ್ರಿಜ್‌ಟೌನ್, ಬಾರ್ಬಡೋಸ್ (ಪಿಟಿಐ): ವಿಳಂಬವಾಗಿ ಹೊರಟ ವಿಮಾನ, ಕಳೆದುಹೋದ ಸರಂಜಾಮು ಹಾಗೂ ಜೋರಾಗಿ ಬೀಸುತ್ತಿದ್ದ ಗಾಳಿಯಲ್ಲಿ ವಿಮಾನದ ಭೂಸ್ಪರ್ಶಕ್ಕೆ ತೊಂದರೆ.. ಆಸ್ಟ್ರೇಲಿಯಾ ಕ್ರಿಕೆಟ್ ತಂಡವು ಇಲ್ಲಿಗೆ ಬಂದಿಳಿದ ವಿಮಾನವು ಈ ಎಲ್ಲ ಸಂಕಷ್ಟಗಳನ್ನು ದಾಟಿ ಕೊನೆಗೂ ಸುರಕ್ಷಿತವಾಗಿ ಭೂಸ್ಪರ್ಶ ಮಾಡಿತು. ಟಿ20 ವಿಶ್ವಕಪ್ ಟೂರ್ನಿಯಲ್ಲಿ ಆಡಲು ಬಂದ ಆಸ್ಟ್ರೇಲಿಯಾ ತಂಡಕ್ಕೆ ಇದು ಸಾಹಸಮಯ ಅನುಭವ ನೀಡಿದ್ದು ಸುಳ್ಳಲ್ಲ.

'ಇದೆಲ್ಲದರ ನಡುವೆಯೂ ಕರಾವಳಿಯ ಸಂಜೆಯ ದೃಶ್ಯಾವಳಿಯು ಮನಮೋಹಕವಾಗಿತ್ತು. ನಮ್ಮೆಲ್ಲರ ಮನಸ್ಸಿಗೆ ಮುದ ನೀಡಿತ್ತು' ಎಂದು ತಂಡದ ಆಲ್‌ರೌಂಡರ್ ಆ್ಯಷ್ಟನ್ ಆಗರ್ ಹೇಳಿದ್ದಾರೆ. ಐಪಿಎಲ್‌ನಲ್ಲಿ ಆಡಿದ್ದ ಪ್ಯಾಟ್ ಕಮಿನ್ಸ್ ಮತ್ತು ಮಿಚೆಲ್ ಸ್ಟಾರ್ಕ್ ಅವರು ತವರಿಗೆ ಮರಳಿದ್ದರು. ಅಲ್ಲಿಂದ ತಂಡದೊಂದಿಗೆ ವಿಂಡೀಸ್‌ಗೆ ಬಂದಿದ್ದಾರೆ. ಆದರೆ, ತಂಡದ ಕೆಲವು ಆಟಗಾರರ ಸರಂಜಾಮು ಕಳೆದಿತ್ತು. ವಿಮಾನಯಾನ ಸಂಸ್ಥೆಯ ಸಿಬ್ಬಂದಿಯ ನೆರವಿನಿಂದ ಲಗೇಜ್ ಹುಡುಕಿ ತಂಡದ ಆಟಗಾರರಿಗೆ ತಲುಪಿಸಲಾಯಿತು.

ಮಿಚೆಲ್ ಸ್ಟಾರ್ಕ್ ಮತ್ತು ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಅಮೆರಿಕ ಮಾರ್ಗವಾಗಿ ಬಾರ್ಬಡೋಸ್‌ಗೆ ಪ್ರಯಾಣಿಸಿದರು. ಆದರೆ ಭಾನುವಾರ ರಾತ್ರಿ ಲಾಸ್ ಏಂಜಲೀಸ್‌ನಲ್ಲಿ ವಿಮಾನ ವಿಳಂವಾಗಿದ್ದರಿಂದ ಅವರಿಬ್ಬರೂ ಇಡೀ ರಾತ್ರಿ ಅಲ್ಲಿಯೇ ಕಳೆದರು. ನಂತರ ಮಿಯಾಮಿ ಮಾರ್ಗವಾಗಿ ಕೆರಿಬಿಯನ್ ದ್ವೀಪಕ್ಕೆ ಬಂದಿಳಿದರು ಎಂದು ಕ್ರಿಕೆಟ್ ಡಾಟ್ ಕಾಮ್ ಡಾಟ್ ಎಯು ವೆಬ್‌ಸೈಟ್ ವರದಿ ಮಾಡಿದೆ.

ಟಿ20 ವಿಶ್ವಕಪ್ ಚಾಂಪಿಯನ್ ತಂಡಕ್ಕೆ ದಾಖಲೆಯ ₹20.36 ಕೋಟಿ

ನ್ಯೂಯಾರ್ಕ್ (ಪಿಟಿಐ): ಅಮೆರಿಕ ಮತ್ತು ವೆಸ್ಟ್ ಇಂಡೀಸ್ ಆತಿಥ್ಯದಲ್ಲಿ ನಡೆಯುತ್ತಿರುವ ಐಸಿಸಿ ಪುರುಷರ ಟಿ20 ವಿಶ್ವಕಪ್‌ನ ಒಂಬತ್ತನೇ ಆವೃತ್ತಿಯಲ್ಲಿ ಪ್ರಶಸ್ತಿ ಮುಡಿಗೇರಿಸಿಕೊಳ್ಳುವ ತಂಡವು ₹20.36 ಕೋಟಿ ಬಹುಮಾನ ಗಳಿಸಲಿದೆ.

ಟೂರ್ನಿಯ ಇತಿಹಾಸದಲ್ಲಿಯೇ ನೀಡಲಾಗುತ್ತಿರುವ ಅತ್ಯಂತ ಗರಿಷ್ಠ ಮೊತ್ತದ ದಾಖಲೆ ಇದಾಗಿದೆ. ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಸೋಮವಾರ ಬಹುಮಾನದ ಮೊತ್ತವನ್ನು ಪ್ರಕಟಿಸಿದೆ. ಟೂರ್ನಿಗೆ ಒಟ್ಟು ₹93.50 ಕೋಟಿ ಬಹುಮಾನ ನಿಗದಿ ಮಾಡಲಾಗಿದೆ.

ರನ್ನರ್ ಅಪ್ ತಂಡಕ್ಕೆ ₹10.63 ಕೋಟಿ ಮತ್ತು ಸೆಮಿಫೈನಲ್ ಹಂತಕ್ಕೆ ತಲುಪಿದ ತಂಡಗಳಿಗೆ ತಲಾ ₹6.54 ಕೋಟಿ ಕೈಸೇರಲಿದೆ. 2022ರ ಆವೃತ್ತಿಯಲ್ಲಿ ಒಟ್ಟು ಬಹುಮಾನದ ಮೊತ್ತ ₹ 46.54 ಕೋಟಿ ಆಗಿತ್ತು. ಚಾಂಪಿಯನ್ ಇಂಗ್ಲೆಂಡ್ ತಂಡವು ₹ 13 ಕೋಟಿ ಬಹುಮಾನ ಪಡೆದಿತ್ತು. ಈ ಬಾರಿ ಬಹುಮಾನದ ಮೊತ್ತವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲಾಗಿದೆ.

'ಜೂನ್ 29ರಂದು ಬಾರ್ಬಡೋಸ್‌ನಲ್ಲಿ ನಡೆಯುವ ಫೈನಲ್ ಪಂದ್ಯದಲ್ಲಿ ಟ್ರೋಫಿ ಎತ್ತುವ ತಂಡವು ₹20.36 ಕೋಟಿ ಬಹುಮಾನ ಪಡೆಯಲಿದೆ. ಇದು ಟೂರ್ನಿಯ ಇತಿಹಾಸದಲ್ಲಿ ಅತ್ಯಧಿಕ ಬಹುಮಾನ ಮೊತ್ತವಾಗಿದೆ' ಎಂದು ಐಸಿಸಿ ಪ್ರಕಟಣೆಯಲ್ಲಿ ತಿಳಿಸಿದೆ.

ಸೂಪರ್ 8 ಹಂತದಲ್ಲಿ ನಿರ್ಗಮಿಸುವ ನಾಲ್ಕು ತಂಡಗಳು ತಲಾ ₹3.17 ಕೋಟಿ ಪಡೆಯಲಿವೆ. 9, 10, 11 ಹಾಗೂ 12ನೇ ಸ್ಥಾನ ಪಡೆಯುವ ತಂಡಗಳಿಗೆ ತಲಾ ₹2 ಕೋಟಿ ಸಿಗಲಿದೆ.

ಕ್ರಿಕೆಟ್‌ಗೆ ಜಾಧವ್ ವಿದಾಯ

ಕೇದಾರ ಜಾಧವ್

ಪುಣೆ (ಪಿಟಿಐ): ಭಾರತ ಕ್ರಿಕೆಟ್ ತಂಡವನ್ನು ಪ್ರತಿನಿಧಿಸಿದ್ದ ಆಲ್‌ರೌಂಡ್ ಆಟಗಾರ ಕೇದಾರ್ ಜಾಧವ್ ಸೋಮವಾರ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ನಿವೃತ್ತಿ ಘೋಷಣೆ ಮಾಡಿದ್ದಾರೆ.

39 ವರ್ಷ ವಯಸ್ಸಿನ ಜಾಧವ್, 2014ರ ನವೆಂಬರ್‌ನಲ್ಲಿ ರಾಂಚಿಯಲ್ಲಿ ನಡೆದ ಶ್ರೀಲಂಕಾ ವಿರುದ್ಧದ ಏಕದಿನ ಪಂದ್ಯದಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ್ದರು. 2020ರ ಫೆಬ್ರುವರಿಯಲ್ಲಿ ನ್ಯೂಜಿಲೆಂಡ್ ವಿರುದ್ಧದ ಪಂದ್ಯದಲ್ಲಿ ಕೊನೆಯ ಬಾರಿ ರಾಷ್ಟ್ರೀಯ ತಂಡಕ್ಕೆ ಆಡಿದ್ದರು.

'ನನ್ನ ವೃತ್ತಿಜೀವನದುದ್ದಕ್ಕೂ ನೀಡಿದ ಪ್ರೀತಿ ಮತ್ತು ಬೆಂಬಲಕ್ಕಾಗಿ ಎಲ್ಲರಿಗೂ ಧನ್ಯವಾದಗಳು. ಇಂದು 3 ಗಂಟೆಯಿಂದ (ಸೋಮವಾರ) ನನ್ನನ್ನು ನಿವೃತ್ತ ಆಟಗಾರನೆಂದು ಪರಿಗಣಿಸಿ' ಎಂದು 'ಎಕ್ಸ್' ಖಾತೆಯಲ್ಲಿ ಅವರು ಬರೆದುಕೊಂಡಿದ್ದಾರೆ.

ಭಾರತದ ಪರ 73 ಏಕದಿನ ಪಂದ್ಯಗಳಲ್ಲಿ 52 ಇನಿಂಗ್ಸ್ ಆಡಿರುವ ಬಲಗೈ ಬ್ಯಾಟರ್ ಜಾಧವ್ ಎರಡು ಶತಕ ಮತ್ತು ಆರು ಅರ್ಧಶತಕ ಸೇರಿದಂತೆ 42.09ರ ಸರಾಸರಿಯಲ್ಲಿ 1389 ರನ್ ಗಳಿಸಿದ್ದಾರೆ. ಸ್ಪಿನ್ನರ್ ಆಗಿರುವ ಅವರು 27 ವಿಕೆಟ್ ಪಡೆದಿದ್ದಾರೆ. 9 ಟಿ20 ಪಂದ್ಯಗಳಿಂದ 1 ಅರ್ಧಶತಕದೊಂದಿಗೆ 122 ರನ್ ಕಲೆಹಾಕಿದ್ದಾರೆ.

2017ರಲ್ಲಿ ಪುಣೆಯಲ್ಲಿ ನಡೆದಿದ್ದ ಇಂಗ್ಲೆಂಡ್ ವಿರುದ್ಧದ ಏಕದಿನ ಪಂದ್ಯದಲ್ಲಿ 351 ರನ್ ಚೇಸಿಂಗ್ ಮಾಡಿ ಭಾರತ ಜಯಸಾಧಿಸಿತ್ತು. ಈ ಗೆಲುವಿನಲ್ಲಿ ಜಾಧವ್ ಮಹತ್ವದ ಪಾತ್ರ ವಹಿಸಿದ್ದರು. 63 ರನ್‌ಗೆ 4 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ್ದ ಭಾರತ ತಂಡಕ್ಕೆ ವಿರಾಟ್ ಕೊಹ್ಲಿ (122 ರನ್) ಮತ್ತು ಜಾಧವ್ ಆಸರೆಯಾಗಿದ್ದರು. ಆ ಪಂದ್ಯದಲ್ಲಿ ಜಾಧವ್ 76 ಎಸೆತಗಳಲ್ಲಿ 12 ಬೌಂಡರಿ ಮತ್ತು ನಾಲ್ಕು ಸಿಕ್ಸರ್ ಸೇರಿದಂತೆ 120 ರನ್ ಗಳಿಸಿ, ಪಂದ್ಯದ ಆಟಗಾರ ಗೌರವಕ್ಕೆ ಪಾತ್ರವಾಗಿದ್ದರು.

ಕುತೂಹಲಕಾರಿ ವಿಷಯವೆಂದರೆ ಪುಣೆಯಲ್ಲಿ ಪ್ರಸ್ತುತ ನಡೆಯುತ್ತಿರುವ ಮಹಾರಾಷ್ಟ್ರ ಪ್ರೀಮಿಯರ್ ಲೀಗ್‌ನಲ್ಲಿ ಜಾಧವ್ ಅವರು ಕೊಲ್ಲಾಪುರ್ ಟಸ್ಕರ್ಸ್ ತಂಡವನ್ನು ಮುನ್ನಡೆಸುತ್ತಿದ್ದಾರೆ. ಅವರ ನಿವೃತ್ತಿ ಘೋಷಣೆಯು ಅದಕ್ಕೆ ಅನ್ವಯವಾಗಲಿದೆಯೇ ಎಂಬುದು ಖಚಿತವಿಲ್ಲ.

ಜಾಧವ್ ಅವರು ದೇಶೀಯ ಕ್ರಿಕೆಟ್‌ನಲ್ಲಿ ಮಹಾರಾಷ್ಟ್ರ ತಂಡವನ್ನು ಪ್ರತಿನಿಧಿಸುತ್ತಿದ್ದಾರೆ. ಇಂಡಿಯನ್ ಪ್ರೀಮಿಯರ್ ಲೀಗ್‌ನಲ್ಲಿ ಚೆನ್ನೈ ಸೂಪರ್ ಕಿಂಗ್ಸ್, ಡೆಲ್ಲಿ ಡೇರ್‌ಡೆವಿಲ್ಸ್, ಕೊಚ್ಚಿ ಟಸ್ಕರ್ಸ್ ಕೇರಳ, ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಸನ್‌ರೈಸರ್ಸ್ ಹೈದರಾಬಾದ್ ತಂಡಗಳಿಗೆ ಆಡಿದ್ದರು.

ನಿತೀಶ್ ಶತಕ: ಎಂಸಿಸಿ ತಂಡಕ್ಕೆ ಜಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿತೀಶ್ ಆರ್ಯ ಅವರ ಶತಕದ ನೆರವಿನಿಂದ ಎಂಸಿಸಿ ತಂಡವು ಗೋಪಾಲನ್ ಸ್ಪೋರ್ಟ್ಸ್ ಸೆಂಟರ್ ಆಶ್ರಯದಲ್ಲಿ ನಡೆಯುತ್ತಿರುವ ಸೇವ್ ವಾಟರ್ ಕಪ್ 7ನೇ ಆವೃತ್ತಿಯ 14 ವರ್ಷದೊಳಗಿನವರ ಪಂದ್ಯದಲ್ಲಿ 23 ರನ್‌ಗಳಿಂದ ಕ್ರೀಡಾ ಕ್ಷೇತ್ರ ತಂಡವನ್ನು ಮಣಿಸಿತು.

ಸೋಮವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟಿಂಗ್ ಮಾಡಿದ ಎಂಸಿಸಿ ತಂಡವು ನಿತೀಶ್ (109; 51ಎಸೆತ) ಅವರ ಶತಕದ ಬಲದಿಂದ 20 ಓವರ್‌ಗಳಲ್ಲಿ ನಾಲ್ಕು ವಿಕೆಟ್‌ಗೆ 192 ರನ್ ಸೇರಿಸಿತು. ಈ ಗುರಿಯನ್ನು ಬೆನ್ನಟ್ಟಿದ ಕ್ರೀಡಾ ಕ್ಷೇತ್ರ 20 ಓವರ್‌ಗಲ್ಲಿ 6 ವಿಕೆಟ್‌ಗೆ 169 ರನ್ ಗಳಿಸಿತು. ಅತ್ರೇಯ ಮತ್ತು ಸಮರ್ಥ್ ಕ್ರಮವಾಗಿ 40 ಮತ್ತು 39 ರನ್‌ಗಳಿಂದ ಕೊಂಚ ಹೋರಾಟ ತೋರಿದರು.

ಇತರ ಪಂದ್ಯಗಳ ಫಲಿತಾಂಶ: ಜಿಐಎಸ್ ಕಂಬೈನ್ಡ್: 20 ಓವರ್‌ಗಳಲ್ಲಿ 7 ವಿಕೆಟ್‌ಗೆ 69 (ಪೂರ್ವಿಕ್ 21, ಗೌರೀಶ್ 8ಕ್ಕೆ 3). ಕ್ರೀಡಾ ಕ್ಷೇತ್ರ 20 ಓವರ್‌ಗಳಲ್ಲಿ 1 ವಿಕೆಟ್‌ಗೆ 70 (ತನ್ಷ್ ಕೆ. ಔಟಾಗದೇ 30). ಫಲಿತಾಂಶ: ಕ್ರೀಡಾ ಕ್ಷೇತ್ರಕ್ಕೆ 9 ವಿಕೆಟ್‌ಗಳ ಜಯ

ಡಿಪಿಎಸ್ ನಾರ್ಥ್: 20 ಓವರ್‌ಗಳಲ್ಲಿ 6 ವಿಕೆಟ್‌ಗೆ 172 (ಸಾದ್ 56, ಹೃತಿಕ್ 53, ತನುಷ್ 35). ಎಂಎಂಸಿಎ: 10.4 ಓವರ್‌ಗಳಲ್ಲಿ 37 (ಜಿ. ಚೇತನ್ 6ಕ್ಕೆ3, ಸಮಿತ್ ಕೆ. 6ಕ್ಕೆ 2, ಅದ್ವಿಕ್ ದಾಷ್ 9ಕ್ಕೆ 2). ಫಲಿತಾಂಶ: ಡಿಪಿಎಸ್ ನಾರ್ಥ್ ತಂಡಕ್ಕೆ 135 ರನ್‌ಗಳ ಜಯ

ಫ್ರೆಂಚ್ ಓಪನ್ ಟೆನಿಸ್ ಟೂರ್ನಿ: ಅಲ್ಕರಾಜ್ ಮುನ್ನಡೆ

ಕ್ವಾರ್ಟರ್ ಫೈನಲ್‌ಗೆ ಸಿನ್ನರ್, ಅಬಲೆಂಕಾ

ಇಟಲಿಯ ಯಾನಿಕ್ ಸಿನ್ನರ್ –ಎಎಫ್‌ಪಿ ಚಿತ್ರ

ಪ್ಯಾರಿಸ್ (ಎಎಫ್‌ಪಿ): ಆಸ್ಟ್ರೇಲಿಯಾ ಓಪನ್ ಚಾಂಪಿಯನ್‌ಗಳಾದ ಯಾನಿಕ್ ಸಿನ್ನರ್ ಮತ್ತು ಅರಿನಾ ಸಬಲೆಂಕಾ ಅವರು ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಸಿಂಗಲ್ಸ್‌ನ ನಾಲ್ಕನೇ ಸುತ್ತಿನಲ್ಲಿ ಜಯ ಸಾಧಿಸಿ, ಕ್ವಾರ್ಟರ್ ಫೈನಲ್ ತಲುಪಿದರು.

ಆರಂಭಿಕ ಹಿನ್ನಡೆಯಿಂದ ಚೇತರಿಸಿಕೊಂಡ ಎರಡನೇ ಶ್ರೇಯಾಂಕದ, ಇಟಲಿಯ ಸಿನ್ನರ್ 2-6, 6-3, 6-2, 6-1 ಸೆಟ್‌ಗಳಿಂದ ಫ್ರಾನ್ಸ್‌ನ ಕೊರೆಂಟಿನ್ ಮೌಟೆಟ್ ಅವರನ್ನು ಮಣಿಸಿದರು. ಎಂಟರ ಘಟ್ಟದ ಹಣಾಹಣಿಯಲ್ಲಿ ಸಿನ್ನರ್ ಅವರು 10ನೇ ಶ್ರೇಯಾಂಕದ ಗ್ರಿಗರ್ ಡಿಮಿಟ್ರೋವ್ (ಬಲ್ಗೇರಿಯಾ) ಅವರನ್ನು ಎದುರಿಸುವರು. ಗ್ರಿಗರ್ ಅವರು 7-6 (5), 6-4, 7-6 (3) ರಿಂದ ಎಂಟನೇ ಶ್ರೇಯಾಂಕದ ಹುಬರ್ತ್ ಹರ್ಕಜ್ (ಪೋಲೆಂಡ್) ಅವರಿಗೆ ಆಘಾತ ನೀಡಿದರು.

ಮೂರನೇ ಶ್ರೇಯಾಂಕದ ಅಲ್ಕರಾಜ್ 6-3, 6-3, 6-1 ಸೆಟ್‌ಗಳಿಂದ ಕೆನಡಾದ ಫೆಲಿಕ್ಸ್ ಆಗರ್ ಅಲಿಯಾಸ್ಸಿಮ್ ಅವರನ್ನು ಸೋಲಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಎಡಗಾಲಿನ ನೋವಿನಿಂದ ಬಳಸುತ್ತಿದ್ದ 21ನೇ ಶ್ರೇಯಾಂಕದ ಫೆಲಿಕ್ಸ್ ಆಟದ ಮಧ್ಯೆ ವೈದ್ಯಕೀಯ ನೆರವು ಪಡೆದು ಹೋರಾಟ ನಡೆಸಿದರು. ಎರಡು ಗ್ರ್ಯಾನ್‌ಸ್ಲಾಮ್ ಪ್ರಶಸ್ತಿ ಗೆದ್ದಿರುವ ಸ್ಪೇನ್‌ನ ಅಲ್ಕರಾಜ್ ಎಂಟರ ಘಟ್ಟದ ಪಂದ್ಯದಲ್ಲಿ 2021ರ ಆವೃತ್ತಿಯ ರನ್ನರ್ ಅಪ್, ಒಂಬತ್ತನೇ ಶ್ರೇಯಾಂಕದ ಸ್ಟಿಫಾನೊಸ್ ಸಿಟ್ಸಿಪಾಸ್ (ಗ್ರೀಸ್) ಅವರನ್ನು ಎದುರಿಸುವರು. ಸಿಟ್ಸಿಪಾಸ್ ಅವರು 3-6, 7-6 (7/4), 6-2, 6-2ರಿಂದ ಇಟಲಿಯ ಮ್ಯಾಡಿಯೊ ಅರ್ನಾಲ್ಡಿ ಅವರನ್ನು ಮಣಿಸಿದರು.

ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡನೇ ಶ್ರೇಯಾಂಕದ ಸಬಲೆಂಕಾ 6-2, 6-3 ಸೆಟ್‌ಗಳಿಂದ ಅಮೆರಿಕದ ಎಮ್ಮಾ ನವರೊ ಅವರನ್ನು ಸುಲಭವಾಗಿ ಮಣಿಸಿ ಮುನ್ನಡೆದರು. ಮಾರ್ಚ್‌ನಲ್ಲಿ ನಡೆದಿದ್ದ ಇಂಡಿಯನ್ ವೆಲ್ಸ್‌ನಲ್ಲಿ ಬೆಲಾರಸ್‌ನ ಆಟಗಾರ್ತಿಗೆ ನವರೊ ಆಘಾತ ನೀಡಿದ್ದರು. ಆ ಸೋಲಿಗೆ ಸಬಲೆಂಕಾ ಇಲ್ಲಿ ಮುಯ್ಯಿ ತೀರಿಸಿಕೊಂಡರು.

ಅಮೆರಿಕ ಓಪನ್ ಚಾಂಪಿಯನ್, ಮೂರನೇ ಶ್ರೇಯಾಂಕ ಕೊಕೊ ಗಾಫ್ ಕೂಡ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿದರು. ಅವರು 6-1, 6-2ರಿಂದ ಎಲಿಸಬೆಟ್ಟಾ ಕೊಕಿಯಾರೆಟ್ಟೊ ಅವರನ್ನು ಸುಲಭವಾಗಿ ಪರಾಭವಗೊಳಿಸಿದರು. ಅವರು ಮುಂದಿನ ಸುತ್ತಿನಲ್ಲಿ ಎಂಟನೇ ಶ್ರೇಯಾಂಕದ ಆನ್ಸ್ ಜಬೇರ್ (ಟ್ಯುನೀಷಿಯಾ) ಅವರ ಸವಾಲನ್ನು ಎದುರಿಸಲಿದ್ದಾರೆ. ಜಬೇರ್ ಅವರು 6-4, 6-4ರಿಂದ ಕ್ಲಾರಾ ಟೌಸನ್ (ಡೆನ್ಮಾರ್ಕ್) ಅವರನ್ನು ಮಣಿಸಿದರು.

ಕಜಕಸ್ತಾನದ ಎಲೆನಾ ರಿಬಾಕಿನಾ 6-4, 6-3 ಸೆಟ್‌ಗಳಿಂದ 15ನೇ ಶ್ರೇಯಾಂಕದ ಎಲಿನಾ ಸ್ವಿಟೋಲಿನಾ (ಉಕ್ರೇನ್) ಅವರನ್ನು ಮಣಿಸಿದರು. 4ನೇ ಶ್ರೇಯಾಂಕದ ಅವರು ಮುಂದಿನ ಸುತ್ತಿನಲ್ಲಿ 12ನೇ ಶ್ರೇಯಾಂಕ ದ ಜಾಸ್ಮಿನ್ ಪಯೋಲಿನಿರನ್ನು ಎದುರಿಸಲಿದ್ದಾರೆ.

ಬೋಪಣ್ಣ– ಎಬ್ಡೆನ್ ಜೋಡಿಗೆ ಜಯ

ಆಸ್ಟ್ರೇಲಿಯಾ ಓಪನ್ ಚಾಂಪಿಯನ್ ಜೋಡಿಯಾದ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯೂ ಎಬ್ಡೆನ್ ಅವರು ಪುರುಷರ ಡಬಲ್ಸ್‌ನ ಮೂರನೇ ಸುತ್ತಿನಲ್ಲಿ 6-7(2), 6-3, 7-6 (10-8) ಸೆಟ್‌ಗಳ ಪ್ರಯಾಸದ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರು.

ಎರಡನೇ ಶ್ರೇಯಾಂಕದ ಭಾರತ– ಆಸ್ಟ್ರೇಲಿಯಾದ ಜೋಡಿಗೆ ಭಾರತದ ಎನ್.ಶ್ರೀರಾಮ್ ಬಾಲಾಜಿ ಮತ್ತು ಅವರ ಜೊತೆಗಾರ ಮೆಕ್ಸಿಕೊದ ಮಿಗುಯೆಲ್ ಏಂಜೆಲ್ ರೆಯೆಸ್– ವರೆಲಾ ತೀವ್ರ ಪೈಪೋಟಿ ನೀಡಿದರು.

ಟೈ ಬ್ರೇಕರ್ ಮೂಲಕ ಮೊದಲ ಸೆಟ್ ಅನ್ನು ಗೆದ್ದುಕೊಂಡ ಬಾಲಾಜಿ–ಮಿಗುಯೆಲ್ ಜೋಡಿಯು, ಎರಡನೇ ಸೆಟ್‌ನಲ್ಲಿ ಹಿನ್ನಡೆ ಅನುಭವಿಸಿತು. ಆದರೆ, ಮೂರನೇ ಸೆಟ್‌ನಲ್ಲಿ ಮತ್ತೆ ಪ್ರಬಲ ಹೋರಾಟ ನೀಡಿತಾದರೂ ಟೈ ಬ್ರೇಕರ್‌ನಲ್ಲಿ ಬೋಪಣ್ಣ– ಎಬ್ಡೆನ್ ಜೋಡಿಯು ಮೇಲುಗೈ ಸಾಧಿಸಿತು.

ಚೆಸ್: ಪ್ರಜ್ಞಾನಂದ, ವೈಶಾಲಿಗೆ ಸೋಲು

ಸ್ಟೆವೆಂಜರ್, ನಾರ್ವೆ (ಪಿಟಿಐ): ಭಾರತದ ಗ್ರ್ಯಾಂಡ್ ಮಾಸ್ಟರ್‌ಗಳಾದ ಆರ್. ಪ್ರಜ್ಞಾನಂದ ಮತ್ತು ಅವರ ಅಕ್ಕ ಆರ್. ವೈಶಾಲಿ ಅವರು ಇಲ್ಲಿ ನಡೆಯುತ್ತಿರುವ ನಾರ್ವೆ ಚೆಸ್ ಟೂರ್ನಿಯ 6ನೇ ಸುತ್ತಿನಲ್ಲಿ ತಮ್ಮ ವಿಭಾಗದಲ್ಲಿ ಸೋತರು.

ಪ್ರಜ್ಞಾನಂದ ಅವರ ಗೆಲುವಿನ ಓಟಕ್ಕೆ ಸೋಮವಾರ ಫ್ರಾನ್ಸ್‌ನ ಫಿರೋಜಾ ಅಲಿರೆಜಾ ಬ್ರೇಕ್ ಹಾಕಿದರು. ಈ ಹಿಂದಿನ ಸುತ್ತಿಗಳಲ್ಲಿ ವಿಶ್ವದ ಅಗ್ರಮಾನ್ಯ ಆಟಗಾರ ಮ್ಯಾಗ್ನಸ್ ಕಾರ್ಲಸನ್ ಮತ್ತು ಎರಡನೇ ಶ್ರೇಯಾಂಕದ ಫ್ಯಾಬಿಯಾನೊ ಕರುವಾನಾ ಅವರಿಗೆ ಪ್ರಜ್ಞಾನಂದ ಆಘಾತ ನೀಡಿದ್ದರು. ಪ್ರಸ್ತುತ ಭಾರತದ ಆಟಗಾರ 10 ಪಾಯಿಂಟ್ಸ್‌ಗಳೊಂದಿಗೆ ಮೂರನೇ ಸ್ಥಾನದಲ್ಲಿದ್ದಾರೆ.

ಒಟ್ಟು ₹1.33 ಕೋಟಿ ಬಹುಮಾನ ಮೊತ್ತವನ್ನು ಹೊಂದಿರುವ ಟೂರ್ನಿಯಲ್ಲಿ ಆರು ಆಟಗಾರರ ಡಬಲ್ ರೌಂಡ್ ರಾಬಿನ್ ಸ್ಪರ್ಧೆಯಲ್ಲಿ ಕಾರ್ಲಸನ್ (12 ಪಾಯಿಂಟ್ಸ್) ಮುಂಚೂಣಿಯಲ್ಲಿದ್ದಾರೆ. ಅವರು ಚೀನಾದ ಡಿಂಗ್ ಲಿರೆನ್ ಅವರನ್ನು ಮಣಿಸಿದರು. ಕರುವಾನಾ ಸ್ವದೇಶದ ಅಮೆರಿಕದ ಹಿಕಾರು ನಕಾಮುರಾ ಅವರನ್ನು ಮಣಿಸಿ 11 ಪಾಯಿಂಟ್ಸ್‌ಗಳೊಂದಿಗೆ ಎರಡನೇ ಸ್ಥಾನದಲ್ಲಿದ್ದಾರೆ.

ಮಹಿಳೆಯರ ವಿಭಾಗದಲ್ಲಿ ವೈಶಾಲಿ, ವಿಶ್ವ ಮಹಿಳಾ ಚಾಂಪಿಯನ್ ಚೀನಾದ ವೆಂಜುನ್ ಜು ವಿರುದ್ಧ ಪರಾಭವಗೊಂಡರು. ವೆಂಜುನ್ ಮತ್ತು ಅನ್ನಾ ಮುಜಿಚುಕ್ ತಲಾ 10.5 ಪಾಯಿಂಟ್ಸ್‌ಗಳೊಂದಿಗೆ ಜಂಟಿ ಅಗ್ರಸ್ಥಾನದಲ್ಲಿದ್ದಾರೆ. ವೈಶಾಲಿ (10) ಎರಡನೇ ಸ್ಥಾನದಲ್ಲಿದ್ದಾರೆ. ಭಾರತದ ಮತ್ತೊಬ್ಬ ಸ್ಪರ್ಧಿ ಕೊನೇರು ಹಂಪಿ ಕೂಡ ಪರಾಭವಗೊಂಡರು. ಎರಡೂ ವಿಭಾಗಗಳಲ್ಲಿ ಇನ್ನೂ ನಾಲ್ಕು ಸುತ್ತುಗಳು ಬಾಕಿಯಿದೆ.

ಪ್ರಜ್ಞಾನಂದ

ಬ್ರಿಜ್ ಚಾಂಪಿಯನ್‌ಷಿಪ್ ನಾಳೆಯಿಂದ

ಪ್ರಜಾವಾಣಿ ವಾರ್ತೆ

ಮಂಗಳೂರು: ಕರ್ನಾಟಕ ರಾಜ್ಯ ಬ್ರಿಜ್ ಸಂಸ್ಥೆಯು ಇದೇ 5ರಿಂದ 14ರ ವರೆಗೆ ಭಾರತ ಬ್ರಿಜ್ ಫೆಡರೇಷನ್ ಸಹಯೋಗದಲ್ಲಿ ರಾಷ್ಟ್ರೀಯ ಬ್ರಿಜ್ ಚಾಂಪಿಯನ್‌ಷಿಪ್ ಆಯೋಜಿಸಿದೆ. ನಗರದ ಮೋತಿ ಮಹಲ್ ಹೋಟೆಲ್‌ನಲ್ಲಿ ಸ್ಪರ್ಧೆಯು ನಡೆಯಲಿದೆ ಎಂದು ಕರಾವಳಿ ಬ್ರಿಜ್ ಸಂಸ್ಥೆಯ ಉಪಾಧ್ಯಕ್ಷೆ ಮಾರ್ಜಿನ್ ಅರಾನಾ ಟೆಕ್ಸ್ ತಿಳಿಸಿದರು.

ಮುಕ್ತ, ಮಿಶ್ರ ಮತ್ತು ತಂಡ ವಿಭಾಗಗಳಲ್ಲಿ ಸ್ಪರ್ಧೆಗಳು ನಡೆಯಲಿದ್ದು ಮೊದಲ ಎರಡು ದಿನಗಳನ್ನು ಮಹಿಳೆಯರ ವಿಭಾಗಗಳಿಗೆ ಮೀಸಲಿರಿಸಲಾಗಿದೆ. ನಂತರದ ಎರಡು ದಿನ ಮಿಶ್ರ ವಿಭಾಗದ ಸ್ಪರ್ಧೆಗಳು ನಡೆಯಲಿವೆ. 9ರಂದು ಔಪಚಾರಿಕ ಉದ್ಘಾಟನೆಯ ನಂತರ ಪ್ರಧಾನ ಸುತ್ತುಗಳು ಆರಂಭವಾಗಲಿವೆ. ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು ₹ 8.5 ಲಕ್ಷ ಮೊತ್ತದ ಬಹುಮಾನ ವಿತರಿಸಲಾಗುವುದು ಎಂದು ಅವರು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ವಿವರಿಸಿದರು.

2018ರ ಏಷ್ಯನ್ ಗೇಮ್ಸ್‌ನಲ್ಲಿ ಸೇರ್ಪಡೆಗೊಳಿಸಿದ ನಂತರ ಬ್ರಿಜ್ ಕ್ರೀಡೆಯತ್ತ ಹೆಚ್ಚು ಮಂದಿ ಒಲವು ತೋರಿಸುತ್ತಿದ್ದಾರೆ. ಈ ಆಟ ಮಿದುಳಿಗೆ ಉತ್ತಮ ವ್ಯಾಯಾಮ ನೀಡುತ್ತದೆ. ಸ್ಮರಣ ಶಕ್ತಿ ಮತ್ತು ಏಕಾಗ್ರತೆಯನ್ನು ಹೆಚ್ಚಿಸುವ ಈ ಕ್ರೀಡೆ ಸಮಸ್ಯೆಗಳನ್ನು ಬಗೆಹರಿಸುವ ಸಾಮರ್ಥ್ಯವನ್ನು ವೃದ್ಧಿಯಾಗೊಳಿಸುತ್ತದೆ ಎಂದು ಅವರು ಹೇಳಿದರು.

Toyota Mobility Service
Conversion | Fleet | Leasing
TOYOTA U TRUST
Buy | Sell | Exchange · Used car
TOYOTA FINANCIAL SERVICES

KARNATAKA: **Bengaluru:** Nandi Toyota, Banashankari 2nd Stage Ph: 7022340713; Banaswadi Ph: 7022340713; Bannerghatta Main Road Ph: 7022340713; Bommanahalli Ph: 7022340713; Hosur Road Ph: 9945255800; Kanakapura Main Road Ph: 9740409858; Queens Road Ph: 9741310066; Whitefield Ph: 7022340713; Ravindu Toyota, K R Puram Ph: 8058245555; Magadi Road Ph: 8058245555; Marathahalli Ph: 8058245555; Rajajinagar Ph: 8058245555; Victoria Road Ph: 8058245555; Yeshwanthpur Ph: 8058245555; Viva Toyota, Airport Road, Hunasamarahalli Ph: 9900030617; Hebbal Ph: 9900027736; Kogilu, Yelahanka Ph: 9900030617; Mysore Road Ph: 9900030620; Vidayaranyapura Ph: 9900027736; **Bagalkot:** Shodha Toyota, Navnagar Ph: 8147599463; **Belgaum:** Shodha Toyota, Shahapur Ph: 8147599461; Poona-Bangalore Road Ph: 9035246694; **Bellary:** BJS Toyota, Bisanahalli, Anantapur Road Ph: 7829927943; **Bijapur:** Shodha Toyota, Chitradurga Sholapur Road Ph: 9606484983; **Chikkamagaluru:** Shakti Toyota, Kadur Bypass Road Ph: 9686652728; **Davangere:** Shodha Toyota, Harihar Road Ph: 9008952277; **Gulbarga:** Karuna Toyota, Bilgundi Garden Ph: 7829990010; **Hassan:** Shakti Toyota, Katihalli Industrial Area Ph: 9686652728; **Hospet:** BJS Toyota, Rajeev Nagar Ph: 7829927943; **Hubli:** Shodha Toyota, Hubli-Dharwad Road Ph: 9606454722; **Hunsur:** Palace Toyota, Hunsur Road Ph: 8971701735; **Kodagu:** Palace Toyota, Kushalnagara Ph: 7022671919; **Kolar:** Ravindu Toyota, P C Halli Ph: 9606090040; **Madikeri:** Palace Toyota, Cauvery Hall Ph: 7022671919; **Mandya:** Palace Toyota, Guttalu Grama Ph: 9538874907; **Mangalore:** United Toyota, Bunt's Hostel Ph: 9686687581; Padil Ph: 9686687581; **Mysore:** Palace Toyota, Hootagalli Ph: 9538874906; Krishnamurthy Puram Ph: 9538874936; **Raichur:** Karuna Toyota, Near Yermers Camp Cross, Hyderabad Road Ph: 7829990021; **Shivamogga:** Shakti Toyota, Bypass Road Ph: 9686652728; **Tumkur:** Ravindu Toyota, Sadashivnagar Ph: 9379189796; **Udupi:** United Toyota, Udyavara Ph: 9686687581.

dentsu/pv blr/03/24

Honda Motorcycle & Scooter India Pvt. Ltd., Registered Office: Plot No. 1, Sector - 03, IMT Manesar, Distt. Gurugram, (Haryana) – 122050, India; **Website:** www.honda2wheelersindia.com; **Customer Care:** customercare@honda2wheelersindia.com

*Terms and Condition apply. Product shown in the picture may vary from actual product available in the market. Accessories shown in the picture are not part of standard equipment. All features and colours may not be part of all variants.

Honda Exclusive Authorised Dealerships: Ananda Honda - **BOMMANAHALLI:** 9738074162; **HEBBAGODI:** 9738074162; **SARJAPUR RD:** 9738074162; **JIGANI:** 9738066600; **HOSA ROAD:** 9738066600; Anekal Honda - **ANEKAL:** 080-27830234, 9880417779; City Honda - **ST. JOHNS ROAD:** 08025139199, 9480812350; **H.R.B.R:** 41614777, 9845941305; **FRAZER TOWN:** 9480812353; **LALBAGH:** 9480812397, 080-43333330; Haiku Honda - **DOMLUR:** 49656565, 9342432156; **INDIRANAGAR:** 9342432157; Dhruvdesh Honda - **MEKHRI CIRCLE:** 40500700, 9343968413; **THANISANDRA (NAGAWARA):** 7353030333; **YELAHANKA:** 40551122, 9343968407; **VIDYARANYAPURA:** 8150866333, 8152866333; Planet Honda - **RAJAJINAGAR:** 08068898888, 9980927735; **PEENYA:** 08068898888, 9980927730; **SUNKADAKATTE:** 08068898888, 9980927728; **BASAWESHWAR NAGAR:** 08068898888, 9980927726; Raja Honda - **KORAMANGALA:** 08067329000,9035310055; Prime Honda - **VIJAYNAGAR:** : 080 - 23010300, 8050503111; **NAGARBHAVI:** 080-23010700, 8095778000; **KAMAKSHIPALYA:** 080-23019700, 7829900444; Silicon Honda - **RV ROAD:** 9844502222, 9844726973; **BANSHANKARI:** 9844502444, 8722279009; **R.R. NAGAR:** 9964388333, 9071175200; **MONOTYPE:** 7353744400, **JAYANAGAR:** 8722801626; Saphire Honda - **JP NAGAR:** 7026000002; **BG ROAD:** 8553004004; **KKP ROAD:** 8553004002; **PUTTENHALLI:** 7353251007; **GOTTIGERE:** 8553004009; **BTM:** 7353252007; VFM Honda - **KR PURAM:** 9071858885, 9071858881; **HENNUR ROAD:** 9108989817, 9108989818; Tansi Honda - **HOODI:** 7259030091, 9741410101; **MARTHAHALLI:** 7259030100, 7259030093; **VARTHUR RD:** 8105597877, 9686573013; **GUNJUR:** 9606450642, 9606450643; Turbo Honda - **DODDABALLAPURA:** 7022620885; **NELAMANAGALA:** 080-27722333, 7022008894; Wings Honda - **HOSKOTE:** 7676907272; **MALUR:** 7676155600; **TC PALYA:** 9590815959; Sri Kausthub Honda - **KOLAR:** 9900018515, 9900018516;; **KGF:** 9900092115; **MULBAGAL:** 9008941044; **SRINIVASAPUR:** 8495956515; **BANGARPET** - 9980607661; Namma Honda - **CHIKKABALLAPUR:** 9606060610, 9611996114; **CHINTAMANI:** 9606060620, 9611996115; **BAGEPALLI:** 9611596112, 9611596110; Shankar Honda - **GOWRIBIDANUR:** 9900007422/33; **SIDLAGHATTA:** 9611596113; Century Honda - **TUMKUR:** 08162261939, 9620263388; **SIRA:** 9620267057, 9538392767; **GUBBI:** 9620267051; Shantinath Honda - **TUMKUR:** 08162279969, 9449334359; **KUNIGAL:** 7022276603; **KUNIGAL ROAD:** 9844351599, 9844351399; **KORATAGERE:** 9606955149; Honey Honda - **PAVAGADA:** 9535941215; Annapoorna Honda - **MADHUGIRI:** 9886627429; Vignesh Honda - **TIPTUR:** 9886711161; **TURUVEKERE:** 9448214014; Sri Srinivasa Honda - **CHIKKANAYAKANAHALLI:** 8722522221; Prestige Honda - **RAMNAGARA:** 9606490030, 9606036040; **KANAKAPURA:** 9606036053, 9606036054; **CHANNAPATNA:** 9606490034, 9035717953; ART Honda - **BIDADI:** 9945966771, 9164871007; Springs Honda - **KENGERI:** 9513771114; Nideesh Honda - **DEVANAHALLI:** 9108871999, 9686608579; **VIJAYAPURA:** 9108871999, 7899870207.

For Bulk/Institutional enquiries, please write us at: institutionalsales@honda2wheelersindia.com